ಶನಿವಾರ, ಜೂನ್ 21, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಯಾತ್ರೆ ಆರಂಭ

ಕೈಲಾಸ- ಮಾನಸ ಸರೋವರ ಯಾತ್ರೆಯು 6 ವರ್ಷಗಳ ಬಳಿಕ ಶುಕ್ರವಾರ ಸಿಕ್ಕಿಂನಲ್ಲಿ ಪುನರಾರಂಭಗೊಂಡಿದೆ



ಯಶಸ್ವಿ ಶತಕ ಸಂಭ್ರಮ

ಭಾರತ ತಂಡದ ಯಶಸ್ವಿ ಜೈಸ್ವಾಲ್ ಶುಕ್ರವಾರ ಲೀಡ್ಸ್‌ನಲ್ಲಿ ಆರಂಭವಾದ ಇಂಗ್ಲೆಂಡ್ ವಿರುದ್ಧದ ಟೆಸ್ಟ್‌ನಲ್ಲಿ ಶತಕ (101 ರನ್) ಗಳಿಸಿದರು



ಶನಿವಾರ, ಜೂನ್ 21, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 171 | ಪುಟ 24

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಲಾಂಛನ ಬಿಡುಗಡೆ
ನವದೆಹಲಿಯಲ್ಲಿ ನಡೆಯಲಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್‌ನ ಲಾಂಛನವನ್ನು ಶುಕ್ರವಾರ ಅನಾವರಣ ಮಾಡಲಾಯಿತು

World Para Athletics CHAMPIONSHIPS NEW DELHI 2025

ಯೋಗ ದಿನ
ವಿಶಾಖಪಟ್ಟಣದಲ್ಲಿ ಶನಿವಾರ ಬೃಹತ್ ಮಟ್ಟದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ನಡೆಯಲಿದೆ

ಸೆನ್ಸೆಕ್ಸ್ 82,408 | ನಿಫ್ಟಿ 25,112 | $/₹ 86.55 | ಚಿನ್ನ (Std. 10g) ₹1.03 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.12 ಲಕ್ಷ (ಬೆಂಗಳೂರು) | ವಿಶ್ವ ಯೋಗ ದಿನ

ನೋಂದಣಿಗೆ ಮತ್ತೆ ಸರ್ವರ್ ಕಂಟಕ

ಬೆಂಗಳೂರು: ಕಾವೇರಿ–2 ತಂತ್ರಾಂಶದಲ್ಲಿ ಸರ್ವರ್ ಸಮಸ್ಯೆ ಕಾಣಿಸಿಕೊಂಡಿದ್ದು, ಆಸ್ತಿ ನೋಂದಣಿ ಪ್ರಕ್ರಿಯೆ ತೀರಾ ನಿಧಾನ ಗತಿಯಲ್ಲಿ ನಡೆಯುತ್ತಿದೆ. ತಂತ್ರಾಂಶದಲ್ಲಿ ಪದೇ–ಪದೇ 'ಸರ್ವರ್ ಡೌನ್' ಎಂದು ಬರುತ್ತಿರುವ ಕಾರಣ, ಜನರು ಉಪ ನೋಂದಣಾಧಿಕಾರಿಗಳ ಕಚೇರಿ ಎದುರು ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ ಎದುರಾಗಿದೆ. ನಗರದ ವಿಜಯನಗರ ಉಪ ನೋಂದಣಾಧಿಕಾರಿಗಳ ಕಚೇರಿಗೆ ಶುಕ್ರವಾರ ಭೇಟಿ ನೀಡಿದಾಗ ಜನರು ಸರತಿಯಲ್ಲಿ ನಿಂತಿದ್ದರು. ಸುಮಾರು ಅರ್ಧಗಂಟೆ ನಿಂತಿದ್ದರೂ ಸರತಿಯಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ.

ವಿವರ 4A

ಚಿನಕುರುಳಿ ಪ್ರಕಾಶ್ ಶೆಟ್ಟಿ



'ವಸತಿ'ಗೆ ಬಿತ್ತು ಲಂಚದ ಕಿಚ್ಚು


ಬಿ.ಆರ್.ಪಾಟೀಲ ಆಡಿಯೊ ಬಹಿರಂಗದ ಪರಿಣಾಮ ಸರ್ಕಾರದ ಮೇಲೆ ಮುಗಿಬಿದ್ದ ವಿರೋಧಪಕ್ಷಗಳು

ಪ್ರಜಾವಾಣಿ ವಾರ್ತೆ

'ರಾಜೀವ್‌ಗಾಂಧಿ ವಸತಿ ನಿಗಮದಲ್ಲಿ ಹಣ ನೀಡಿದವರಿಗಷ್ಟೇ ಮನೆ ಮಂಜೂರು ಮಾಡಲಾಗುತ್ತಿದೆ' ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರೂ ಆಗಿರುವ ಆಳಂದ ಶಾಸಕ ಬಿ.ಆರ್.ಪಾಟೀಲ ಅವರು ಸರ್ಕಾರದ ಕಾರ್ಯ ವೈಖರಿ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದರೆನ್ನಲಾದ ಆಡಿಯೊ ಈಗ ವಿರೋಧ ಪಕ್ಷಗಳಿಗೆ ಅಸ್ತ್ರವಾಗಿದೆ. ಇದರ ಬೆನ್ನಲ್ಲೇ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ವಿರೋಧ ಪಕ್ಷದ ನಾಯಕ ಆರ್. ಅಶೋಕ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ. ದೂರಿನ ಕುರಿತು ತನಿಖೆ ನಡೆಸುವುದಾಗಿ ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದ್ದಾರೆ

ನ್ಯಾಯಾಂಗ ತನಿಖೆ ಆಗಲಿ: ಅಶೋಕ

'ವಸತಿ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಮತ್ತು ಲಂಚಗುಳಿತನದ ಬಗ್ಗೆ ಬಿ.ಆರ್.ಪಾಟೀಲ ಅವರು ತಮಗಿರುವ ಮಾಹಿತಿಯನ್ನು ಬಹಿರಂಗಪಡಿಸಬೇಕು ಮತ್ತು ಲೋಕಾಯುಕ್ತಕ್ಕೆ ದೂರು ಸಲ್ಲಿಸಬೇಕು' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದ್ದಾರೆ.



'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿಗೆ 'ಎಕ್ಸ್' ಮೂಲಕ ಪ್ರತಿಕ್ರಿಯಿಸಿದ ಅವರು, ಈ ಕುರಿತು ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಬೇಕು. ಸ್ವಪಕ್ಷದ ಶಾಸಕರೇ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಹೀಗಾಗಿ ಜಮೀರ್ ಅಹಮದ್ ಖಾನ್ ಅವರಿಗೆ ವಸತಿ ಸಚಿವ ಸ್ಥಾನದಲ್ಲಿ ಮುಂದುವರಿಯಲು ನೈತಿಕ ಹಕ್ಕಿಲ್ಲ' ಎಂದು ಹೇಳಿದ್ದಾರೆ. ಮುಖ್ಯಮಂತ್ರಿಯವರು ಜಮೀರ್ ಅವರ ರಾಜೀನಾಮೆ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

11



ನೂರಕ್ಕೆ ನೂರು ಸತ್ಯ: ಬಿಎಸ್‌ವೈ

'ಹಣ ಕೊಟ್ಟು ಆಶ್ರಯ ಮನೆ ಪಡೆಯಬೇಕಿದೆ ಎಂದು ಬಿ.ಆರ್.ಪಾಟೀಲ ಅವರು ಹೇಳಿರುವ ಮಾತು ನೂರಕ್ಕೆ ನೂರು ಸತ್ಯ' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

'ಹಣ ಕೊಡದೆ ಈ ಸರ್ಕಾರದಲ್ಲಿ ಯಾವುದೇ ಕೆಲಸ ಆಗುವುದಿಲ್ಲ ಎಂಬುದು ಸಾಬೀತಾಗಿದೆ. ಬಡವರೂ ಲಂಚ ಕೊಟ್ಟು ಮನೆ ಪಡೆದುಕೊಳ್ಳಬೇಕಾಗಿದೆ. ಸರ್ಕಾರ ತನ್ನ ತಪ್ಪನ್ನು ಒಪ್ಪಿಕೊಂಡು, ಅದನ್ನು ಸರಿಪಡಿಸಿಕೊಳ್ಳಬೇಕು. ಬಡವರಿಗೆ ನ್ಯಾಯ ಒದಗಿಸಬೇಕು' ಎಂದು ಒತ್ತಾಯಿಸಿದ್ದಾರೆ.

ತನಿಖೆ ನಡೆಸಿ ಕ್ರಮ: ಜಮೀರ್



ಮನೆಗಳ ಹಂಚಿಕೆಗೆ ಹಣ ಪಡೆಯಲಾಗಿದೆ ಎಂಬ ದೂರಿನ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

'ಬಡವರು ಮನೆ ಕಟ್ಟಿಕೊಳ್ಳುವ ಯೋಜನೆಯಲ್ಲಿ ಯಾರಾದರೂ ಹಣ ಪಡೆದಿದ್ದರೆ ಅದು ಅಕ್ಷಮ್ಯ. ಈ ಬಗ್ಗೆ ತನಿಖೆ ನಡೆಸಲಾಗುವುದು. ಸಂಬಂಧಪಟ್ಟ ಅಧಿಕಾರಿಗಳ ತಪ್ಪಿದ್ದರೂ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ.

ರೇಟ್ ಫಿಕ್ಸ್ ಸರ್ಕಾರ: ಎಚ್‌ಡಿಕೆ



'ವಸತಿ ಇಲಾಖೆಯಲ್ಲಿ ಹಣ ಕೊಟ್ಟವರಿಗಷ್ಟೇ ಮನೆ ಮಂಜೂರು ಮಾಡುತ್ತಾರೆ ಎಂದು ಬಿ.ಆರ್.ಪಾಟೀಲರು, ಕಂದಾಯ ಇಲಾಖೆಯಲ್ಲಿ ಅಧಿಕಾರಿಗಳು ಯಾವ ಕೆಲಸಕ್ಕೆ ಎಷ್ಟು ರೇಟ್ ಫಿಕ್ಸ್ ಮಾಡಿದ್ದಾರೆ ಎಂದು ಸಚಿವ ಕೃಷ್ಣ ಬೈರೇಗೌಡರು ಹೇಳಿರುವುದು ಈ ಸರ್ಕಾರ ಹೇಗೆ ನಡೆಯುತ್ತಿದೆ ಎಂಬುದನ್ನು ತೋರಿಸುತ್ತದೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ವಸತಿ ಇಲಾಖೆಯಲ್ಲಿ ಎಷ್ಟೆಲ್ಲಾ ಭ್ರಷ್ಟಾಚಾರ ಮತ್ತು ಕಮಿಷನ್ ಹಾವಳಿ ಇದೆ ಎಂಬುದರ ಬಗ್ಗೆ ರಾಜ್ಯದ ಯೋಜನಾ ಆಯೋಗದ ಉಪಾಧ್ಯಕ್ಷರೂ ಆಗಿರುವ ಬಿ.ಆರ್.ಪಾಟೀಲ ಅವರು ಬಹಳ ಸ್ಪಷ್ಟವಾಗಿ ಮಾತನಾಡಿದ್ದಾರೆ' ಎಂದರು.

11

ಸರ್ಕಾರಿ ಶಾಲೆಗೆ 'ಖಾಸಗಿ' ಮಕ್ಕಳು: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 9ನೇ ತರಗತಿಯಲ್ಲಿ ಕಡಿಮೆ ಅಂಕ ಪಡೆದ ಮಕ್ಕಳನ್ನು ತಾವೇ ಸರ್ಕಾರಿ ಶಾಲೆಗೆ ಸೇರಿಸಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಸಿದ ಆರೋಪದ ಮೇಲೆ ಇಲ್ಲಿನ ಖಾಸಗಿ ಶಾಲೆಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ.



ಬಾಲಕಿಯೊಬ್ಬಳ ಪೋಷಕರಾದ ಅರುಣಾ ಅವರ ದೂರಿನ ಮೇರೆಗೆ ಇಲ್ಲಿನ ವಸಂತನಗರದ ಸೇಂಟ್ ಮೇರೀಸ್ ಬಾಲಕಿಯರ ಪ್ರೌಢಶಾಲೆಯ ಮೂವರು ಶಿಕ್ಷಕರ ವಿರುದ್ಧ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಶಾಲೆಯ ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿಗೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

'ನಮ್ಮ ಮಗಳನ್ನು ಪ್ರಾಥಮಿಕ ಶಿಕ್ಷಣದಿಂದಲೂ ಖಾಸಗಿ ಶಾಲೆಯಲ್ಲೇ ಓದಿಸಿದ್ದೇವೆ. ಪ್ರತಿ ವರ್ಷವೂ ದುಬಾರಿ ಶುಲ್ಕ ಕಟ್ಟಿದ್ದೇವೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣಳಾದಾಗ ವಿಷಯ ಗೊತ್ತಾಯಿತು. ಕಲಿಕೆಯಲ್ಲಿ ಹಿಂದುಳಿದ ಕಾರಣಕ್ಕೆ 9ನೇ ತರಗತಿಯ ನಂತರ ಆ ಶಾಲೆಯ ಆಡಳಿತ ಮಂಡಳಿ ಸಮೀಪದ ಸರ್ಕಾರಿ ಶಾಲೆಗೆ ಸೇರಿಸಿದೆ. ಅಲ್ಲೇ ಪರೀಕ್ಷೆ ಬರೆಸಿದೆ. ಇದು ಅನ್ಯಾಯ. ಆಡಳಿತ ಮಂಡಳಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ವಿವರಿಸಿದ್ದಾರೆ.

6

ಸುಳ್ಳು ಸುದ್ದಿಗೆ 7 ವರ್ಷ ಜೈಲು


ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಮತ್ತು ತಪ್ಪು ಮಾಹಿತಿ ಹಂಚಿಕೊಂಡಿದ್ದು ಸಾಬೀತಾದರೆ ಗರಿಷ್ಠ 7 ವರ್ಷ ಜೈಲು ಶಿಕ್ಷೆ ಮತ್ತು ₹10 ಲಕ್ಷ ದಂಡ ವಿಧಿಸಲು ಅವಕಾಶ ನೀಡುವ ಕಾನೂನು ರೂಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.

'ಕರ್ನಾಟಕ ತಪ್ಪುಮಾಹಿತಿ ಮತ್ತು ಸುಳ್ಳು ಸುದ್ದಿ (ನಿಷೇಧ) ಮಸೂದೆ'ಯು ಸಿದ್ಧವಾಗಿದ್ದು, ಗುರುವಾರ (ಜೂನ್ 19) ನಡೆದ ಸಚಿವ ಸಂಪುಟ ಸಭೆಯ ಮುಂದೆ ಅದನ್ನು ಮಂಡಿಸಲಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುವ ಸುಳ್ಳು ಸುದ್ದಿಗಳಿಗೆ ಸಂಪೂರ್ಣ ಕಡಿವಾಣ ಹಾಕುವಂತಹ ಹಲವು ಅಧಿಕಾರಗಳನ್ನು ಈ ಮಸೂದೆಯು ರಾಜ್ಯ ಸರ್ಕಾರಕ್ಕೆ ನೀಡಲಿದೆ' ಎಂದು ಮೂಲಗಳು ಹೇಳಿವೆ.

ನಾಡಿನ ಜನರಿಗೆ ತಲುಪುವಂತೆ ರಾಜ್ಯದೊಳಗಿರುವ ಮತ್ತು ಹೊರ ರಾಜ್ಯದ ವ್ಯಕ್ತಿ, ಸುಳ್ಳು ಸುದ್ದಿಗಳನ್ನು ಹಂಚಿಕೊಂಡರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬಹುದಾಗಿದೆ ಎಂದು ಮಸೂದೆಯಲ್ಲಿ ವಿವರಿಸಲಾಗಿದೆ.

11



ನಂದಿಬೆಟ್ಟದಲ್ಲಿ ಸಚಿವ ಸಂಪುಟ ಸಭೆ ಜುಲೈ 2ಕ್ಕೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ನಂದಿಗಿರಿಧಾಮದ ಮಯೂರ ಸಭಾಂಗಣದಲ್ಲಿ ಜು.2ರಂದು ಸಚಿವ ಸಂಪುಟ ಸಭೆ ನಡೆಯಲಿದೆ ಎಂದು ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ತಿಳಿಸಿದ್ದಾರೆ. ಜೂ.19ರಂದು ನಿಗದಿಯಾಗಿದ್ದ ಸಚಿವ ಸಂಪುಟ ಸಭೆಯು ಕೊನೆ ಕ್ಷಣದಲ್ಲಿ ವಿಧಾನಸೌಧಕ್ಕೆ ಸ್ಥಳಾಂತರವಾಗಿತ್ತು. ಈ ಸಚಿವ ಸಂಪುಟ ಸಭೆಯು ಬಯಲು ಸೀಮೆ ಜಿಲ್ಲೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ದೊಡ್ಡ ಮಟ್ಟದಲ್ಲಿ ಕೊಡುಗೆ ನೀಡುತ್ತದೆ ಎನ್ನುವ ನಿರೀಕ್ಷೆ ಜಿಲ್ಲೆಯ ಜನರದ್ದಾಗಿದೆ.



ಅಪೆಕ್ಸ್ ಬ್ಯಾಂಕ್‌ನ ಸಹಾಯಕರ ಹುದ್ದೆಗಳ ಭರ್ತಿಗೆ ನಡೆದ ಪರೀಕ್ಷೆಯಲ್ಲಿ ಆಯ್ಕೆಯಾದವರ ಪಟ್ಟಿ ಬಿಡುಗಡೆಗೆ ಆಗ್ರಹಿಸಿ ಎಕೆಎಸ್‌ಎಸ್ ಸಂಘಟನೆಯ ಅಧ್ಯಕ್ಷ ಕಾಂತಕುಮಾರ್ ನೇತೃತ್ವದಲ್ಲಿ ಅಭ್ಯರ್ಥಿಗಳು ಪ್ರತಿಭಟನೆ ನಡೆಸಿದರು

‘ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪೆಕ್ಸ್ ಬ್ಯಾಂಕ್‌ನ ಸಹಾಯಕ ಹುದ್ದೆಗಳ ಭರ್ತಿಗೆ ನಡೆಸಿದ ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಪಟ್ಟಿಯನ್ನು ತಕ್ಷಣವೇ ಪ್ರಕಟಿಸುವಂತೆ ಆಗ್ರಹಿಸಿ ಪರೀಕ್ಷೆ ಬರೆದಿರುವ ಅಭ್ಯರ್ಥಿಗಳು ಆಲ್ ಕರ್ನಾಟಕ ಸ್ಟೇಟ್ ಸ್ಟೂಡೆಂಟ್ಸ್ ಅಸೋಸಿಯೇಷನ್ ಸಂಘಟನೆಯ(ಎ-ಕೆಎಸ್‌ಎಸ್‌ಎ) ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

‘2024ರ ಮಾರ್ಚ್ 5ರಂದು ಅಪೆಕ್ಸ್ ಬ್ಯಾಂಕ್ ಸಹಾಯಕ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆ ಹೊರಡಿ-ಸಲಾಗಿತ್ತು. ಸೆಪ್ಟೆಂಬರ್ 1ರಂದು ಪರೀಕ್ಷೆ ನಡೆಸಲಾಯಿತು. ಪ್ರಶ್ನೆಗಳಿಗೆ ಸರಿ ಉತ್ತರ-ಗಳನ್ನು (ಕೀ ಆನ್ಸರ್) ಪ್ರಕಟಿಸಲಾಯಿತು. ಇದಾಗಿ ವರ್ಷ ಕಳೆಯುತ್ತಾ ಬಂದರೂ ಮುಂದಿನ ಯಾವುದೇ ಪ್ರಕ್ರಿಯೆಗಳು ನಡೆದಿಲ್ಲ’ ಎಂದು ಪ್ರತಿಭಟನಕಾರರು ಬೇಸರ ವ್ಯಕ್ತಪಡಿಸಿದರು.

‘ಲಿಖಿತ ಪರೀಕ್ಷೆಯಲ್ಲಿ ಪಾಸಾಗಿ, ಸಂದರ್ಶನಕ್ಕೆ ಅರ್ಹರಿರುವ ಅಭ್ಯರ್ಥಿಗಳ ಪಟ್ಟಿಯನ್ನು ತಕ್ಷಣವೇ ಪ್ರಕಟಿಸಬೇಕು. ನೇಮಕಾತಿಯನ್ನು ಶೀಘ್ರವೇ ಪೂರ್ಣ-ಗೊಳಿಸಬೇಕು. ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಹದಿನೈದು ದಿನಗಳ ಒಳಗೆ ಬಿಡುಗಡೆ ಮಾಡದಿದ್ದರೆ, ಅಪೆಕ್ಸ್ ಬ್ಯಾಂಕ್ ಆಡಳಿತ ಮಂಡಳಿ ವಿರುದ್ಧ ನಿರಂತರವಾಗಿ ಹೋರಾಟ ನಡೆಸಲಾಗುತ್ತದೆ’ ಎಂದು ಸಂಘದ ಅಧ್ಯಕ್ಷ ಕಾಂತಕುಮಾರ್ ಮತ್ತಿತರರು ಎಚ್ಚರಿಸಿದರು.

ನಾಳೆ ವಿವಿಧೆಡೆ ಅಂಚೆ ಸೇವೆ ಸ್ಥಗಿತ

ಬೆಂಗಳೂರು: ತಂತ್ರಾಂಶ ಉನ್ನತೀ-ಕರಣದ ಕಾರಣ ನಗರದ ಪ್ರಧಾನ ಅಂಚೆ ಕಚೇರಿ (ಜಿಪಿಒ) ಸೇರಿ ವಿವಿಧೆಡೆ ಶನಿವಾರ ಅಂಚೆ ಸೇವೆ ಸ್ಥಗಿತಗೊಳ್ಳಲಿವೆ.

ಆರ್‌ಟಿ ನಗರ ಮುಖ್ಯ ಅಂಚೆ ಕಚೇರಿ, ಜಯನಗರ ಮುಖ್ಯ ಅಂಚೆ ಕಚೇರಿ, ರಾಜಾಜಿನಗರ ಮುಖ್ಯ ಅಂಚೆ ಕಚೇರಿ ಮತ್ತು ಚನ್ನಪಟ್ಟಣ ಮುಖ್ಯ ಅಂಚೆ ಕಚೇರಿ ಹಾಗೂ ಇವುಗಳಿಗೆ ಸಂಬಂಧಿಸಿದ ಉಪ ಕಚೇರಿಗಳಲ್ಲಿ ಅಂಚೆ ಸೇವೆ ಲಭ್ಯವಿರುವುದಿಲ್ಲ.

ಗ್ರಾಹಕರು ಎಚ್‌ಎಲ್ ಮುಖ್ಯ ಅಂಚೆ ಕಚೇರಿ, ಜಾಲಹಳ್ಳಿ ಮುಖ್ಯ ಅಂಚೆ ಕಚೇರಿ, ಬಸವನಗುಡಿ ಮುಖ್ಯ ಅಂಚೆ ಕಚೇರಿಗೆ ಭೇಟಿ ನೀಡಬಹುದು.



ಡಿಎಸ್ ಮ್ಯಾಕ್ಸ್ ಪ್ರಾಪರ್ಟೀಸ್ ಸಂಸ್ಥೆಯ 19ನೇ ವಾರ್ಷಿಕೋತ್ಸವದಲ್ಲಿ ಬಾಲಿವುಡ್ ನಟ ಗೋವಿಂದ ಅವರನ್ನು ಸನ್ಮಾನಿಸಲಾಯಿತು. ಡಿಎಸ್ ಮ್ಯಾಕ್ಸ್ ಸಂಸ್ಥೆಯ ಅಧ್ಯಕ್ಷ ಕೆ.ವಿ. ಸತೀಶ್, ವ್ಯವಸ್ಥಾಪಕ ನಿರ್ದೇಶಕ ಎಸ್.ಪಿ. ದಯಾನಂದ್, ಮಾಜಿ ಸಚಿವ ರಾಜೂಗೌಡ ಉಪಸ್ಥಿತರಿದ್ದರು

‘ಸಮೀಕ್ಷೆಗೆ ಗ್ರಾ.ಪಂ. ಸದಸ್ಯರ ಬಳಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ನಡೆಸಲು ಉದ್ದೇಶಿಸಿರುವ ಸಾಮಾಜಿಕ, ಶೈಕ್ಷಣಿಕ ಗಣತಿಯ (ಜಾತಿವಾರು ಸಮೀಕ್ಷೆ) ಕುರಿತು ಜನರಿಗೆ ಅರಿವು ಮೂಡಿಸಲು 5,950 ಗ್ರಾಮ ಪಂಚಾಯಿತಿಗಳ 92 ಸಾವಿರ ಸದಸ್ಯರನ್ನು ಬಳಸಿಕೊಳ್ಳಬೇಕು’ ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಸಲಹೆ ನೀಡಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಪತ್ರ ಬರೆದಿರುವ ಅವರು, ‘ಗ್ರಾಮ ಪಂಚಾಯಿತಿಯ ಬಿಲ್ ಕಲೆಕ್ಟರ್, ಡಾಟಾ ಎಂಟ್ರಿ ಆಪರೇಟರ್‌ಗಳು, ಕಾರ್ಯ-ದರ್ಶಿಗಳು ಹಾಗೂ ಪಿಡಿಒಗಳನ್ನು ಸಮೀಕ್ಷೆಯಲ್ಲಿ ತೊಡಗಿಸಿಕೊಳ್ಳಬೇಕು. ವಿಶೇಷ ಗ್ರಾಮಸಭೆ ಮತ್ತು ವಾರ್ಡ್ ಸಭೆಗಳನ್ನು ನಡೆಸಲು ಎಲ್ಲ ಜಿಲ್ಲಾಧಿ-ಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚನೆ ನೀಡಬೇಕು’ ಎಂದಿದ್ದಾರೆ.

‘ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಎಂಟು ಹಂತದಲ್ಲಿ ಅಧಿಕಾರಿ ವರ್ಗವಿದೆ. ಅವರನ್ನು ಸಮೀಕ್ಷೆಯ ಯಾವ ಹಂತದಲ್ಲಿ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ನಿರ್ಧರಿಸಿ ತೀರ್ಮಾನ ತೆಗೆದುಕೊಳ್ಳಬೇಕು. ತಮ್ಮ ಕರ್ತವ್ಯದ ಭಾಗವಾಗಿ ತಮ್ಮ ವ್ಯಾಪ್ತಿಯ ಸುಮಾರು 200ರಿಂದ 500 ಮನೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ಹೊಣೆಯನ್ನು ಕಾರ್ಯದರ್ಶಿಗಳು, ಪಿಡಿಒಗಳು, ಬಿಲ್ ಕಲೆಕ್ಟರ್‌ಗಳು, ಡಾಟಾ ಎಂಟ್ರಿ ಆಪರೇ-ಟರ್‌ಗಳಿಗೆ ನೀಡಬಹುದು. ಮನೆ ಮನೆಗೆ ತೆರಳಿ ಸಾಮಾಜಿಕ- ಶೈಕ್ಷಣಿಕ ಸಮೀಕ್ಷೆಯ ಅರಿವು ಮೂಡಿಸಲು ಜಾಹೀರಾತು ನೀಡುವುದು, ಕರಪತ್ರಗ-ಳನ್ನು ಹಂಚುವುದು, ಧ್ವನಿವರ್ಧಕಗಳ ಮೂಲಕ ಮಾಹಿತಿ ನೀಡಿ ಜನರು ಸ್ವ-ಯಂಪ್ರೇರಿತರಾಗಿ ಭಾಗಿಯಾಗುವಂತೆ ಮಾಡಬೇಕು’ ಎಂದೂ ಅವರು ತಿಳಿಸಿದ್ದಾರೆ.

ಕಾಯ್ದೆ ತಿದ್ದುಪಡಿಗೆ ಆಗ್ರಹ

ಬೆಂಗಳೂರು: ‘ವಕೀಲರಿಗೆ ಸೂಕ್ತ ರಕ್ಷಣೆ ಒದಗಿಸಲು ‘ವಕೀಲರ ಸಂರಕ್ಷಣೆ ಕಾಯ್ದೆ–2024’ಕ್ಕೆ ತಿದ್ದುಪಡಿ ತರಬೇಕು’ ಎಂದು ಅಖಿಲ ಭಾರತ ವಕೀಲರ ಒಕ್ಕೂಟವು ಸರ್ಕಾರಕ್ಕೆ ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯ-ಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಹರೀಂದ್ರ, ‘ರಾಜ್ಯದ ಎಲ್ಲ ನ್ಯಾಯಾಲಯಗಳ ಆವರಣದಲ್ಲಿ ವಕೀಲರಿಗೆ ಚೇಂಬರ್‌ಗಳು ಮತ್ತು ಜಿಲ್ಲಾ ನ್ಯಾಯಾ-ಲಯಗಳಲ್ಲಿ ಅಕಾಡೆಮಿ ಸ್ಥಾಪಿಸಬೇಕು’ ಎಂದು ಒತ್ತಾಯಿಸಿದರು.

‘ಪೊಲೀಸರ ಏಕಪಕ್ಷೀಯ ವರ್ತನೆಗಳಿಂದ ವಕೀಲರಿಗೆ ರಕ್ಷಣೆ ನೀಡಬೇಕು. ಕಿರಿಯ ವಕೀಲರಿಗೆ ಎರಡು ವರ್ಷಗಳವರೆಗೆ ಮಾಸಿಕ ₹ 10 ಸಾವಿರ ಸಹಾಯಧನ ನೀಡಬೇಕು. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸರ್ಕಾರಿ ಕಾನೂನು ಕಾಲೇಜು ಸ್ಥಾಪಿಸಬೇಕು. ಖಾಸಗಿ ಕಾನೂನು ಕಾಲೇಜುಗಳ ಪ್ರವೇಶ ಶುಲ್ಕಕ್ಕೆ ಕಡಿವಾಣ ಹಾಕಬೇಕು. ಅವೈಜ್ಞಾ-ನಿಕವಾದ ‘ಅಖಿಲ ಭಾರತ ಬಾರ್ ಪರೀಕ್ಷೆ’ಯನ್ನು ರದ್ದುಪಡಿಸಬೇಕು’ ಎಂದು ಹೇಳಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಸಾಮಾನ್ಯ ಮಳೆಯಾಗುವ ಸಾಧ್ಯತೆ ಇದೆ

ನೇಮಕಾತಿ ತಡೆಗೆ ಆಗ್ರಹ

ಬೆಂಗಳೂರು: 'ಕೇಂದ್ರ ತೆರಿಗೆ ಆಯುಕ್ತಾಲಯದ ಬೆಂಗಳೂರು ವಲಯಕ್ಕೆ ಇತ್ತೀಚೆಗೆ ಅನ್ಯಭಾಷಿಕ ಸಿಬ್ಬಂದಿಯನ್ನು ನೇಮಕ ಮಾಡಲಾಗಿದ್ದು, ಈ ನೇಮಕಾತಿಯನ್ನು ಕೂಡಲೇ ತಡೆಹಿಡಿಯಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದಾರೆ. 'ಆಯುಕ್ತಾಲಯಕ್ಕೆ ಇತ್ತೀಚೆಗೆ 137 ಹವಾಲ್ದಾರ್, ಸಹಾಯಕರು ಹಾಗೂ ತೆರಿಗೆ ಸಹಾಯಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಸ್ಥಳೀಯರಿಗೆ ಸೇವೆ ಮಾಡಬೇಕಾದ ಈ ಎಲ್ಲ ನೌಕರರು ಅನ್ಯ ಭಾಷಿಕರಾಗಿದ್ದಾರೆ. ಮುಂದಿನ ದಿನಗಳಲ್ಲಿ ಉಂಟಾಗಬಹುದಾದ ಭಾಷಾ ಸಂಘರ್ಷವನ್ನು ತಡೆಯಲು ಕೂಡಲೇ ಈ ನೇಮಕಾತಿಯನ್ನು ತಡೆ ಹಿಡಿದು, ಸ್ಥಳೀಯರಿಗೆ ಪ್ರಾತಿನಿಧ್ಯ ನೀಡುವ ನೇಮಕಾತಿಗೆ ಮುಂದಾಗಬೇಕು' ಎಂದು ಒತ್ತಾಯಿಸಿದ್ದಾರೆ.

'ಕೇಂದ್ರದ ಈ ರೀತಿಯ ತೀರ್ಮಾನಗಳು ಸ್ಥಳೀಯರಲ್ಲಿ ಆಕ್ರೋಶವನ್ನು ಉಂಟು ಮಾಡುತ್ತವೆ. ಒಕ್ಕೂಟ ವ್ಯವಸ್ಥೆಯಲ್ಲಿ ಪ್ರಾದೇಶಿಕ ಭಾವನೆಗಳನ್ನು ಗೌರವಿಸುವುದು ಯಾವುದೇ ಸರ್ಕಾರದ ಕರ್ತವ್ಯವಾಗಿದ್ದು, ಸಾಂವಿಧಾನಿಕ ಆಶಯಗಳು ಸಾಕಾರಗೊಳ್ಳಬೇಕಾದರೆ ಕೇಂದ್ರ ಸರ್ಕಾರ ಇಂತಹ ಕ್ರಮಗಳನ್ನು ಪ್ರೋತ್ಸಾಹಿಸಬಾರದು' ಎಂದು ಹೇಳಿದ್ದಾರೆ.



ಪುರುಷೋತ್ತಮ ಬಿಳಿಮಲೆ

368 ಮರ ರಕ್ಷಿಸಲು ಸಭೆ: ಖಂಡ್ರೆ

ಕಂಟೋನ್ಮೆಂಟ್ ರೈಲ್ವೆ ಕಾಲೊನಿಯ ಜೀವವೈವಿಧ್ಯ ತಾಣದಲ್ಲಿರುವ ಮರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿರುವ 368 ಮರಗಳನ್ನು ರಕ್ಷಿಸಲು ಅಧಿಕಾರಿಗಳ ಸಭೆ ಕರೆದು ಚರ್ಚಿಸುವುದಾಗಿ ಅರಣ್ಯ ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದರು.

ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿರುವ ಜೀವವೈವಿಧ್ಯ ತಾಣಕ್ಕೆ ಶುಕ್ರವಾರ ಭೇಟಿ ಅವರು ಸ್ಥಳೀಯರೊಂದಿಗೆ ಮಾತುಕತೆ ನಡೆಸಿದರು.

ಜೀವ ವೈವಿಧ್ಯತಾಣವಾಗಿರುವ ಇಲ್ಲಿ 368 ಮರ ಕಡಿಯಲು ಅವಕಾಶ ನೀಡದಂತೆ ಸಾರ್ವಜನಿಕರು ಮನವಿ ಮಾಡಿದರು. ಅಲ್ಲದೆ, ಜೀವವೈವಿಧ್ಯತೆಯ ಪಾರಂಪರಿಕ ತಾಣವಾಗಿ ಘೋಷಿಸಬೇಕು ಎಂದು ಒತ್ತಾಯಿಸಿದರು.

'ಬೃಹದಾಕಾರದ ವಿವಿಧ ಜಾತಿಯ ಮರಗಳಿರುವ ಈ ಪ್ರದೇಶವನ್ನು ಶ್ವಾಸತಾಣವಾಗಿ ಉಳಿಸಬೇಕು' ಎಂಬ ಪರಿಸರವಾದಿಗಳ ಮನವಿಗೆ ಸ್ಪಂದಿಸಿದ ಅರಣ್ಯ ಸಚಿವರು, ಈ ಬಗ್ಗೆ ಅಧಿಕಾರಿಗಳ ಸಭೆ ಕರೆದು ಪರಿಶೀಲಿಸುವ ಭರವಸೆ ನೀಡಿದರು.

ಬಿಬಿಎಂಪಿ ಅರಣ್ಯ ವಿಭಾಗದ ಅಧಿಕಾರಿಗಳು ಅಲ್ಲಿರುವ ವೃಕ್ಷಗಳ ಪ್ರಭೇದಗಳ ಬಗ್ಗೆ ವಿವರಿಸಿ, ಮರ ಕಡಿಯುವುದಕ್ಕೆ ಸಾರ್ವಜನಿಕರಿಂದ ವ್ಯಾಪಕ ವಿರೋಧ ವ್ಯಕ್ತವಾಗಿದೆ ಎಂದು ತಿಳಿಸಿದರು. ಪರಿಸರ ಕಾರ್ಯಕರ್ತ ವಿಜಯ್ ನಿಶಾಂತ್ ಉಪಸ್ಥಿತರಿದ್ದರು.

ರೈಲ್ವೆ ಕಂಟೋನ್ಮೆಂಟ್ ಸಮೀಪದ ರಸ್ತೆಗಳ ಬದಿಯಲ್ಲಿರುವ ಮರದ ಬುಡಕ್ಕೆ ಹಾಕಿರುವ ಕಾಂಕ್ರೀಟ್ ಹಾಗೂ ಕಲ್ಲುಗಳನ್ನು ತೆರವುಗೊಳಿಸುವ ಕಾರ್ಯಕ್ಕೂ ಸಚಿವ ಈಶ್ವರ ಖಂಡ್ರೆ ಅವರು ಚಾಲನೆ ನೀಡಿದರು.

'ಮರಗಳ ಸುತ್ತಲೂ ಮಣ್ಣು ಮಾತ್ರ ಇರಬೇಕು, ಕಲ್ಲು, ಸಿಮೆಂಟ್ ಬ್ಲಾಕ್ ಅಥವಾ ಕಾಂಕ್ರೀಟ್ ಹಾಕಬಾರದು. ಈಗಾಗಲೇ ಹಾಕಿರುವುದನ್ನು ತೆರವು ಮಾಡಬೇಕು. ಈ ಬಗ್ಗೆ ಹೊರಡಿಸಿರುವ ಆದೇಶವನ್ನು ಎಲ್ಲರೂ ಪಾಲಿಸಬೇಕು' ಎಂದು ಅರಣ್ಯ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.



ಕಂಟೋನ್ಮೆಂಟ್ ರೈಲ್ವೆ ಕಾಲೊನಿಯ ಮರಗಳನ್ನು ಈಶ್ವರ ಖಂಡ್ರೆ ವೀಕ್ಷಿಸಿದರು

ಪ್ರಧಾನಿ ಮೋದಿಗೆ ಪತ್ರ

ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣ ಮಾಡಲು 368 ಬೃಹತ್ ಮರಗಳನ್ನು ಕಡಿಯಲು ಅವಕಾಶ ನೀಡದೆ, ಪಾರಂಪರಿಕ ಮರಗಳನ್ನು ರಕ್ಷಿಸಬೇಕು ಎಂದು 'ಪರಿಸರಕ್ಕಾಗಿ ನಾವು' ಸಂಘಟನೆ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೂ ಪತ್ರ ಬರೆದು 368 ಮರಗಳನ್ನು ಸಂರಕ್ಷಿಸಬೇಕು ಎಂದು ಮನವಿ ಮಾಡಲಾಗಿದೆ ಎಂದು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ತಿಳಿಸಿದರು.

ತೋತಾಪುರಿ ಮಾವಿಗೆ ನಿರ್ಬಂಧ

'ಮಾವಿನ ಹಣ್ಣಿನ ಋತು ಮುಗಿಯುತ್ತಾ ಬಂದಿದೆ. ಹಾಗಾಗಿ, ಸರ್ಕಾರ ತಕ್ಷಣ ರೈತರ ನೆರವಿಗೆ ನಿಲ್ಲಬೇಕು'

ಮಾವಿಗೆ ಬೆಂಬಲ ಬೆಲೆ: ಸಿ.ಎಂಗೆ ಮುನಿಯಪ್ಪ ಪತ್ರ

ಬೆಂಗಳೂರು: ಮಾವು ಬೆಳೆಗೆ ಬೆಂಬಲ ಬೆಲೆ ನೀಡುವಂತೆ ಕೋರಿ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.



ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಮಾವು ಏಷ್ಯಾ ಖಂಡದಲ್ಲೇ ಪ್ರಸಿದ್ಧಿ ಪಡೆದಿದೆ. ಆಂಧ್ರಪ್ರದೇಶ ಸರ್ಕಾರ ಕರ್ನಾಟಕದ ತೋತಾಪುರಿ ಮಾವಿನ ಮಾರಾಟಕ್ಕೆ ನಿರ್ಬಂಧ ಹೇರಿದೆ. ಇದರಿಂದ ಕೋಲಾರ ಜಿಲ್ಲೆ ಸೇರಿದಂತೆ ರಾಜ್ಯದ ಮಾವು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರಿಗೆ ಈಗಾಗಲೇ ಪತ್ರ ಬರೆಯಲಾಗಿದೆ. ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರಾದ ಬೈರತಿ ಸುರೇಶ್, ಚಿಕ್ಕಬಳ್ಳಾಪುರ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್, ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ಅವರ ಜೊತೆ ಚರ್ಚಿಸಲಾಗಿದೆ. ತಕ್ಷಣ ಬೆಂಬಲ ಬೆಲೆ ಘೋಷಣೆ ಮಾಡಬೇಕು ಎಂದು ಕೋರಿದ್ದಾರೆ.

'ಕುವೆಂಪು ವಿಚಾರ ಕ್ರಾಂತಿ'

ಬೆಂಗಳೂರು: ಜನ ಪ್ರಕಾಶನವು 'ಜನರ ಕಡೆಗೆ ವೈಚಾರಿಕ ನಡಿಗೆ' ಎಂಬ ಘೋಷಣೆಯಡಿ ಕುವೆಂಪು ವಿಚಾರ ಆಂದೋಲನ ಹಮ್ಮಿಕೊಂಡಿದೆ.

ಇದರ ಭಾಗವಾಗಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಸಂಪಾದಕತ್ವದಲ್ಲಿ 'ಕುವೆಂಪು ವಿಚಾರ ಕ್ರಾಂತಿ' ಪುಸ್ತಕ ಸಿದ್ಧಪಡಿಸಲಾಗಿದೆ. 25ರಂದು ಸಂಜೆ 5 ಗಂಟೆಗೆ ಅರಮನೆ ರಸ್ತೆಯ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಸ್ತಕ ಬಿಡುಗಡೆ ಮಾಡುವರು ಎಂದು ಜನ ಪ್ರಕಾಶನದ ಬಿ. ರಾಜಶೇಖರಮೂರ್ತಿ ತಿಳಿಸಿದ್ದಾರೆ.

ಡಿಸಿಎಫ್ ವರ್ಗಾವಣೆ

ಬೆಂಗಳೂರು: ಬಿಬಿಎಂಪಿ ಅರಣ್ಯ ಘಟಕದ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಲ್.ಜಿ. ಸ್ವಾಮಿ ಅವರನ್ನು ವರ್ಗಾಯಿಸಿ ಅರಣ್ಯ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ. ಸ್ವಾಮಿ ಅವರಿಗೆ ಹುದ್ದೆ ತೋರಿಸಿಲ್ಲ.

ಚಿಕ್ಕಮಗಳೂರು ಅರಣ್ಯ ಸಂಚಾರಿ ದಳದ ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರನ್ನು ಬಿಬಿಎಂಪಿಗೆ ವರ್ಗಾಯಿಸಲು, ಅವರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ನೀಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ ಮರಗಳ ಕಡಿತದ ಬಗ್ಗೆ ಕ್ರಮ ಕೈಗೊಳ್ಳದಿರುವುದು, ವ್ಯಕ್ತಿಯೊಬ್ಬರ ಮೇಲೆ ಕೊಂಬೆ ಬಿದ್ದು ಮೃತಪಟ್ಟಿರುವುದು ಸೇರಿದಂತೆ ಹಲವು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳದ ಆರೋಪ ಬಿ.ಎಲ್.ಜಿ. ಸ್ವಾಮಿ ಅವರ ಮೇಲಿತ್ತು.

ವಿಪತ್ತು ತಪ್ಪಿಸಲು ಜನರ ಸಹಕಾರ ಅಗತ್ಯ

ಸಮುದಾಯ ಆಧರಿತ ವಿಪತ್ತು ನಿರ್ವಹಣೆ ಸಮ್ಮೇಳನದಲ್ಲಿ ಶಾಲಿನಿ ರಜನೀಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭೂಕುಸಿತ, ಪ್ರವಾಹದ ಸಾಧ್ಯತೆ ಇರುವ ಸೂಕ್ಷ್ಮ ಪ್ರದೇಶಗಳಿಂದ ಜನರು ದೂರವಿರಬೇಕು. ಆಗ ಮಾತ್ರವೇ ಅವಘಡ ಸಂಭವಿಸಿದರೂ ಜೀವಹಾನಿ–ಆಸ್ತಿಹಾನಿಯಂತಹ ದುರಂತಗಳನ್ನು ತಪ್ಪಿಸಬಹುದು' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, ಭಾರತೀಯ ವಿಜ್ಞಾನ ಸಂಸ್ಥೆ, ಭಾರತೀಯ ವೈದ್ಯಕೀಯ ಸಂಘ, ಜೀವರಕ್ಷಾ ಟ್ರಸ್ಟ್, ಭಾರತೀಯ ರೈಲ್ವೆ ವಿಪತ್ತು ನಿರ್ವಹಣಾ ಸಂಸ್ಥೆಗಳು ಕರ್ನಾಟಕ ಸರ್ಕಾರದ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ, 'ಸಮುದಾಯ ಆಧರಿತ ವಿಪತ್ತು ನಿರ್ವಹಣೆ' ಕುರಿತ ಅಂತರರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಅಂಕೋಲಾದ ಶಿರಾಲಿ ಬಳಿ ಈಚೆಗೆ ಗುಡ್ಡಕುಸಿತ ಸಂಭವಿಸಿತು. ಅದು ವಾಸಯೋಗ್ಯ ಪ್ರದೇಶವೇ ಆಗಿರಲಿಲ್ಲ. ಆದರೂ ಕುಟುಂಬವೊಂದು ಅಲ್ಲಿ ಮನೆ ನಿರ್ಮಿಸಿಕೊಂಡಿತ್ತು, ಗೂಡಂಗಡಿಯನ್ನೂ ನಡೆಸುತ್ತಿತ್ತು. ಗುಡ್ಡಕುಸಿದು ಮನೆ ನಾಶವಾಗುವುದರ ಜತೆಗೆ ಇಡೀ ಕುಟುಂಬವೇ ನಶಿಸಿಹೋಯಿತು' ಎಂದರು.

'ಭೂಕುಸಿತದ ಅಪಾಯವಿದ್ದ ಆ ಸೂಕ್ಷ್ಮ ಪ್ರದೇಶದಿಂದ ಜನರು ದೂರ ಇದ್ದಿದ್ದರೆ, ಜೀವಹಾನಿ ಆಗುತ್ತಿರಲಿಲ್ಲ. ಜನ ಅಲ್ಲಿ ನೆಲಸುವುದನ್ನು ತಡೆಯುವ ಹೊಣೆಗಾರಿಕೆ ಸರ್ಕಾರದ್ದೇ ಹೌದು. ಆದರೆ ಅದು ಯಶಸ್ವಿಯಾಗುವುದು ಸಮುದಾಯವೂ ಸಹಕಾರ ನೀಡಿದಾಗ ಮಾತ್ರ' ಎಂದರು.

'ಬೆಂಗಳೂರಿನಲ್ಲಿ ರಾಜಕಾಲುವೆಯ ಪ್ರವಾಹದ ಸಾಧ್ಯತೆ ಇರುವೆಡೆ ಸಾವಿರಾರು ಮನೆಗಳನ್ನು, ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಿದ್ದಾರೆ. ಅವುಗಳ ತೆರವಿಗೆ ಮುಂದಾದರೆ, ಜನರೇ ಬೀದಿಗಿಳಿದು ಪ್ರತಿಭಟಿಸುತ್ತಾರೆ. ಸರ್ಕಾರವನ್ನು ಜನವಿರೋಧಿ ಎಂದು ದೂರುತ್ತಾರೆ. ಜನರೇ ಅಪಾಯವನ್ನು ಅರಿತುಕೊಂಡು ನಡೆದರೆ ಇಂತಹ ಸ್ಥಿತಿಗೆ ಆಸ್ಪದವಿರುವುದಿಲ್ಲ' ಎಂದರು.

> **ವಿಪತ್ತು ನಿರ್ವಹಣೆ ಯಾವುದೇ ದೇಶ ಅಥವಾ ಸರ್ಕಾರಕ್ಕೆ ಅತ್ಯಂತ ಮಹತ್ವದ್ದು. ಚಂಡಮಾರುತಗಳು, ಪ್ರವಾಹಗಳು ಸರ್ಕಾರವನ್ನೇ ಪತನಗೊಳಿಸಿದ ಉದಾಹರಣೆಗಳಿವೆ**
> **ಸೈಯದ್ ಅತಾ ಹಸ್ನೈನ್,** ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯ

> **ಯಾವುದೇ ವಿಪತ್ತಿನಲ್ಲಿ ಕೆಲವಾದರೂ ಜೀವಗಳನ್ನು ಉಳಿಸಲಾಗಿದೆ ಎಂದಾದರೆ, ಅದಕ್ಕೆ ಪೂರ್ವಸಿದ್ಧತೆಯೇ ಪ್ರಮುಖ ಕಾರಣ. ತರಾತುರಿಯಲ್ಲಿ ಏನನ್ನೂ ಮಾಡಲಾಗದು ಎಂ.ಎ. ಬಾಲಸುಬ್ರಹ್ಮಣ್ಯ,** ಜೀವರಕ್ಷಾ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ



ಸಮ್ಮೇಳನದ ಭಾಗವಾಗಿ ಆಯೋಜಿಸಲಾಗಿದ್ದ ವಸ್ತು ಪ್ರದರ್ಶನದಲ್ಲಿ, ರಕ್ಷಣಾ ಕಾರ್ಯಾಚರಣೆಯಲ್ಲಿ ವರ್ಚ್ಯುವಲ್ ರಿಯಾಲಿಟಿ (ವಿಆರ್) ತಂತ್ರಜ್ಞಾನದ ಬಳಕೆಯ ಸಾಧ್ಯತೆಗಳ ಪ್ರಾತ್ಯಕ್ಷಿಕೆಯನ್ನು ವಿದ್ಯಾರ್ಥಿಗಳಿಗೆ ನೀಡಲಾಯಿತು –ಪ್ರಜಾವಾಣಿ ಚಿತ್ರ

ಶಿವಗಂಗೆ: ಪ್ಲಾಸ್ಟಿಕ್ ಬಳಕೆ ನಿಷೇಧ

ದೇವನಹಳ್ಳಿ: ಶಿವಗಂಗೆ ಬೆಟ್ಟ ಪ್ರದೇಶದಲ್ಲಿದ ಪ್ರಾಕೃತಿಕ ಸೊಬಗಿನ ನೈರ್ಮಲ್ಯವನ್ನು ಕಾಪಾಡುವ ಹಿತ ದೃಷ್ಟಿಯಿಂದ ನೆಲಮಂಗಲ ತಾಲ್ಲೂಕಿನ ಶಿವಗಂಗೆ ಬೆಟ್ಟ ಪ್ರದೇಶದ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧಿಸಲಾಗಿದೆ.

ಥರ್ಮಕೋಲ್, ಪ್ಲಾಸ್ಟಿಕ್ ಮತ್ತು ಮೈಕ್ರೋ ಬೀಡ್ಸ್‌ನಿಂದ ತಯಾರಾದಂತಹ ಪ್ಲಾಸ್ಟಿಕ್ ವಸ್ತುಗಳ ಕೊಂಡೊಯ್ಯುವಿಕೆ, ಬಳಕೆ ಮತ್ತು ಮಾರಾಟ ಮಾಡುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿ ಎ.ಬಿ ಬಸವರಾಜು ಆದೇಶಿಸಿದ್ದಾರೆ.

ಎತ್ತಿನಹೊಳೆ: 6 ಟಿಎಂಸಿ ಅಡಿ ನೀರಿನ ಕೊರತೆ

2027ರ ಮಾರ್ಚ್‌ನೊಳಗೆ ಯೋಜನೆ ಪೂರ್ಣ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎತ್ತಿನ ಹೊಳೆ ಯೋಜನೆಗೆ ಸರಾಸರಿ 18.08 ಟಿಎಂಸಿ ಅಡಿ ನೀರು ಲಭ್ಯವಿದೆ. ಉಳಿದ 6 ಟಿಎಂಸಿ ಅಡಿ ಕೊರತೆ ನೀಗಿಸಲು ನೀರಿನ ತಿರುವು ಕುರಿತು ಕಾರ್ಯಸಾಧ್ಯತಾ ವರದಿಯನ್ನು ಸಿದ್ಧಪಡಿಸಲು ಸಮಾಲೋಚಕರನ್ನು ನೇಮಕ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಎತ್ತಿನಹೊಳೆ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ನಂತರ ಮಾತನಾಡಿದ ಅವರು, 'ಪರಿಷ್ಕೃತ ಅಂದಾಜು ₹23,251.66 ಕೋಟಿ ನಿಗದಿ ಮಾಡಲಾಗಿದ್ದು, ಇದುವರೆಗೆ ₹17,147 ಕೋಟಿ ವೆಚ್ಚವಾಗಿದೆ. 14.056 ಟಿಎಂಸಿ ಅಡಿ ಕುಡಿಯುವ ನೀರು, 9.953 ಟಿಎಂಸಿ ಅಡಿ ನೀರು ಕೆರೆಯನ್ನು ತುಂಬಿಸಲು ಸಮಗ್ರ ಯೋಜನಾ ವರದಿ ಸಿದ್ಧಪಡಿಸಲಾಗಿದೆ. ಯೋಜನಾ ವ್ಯಾಪ್ತಿಯ ಏಳು ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸಲು ಮೊದಲ ಆದ್ಯತೆ ನೀಡಲಾಗುವುದು. ಕುಡಿಯುವ ನೀರಿನ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಬಳಿಕ ಕೆರೆಗಳನ್ನು ತುಂಬಿಸುವ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. 2027ರ ಮಾರ್ಚ್ ಒಳಗೆ ಇಡೀ ಯೋಜನೆ ಪೂರ್ಣಗೊಳಿಸಲಾಗುವುದು ಎಂದರು.

ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಖಾತ್ರಿಪಡಿಸಬೇಕು. ಕುಡಿಯುವ ನೀರು ಕಾಮಗಾರಿ ಪೂರ್ಣಗೊಳಿಸಲು ಇರುವ ಎಲ್ಲಾ ತಾಂತ್ರಿಕ ಅಡಚಣೆಗಳನ್ನು ನಿವಾರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಒಂದನೇ ಹಂತದಲ್ಲಿ ನದಿ ಪಾತ್ರದ ಏಳು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಎರಡನೇ ಹಂತದ 33 ಕಾಮಗಾರಿಗಳಲ್ಲಿ 11 ಪೂರ್ಣಗೊಳಿಸಲಾಗಿದೆ. 16 ಕಿಮೀ ವ್ಯಾಪ್ತಿಯ ಕಾಮಗಾರಿ ಪ್ರಾರಂಭಿಸಬೇಕಿದೆ. ಅವುಗಳಲ್ಲಿ 6 ಎಕರೆ ಅರಣ್ಯ ಪ್ರದೇಶ ಹಾಗೂ 10 ಕಿ.ಮೀ ಭೂಸ್ವಾಧೀನ ಪ್ರಕ್ರಿಯೆ ಬಾಕಿ ಇದೆ ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಹಾಗೂ ಜಲ ಸಂಪನ್ಮೂಲ ಸಚಿವರಾದ ಡಿ.ಕೆ. ಶಿವಕುಮಾರ್, ಸಚಿವರಾದ ಜಿ. ಪರಮೇಶ್ವರ, ಕೆ.ಎಚ್. ಮುನಿಯಪ್ಪ, ಕೃಷ್ಣ ಬೈರೇಗೌಡ, ಡಾ.ಎಂ.ಸಿ. ಸುಧಾಕರ್, ಬೈರತಿ ಸುರೇಶ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

> **ಮುಖ್ಯಾಂಶಗಳು**
> - ಕಾರ್ಯಸಾಧ್ಯತಾ ವರದಿಗೆ ಸಮಾಲೋಚಕರ ನೇಮಕ
> - 7 ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸಲು ಆದ್ಯತೆ

‘ಕಾಲಕ್ಕೆ ತಕ್ಕಂತೆ ಕೌಶಲ ವೃದ್ಧಿಸಿಕೊಳ್ಳಿ’

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಸಲಹೆ



ನರ್ಸಿಂಗ್ ಪದವಿಯಲ್ಲಿ ಹೆಚ್ಚು ಅಂಕಗಳಿಸಿದ ಮಾನ್ಸಿ ಅವರಿಗೆ ಆರ್‌ಜಿಯುಎಚ್‌ಎಸ್ ಕುಲಪತಿ ಡಾ.ಬಿ.ಸಿ.ಭಗವಾನ್ ಪದವಿ ಪ್ರದಾನ ಮಾಡಿದರು

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಆರೋಗ್ಯ ಕ್ಷೇತ್ರದಲ್ಲೂ ತಂತ್ರಜ್ಞಾನದ ಅಳವಡಿಕೆ ವ್ಯಾಪಕವಾಗುತ್ತಿದ್ದು, ನವ ಪದವೀಧರರು ಕಾಲದ ಅಗತ್ಯಕ್ಕೆ ತಕ್ಕಂತೆ ಕೌಶಲಗಳನ್ನು ವೃದ್ಧಿಸಿ ಕೊಳ್ಳಬೇಕು’ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್ ಸಲಹೆ ನೀಡಿದರು.

ಹರ್ಷ ಹಾಗೂ ವಿಕ್ಟರಿ ನರ್ಸಿಂಗ್ ಕಾಲೇಜು, ಹರ್ಷ ಫಾರ್ಮಸಿ, ಅಲೈಡ್ ಹೆಲ್ತ್ ಸೈನ್ಸ್, ಫಿಸಿಯೊಥೆರಪಿ ಕಾಲೇಜುಗಳು ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಮಾಡಿ ಅವರು ಮಾತನಾಡಿದರು.

‘ಆರೋಗ್ಯ ಸೇವೆ ಒದಗಿಸುವ ಶಿಕ್ಷಣ ಪಡೆದವರಿಗೆ ಜಗತ್ತಿನಾದ್ಯಂತ ಬೇಡಿಕೆ ಹೆಚ್ಚಿದೆ. ಹಾಗಾಗಿ ನಿಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇರುತ್ತದೆ. ರೋಗಿಗಳೊಂದಿಗೆ ಸಂಯಮದಿಂದ ವರ್ತಿಸಬೇಕು’ ಎಂದು ಕಿವಿಮಾತು ಹೇಳಿದರು.

ರಾಜ್ಯ ಔಷಧ ವಿಜ್ಞಾನ ಪರಿಷತ್‌ನ ರಿಜಿಸ್ಟ್ರಾರ್ ಡಾ.ಸಿರ್ಸೆ ಕ್ರಾಂತಿಕುಮಾರ್ ‘ಪದವಿ ಪಡೆದವರು ನಮ್ಮ ಪರಿಷತ್ತಿನಲ್ಲಿ ನೋಂದಣಿ ಮಾಡಿಸಬೇಕು. ಈಗ ನೋಂದಣಿಯನ್ನು ಸಂಪೂರ್ಣ ಆನ್‌ಲೈನ್ ಮಾಡಲಾಗಿದೆ. ಯಾರೂ ಕಚೇರಿಗೆ ಸುತ್ತಾಡಬೇಕಿಲ್ಲ’ ಎಂದರು.

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ಪಿ.ಮಹೇಶ್, ‘ಎಲ್ಲ ಕ್ಷೇತ್ರಗಳಲ್ಲೂ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆವರಿಸುತ್ತಿದ್ದು, ನಿರುದ್ಯೋಗ ಸೃಷ್ಟಿಯ ಲಕ್ಷಣಗಳು ಗೋಚರಿಸುತ್ತಿವೆ. ಆದರೆ ನರ್ಸಿಂಗ್ ಕ್ಷೇತ್ರಕ್ಕೆ ಸದ್ಯಕ್ಕೆ ಎಐ ಬರಲು ಸಾಧ್ಯವಿಲ್ಲ. 20 ವರ್ಷ ಕಳೆದ ಮೇಲೆ ಬರಬಹುದು. ಹೀಗಾಗಿ ನರ್ಸಿಂಗ್ ಕಲಿತವರಿಗೆ ನಿರುದ್ಯೋಗ ಸಮಸ್ಯೆ ಕಾಡುವುದಿಲ್ಲ’ ಎಂದರು.

ಪ್ರಾಧ್ಯಾಪಕ ಡಾ.ಪಿ.ಮಹೇಶ್, ರಾಜ್ಯ ಔಷಧ ವಿಜ್ಞಾನ ಪರಿಷತ್‌ನ ರಿಜಿಸ್ಟ್ರಾರ್ ಡಾ.ಸಿರ್ಸೆ ಕ್ರಾಂತಿಕುಮಾರ್, ಹರ್ಷ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಸ್.ಶಿವಕುಮಾರ್, ಉಪಾಧ್ಯಕ್ಷೆ ಗಿರಿಜಾ, ಕಾರ್ಯದರ್ಶಿಗಳಾದ ಹರ್ಷ, ಯಶಸ್ ಭಾಗವಹಿಸಿದ್ದರು.

ಎಸ್‌ಎಸ್‌ಎಲ್‌ವಿ ತಂತ್ರಜ್ಞಾನ ವರ್ಗಾವಣೆ ಬಿಡ್ ಪಡೆದ ಎಚ್‌ಎಎಲ್

ನವದೆಹಲಿ (ಪಿಟಿಐ): ಸಣ್ಣ ಉಪಗ್ರಹ ಉಡಾವಣಾ ವಾಹಕ (ಎಸ್‌ಎಸ್‌ಎಲ್‌ವಿ) ತಂತ್ರಜ್ಞಾನದ ವರ್ಗಾವಣೆಯ ಬಿಡ್ ಪಡೆಯುವ ಮೂಲಕ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಮಹತ್ತರ ಪ್ರಗತಿ ಸಾಧಿಸಿದೆ.

ಭೂಮಿಯ ಕಕ್ಷೆಯ ಕೆಳಭಾಗದಲ್ಲಿ 500 ಕೆ.ಜಿ. ತೂಕದವರೆಗಿನ ಉಪಗ್ರಹಗಳನ್ನು ಇಸ್ರೊ ರಾಕೆಟ್ ಮೂಲಕ ಉಡಾವಣೆ ಮಾಡಲು ಈ ತಂತ್ರಜ್ಞಾನ ನೆರವಾಗಲಿದೆ.

ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಪ್ರಚಾರ ಯೋಜನೆ ಹಾಗೂ ಅಧಿಕಾರ ಕೇಂದ್ರದ ಮುಖ್ಯಸ್ಥ ಪವನ್ ಗೋಯೆಂಕಾ ಅವರು ವರ್ಚುವಲ್ ಪತ್ರಿಕಾಗೋಷ್ಠಿ ಮೂಲಕ ಈ ಘೋಷಣೆ ಮಾಡಿದರು.



ಕೆಂಪೇಗೌಡರ ಭಾವಚಿತ್ರಕ್ಕೆ ಜ್ಯೋತಿ ಬೆಳಗುವ ಮೂಲಕ ಪ್ರತಿಮೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಯಿತು

ಕೆಂಪೇಗೌಡ ಕಂಚಿನ ಪುತ್ಥಳಿ ನಿರ್ಮಾಣ: ಭೂಮಿ ಪೂಜೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ನಾಡಪ್ರಭು ಕೆಂಪೇಗೌಡರು, ಎಲ್ಲ ವರ್ಗದವರಿಗೆ, ಧರ್ಮದವರಿಗೂ ಬದುಕನ್ನು ಕಟ್ಟಿಕೊಳ್ಳಲು ಅನುಕೂಲವಾಗುವಂತೆ ಬೆಂಗಳೂರನ್ನು ನಿರ್ಮಿಸಿದರು’ ಎಂದು ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತರಾಯಪ್ಪ ಹೇಳಿದರು.

ನಾಡಪ್ರಭು ಶ್ರೀ ಕೆಂಪೇಗೌಡ ಟ್ರಸ್ಟ್ ವತಿಯಿಂದ ಲಗ್ಗೆರೆಯ ಹೊರ ವರ್ತುಲ ರಸ್ತೆಯ ಪಾರ್ಕ್‌ನಲ್ಲಿ ಸ್ಥಾಪಿಸುತ್ತಿರುವ ಕೆಂಪೇಗೌಡರ ಕಂಚಿನ ಪ್ರತಿಮೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಇದೇ ವೇಳೆ ಪ್ರತಿಮೆ ಸ್ಥಾಪನೆಗೆ ₹10 ಲಕ್ಷ ಕೊಡುವುದಾಗಿ ಭರವಸೆ ನೀಡಿದರು.

ಟ್ರಸ್ಟ್ ಅಧ್ಯಕ್ಷ ಎಚ್.ಎಸ್.ಸಿದ್ದೇಗೌಡ, ‘₹1 ಕೋಟಿ ವೆಚ್ಚದಲ್ಲಿ ದಾನಿಗಳ ನೆರವಿನಿಂದ ಕೆಂಪೇಗೌಡರ ಕಂಚಿನ ಪುತ್ಥಳಿ ನಿರ್ಮಾಣವಾಗಲಿದೆ’ ಎಂದರು.

ಬಿಬಿಎಂಪಿ ಮಾಜಿ ಸದಸ್ಯೆ ಮಂಜುಳಾ ನಾರಾಯಣಸ್ವಾಮಿ, ಜೆಡಿಎಸ್ ಲಗ್ಗೆರೆ ವಾರ್ಡ್ ಸಮಿತಿ ಅಧ್ಯಕ್ಷ ಎನ್.ಚಂದ್ರಶೇಖರ್ ಮಾತನಾಡಿದರು. ಶಾಸಕ ಕೆ.ಗೋಪಾಲಯ್ಯ, ದಾಸರಹಳ್ಳಿ ನಗರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಜಿ.ಎಚ್.ಕೃಷ್ಣಮೂರ್ತಿ, ಬಿಡಿಎ ಸದಸ್ಯ ಪುಟ್ಟಸ್ವಾಮಿಗೌಡ, ಟ್ರಸ್ಟ್ ಪದಾಧಿಕಾರಿಗಳಾದ ಮುನಿಗಂಗಪ್ಪ, ಜಗದೀಶ್ ಮತ್ತಿತರರು ಹಾಜರಿದ್ದರು.


ಇಂದು ಹೆಚ್ಚಿನ ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿರುತ್ತಾರೆ. ರಕ್ತಹೀನತೆ ಸರಿಪಡಿಸಿಕೊಳ್ಳದ ವಿನಾ ಪ್ರಾಣಾಯಾಮದ ಪ್ರಯೋಜನ ದಕ್ಕದು



ಯೋಗಾಯೋಗ

ವೃತ್ತಿ ಬದುಕು, ಮನೆ, ಗಂಡ– ಮಕ್ಕಳ ಪ್ರಪಂಚದಲ್ಲೇ ಮುಳುಗೇಳುವ ಎಷ್ಟೋ ಮಹಿಳೆಯರಿಗೆ ತಮ್ಮ ಬಗ್ಗೆ ಯೋಚಿಸಲೂ ಪುರಸತ್ತಿರದು. ಇದನ್ನು 'ಸಂತರ ಕಾಯಿಲೆ' ಎಂದು ಕುಹಕವಾಡುವವರೂ ಇಲ್ಲದಿಲ್ಲ. ತಮಗಾಗಿ ಒಂದಷ್ಟು ಸಮಯ ಕೊಟ್ಟುಕೊಂಡು, ತಮ್ಮ ಸ್ವಾಸ್ಥ್ಯದ ಬಗ್ಗೆ ಲಕ್ಷ್ಯ ವಹಿಸದಿದ್ದರೆ, ಮುಂದೆ ಸಮಯದ ಜೊತೆಗೆ ಚಿಕಿತ್ಸೆಗಾಗಿ ಹಣವನ್ನೂ ತೆರಬೇಕಾಗುತ್ತದೆ ಎಂಬ ಕಟು ಎಚ್ಚರ ಇರಲೇಬೇಕಾಗುತ್ತದೆ. ಸ್ತ್ರೀಯರನ್ನು ಕಾಡುವ ಹಲವು ದೈಹಿಕ–ಮಾನಸಿಕ ಕಾಯಿಲೆಗಳಿಗೆ ಮದ್ದಾಗಬಲ್ಲ ಯೋಗದ ಮಹತ್ವವನ್ನು ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಈ ದಿನ (ಜೂನ್ 21) ನಮಗೆ ಮನಗಾಣಿಸುತ್ತದೆ. ದೇಹ, ಮನಸ್ಸು ಮತ್ತು ಭಾವನೆಗಳ ಮೇಲೆ ನಿಯಂತ್ರಣ ಸಾಧಿಸಲು ನೆರವಾಗುವ ವಿವಿಧ ಯೋಗಾಸನಗಳ ಬಗ್ಗೆ ಮಾಹಿತಿ ನೀಡಿದ್ದಾರೆ ಸ್ತ್ರೀರೋಗ ತಜ್ಞೆ ಡಾ. ವೀಣಾ ಭಟ್ ಮತ್ತು ಯೋಗ ಶಿಕ್ಷಕಿ ಮಂಜುಳಾ ಶಶಿಧರ್ ಕುಬಸದ





ಧನುರಾಸನ

ಥೈರಾಯ್ಡ್

ಉಷ್ಟ್ರಾಸನ, ಸಿಂಹಗರ್ಜಾಸನ, ಹಾಸ್ಯಾಸನ, ಸರ್ವಾಂಗಾಸನ... ಸೂಕ್ತ.
ಪ್ರಾಣಾಯಾಮ: ಉಜ್ಜಯಿ (ಉಸಿರಾಟದ ಮೇಲೆ ಜಯ ಸಾಧಿಸುವುದು ಎಂದರ್ಥ). ಜೊತೆಗೆ ಆಹಾರದಲ್ಲಿ ಐಯೋಡಿನ್‌ಯುಕ್ತ ಉಪ್ಪಿನ ಸೇವನೆ, ಸಮುದ್ರ ಉತ್ಪನ್ನಗಳ ಬಳಕೆ ಸೂಕ್ತ. ಹೂಕೋಸು, ಎಲೆಕೋಸಿನ ಸೇವನೆ ಕಡಿಮೆ ಇರಲಿ.

ಮುಟ್ಟಿನ ನೋವು



ಜಾನುಶೀರ್ಷಾಸನ

ಹದಿಹರೆಯದ ಹೆಣ್ಣುಮಕ್ಕಳಲ್ಲಿ ಋತುಚಕ್ರ ಆರಂಭವಾದಾಗ ಕಾಣಿಸಿಕೊಳ್ಳುವ ಹೊಟ್ಟೆನೋವು, ಸೊಂಟನೋವು, ಕಿಬ್ಬೊಟ್ಟೆನೋವಿನ ತೀವ್ರತೆ ಕಡಿಮೆ ಮಾಡಲು, ರಕ್ತಸ್ರಾವದಲ್ಲಾಗುವ ವ್ಯತ್ಯಯಕ್ಕೆ ಸಹಕಾರಿ. ಹಿಂಬಾಗುವ ಮತ್ತು ತಲೆಕೆಳಗಾಗಿಸಿ ಮಾಡುವ ಆಸನಗಳು ಬೇಡ. ಉತ್ತಮ ಪರಿಣಾಮ ಕೊಡುವ **ಇತರ ಆಸನ:** ಬದ್ಧಕೋನಾಸನ, ಉಪವಿಷ್ಠಕೋನಾಸನ, ಪಶ್ಚಿಮೋತ್ಥಾನಾಸನ, ಮರೀಚಾಸನ... ಜೊತೆಗೆ ಬಿಸಿನೀರಿನ ಬ್ಯಾಗ್‌ನಿಂದ ಹೊಟ್ಟೆಯ ಭಾಗಕ್ಕೆ ಶಾಖ ಕೊಟ್ಟುಕೊಳ್ಳುವುದು, ಸರಳ ಆಹಾರ ಸೇವನೆಯಿಂದ ಮಲಬದ್ಧತೆ ಆಗದಂತೆ ನೋಡಿಕೊಳ್ಳುವುದು ಸೂಕ್ತ.

ನಿಮಗೆ 'ಯೋಗ' ಇಲ್ಲವೇ?!

ಯೋಗ ಮಾಡುವ ಬಯಕೆ ಇದೆ, ಆದರೆ ಪುರಸತ್ತಿಲ್ಲದೆ ಯೋಗ ಮಾಡುವ 'ಯೋಗ' ಇಲ್ಲವಾಗಿದೆಯೇ? ಚಿಂತೆ ಇಲ್ಲ. ಅಂತಹವರಿಗೆಂದೇ ಇದೆ ಯೋಗಿಕ್ ಜಾಗಿಂಗ್. 5 ಕಿ.ಮೀ ಅಥವಾ 1 ಗಂಟೆಯ ನಡಿಗೆಯಿಂದ ಸಿಗುವ ಲಾಭವು 12 ಅಭ್ಯಾಸಗಳನ್ನು ಒಳಗೊಂಡ 5 ನಿಮಿಷದ ಯೋಗಿಕ್ ಜಾಗಿಂಗ್‌ನಿಂದ ಸಿಗುತ್ತದೆ.

ವಿಶೇಷ ಸೂಚನೆ

ಯೋಗಾಸನವನ್ನು ತಜ್ಞರ ಮೂಲಕವೇ ಕಲಿಯಬೇಕು. ಉಸಿರಾಟದ ಗತಿಯ ಜೊತೆಗೆ ನಿರಂತರವಾಗಿ ಮಾಡುವುದರಿಂದ ಹೆಚ್ಚಿನ ಪ್ರಯೋಜನ ದಕ್ಕುತ್ತದೆ.

ಹೊಟ್ಟೆಬೊಜ್ಜು




ಪಾದಹಸ್ತಾಸನ

ಕಾಯದ ಆಕಾರ ಕಾಯ್ದುಕೊಳ್ಳಲು, ಮಧುಮೇಹದಂತಹ ಕಾಯಿಲೆ ನಿಯಂತ್ರಣಕ್ಕೆ ಸಹಕಾರಿ.
ಇತರ ಆಸನ: ಪಾದವೃತ್ತಾಸನ, ಚಕ್ಕಿಚಲನಾಸನ, ತ್ರಿಕೋನಾಸನ, ಕೋನಾಸನ, ಷಟ್‌ಕರ್ಮ ಕ್ರಿಯೆ, ಯೋಗಿಕ್ ಜಾಗಿಂಗ್ ಸೂಕ್ತ.
ಪ್ರಾಣಾಯಾಮ: ಕಪಾಲಭಾತಿ.
ವಿಶೇಷ ಸೂಚನೆ: ಆಹಾರ ಸೇವನೆ ನಿಯಂತ್ರಣ ಅತಿ ಮುಖ್ಯ.

ಸೂರ್ಯ ನಮಸ್ಕಾರ

ಉಸಿರಾಟ ಮತ್ತು ಆಸನಗಳ ಅತ್ಯಂತ ಸುಲಲಿತ ಜೋಡಣೆಯೇ ಸೂರ್ಯ ನಮಸ್ಕಾರ. ಇದರಿಂದ ಅನೇಕ ರೀತಿಯಲ್ಲಿ ಉಪಯೋಗ. ಎರಡು ಆವರ್ತ ಮಾಡಿದರೆ (ಎಡಗಾಲು ಮತ್ತು ಬಲಗಾಲನ್ನು ಒಳಗೊಂಡಂತೆ ಎರಡು ಬಾರಿ) ಒಂದು ಸುತ್ತು ಎನಿಸಿಕೊಳ್ಳುತ್ತದೆ. ಇದು, 13–15 ಕಿಲೊ ಕ್ಯಾಲೊರಿ ದಹಿಸಲು ನೆರವಾಗುತ್ತದೆ. ದೇಹದ ತೂಕ ಕಾಯ್ದುಕೊಳ್ಳಲು, ಬೊಜ್ಜು ನಿರ್ವಹಣೆ, ಜಠರ, ಕರುಳು, ಹೃದಯ, ಶ್ವಾಸಕೋಶದ ಆರೋಗ್ಯಕ್ಕೆ ಸಹಾಯಕ.

ಪಿ.ಸಿ.ಒ.ಡಿ



ಬದ್ಧಕೋನಾಸನ

ಪಾಲಿಸಿಸ್ಟಿಕ್ ಓವೇರಿಯನ್ ಡಿಸೀಸ್ (ಪಿ.ಸಿ.ಒ.ಡಿ). ಹಾರ್ಮೋನ್ ಅಸಮತೋಲನದಿಂದ ಅಂಡೋತ್ಪತ್ತಿಯಲ್ಲಿ ವ್ಯತ್ಯಾಸವಾಗಿ ಋತುಚಕ್ರ ಏರುಪೇರಾಗುತ್ತದೆ. ಪುರುಷರ ಹಾರ್ಮೋನಾದ ಆ್ಯಂಡ್ರೋಜನ್ ಹೆಚ್ಚಳದಿಂದ ಗಡ್ಡ, ಮೀಸೆಯಂತಹ ಅನಗತ್ಯ ಕೂದಲು ಕಾಣಿಸಿಕೊಳ್ಳುತ್ತದೆ. ದೀರ್ಘಾವಧಿ ಆರೋಗ್ಯ ಸಮಸ್ಯೆಗಳೂ ತಳಕು ಹಾಕಿಕೊಳ್ಳಬಹುದು.
ಇತರ ಆಸನ: ಸುಪ್ತಬದ್ಧಕೋನಾಸನ, ಭಾರದ್ವಾಜಾಸನ, ಚಕ್ಕಿಚಲನಾಸನ (ಗ್ರೈಂಡಿಂಗ್), ಕಟಿಉತ್ತಾನಾಸನ, (ಪೆಲ್ವಿಕ್ ಲಿಫ್ಟಿಂಗ್), ಮರ್ಕಟಾಸನ, ಪೂರ್ಣಹಲಾಸನ, ವಿಪರೀತಕರಣಿ, ಶವಾಸನ, ಪದ್ಮಾಸನ, ಸೂರ್ಯ ನಮಸ್ಕಾರ. ನಿರಂತರ ಅಭ್ಯಾಸದಿಂದ ಕಟಿ ಪ್ರದೇಶದ ಮಾಂಸಖಂಡ ಸಡಿಲಗೊಂಡು ಅಂಡಾಶಯ, ಗರ್ಭಕೋಶಕ್ಕೆ ರಕ್ತಸರಬರಾಜು ಹೆಚ್ಚುತ್ತದೆ.
ಪ್ರಾಣಾಯಾಮ: ಭಸ್ತ್ರಿಕಾ (ದೀರ್ಘ ಉಸಿರಾಟ), ನಾಡಿಶುದ್ಧಿ, ಅನುಲೋಮ- ವಿಲೋಮ, ಭ್ರಮರಿ, ಓಂಕಾರ, ಪ್ರಣವ. ಮನಸ್ಸಿನ ಗೊಂದಲ ಕಡಿಮೆಯಾಗಿ ಒತ್ತಡ ನಿರ್ವಹಣೆ ಸಾಧ್ಯ.

ಮಂಡಿನೋವು



ವಜ್ರಾಸನ

ವಿವಿಧ ರೀತಿಯ ಚಲನೆಗಳನ್ನು ಒಳಗೊಂಡ ಮಂಡಿಯ ವ್ಯಾಯಾಮಗಳು ಸೂಕ್ತ. ಹಸ್ತಪಾದ ಚಲನೆಗೆ ಕಾರಣವಾಗುವ ವ್ಯಾಯಾಮಗಳಿಂದ ತೊಡೆಯ ಭಾಗದಲ್ಲಿರುವ ಕ್ವಾಡ್ರಿಸೆಪ್ಸ್ ಸ್ನಾಯುಗಳು ಬಲಗೊಳ್ಳುತ್ತವೆ. ಕುರ್ಚಿಯಲ್ಲಿ ಕೂತು ಮಾಡುವ ಆಸನದಿಂದಲೂ ನೋವು ಶಮನ. ಮಂಡಿ ಮಡಚದೆ ಕಾಲನ್ನು 20 ಬಾರಿ ಎತ್ತಬೇಕು.
ಇತರ ಆಸನ: ತಾಡಾಸನ, ಸೇತುಬಂಧಾಸನ, ವೀರಾಸನ, ಬಾಲಾಸನ, ಅರ್ಧ ಮತ್ಸ್ಯೇಂದ್ರಾಸನ. ಅಲ್ಲದೆ ವಜ್ರಾಸನವೂ ಸಹಾಯಕ. ಆದರೆ ಅದು ಮುಂಜಾಗ್ರತೆಯಾಗಿ ಹಾಕುವ ಆಸನ. ನೋವು ಬಂದ ಮೇಲೆ ಹಾಕಲಾಗದು.


ಪೆಲ್ವಿಕ್ ಸ್ನಾಯುಗಳ ಬಲವರ್ಧನೆ




ಕೆಗಲ್ಸ್ ವ್ಯಾಯಾಮ

ಸಹಜ ಹೆರಿಗೆ, ಲೈಂಗಿಕ ಕ್ರಿಯೆ ಹಾಗೂ ಗರ್ಭಕೋಶದ ಸ್ವಾಸ್ಥ್ಯಕ್ಕೆ ಮಹಿಳೆಯರ ಪೆಲ್ವಿಕ್ ಸ್ನಾಯುಗಳು ಬಲವಾಗಿ ಇರಬೇಕಾದುದು ಅತ್ಯವಶ್ಯ. ಹಾಗಿಲ್ಲದೆ ಅವು ದುರ್ಬಲವಾಗಿದ್ದರೆ ಗರ್ಭಕೋಶ, ಮೂತ್ರಕೋಶ, ಮಲಕೋಶವು ಯೋನಿಯ ಮುಖಾಂತರ ಜಾರುವ (ಪ್ರೋಲ್ಯಾಪ್ಸ್ ಯೂಟರಸ್) ಸಾಧ್ಯತೆ ಇರುತ್ತದೆ. ಹಾಗಾಗದಂತೆ ತಡೆಯಲು ಕೆಗಲ್ಸ್ ವ್ಯಾಯಾಮ ಸೂಕ್ತ.
ಮಾಡುವ ರೀತಿ: ಮೊದಲು ಮೂತ್ರ ವಿಸರ್ಜನೆ ಮಾಡಬೇಕು. ನಂತರ ಮಲಮೂತ್ರ ವಿಸರ್ಜನೆ ಮಾಡುವ ರೀತಿಯಲ್ಲಿ ಮುಕ್ಕಿ ಬಳಿಕ ಮೂತ್ರದ್ವಾರ, ಯೋನಿದ್ವಾರ, ಗುದದ್ವಾರ ಮೂರನ್ನೂ ಒಂದೇ ಬಾರಿ ಬಿಗಿಯಾಗಿ ಕನಿಷ್ಠ 5 ಸೆಕೆಂಡುಗಳ ಕಾಲ ಒಳಗೆ ಹಿಡಿದಿಟ್ಟುಕೊಳ್ಳಬೇಕು. ನಂತರ ಮಾಂಸಖಂಡಗಳನ್ನು ಸಡಿಲಿಸಬೇಕು. ಪ್ರತಿ ಬಾರಿ ಮೂತ್ರ ವಿಸರ್ಜಿಸಿದಾಗಲೂ ಈ ಕ್ರಿಯೆಯನ್ನು 10–12 ಬಾರಿ (ದಿನಕ್ಕೆ ಕನಿಷ್ಠ 50–100 ಬಾರಿ) ಮಾಡಬೇಕು. ಕೂತಾಗ, ನಿಂತಾಗ ಯಾವಾಗ ಬೇಕಾದರೂ ಮಾಡಬಹುದು. ಇದರಿಂದ ಯೋನಿಯ ಮಾಂಸಖಂಡಗಳ ಸಂವೇದನೆ ಹೆಚ್ಚಿ ಉತ್ತಮ ಲೈಂಗಿಕತೆಗೂ ನೆರವಾಗುತ್ತದೆ. ಸೇತುಬಂಧಾಸನದಿಂದಲೂ ಇದೇ ಬಗೆಯ ಪ್ರಯೋಜನ ಪಡೆಯಬಹುದು. ಗರ್ಭಿಣಿಯರಲ್ಲಿ, ಮುಟ್ಟು ನಿಲ್ಲುವ ಆಸುಪಾಸಿನಲ್ಲಿ ಇರುವವರಲ್ಲಿ ಕೆಮ್ಮಿದಾಗ, ಸೀನಿದಾಗ ಆಗುವ ಮೂತ್ರಸೋರಿಕೆಯನ್ನು ತಡೆಗಟ್ಟುತ್ತದೆ, ಹೆರಿಗೆಯಲ್ಲಿ ಗಾಸಿಗೊಂಡ ಪೆಲ್ವಿಕ್ ಸ್ನಾಯುಗಳನ್ನು ಬಲಪಡಿಸುತ್ತದೆ.

ನಮ್ಮ ಭಂಗಿ ಹೀಗಿರಲಿ



ಸಮಸ್ಥಿತಿಯಲ್ಲಿ ನಿಲುವುದು ಅನೇಕ ಸಮಸ್ಯೆಗಳ ನಿವಾರಣೆಗೆ ಮದ್ದು! ನಾವು ನಿಲ್ಲುವ, ಕೂರುವ, ಮಲಗುವ, ಓಡುವ, ನಡೆಯುವ ರೀತಿ ಸರಿಯಾಗಿ ಇಲ್ಲದಿದ್ದರೆ ಬೆನ್ನುನೋವು, ಕುತ್ತಿಗೆ ನೋವು, ಭುಜದ ನೋವು, ಸ್ಲಿಪ್ ಡಿಸ್ಕ್ ಬರುವ ಸಾಧ್ಯತೆ ಹೆಚ್ಚು. ತಲೆ, ಕುತ್ತಿಗೆ, ಬೆನ್ನುಹುರಿ ನೇರವಾಗಿ ಇರುವಂತೆ ನೋಡಿಕೊಂಡು, ನಿಲ್ಲುವ ಭಂಗಿ ಸರಿಪಡಿಸಿಕೊಳ್ಳುವುದು ಮಂಡಿನೋವು, ಕಾಲುಸೆಳೆತ, ವೇರಿಕೋಸ್ ವೇನ್ಸ್‌ನಂತಹ ತೊಂದರೆಗಳನ್ನು ಎದುರಿಸಲು ನೆರವಾಗುತ್ತದೆ. ಶರೀರದ ಭಾರವು ಕಾಲಿನ ಮೂರೂ ಬದಿಗಳಲ್ಲಿ ಸಮನಾಗಿ ಬೀಳುವಂತೆ, ಕಾಲ್ಬೆರಳುಗಳನ್ನು ಅಗಲಿಸಿದ ಸ್ಥಿತಿಯಲ್ಲಿ ಗಟ್ಟಿಯಾಗಿ ನೆಲದ ಮೇಲೆ ಕಾಲುಗಳನ್ನು ಊರಬೇಕು. ಎರಡೂ ಕಾಲುಗಳನ್ನು ಜೋಡಿಸಿ ಅಥವಾ ಎರಡು ಹೆಬ್ಬೆರಳುಗಳನ್ನೂ ಜೋಡಿಸಿ, ಹಿಮ್ಮಡಿಯನ್ನು ಸ್ವಲ್ಪ ಅಗಲಿಸಿ ನಿಲ್ಲಬೇಕು. ಎರಡೂ ಮಂಡಿಚಿಪ್ಪುಗಳು, ಮಂಡಿಯ ಹಿಂದಿನ ತೊಡೆಯ ಸ್ನಾಯುಗಳು ಹಾಗೂ ಹೊಟ್ಟೆಯನ್ನು ಒಳಗೆ ಎಳೆದುಕೊಂಡು ಭುಜವನ್ನು ಸಡಿಲಿಸಬೇಕು. ಆಗ ಶರೀರದ ಭಾರ ಸಮಪ್ರಮಾಣದಲ್ಲಿ ಕಾಲಿನ ಮೇಲೆ ಬಿದ್ದು, ಕಾಲುನೋವು, ಮಂಡಿನೋವಿನಂತಹ ಸಮಸ್ಯೆಗಳನ್ನು ತಡೆಗಟ್ಟುತ್ತದೆ.



ಅಧೋಮುಖ ವೀರಾಸನ

ಋತುಬಂಧ

ಮುಟ್ಟು ನಿಲ್ಲುವ ಸಮಯದಲ್ಲಿ ಈಸ್ಟ್ರೋಜನ್ ಮತ್ತು ಪ್ರೊಜೆಸ್ಟ್ರಾನ್ ಹಾರ್ಮೋನುಗಳ ಉತ್ಪಾದನೆ ಕುಂಠಿತವಾಗುವುದರಿಂದ ಹೆಚ್ಚಿನವರಲ್ಲಿ ಸದಾ ಸುಸ್ತಿನ ಅನುಭವ, ಖಿನ್ನತೆ, ನಿದ್ರಾಹೀನತೆ, ಮೂಳೆ ಸವೆತದಂತಹ ದೈಹಿಕ, ಮಾನಸಿಕ ಸಮಸ್ಯೆ ಸಹಜ. ದೇಹದಲ್ಲಿ ಏಳುವ ಉಷ್ಣದ ಅಲೆಗಳಿಂದ ಮೈಬಿಸಿಯಾಗುತ್ತದೆ. ಇದನ್ನು ಎದುರಿಸಲು ಅನುವಾಗುವ
ಇತರ ಆಸನ: ಅಧೋಮುಖ ವೀರಾಸನ, ಬಾಲಾಸನ, ಜಾನುಶೀರ್ಷಾಸನ, ಪಶ್ಚಿಮೋತ್ಥಾನಾಸನ, ಪವನಮುಕ್ತಾಸನ. ಕುತ್ತಿಗೆ ಹಾಗೂ ತಲೆಯ ಭಾಗದಲ್ಲಿ ರಕ್ತಸಂಚಾರ ಹೆಚ್ಚಿಸುವುದು, ಪಿಟ್ಯುಟರಿ, ಥೈರಾಯ್ಡ್ ಗ್ರಂಥಿಗಳ ಕಾರ್ಯಚಟುವಟಿಕೆಗೆ ಸರ್ವಾಂಗಾಸನ, ಮಾರ್ಜರಿ ಆಸನ (ಬೆಕ್ಕಿನ ಭಂಗಿ), ಅಧೋಮುಖ ಶ್ವಾನಾಸನ ಸೂಕ್ತ. ಮೂಳೆ ಸವೆತ ತಡೆಗೆ ವೀರಭದ್ರಾಸನ, ಪಾರ್ಶ್ವಕೋನಾಸನ, ಒತ್ತಡ ನಿರ್ವಹಣೆಗೆ ಸುಪ್ತಬದ್ಧ ಕೋನಾಸನ, ಸುಪ್ತವಜ್ರಾಸನ, ಮಕರಾಸನ, ಶವಾಸನ...
ಪ್ರಾಣಾಯಾಮ: ನಾಡಿಶೋಧನ, ಭ್ರಮರಿ. ಇವು ನಿದ್ರಾಹೀನತೆ ನಿವಾರಿಸಲು ಸಹಾಯಕ. ಶೀತಲಿ, ಶೀತಕಾರಿ ಪ್ರಾಣಾಯಾಮ ಶರೀರಕ್ಕೆ ತಂಪೆರೆಯುತ್ತವೆ. ನಿಯಮಿತ ಧ್ಯಾನದಿಂದ ದೇಹದ ಮೇಲೆ ಸಕಾರಾತ್ಮಕ ಪರಿಣಾಮವಾಗಿ ರಕ್ತದೊತ್ತಡ, ನಾಡಿ, ಉಸಿರಾಟದ ಗತಿ ನಿಯಂತ್ರಣಕ್ಕೆ ಬಂದು, ಭಾವನಾತ್ಮಕ ಸಮತೋಲನ ಸಾಧ್ಯವಾಗುತ್ತದೆ.

ಸ್ತನ ಸ್ವಾಸ್ಥ್ಯ



ಗೋಮುಖಾಸನ

ಸ್ತನದಲ್ಲಿ ಗಂಟುಗಳಾಗದಂತೆ ತಡೆಯಲು, ಸ್ತನ್ಯಪಾನ ಮಾಡಿಸುವಾಗ ಸ್ತನಗಳು ಜೋತುಬೀಳದಿರಲು ನೆರವು. ಎದೆ ಭಾಗ ಹಿಗ್ಗಿಸುವ ಭುಜಂಗಾಸನ, ಧನುರಾಸನ, ಉಷ್ಟ್ರಾಸನ, ಭುಜದ ವ್ಯಾಯಾಮ ಸೂಕ್ತ. ಗರ್ಭಧಾರಣೆ, ಹೆರಿಗೆಯಿಂದ ಸಡಿಲವಾದ ಸ್ನಾಯುಗಳ ಬಿಗಿತ ಹೆಚ್ಚಿಸಲು ಏಕಪಾದ, ದ್ವಿಪಾದ ಉತ್ಥಾನಾಸನ, ನೌಕಾಸನ... ಸ್ತನಕ್ಯಾನ್ಸರ್‌ನಿಂದ ಶಸ್ತ್ರ ಚಿಕಿತ್ಸೆಗೆ ಒಳಗಾದವರು ಕುತ್ತಿಗೆ ಹಾಗೂ ಭುಜದ ಸೂಕ್ಷ್ಮ ವ್ಯಾಯಾಮಗಳನ್ನು ಆಗಾಗ್ಗೆ ಮಾಡುತ್ತಿರಬೇಕು.
ಪ್ರಾಣಾಯಾಮ: ನಾಡಿಶೋಧನ, ಭ್ರಮರಿ. ಇವು ಎಲ್ಲ ಬಗೆಯ ಕ್ಯಾನ್ಸರ್‌ಗೂ ಒಳಿತು.

ಸಹಜ ಹೆರಿಗೆ



ಪದ್ಮಾಸನ

ಇಂದು ನಮ್ಮ ಉಸಿರಾಟ ದೀರ್ಘವಾಗಿಲ್ಲದಿರುವುದರ ಜೊತೆಗೆ ಕುಂದಿದ ದೈಹಿಕ ಚಟುವಟಿಕೆಯೂ ಸೇರಿ ಅಸ್ಥಿಕುಹರದ (ಪೆಲ್ವಿಕ್) ಸ್ನಾಯುಗಳ ಬಲ ಕಡಿಮೆಯಾಗಿರುತ್ತದೆ. ಇದರಿಂದ ಪೆಲ್ವಿಕ್‌ನ ಭಾಗ ಬಿಗಿಯಾಗುವುದೇ ಸಿಸೇರಿಯನ್ ಹೆರಿಗೆಗೆ ಬಹುಮುಖ್ಯ ಕಾರಣ.
ಇತರ ಆಸನ: ಪೆಲ್ವಿಕ್ ಭಾಗವನ್ನು ಸಡಿಲಗೊಳಿಸುವ ಬದ್ಧಕೋನಾಸನ, ಮೇರು ದಂಡಾಸನ, ಪೆಲ್ವಿಕ್ ರಾಕಿಂಗ್ ಅಥವಾ ಮರ್ಕಟಾಸನ, ಚಕ್ಕಿಚಲನಾಸನ (ರುಬ್ಬುವ ಭಂಗಿ). ನಡಿಗೆ ಇರಲಿ.
ಪ್ರಾಣಾಯಾಮ: ಓಂಕಾರ, ಅನುಲೋಮ, ವಿಲೋಮ, ನಾಡಿಶೋಧನ, ಭ್ರಮರಿ, ಪ್ರಣವ. ಪೌಷ್ಟಿಕ ಆಹಾರ ಸೇವನೆಯಿಂದ ರಕ್ತಹೀನತೆ ನಿವಾರಿಸಿಕೊಳ್ಳುವುದು ಅತ್ಯಗತ್ಯ.

ತರಕಾರಿ ಹೆಚ್ಚಬಹುದು ತರಹೇವಾರಿ

ರಸಾಸ್ವಾದ

ಮಗು ನೋಡಿಕೊಳ್ಳುವ ಅನಿವಾರ್ಯಕ್ಕಾಗಿ ಆಯುರ್ವೇದ ವೈದ್ಯ ವೃತ್ತಿಗೆ ಗುಡ್‌ಬೈ ಹೇಳಿದ ಕಾವ್ಯಾ, ಈಗ 'ಯೂಟ್ಯೂಬ್ ಪಾಕಶಾಲೆ'ಯ ಮೂಲಕ ಜನರಿಗೆ ಆಹಾರ ಮತ್ತು ಆರೋಗ್ಯದ ಪಾಠ ಮಾಡುತ್ತಿದ್ದಾರೆ. ಬೆಳಗಿನ ದಿಢೀರ್ ತಿಂಡಿ, ಬಾಯಲ್ಲಿ ನೀರೂರಿಸುವ ಸಿಹಿ ಖಾದ್ಯ, ಸುಲಭದ ಅಡುಗೆ ಹೇಳಿಕೊಡುವ 'ಕಾವ್ಯಾಸ್ ಕುಕಿಂಗ್ ಚಾನೆಲ್'ನ ಒಡತಿ ಡಾ. ಕಾವ್ಯಾ ಹವ್ಯಾಸಕ್ಕಾಗಿ ಈ ಪಯಣ ಶುರು ಮಾಡಿದವರು. ಅವರು ಹಾಸನ ಜಿಲ್ಲೆಯ ಆಲೂರಿನವರು.



ಕಾವ್ಯಾ

ಉದ್ಯೋಗಸ್ಥ ಮಹಿಳೆಯರ ಬೆಳಗಿನ ಧಾವಂತ, ಅಡುಗೆಯ ಬಗೆಗಿನ ಚಿಂತೆ, ನಾಳೆಗೆ ಏನು? ರಾತ್ರಿಗೆ ಏನು? ಹಬ್ಬಕ್ಕೆ ಏನು? ಅಮಾವಾಸ್ಯೆಗೆ ಏನು ಅಡುಗೆ?... ಹೀಗೆ ಹಲವು ಪ್ರಶ್ನೆಗಳನ್ನು ಸ್ವತಃ ಎದುರಿಸಿದ್ದ ಅವರು ಅವೆಲ್ಲಕ್ಕೂ ಉತ್ತರ ನೀಡುವ ಪ್ರಯತ್ನ ಮಾಡಿದ್ದಾರೆ.

2017ರಲ್ಲಿ ತಮ್ಮ ಪಾಕಶಾಲೆ ತೆರೆದ ಕಾವ್ಯಾ, ನಾಲ್ಕು ವರ್ಷ ಉದ್ಯೋಗದೊಂದಿಗೆ ಚಾನೆಲ್‌ಗೂ ಸಮಯ ಕೊಡುತ್ತಿದ್ದರು. ಆಗ ವಾರದಲ್ಲಿ ಮೂರು ರೆಸಿಪಿಗಳು ಪಾಕಪ್ರಿಯರ ಕದ ತಟ್ಟುತ್ತಿದ್ದವು. ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಉದ್ಯೋಗ, ಚಾನೆಲ್, ಕುಟುಂಬ ನಿರ್ವಹಣೆ ಭಾರವೆನಿಸಿ ವೈದ್ಯ ವೃತ್ತಿಗೆ ವಿದಾಯ ಹೇಳಿ ಪಾಕಶಾಲೆಯ ಕಾಯಂ ಶಿಕ್ಷಕಿಯಾದರು. ಜೊತೆಗೆ, ಆಸ್ಪತ್ರೆಯಲ್ಲಿ ಹೇಳುತ್ತಿದ್ದ ಆರೋಗ್ಯದ ಪಾಠ ಅಡುಗೆ ಮನೆಗೆ ಸ್ಥಳಾಂತರಗೊಂಡಿತು. ಆಗಿನಿಂದ ದಿನವೂ ಒಂದೊಂದು ಖಾದ್ಯದ ಘಮ ಪಾಕಶಾಲೆಯನ್ನು ಆವರಿಸುತ್ತಿದೆ.

ಚಾನೆಲ್ ಆರಂಭದ ನಾಲ್ಕು ತಿಂಗಳಲ್ಲೇ ಚಂದಾದಾರರ ಸಂಖ್ಯೆ 15,000 ದಾಟಿತ್ತು. ಈಗ 6.73 ಲಕ್ಷಕ್ಕೆ ಏರಿದೆ. ಅಡುಗೆ ಚಾನೆಲ್ ಅನ್ನೇ 'ವ್ಲಾಗ್' ಆಗಿ ಪರಿವರ್ತಿಸಿಕೊಂಡಿರುವ ಕಾವ್ಯಾ, ಅಡುಗೆ ಪಾಠ ಮಾಡುವ ಶೈಲಿ ಇತರರಿಗಿಂತ ಭಿನ್ನ. ಇಲ್ಲಿ ರೆಸಿಪಿಗಳು ಸಿದ್ಧ ಮಾದರಿಯಲ್ಲಿ ಇರದೆ, ತಯಾರಿಕೆಯ ವಿವಿಧ ಮಜಲುಗಳಿರುತ್ತವೆ. ಪುಲಾವ್, ಬಿಸಿಬೇಳೆಬಾತ್, ತರಕಾರಿ ಸಾಂಬಾರ್, ವೆಜಿಟೆಬಲ್ ಬಾತ್... ಹೀಗೆ ಒಂದೊಂದು ರೆಸಿಪಿಗೂ ತರಕಾರಿ ಹೆಚ್ಚಿಕೊಳ್ಳುವ ವಿಧಾನ ಭಿನ್ನ. ಆ ಎಲ್ಲ ವಿವರಣೆಯೂ ಈ ವ್ಲಾಗ್‌ನಲ್ಲಿ ಸ್ಥಾನ ಪಡೆದಿದೆ. ಆರಂಭಿಕ ಅಡುಗೆ ಕಲಿಯುವವರಿಗೆ ಇಂತಹ ಸಣ್ಣ ಸಣ್ಣ ಸಂಗತಿಗಳೂ ಹೆಚ್ಚು ಇಷ್ಟವಾಗುತ್ತವೆ ಎನ್ನುವುದು ಕಾವ್ಯಾ ಅವರ ಅನಿಸಿಕೆ. ಇನ್ನು ಮನೆಯಲ್ಲಿ ಇರುವ ಪದಾರ್ಥಗಳನ್ನೇ ಬಳಸಿಕೊಂಡು ನಿತ್ಯದ ಅಡುಗೆಯನ್ನು ಭಿನ್ನವಾಗಿ, ರುಚಿಕಟ್ಟಾಗಿ ಮಾಡುವ ವಿಧಾನವು ಪಾಕಪ್ರಿಯರನ್ನು ಸೆಳೆದಿದೆ. ರಾತ್ರಿ ಅನ್ನ ಮಿಕ್ಕಿದ್ದರೆ ಅದಕ್ಕೆ ಇನ್ನಷ್ಟು ಪದಾರ್ಥಗಳನ್ನು ಬಳಸಿ ಪೌಷ್ಟಿಕಾಂಶಯುಕ್ತ ತಿನಿಸು ತಯಾರಿಸುವುದು, ಬ್ರೆಡ್ ಉಳಿದಿದ್ದರೆ ಸಿಹಿ ಖಾದ್ಯ ತಯಾರಿಸುವುದು, ಪುಲಾವ್ ಉಳಿದಿದ್ದರೆ ಮತ್ತೊಂದು ರೆಸಿಪಿ ತಯಾರಿಸುವುದು... ಇಂತಹ ವಿಡಿಯೊಗಳು ಹೆಚ್ಚು ವೀಕ್ಷಣೆ ಪಡೆದಿವೆ. ಅಡುಗೆ ಮಾಡುವುದಷ್ಟೇ ಅಲ್ಲ, ಮಾಡಿದ ಬಳಿಕ ಅಡುಗೆ ಕೋಣೆ ಸ್ವಚ್ಛಗೊಳಿಸುವ ವಿಧಾನವನ್ನೂ ಕಾವ್ಯಾ ಹೇಳಿಕೊಡುತ್ತಾರೆ.

'ಅಡುಗೆ ಎಂದರೆ ಖಾದ್ಯ ತಯಾರಿಸುವುದಷ್ಟೇ ಅಲ್ಲ, ಅದನ್ನೂ ಮೀರಿದ ಬಹಳಷ್ಟು ಸಂಗತಿಗಳು ಇರುತ್ತವೆ. ಅವೆಲ್ಲವನ್ನೂ ವಿಡಿಯೊದಲ್ಲಿ ಹೇಳುವುದನ್ನು ವೀಕ್ಷಕರು ಇಷ್ಟಪಟ್ಟಿದ್ದಾರೆ. ಖಾದ್ಯ ತಯಾರಿಸಲು ಒಂದು ಪದಾರ್ಥ ಇಲ್ಲದಿದ್ದರೂ ಹೆಣ್ಣುಮಕ್ಕಳು ಬೇಸರ ಮಾಡಿಕೊಳ್ಳುತ್ತಾರೆ. ಆದರೆ ಅದಕ್ಕೆ ಪರ್ಯಾಯ ಪದಾರ್ಥ ಬಳಸಬಹುದು ಎಂದು ತಿಳಿದಾಗ ಅವರಿಗೆ ಸಮಾಧಾನವಾಗುತ್ತದೆ. ಈಗೆಲ್ಲ ಸಣ್ಣ ಕುಟುಂಬಗಳೇ ಹೆಚ್ಚು. ಅಡುಗೆಯನ್ನು ಇಬ್ಬರು ಅಥವಾ ಮೂವರಿಗೆ ಆಗುವಷ್ಟು ಪ್ರಮಾಣದಲ್ಲಿ ತೋರಿಸಿದ ವಿಡಿಯೊಗಳು ಹೆಚ್ಚು ವೀಕ್ಷಣೆ ಪಡೆದಿವೆ' ಎನ್ನುವುದು ಕಾವ್ಯಾ ಅವರ ಅನುಭವದ ನುಡಿ.

ಸಿಹಿ ಖಾದ್ಯಕ್ಕೆ ಮನ್ನಣೆ: ಹಬ್ಬದ ಸಮಯದಲ್ಲಿ ತಯಾರಿಸುವ ಸಾಂಪ್ರದಾಯಿಕ ಅಡುಗೆಗಳು, ಸಿಹಿ ಖಾದ್ಯಗಳನ್ನು ಹೆಚ್ಚು ಜನ ಇಷ್ಟಪಡುತ್ತಾರೆ. ಅವರು ಮೊದಲು ತಯಾರಿಸಿದ ಜಾಮೂನು ರೆಸಿಪಿ ಅತಿ ಹೆಚ್ಚು ವೀಕ್ಷಣೆ ಪಡೆದಿದೆ. ಬ್ರೆಡ್ ಜಾಮೂನ್, ಬೂಸ್ಟ್ ಬರ್ಫಿಯಂತಹ ವಿಶೇಷ ತಿನಿಸುಗಳ ಜೊತೆಗೆ ಮೈಸೂರ್ ಪಾಕ್, ಚಂಪಾಕಲಿ, ಜಿಲೇಬಿ, ಜಹಾಂಗೀರ್, ಸಿಹಿಬೂಂದಿ, ಬೀಟ್‌ರೂಟ್ ಹಲ್ವಾ... ಆಹಾ! ಬಾಯಲ್ಲಿ ನೀರೂರಿಸುವ ತರಹೇವಾರಿ ಸಿಹಿ ಖಾದ್ಯಗಳ ರೆಸಿಪಿಗಾಗಿ ತಡಕಾಡುವ ಹೆಂಗಳೆಯರಿಗೆ ಇಲ್ಲಿ ನಿರಾಶೆಯಾಗದು. ಪತಿ ಪ್ರದೀಪ್ ಅವರ ಸಹಕಾರ ಕಾವ್ಯಾ ಅವರ ಬೆನ್ನಿಗಿದೆ.

ನಿರೂಪಣೆ: ಸುಮಾ ಬಿ.

ಹಾರ್ಲಿಕ್ಸ್ ಬರ್ಫಿ

ಬೇಕರಿಯಲ್ಲಿ ಸಿಗುವ ಬಗೆಬಗೆಯ ಸಿಹಿ ಭಕ್ಷ್ಯಗಳು ಮನೆಯಲ್ಲೇ ತಯಾರಾದರೆ?! ಆ ಮನೆಯವರ ಖುಷಿಗೆ ಎಣೆಯುಂಟೇ? ಸಿಹಿ ತಿನಿಸುಗಳನ್ನು ಹೆಚ್ಚು ಇಷ್ಟಪಡುವ ಕಾವ್ಯಾ, ಬೇಕರಿಯಲ್ಲಿ ಸಿಗುವ ಸ್ವೀಟ್ ರೆಸಿಪಿಗಳಿಗೆ ತಮ್ಮ ಮನೆಯನ್ನೇ ಪ್ರಯೋಗಶಾಲೆ ಮಾಡಿಕೊಂಡಿದ್ದಾರೆ. ಹಾರ್ಲಿಕ್ಸ್ ಬರ್ಫಿ ಅವರ ಪ್ರಯೋಗಶೀಲತೆಗೆ ಸಾಕ್ಷಿ. 'ಕೆ.ಜಿ.ಗೆ ₹ 600 ಕೊಟ್ಟು ಬೇಕರಿಯಲ್ಲಿ ತರೋದಕ್ಕಿಂತ, ಬಾಯಲ್ಲಿಟ್ಟರೆ ಕರಗುವ ಈ ಸಿಹಿಯನ್ನು ಮನೆಯಲ್ಲೇ 15 ನಿಮಿಷದಲ್ಲಿ ತಯಾರಿಸಬಹುದು' ಎನ್ನುವ ಒಕ್ಕಣೆ ಅವರದು. ಹಾರ್ಲಿಕ್ಸ್ ಅನ್ನು ಹಾಲಿಗೆ ಹಾಕಿಕೊಟ್ಟರೆ ಮೂಗು ಮುರಿಯುವ ಮಕ್ಕಳು ಇನ್ನು ಮುಂದೆ ಹಾರ್ಲಿಕ್ಸ್ ಬರ್ಫಿಗಾಗಿ ಅಮ್ಮನ ಮುಂದೆ ಬೇಡಿಕೆ ಇಡಬಹುದು. ಈ ರೆಸಿಪಿ ತಯಾರಿ ನಿಮಗಾಗಿ...

ಬೇಕಾಗುವ ಸಾಮಗ್ರಿ: ಮುಕ್ಕಾಲು ಕಪ್ ಕಡಲೆಹಿಟ್ಟು, ಕಾಲು ಕಪ್ ಹಾರ್ಲಿಕ್ಸ್, (ಹಾರ್ಲಿಕ್ಸ್ ಬದಲು ಬೂಸ್ಟ್ ಸಹ ಬಳಸಬಹುದು), ಅರ್ಧ ಕಪ್ ಅಡುಗೆ ಎಣ್ಣೆ, ಅರ್ಧ ಕಪ್ ತುಪ್ಪ, ಒಂದು ಕಪ್ ಸಕ್ಕರೆ, ಕಾಲು ಕಪ್ ನೀರು. ಕಡಲೆಹಿಟ್ಟು ಹಾಗೂ ಹಾರ್ಲಿಕ್ಸ್ ಎರಡನ್ನೂ ಜರಡಿಯಲ್ಲಿ ಸಾಣಿಸಬೇಕು. ಅದಕ್ಕೆ ಎಣ್ಣೆ ಹಾಕಿ ಗಂಟಿಲ್ಲದಂತೆ ಮಿಕ್ಸ್ ಮಾಡಿಟ್ಟುಕೊಳ್ಳಬೇಕು. ಬಾಣಲೆಯಲ್ಲಿ ಸಕ್ಕರೆ, ನೀರು ಹಾಕಿ ಕುದಿಸಿ ಒಂದೆಳೆ ಪಾಕ ಬಂದ ಬಳಿಕ, ಎಣ್ಣೆಯಲ್ಲಿ ಕಲಸಿಟ್ಟುಕೊಂಡ ಕಡಲೆಹಿಟ್ಟು–ಹಾರ್ಲಿಕ್ಸ್ ಮಿಶ್ರಣ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಬೇಕು. ಈ ಮಿಶ್ರಣ ಒಂದು ಕುದಿ ಬಂದ ಬಳಿಕ ಸ್ವಲ್ಪ ಸ್ವಲ್ಪವೇ ತುಪ್ಪ ಹಾಕಿ ಕೈಯಾಡಿಸುತ್ತಿರಬೇಕು. ಕಡಲೆಹಿಟ್ಟು ತುಪ್ಪವನ್ನು ಹೀರಿಕೊಂಡ ಬಳಿಕ ಮತ್ತೆ ಸ್ವಲ್ಪ ತುಪ್ಪ ಹಾಕಿ ಕೈಯಾಡಿಸಬೇಕು. ಮೂರನೇ ಬಾರಿ ತುಪ್ಪ ಹಾಕಿದ ಬಳಿಕ ಸ್ವಲ್ಪ ಹೊತ್ತು ಕೈಯಾಡಿಸುತ್ತಾ ಕುದಿಸಿ, ಬರ್ಫಿ ಹದಕ್ಕೆ ಬಂದ ಬಳಿಕ ಸ್ಟವ್ ಆಫ್ ಮಾಡಿ. ತುಪ್ಪ ಸವರಿದ ತಟ್ಟೆಗೆ ಹಾಕಿ ಏಳೆಂಟು ನಿಮಿಷ ತಣಿಯಲು ಬಿಡಬೇಕು. ತಣ್ಣಗಾದ ಬಳಿಕ ಕತ್ತರಿಸಿ.



ನೋಂದಣಿಗೆ ಮತ್ತೆ ಸರ್ವರ್ ಕಂಟಕ

ಕಾವೇರಿ–2 ತಂತ್ರಾಂಶದಲ್ಲಿ ಸಮಸ್ಯೆ

ಕಚೇರಿ ಎದುರು ಜನರ ಸರತಿ

ಹಲವಾರು ಸಮಸ್ಯೆ

- ಏಕಕಾಲಕ ಸಂದರ್ಭದಲ್ಲಿ ಸರ್ವರ್ ಡೌನ್ ಎಂದು ಬರುತ್ತಿದೆ
- ನಾಗರಿಕರ ಲಾಗಿನ್‌ನಲ್ಲಿ ಅಪ್‌ಲೋಡ್ ಮಾಡಲಾದ ದಾಖಲೆಗಳು, ಅಧಿಕಾರಿಗಳ ಲಾಗಿನ್‌ನಲ್ಲಿ ತೋರಿಸುತ್ತಿಲ್ಲ
- ಪೇಮೆಂಟ್ ಗೇಟ್‌ವೇ 'ಟೈಮ್ ಔಟ್' ಎಂದು ಬರುತ್ತಿದೆ. ಹೀಗಾಗಿ ಶುಲ್ಕ ಪಾವತಿ ಸಾಧ್ಯವಾಗುತ್ತಿಲ್ಲ
- ನೋಂದಣಿಗೆ ದಿನಾಂಕ ನಿಗದಿ ಮಾಡಿದರೆ, ಆ ದಿನದ ಸ್ಲಾಟ್ ಲಭ್ಯವಿಲ್ಲ ಎಂದು ಬರುತ್ತಿದೆ. ಆದರೆ ವಾಸ್ತವದಲ್ಲಿ ಆ ಸ್ಲಾಟ್ ಖಾಲಿ ಇರುತ್ತದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ–2 ತಂತ್ರಾಂಶದಲ್ಲಿ ಸರ್ವರ್ ಸಮಸ್ಯೆ ಕಾಣಿಸಿಕೊಂಡಿದ್ದು, ಆಸ್ತಿ ನೋಂದಣಿ ಪ್ರಕ್ರಿಯೆ ತೀರಾ ನಿಧಾನ ಗತಿಯಲ್ಲಿ ನಡೆಯುತ್ತಿದೆ. ತಂತ್ರಾಂಶದಲ್ಲಿ ಪದೇ–ಪದೇ 'ಸರ್ವರ್ ಡೌನ್' ಎಂದು ಬರುತ್ತಿರುವ ಕಾರಣ, ಜನರು ಉಪ ನೋಂದಣಾಧಿಕಾರಿಗಳ ಕಚೇರಿ ಎದುರು ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ ಎದುರಾಗಿದೆ.

ನಗರದ ವಿಜಯನಗರ ಉಪ ನೋಂದಣಾಧಿಕಾರಿಗಳ ಕಚೇರಿಗೆ ಶುಕ್ರವಾರ ಭೇಟಿ ನೀಡಿದಾಗ ಜನರು ಸರತಿಯಲ್ಲಿ ನಿಂತಿದ್ದರು. ಸುಮಾರು ಅರ್ಧಗಂಟೆ ನಿಂತಿದ್ದರೂ ಸರತಿಯಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ.

ಅಲ್ಲಿಯೇ ಇದ್ದ ಮಧ್ಯ ವಯಸ್ಕ ಶಿವರಾಜು ಸಿ. ಅವರನ್ನು ಮಾತಿಗೆ ಎಳೆದಾಗ, 'ಇಲ್ಲೇ ಸುಬ್ಬಣ್ಣ ಗಾರ್ಡನ್‌ನಲ್ಲಿ ಮನೆ ಖರೀದಿಸಿದ್ದೇನೆ. ಅದರ ನೋಂದಣಿಗೆ ಹಣ ಕಟ್ಟಲು ಆಗುತ್ತಿಲ್ಲ. ಪೇಮೆಂಟ್ ಗೇಟ್‌ವೇ ಪದೇ–ಪದೇ 'ಟೈಮ್ ಔಟ್' ಎಂದು ಹೇಳುತ್ತಿದೆ. ಮೂರು ದಿನಗಳಿಂದಲೂ ಹೀಗೇ ಆಗುತ್ತಿದೆ. ಕೆಲವರದ್ದು ಬ್ಯಾಂಕ್ ಖಾತೆಯಿಂದ ಹಣ ಕಡಿತವಾಗಿದೆ. ಆದರೆ ಕಾವೇರಿ–2ನಲ್ಲಿ ತೋರಿಸುತ್ತಿಲ್ಲ' ಎಂದರು.

ಅಲ್ಲಿಂದ ಗಾಂಧಿನಗರದ ಉಪ ನೋಂದಣಾಧಿಕಾರಿಗಳ ಕಚೇರಿಗೆ ತೆರಳಿದರೂ ಇಂಥದ್ದೇ ಸ್ಥಿತಿ ಇತ್ತು. ಅಲ್ಲೂ ಜನ ಸಾಲುಗಟ್ಟಿ ನಿಂತಿದ್ದರು. 'ಒಂದು ವಾರದಿಂದ ಬರುತ್ತಿದ್ದೇನೆ. ನನ್ನ ಕೆಲಸ ಆಗುತ್ತಿಲ್ಲ. ಮೊದಲಿಗೆ ನೋಂದಣಿಗೆ ಸ್ಲಾಟ್ ಸಿಕ್ಕಿರಲಿಲ್ಲ. ಅದು ಸಿಕ್ಕು ನಾಲ್ಕು ದಿನವಾಗಿದೆ. ಆದರೆ ಸರ್ವರ್ ಡೌನ್ ಎಂದು ಬರುತ್ತಿದೆ' ಎಂದು ಬಾಲಕೃಷ್ಣ ಎಂ. ಮಾತಿಗಿಳಿದರು. ಅವರ ಹಿಂದೆ ನಿಂತಿದ್ದ ಪ್ರಶಾಂತ್ ಮತ್ತು ಕೇಶವ ಅವರದ್ದೂ ಇದೇ ಮಾತು.

ಸರ್ವರ್ ಸಂಪೂರ್ಣ ಡೌನ್ ಆಗಿರದೆ, ಮಧ್ಯೆ–ಮಧ್ಯೆ ಕೆಲಸ ಮಾಡುತ್ತಿದೆ. ಇದರಿಂದ ಬಹುತೇಕ ಕೆಲಸಗಳು ಅಡಚಣೆಯಾಗುತ್ತಿವೆ. ನಾಗರಿಕರ ಲಾಗಿನ್‌ನಲ್ಲಿ ದಾಖಲೆಗಳನ್ನು ಅಪ್‌ಲೋಡ್ ಮಾಡಿ, ಸಬ್‌ಮಿಟ್ ಕೊಟ್ಟ ತಕ್ಷಣ ಸರ್ವರ್ ಡೌನ್ ಆಗುತ್ತಿದೆ. ನೋಂದಣಿ ವೇಳೆ ಬಯೊಮೆಟ್ರಿಕ್ ವಿವರಗಳನ್ನು ತೆಗೆದುಕೊಳ್ಳಲು ಮತ್ತು ಫೋಟೊ ತೆಗೆಯಲು ಸಾಧ್ಯವಾಗುತ್ತಿಲ್ಲ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಗಣಕೀಕರಣ ವಿಭಾಗವನ್ನು ಸಂಪರ್ಕಿಸಿದಾಗ ಕರೆ ಸ್ವೀಕರಿಸಿದ ಅಧಿಕಾರಿ, 'ಸರ್ವರ್ ಸಮಸ್ಯೆ ಮತ್ತೆ ಆರಂಭವಾಗಿದೆ. ರಾಜ್ಯದಾದ್ಯಂತ ಪ್ರತಿದಿನ ಸರಾಸರಿ 8,000ದಿಂದ 9,000 ನೋಂದಣಿ ಆಗುತ್ತದೆ. ಹಿಂದಿನ ವಾರದ ಒಂದೆರಡು ದಿನ ನೋಂದಣಿಗಳ ಸಂಖ್ಯೆ ಹೆಚ್ಚಾಗಿದೆ. ಆಗಲೂ ಸರ್ವರ್ ಸರಿಯಾಗಿ ಕಾರ್ಯನಿರ್ವಹಿಸಿತ್ತು. ಆದರೆ ಶುಕ್ರವಾರ ದಿನದಿಂದ ಸಮಸ್ಯೆ ಕಾಡುತ್ತಿದೆ' ಎಂದರು.

ತಮ್ಮ ಹೆಸರು ಬಹಿರಂಗಪಡಿಸಲು ಇಚ್ಛಿಸದ ಆ ಅಧಿಕಾರಿ, 'ಸಮಸ್ಯೆ ಬಗೆಹರಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಇಲಾಖೆಯ ಆಯುಕ್ತರೇ ಖುದ್ದು ಆಸಕ್ತಿ ವಹಿಸಿ ಸಮಸ್ಯೆ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಿದ್ದಾರೆ' ಎಂದರು.

ಬೋಸರಾಜುಗೆ 79: ಇಂದು ಅಭಿನಂದನೆ

ಬೆಂಗಳೂರು: ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಅವರು 79ನೇ ವರ್ಷಕ್ಕೆ ಪದಾರ್ಪಣೆ ಮಾಡುತ್ತಿರುವುದರಿಂದ ಅವರ ಅಭಿಮಾನಿ ಬಳಗ ರಾಯಚೂರಿನ ಕೃಷಿ ವಿವಿ ಆವರಣದಲ್ಲಿ ಜೂನ್ 21ರಂದು ಬೆಳಿಗ್ಗೆ 10.30ಕ್ಕೆ ಅಭಿನಂದನಾ ಸಮಾರಂಭ ಹಮ್ಮಿಕೊಂಡಿದೆ.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಉದ್ಘಾಟಿಸಲಿದ್ದಾರೆ. ಗೃಹ ಸಚಿವ ಜಿ. ಪರಮೇಶ್ವರ ಅವರು 'ಚೈತನ್ಯ ಸಾಗರ' ಅಭಿನಂದನಾ ಗ್ರಂಥ ಲೋಕಾರ್ಪಣೆ ಮಾಡಲಿದ್ದಾರೆ. ಸಾಹಿತಿ ಎಲ್. ಹನುಮಂತಯ್ಯ ಗ್ರಂಥ ಕುರಿತು ಮಾತನಾಡಲಿದ್ದಾರೆ. ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ, ತೆಲಂಗಾಣದ ಉಪ ಮುಖ್ಯಮಂತ್ರಿ ಮಲ್ಲು ಭಟ್ಟಿ ವಿಕ್ರಮಾರ್ಕ, ಪಶು ಸಂಗೋಪನೆ ಸಚಿವ ವಾಕಿಟಿ ಶ್ರೀಹರಿ ಪಾಲ್ಗೊಳ್ಳಲಿದ್ದಾರೆ ಎಂದು ಅಭಿನಂದನಾ ಸಮಿತಿ ಅಧ್ಯಕ್ಷ, ಶಾಸಕ ಹಂಪಯ್ಯ ನಾಯಕ್ ತಿಳಿಸಿದ್ದಾರೆ.

ರಾಯಚೂರು ಶಾಸಕ ಶಿವರಾಜ ಪಾಟೀಲ, ಸಂಸದರಾದ ಜಿ. ಕುಮಾರ್ ನಾಯಕ್, ರಾಧಾಕೃಷ್ಣ ದೊಡ್ಡಮನಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ವಿಐಎಸ್‌ಎಲ್ ಕಾವಲುಗಾರ ಸಾವು

ಶಿವಮೊಗ್ಗ: ಭದ್ರಾವತಿಯ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ (ವಿಐಎಸ್‌ಎಲ್) ವಸತಿಗೃಹದ ಕಾವಲುಗಾರ ಕುಮಾರ್ (52) ಕಾಡಾನೆ ದಾಳಿಯಿಂದ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಕಂಚಿಮನ ಗುಡ್ಡದ ಬಳಿ ವಿಐಎಸ್‌ಎಲ್ ವಸತಿಗೃಹಗಳಿವೆ. ಗುರುವಾರ ರಾತ್ರಿ 10.30ರ ಸುಮಾರಿಗೆ ವಸತಿಗೃಹದ ಚೆಕ್‌ಪೋಸ್ಟ್ ಬಳಿ ಇದ್ದ ಕುಮಾರ್ ಮೇಲೆ ಒಂಟಿ ಸಲಗ ದಾಳಿ ನಡೆಸಿದೆ. ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಅಸುನೀಗಿದ್ದಾರೆ.

ಕಾಡಾನೆ ದಾಳಿಯಿಂದ ಈ ಭಾಗದ ಗ್ರಾಮಸ್ಥರು ಭಯಭೀತರಾಗಿದ್ದಾರೆ. ಭದ್ರಾವತಿ ವಲಯ ಅರಣ್ಯಾಧಿಕಾರಿ ದುರ್ಗಪ್ಪ ಸ್ಥಳಕ್ಕೆ ಭೇಟಿ ನೀಡಿದ್ದಾರೆ.

'ಕುಮಾರ್ ಕುಟುಂಬಕ್ಕೆ ಅರಣ್ಯ ಇಲಾಖೆ ವತಿಯಿಂದ ₹20 ಲಕ್ಷ ಪರಿಹಾರ ನೀಡಲಾಗುವುದು' ಎಂದು ಆರ್‌ಎಫ್‌ಒ ದುರ್ಗಪ್ಪ ತಿಳಿಸಿದ್ದಾರೆ.

ರೈಲಿನಲ್ಲಿ ₹ 14 ಲಕ್ಷ ಮೌಲ್ಯದ ಗಾಂಜಾ ಪತ್ತೆ

ಪ್ರಜಾವಾಣಿ ವಾರ್ತೆ

ಖಾನಾಪುರ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಲೋಂಡಾ ರೈಲು ನಿಲ್ದಾಣದ 3ನೇ ಪ್ಲಾಟ್‌ಫಾರ್ಮ್‌ಗೆ ಬಂದ ಶಾಲಿಮಾರ್–ವಾಸ್ಕೋಡ ಗಾಮಾ ರೈಲಿನ ಸಾಮಾನ್ಯ ಬೋಗಿಯಲ್ಲಿ ಚೀಲಗಳಲ್ಲಿ ತುಂಬಿ ಸಾಗಿಸಲಾಗುತ್ತಿದ್ದ ₹14 ಲಕ್ಷ ಮೌಲ್ಯದ 14.50 ಕೆಜಿ ಗಾಂಜಾವನ್ನು ಪೊಲೀಸರು ವಶಕ್ಕೆ ಶುಕ್ರವಾರ ಪಡೆದಿದ್ದಾರೆ.

'ಈ ಮಾದಕವಸ್ತು ಯಾರು ಎಲ್ಲಿಂದ ಎಲ್ಲಿಗೆ ಯಾರು ಸಾಗಿಸುತ್ತಿದ್ದರು ಎಂಬುದು ಗೊತ್ತಾಗಬೇಕಿದೆ. ತನಿಖೆ ಮುಂದುವರೆದಿದೆ' ಎಂದು ಅಬಕಾರಿ ಇನ್‌ಸ್ಪೆಕ್ಟರ್ ಮಲ್ಲೇಶಿ ಉಪ್ಪಾರ 'ಪ್ರಜಾವಾಣಿ'ಗೆ ತಿಳಿಸಿದರು.

ನೂರುಲ್ಲಾ ಖಾನ್, ಮಂಜುನಾಥ ಬಳಗಪ್ಪನವರ, ಪ್ರಕಾಶ ಡೋಣಿ, ರುದ್ರಯ್ಯ ಪೂಜಾರ, ಪ್ರಕಾಶ ನಂದಿಯವರ ಸೇರಿದಂತೆ ಅಬಕಾರಿ ಹಾಗೂ ರೈಲ್ವೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಚಿಟಿಕೆ ಸುದ್ದಿ

'ಶಿವರಾಮ ಕಾರಂತ ಪುರಸ್ಕಾರ'ಕ್ಕೆ ಆಯ್ಕೆ


ಅನುಪಮಾ


ಸಬಿತಾ


ಶ್ರೀಪಾದ ಭಟ್


ಮೋಹನ್

ಮೂಡುಬಿದಿರೆ (ದಕ್ಷಿಣ ಕನ್ನಡ): ಇಲ್ಲಿನ ಶಿವರಾಮ ಕಾರಂತ ಪ್ರತಿಷ್ಠಾನ ನೀಡುವ ಈ ಸಾಲಿನ 'ಶಿವರಾಮ ಕಾರಂತ ಪುರಸ್ಕಾರ'ಕ್ಕೆ ನಾಲ್ವರು ಸಾಹಿತಿಗಳನ್ನು ಆಯ್ಕೆ ಮಾಡಲಾಗಿದೆ. ಮೋಹನ್ ಕುಂಟಾರ್ ಅವರ 'ಅನುವಾದ ಒಲವು ನಿಲುವುಗಳು', ಎಚ್.ಎಸ್.ಅನುಪಮಾ ಅವರ 'ಬೆಡಗಿನೊಳಗು - ಮಹಾದೇವಿ ಅಕ್ಕ', ಸಬಿತಾ ಬನ್ನಾಡಿ ಅವರ 'ಇದಿರು ನೋಟ' ಮತ್ತು ಶ್ರೀಪಾದ ಭಟ್ ಅವರ 'ದಡವ ನೆಕ್ಕಿದ ಹೊಳೆ' ಕೃತಿಗಳನ್ನು ಆಧರಿಸಿ ಅವರನ್ನು ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಜಯಶ್ರೀ ಅಮರನಾಥ ಶೆಟ್ಟಿ ಮತ್ತು ಪ್ರಧಾನ ಕಾರ್ಯದರ್ಶಿ ಜಯಪ್ರಕಾಶ ಮಾವಿನಕುಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ.ಸಾ.ಪ: ಪದ್ಮಿನಿ ರಾಜೀನಾಮೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಅವರ ಆಡಳಿತ ವೈಖರಿ ವಿರೋಧಿಸಿ ಪದ್ಮಿನಿ ನಾಗರಾಜು ಅವರು ಪರಿಷತ್‌ನ ಗೌರವ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.


ಪದ್ಮಿನಿ

ಸಾಹಿತ್ಯ ಪರಿಷತ್ ವಲಯದಲ್ಲಿ ಜೋಶಿ ಅವರ ಕಾರ್ಯವೈಖರಿ ವಿರುದ್ಧ ವ್ಯಾಪಕ ವಿರೋಧ ವ್ಯಕ್ತವಾದ ನಂತರ ಕೇಂದ್ರ ಸಾಹಿತ್ಯ ಪರಿಷತ್‌ನ ಪ್ರಮುಖ ಪದಾಧಿಕಾರಿಯೊಬ್ಬರು ನೀಡಿದ ಮೊದಲ ರಾಜೀನಾಮೆ ಇದಾಗಿದೆ. ಲೇಖಕಿ, ಸಂಘಟಕಿಯೂ ಆದ ಪದ್ಮಿನಿ ಅವರು ಜಯನಗರ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರ ಹುದ್ದೆಗೆ ರಾಜೀನಾಮೆ ನೀಡಿ, ಸಾಹಿತ್ಯ ಪರಿಷತ್‌ನ ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡುತ್ತಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯೆಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಬಿಸಿ ಸಾಂಬಾರ ಪಾತ್ರೆಯಲ್ಲಿ ಬಿದ್ದು ಬಾಲಕಿ ಸಾವು

ಹಾವೇರಿ: ಮದುವೆ ಊಟಕ್ಕೆ ಸಿದ್ಧಪಡಿಸಿದ್ದ ಬಿಸಿ ಸಾಂಬಾರಿನ ಪಾತ್ರೆಯಲ್ಲಿ ಬಿದ್ದು ಗಾಯಗೊಂಡಿದ್ದ ಎರಡೂವರೆ ವರ್ಷದ ರುಕ್ಸಾನಾಬಾನು ಮುಕ್ತುಂಸಾಬ್ ಶೇಖಸನದಿ ಎಂಬ ಬಾಲಕಿ ಹುಬ್ಬಳ್ಳಿಯ ಕೆಎಂಸಿ–ಆರ್‌ಐ ಆಸ್ಪತ್ರೆಯಲ್ಲಿ ಶುಕ್ರವಾರ ಮೃತಪಟ್ಟಿದ್ದಾಳೆ.

'ಹುಬ್ಬಳ್ಳಿ ತಾಲ್ಲೂಕಿನ ಚನ್ನಾಪುರದ ರುಕ್ಸಾನಾಬಾನು ಪೋಷಕರ ಜೊತೆ ಶಿಗ್ಗಾವಿ ತಾಲ್ಲೂಕು ಕುನ್ನೂರಿನ ಶರೀಫಸಾಬ ಯರಗುಪ್ಪಿ ಅವರ ಮನೆಗೆ ಜೂನ್ 14ರಂದು ಮದುವೆಗೆ ಬಂದ ಸಂದರ್ಭದಲ್ಲಿ ಅವಘಡ ಸಂಭವಿಸಿದೆ' ಎಂದು ತಡಸ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

'ಸೂಲಿಬೆಲೆ ಸುಳ್ಳಿನ ಚಕ್ರವರ್ತಿ'



ಉಡುಪಿ: 'ಬಾಯಿ ತೆರೆದರೆ ರಾಮಾಯಣ, ಭಗವದ್ಗೀತೆ, ಮಹಾಭಾರತ ಎಂದು ಹೇಳುವ ಚಕ್ರವರ್ತಿ ಸೂಲಿಬೆಲೆ ವಾಸ್ತವದಲ್ಲಿ ಸುಳ್ಳಿನ ಚಕ್ರವರ್ತಿ. ಅವರು ಯಾವ ಪ್ರಮಾಣದಲ್ಲಿ ಸುಳ್ಳು ಹೇಳುತ್ತಾರೆ ಎನ್ನುವುದು ಇಡೀ ರಾಜ್ಯಕ್ಕೆ ಗೊತ್ತು' ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ-ಹೆಬ್ಬಾಳಕರ ಹೇಳಿದರು.

ಕುಂದಾಪುರದಲ್ಲಿ ಹಮ್ಮಿಕೊಂಡಿರುವ ಚಕ್ರವರ್ತಿ ಸೂಲಿಬೆಲೆ ಉಪನ್ಯಾಸ ಕಾರ್ಯಕ್ರಮದ ಆಯೋಜಕರಿಗೆ ಪೊಲೀಸರು ನೋಟಿಸ್ ನೀಡಿರುವ ವಿಚಾರವಾಗಿ ಶುಕ್ರವಾರ ಇಲ್ಲಿ ಪ್ರತಿಕ್ರಿಯಿಸಿದ ಅವರು, 'ಕಪ್ಪಗಿರುವು-ದನ್ನು ಬೆಳ್ಳಗೆ ಮಾಡುವುದರಲ್ಲಿ, ಬೆಳ್ಳಗೆ ಇರುವುದನ್ನು ಕಪ್ಪು ಮಾಡುವುದರಲ್ಲಿ ಸೂಲಿಬೆಲೆ ನಿಸ್ಸೀಮರು. ಅವರು ಮೂರು ದಿನ ಉಡುಪಿ ಜಿಲ್ಲೆಯಲ್ಲಿ ಇರುವ ವಿಚಾರ ಪೊಲೀಸ್ ವರಿಷ್ಠಾಧಿಕಾರಿ-ಯಿಂದ ತಿಳಿಯಿತು. ಅವರು ಪ್ರವಾಸ ಮಾಡಬಹುದು. ಆದರೆ ದ್ವೇಷ ಭಾಷಣ, ಸುಳ್ಳು ಹಾಗೂ ವಿಷ ಬೀಜ ಬಿತ್ತುವ ಕೆಲಸ ಮಾಡದಿರಲಿ' ಎಂದರು.

ಬಿಸಿಯೂಟ ಸಿಬ್ಬಂದಿ ಗೌರವಧನ ಹೆಚ್ಚಳ

ಬೆಂಗಳೂರು: ಮಧ್ಯಾಹ್ನದ ಬಿಸಿಯೂಟ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಅಡುಗೆ ತಯಾರಕರು ಮತ್ತು ಸಹಾಯಕರ ಗೌರವಧನವನ್ನು ತಿಂಗಳಿಗೆ ₹1,000 ಹೆಚ್ಚಳ ಮಾಡಿದ್ದು, ಕ್ಷೀರಭಾಗ್ಯ ಲೆಕ್ಕಶೀರ್ಷಿಕೆ ಅಡಿ ಈ ಮೊತ್ತವನ್ನು ಭರಿಸುವಂತೆ ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಶಾಲಾ ಮಕ್ಕಳಿಗೆ ಬಿಸಿಯೂಟ ಸಿದ್ಧಪಡಿಸುವ ಅಡುಗೆ ಸಿಬ್ಬಂದಿಯ ಗೌರವಧನ ಹೆಚ್ಚಳ ಮಾಡುವುದಾಗಿ 2025–26ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಪ್ರಸ್ತುತ ಅಡುಗೆ ತಯಾರಕರು ₹3,700 ಹಾಗೂ ಸಹಾಯಕರು ₹3,600 ಸಂಭಾವನೆ ಪಡೆಯುತ್ತಿದ್ದು, ಕ್ರಮವಾಗಿ ₹4,700 ಹಾಗೂ ₹4,600ಕ್ಕೆ ಹೆಚ್ಚಳವಾಗಲಿದೆ.

ನೀರಿನಲ್ಲಿ ಮುಳುಗಿ ಯುವಕ ಸಾವು

ಬೆಳಗಾವಿ: ಮಹಾರಾಷ್ಟ್ರದ ಪಂಢರಪುರಕ್ಕೆ ಪಾದಯಾತ್ರೆ ಹೋಗಿದ್ದ ತಾಲ್ಲೂಕಿನ ಅಲತಗಾ ಗ್ರಾಮದ ಶುಭಂ ಜ್ಞಾನೇಶ್ವರ ಪಾವಲೆ (27) ಎಂಬುವರು ಚಂದ್ರಭಾಗ ನದಿಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

'ಆಷಾಢ ಹಬ್ಬಕ್ಕೆಂದು ಶುಭಂ ಸ್ನೇಹಿತರೊಂದಿಗೆ ಪಂಢರಪುರಕ್ಕೆ ತೆರಳಿ, ಸ್ನಾನಕ್ಕೆಂದು ನದಿಗಿಳಿದಾಗ ದುರ್ಘಟನೆ ಸಂಭವಿಸಿದೆ. ಶವವನ್ನು ಸಂಬಂಧಿಕರಾದ ವೈಜನಾಥ ಪಾವಲೆ ಅವರಿಗೆ ಹಸ್ತಾಂ-ತರಿಸಲಾಗಿದೆ' ಎಂದು ಮಹಾರಾಷ್ಟ್ರ ಪೊಲೀಸರು ತಿಳಿಸಿದ್ದಾರೆ.

ದ್ವಿ-ಭಾಷಾ ಮಾಧ್ಯಮ: ಪ್ರವೇಶ ಮಿತಿ ಹೆಚ್ಚಳ

ಬೆಂಗಳೂರು: ದ್ವಿ-ಭಾಷಾ ಮಾಧ್ಯಮ ಹೊಂದಿರುವ ಕರ್ನಾಟಕ ಪಬ್ಲಿಕ್ ಶಾಲೆಗಳು (ಕೆಪಿಎಸ್), ಬೆಂಗಳೂರು ಪಬ್ಲಿಕ್ ಶಾಲೆಗಳು (ಬಿಪಿಎಸ್) ಮತ್ತು ಪಿಎಂ ಶ್ರೀ ಶಾಲೆಗಳ ಗರಿಷ್ಠ ದಾಖಲಾತಿ ಮಿತಿಯನ್ನು ಹೆಚ್ಚಳ ಮಾಡಿ ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಪೂರ್ವ ಪ್ರಾಥಮಿಕ ವಿಭಾಗದಲ್ಲಿ ಪ್ರತಿ ತರಗತಿಗೆ ಗರಿಷ್ಠ 40 ಮಕ್ಕಳು, ಪ್ರಾಥಮಿಕ ಶಾಲೆಗಳಲ್ಲಿ (1ರಿಂದ 7ನೇ ತರಗತಿ) ಗರಿಷ್ಠ 50 ಹಾಗೂ ಪ್ರೌಢ ಶಾಲೆಗಳಲ್ಲಿ (8ರಿಂದ 10ನೇ ತರಗತಿ) ಗರಿಷ್ಠ 50 ಮಕ್ಕಳನ್ನು ದಾಖಲಿಸಿಕೊಳ್ಳಬಹುದು. ಈ ಮೊದಲು ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ತರಗತಿಗಳ ಗರಿಷ್ಠ ದಾಖಲಾತಿ ಮಿತಿ 30 ವಿದ್ಯಾರ್ಥಿಗಳಿಗೆ ಸೀಮಿತವಾಗಿತ್ತು.

ಪೂರ್ವ ಪ್ರಾಥಮಿಕ ತರಗತಿಯಲ್ಲಿ ಒಬ್ಬ ಶಿಕ್ಷಕರ ಜತೆಗೆ, ಒಬ್ಬ ಸಹಾಯಕಿ ಕಡ್ಡಾಯವಾಗಿ ಇರಬೇಕು. ಶಾಲಾ ಆವರಣದಲ್ಲಿ ಲಭ್ಯವಿರುವ ಕಟ್ಟಡಗಳು, ಸಂಪನ್ಮೂಲಗಳನ್ನು ಬಳಸಿಕೊಂಡು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು, ಶಿಕ್ಷಕರು ಮಕ್ಕಳ ದಾಖಲಾತಿ ಹೆಚ್ಚಳಕ್ಕೆ ಶ್ರಮಿಸಬೇಕು ಎಂದು ಸೂಚಿಸಲಾಗಿದೆ.

ಪೊನ್ನಂಪೇಟೆ: ಭಾರಿ ಮಳೆ

ಮಡಿಕೇರಿ: ಕೊಡಗಿನ ಕೇರಳ ಗಡಿ ಭಾಗವಾದ ಪೊನ್ನಂಪೇಟೆ ತಾಲ್ಲೂಕಿನ ಬಿ.ಶೆಟ್ಟಿಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶುಕ್ರವಾರ ರಾತ್ರಿ ಗುಡುಗು, ಸಿಡಿಲು ಸಹಿತ 10 ಸೆಂ.ಮೀನಷ್ಟು ಭಾರಿ ಮಳೆ ಸುರಿದಿದೆ. ಅಕ್ಕಪಕ್ಕದ ಗ್ರಾಮಗಳಾದ ಬಿರುನಾಣಿ, ಪರಕಟಗೇರಿ, ಹುದಿಕೇರಿ, ಟಿ.ಶೆಟ್ಟಿಗೇರಿ, ಕುಟ್ಟದಲ್ಲೂ ಬಿರುಸಿನಿಂದ ಮಳೆಯಾಗಿದೆ.

ಮಹಿಳೆ ಶವ ಪತ್ತೆ (ಚಿಕ್ಕೋಡಿ ವರದಿ: ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದ್ದು, ಚಿಕ್ಕೋಡಿ ಉಪ ವಿಭಾಗ ವ್ಯಾಪ್ತಿಯ ಕೃಷ್ಣಾ, ದೂಧಗಂಗಾ ಹಾಗೂ ವೇದಗಂಗಾ ನದಿಗಳಲ್ಲಿ ನೀರಿನ ಹರಿವಿನ ಪ್ರಮಾಣ 3 ಅಡಿಗಳಷ್ಟು ಇಳಿಕೆಯಾಗಿದೆ. ಕೃಷ್ಣಾ ನದಿಯಲ್ಲಿ ಜೂನ್ 17ರಂದು ಕೊಚ್ಚಿ ಹೋಗಿದ್ದ ಸಂಗೀತಾ ಮಂಜರೇಕರ (41) ಶುಕ್ರವಾರ ಶವವಾಗಿ ಪತ್ತೆಯಾಗಿದ್ದಾರೆ.

ಅತೃಪ್ತರ ಸಭೆ: ಇಕ್ಕಟ್ಟಿನಲ್ಲಿ ಸೋಮಣ್ಣ

ಬಿಜೆಪಿಯಲ್ಲಿ ಮತ್ತೆ ಭಿನ್ನಮತ ಚಟುವಟಿಕೆ ಶುರು • ಅಮಿತ್ ಶಾ ಭೇಟಿಯ ದಿನ ಸಭೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಜಿ.ಎಂ.ಸಿದ್ದೇಶ್ವರ ಅವರ ನಿವಾಸದಲ್ಲಿ ಸಭೆ
- ಇದೇ 23, 24ರಂದು ದೆಹಲಿಯಲ್ಲಿ ವರಿಷ್ಠರ ಭೇಟಿಗೆ ನಿರ್ಧಾರ
- ಬಿಜೆಪಿಯಲ್ಲಿ ತಲ್ಲಣ ಮೂಡಿಸಿದ ಬೆಳವಣಿಗೆ



ವಿ.ಸೋಮಣ್ಣ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಸಮರ ಸಾರಿರುವ ಅತೃಪ್ತರ ಬಣ ಕೇಂದ್ರ ಗೃಹ ಸಚಿವ ಅಮಿತ್ ಶಾ ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲೇ ನಡೆಸಿದ ಸಭೆಯಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ ಭಾಗಿಯಾಗುವ ಮೂಲಕ ಇಕ್ಕಟ್ಟಿಗೆ ಸಿಲುಕಿದ್ದಾರೆ.

ಈ ಕುರಿತು ಸ್ಪಷ್ಟನೆ ನೀಡಿರುವ ಸೋಮಣ್ಣ ಅವರು, 'ಸಿದ್ದೇಶ್ವರ ಅವರು ಪಕ್ಷದ ಹಿರಿಯ ನಾಯಕರು. ಅವರ ಮನೆಯಲ್ಲಿ ಜೂನ್ 5ರಂದು ಮದುವೆ ಇತ್ತು. ಆಗ ನಾನು ಜಮ್ಮುವಿನಲ್ಲಿದ್ದ ಕಾರಣ ಮದುವೆಗೆ ಬರಲಿಲ್ಲ. ನಿನ್ನೆ ರಾತ್ರಿ ಹೋಗಿದ್ದೆ. ನಾನು ಪಕ್ಷದ ಶಿಸ್ತಿನ ಸಿಪಾಯಿ. ಈ ಭೇಟಿಯ ಬಗ್ಗೆ ಅಪಾರ್ಥ ಕಲ್ಪಿಸ ಬೇಕಾಗಿಲ್ಲ' ಎಂದು ಹೇಳಿದರು.

ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ ಅವರ ನಿವಾಸದಲ್ಲಿ ಗುರುವಾರ ರಾತ್ರಿ ಶಾಸಕ ರಮೇಶ ಜಾರಕಿಹೊಳಿ ನೇತೃತ್ವದಲ್ಲಿ ಅತೃಪ್ತರ ಸಭೆ ನಡೆಯಿತು. ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಬೇಕು ಮತ್ತು ಯಡಿಯೂರಪ್ಪ ಕುಟುಂಬದವರನ್ನು ಬಿಟ್ಟು ಬೇರೊಬ್ಬರನ್ನು ಅಧ್ಯಕ್ಷರನ್ನಾ-ಗಿ ಮಾಡಬೇಕು ಎಂಬ ಸಂದೇಶವನ್ನು ರವಾನಿಸುವ ಪ್ರಯತ್ನ ನಡೆಯಿತು ಎಂದು ಮೂಲಗಳು ತಿಳಿಸಿವೆ.

ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಆಕಾಂಕ್ಷಿಯಾಗಿರುವ ವಿ.ಸೋಮಣ್ಣ ಅವರು ಅತೃಪ್ತ ಬಣದ ವಿಶ್ವಾಸ ಗಳಿಸುವ ಪ್ರಯತ್ನ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಉಚ್ಚಾಟನೆಯ ಬಳಿಕ ಅತೃಪ್ತ ಬಣದ ಚಟುವಟಿಕೆ ಕಡಿಮೆಯಾಗಿತ್ತು. ಇದೀಗ ಅಮಿತ್ ಶಾ ಅವರ ಭೇಟಿ ಸಂದರ್ಭದಲ್ಲೇ ಸಭೆ ನಡೆಸುವ ಮೂಲಕ ವರಿಷ್ಠರಿಗೂ ತಮ್ಮ ಅಸಮಾಧಾನ ತಲುಪಿಸುವ ಯತ್ನ ನಡೆಸಿದ್ದಾರೆ. ಅಲ್ಲದೇ, ಇದೇ 23 ಮತ್ತು 24ರಂದು ದೆಹಲಿಗೆ ಹೋಗಿ ವರಿಷ್ಠರನ್ನು ಭೇಟಿ ಮಾಡಿ, ಅಹವಾಲು ಸಲ್ಲಿಸಲು ನಿರ್ಧರಿಸಿದ್ದಾರೆ ಎಂದು ಗೊತ್ತಾಗಿದೆ.

ಅಲ್ಲದೇ, ತಟಸ್ಥ ಬಣ ಮತ್ತು ಪಕ್ಷದ ಹಿರಿಯ ನಾಯಕರನ್ನು ಭೇಟಿ ಮಾಡಿ ತಮ್ಮ ಪ್ರಯತ್ನಕ್ಕೆ ಬೆಂಬಲ ನೀಡುವಂತೆ ಮನವೊಲಿಸುವ ಕೆಲಸವನ್ನೂ ಅತೃಪ್ತರ ಬಣ ಮಾಡಿದೆ. ಈ ಗುಂಪು ಆರ್. ಅಶೋಕ, ಬಸವರಾಜ ಬೊಮ್ಮಾಯಿ, ಸದಾನಂದಗೌಡ, ಶೋಭಾ ಕರಂದ್ಲಾಜೆ ಭೇಟಿ ಮಾಡಿ ಮಾತುಕತೆ ನಡೆಸಿದೆ. ಈ ಮಧ್ಯೆ ವಿ.ಸೋಮಣ್ಣ ಅವರು ಅತೃಪ್ತರ ಸಭೆಯಲ್ಲಿ ಭಾಗಿಯಾಗಿದ್ದು, ಬಿಜೆಪಿಯಲ್ಲಿ ತಲ್ಲಣ ಮೂಡಿಸಿದೆ ಎಂಬ ಅಭಿಪ್ರಾಯ ಪಕ್ಷದ ವಲಯದಲ್ಲಿ ವ್ಯಕ್ತವಾಗಿದೆ.

ಮುಂದಿನ ವಾರ ಅಧ್ಯಕ್ಷ ಆಯ್ಕೆ ಪ್ರಕ್ರಿಯೆ?

ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಮುಂದಿನ ವಾರದ ವೇಳೆಗೆ ನಡೆಯಬಹುದು ಎಂದು ಬಿಜೆಪಿ ಮೂಲಗಳು ಹೇಳಿವೆ.

ರಾಜ್ಯ ಅಧ್ಯಕ್ಷ ಸ್ಥಾನದ ಬಗ್ಗೆ ಗೊಂದಲ ಇರುವುದರಿಂದ ಆ ಗೊಂದಲವನ್ನು ನಿವಾರಿಸಬೇಕು. ಆಗ ಕಾರ್ಯಕರ್ತರು ಹೆಚ್ಚು ಸ್ಪಷ್ಟತೆಯಿಂದ ಕಾರ್ಯ ನಿರ್ವಹಿಸಲು ಸಾಧ್ಯವಾಗು-ತ್ತದೆ ಎಂದು ಕೆಲವು ಹಿರಿಯ ನಾಯಕರು ಅಮಿತ್ ಶಾ ಅವರ ಗಮನಕ್ಕೆ ತಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಹೊಸಬರನ್ನು ಅಧ್ಯಕ್ಷರನ್ನಾಗಿ ಮಾಡಬೇಕು ಎಂದು ಒಂದು ಬಣ ಒತ್ತಡ ಹೇರಿದ್ದರೆ, ವಿಜಯೇಂದ್ರ ಅವರನ್ನು ಮುಂದುವರೆಸಬೇಕು ಎಂದು ಯಡಿಯೂರಪ್ಪ ಪರ ಇರುವವರು ಒತ್ತಾಯಿಸುತ್ತಿದ್ದಾರೆ. ಈ ಗೊಂದಲ ಇತ್ಯರ್ಥ ಪಡಿಸಬೇಕೆಂದು ಹಿರಿಯ ನಾಯಕರು ತಿಳಿದ್ದಾರೆ' ಎಂದು ಹೇಳಲಾಗಿದೆ.

ನಿತ್ಯ ಪಕ್ಷದ ಕಚೇರಿಗೆ ಬರುವೆ: ಬಿಎಸ್‌ವೈ



ಯಡಿಯೂರಪ್ಪ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಗುರುವಾರ ರಾತ್ರಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜತೆ ಸುಮಾರು 30 ನಿಮಿಷಗಳ ಕಾಲ ಮಾತುಕತೆ ನಡೆಸಿದರು.

ಈ ಸಂದರ್ಭದಲ್ಲಿ ಅವರು ಪಕ್ಷದ ಆಂತರಿಕ ವಿಚಾರ-ಗಳಲ್ಲದೇ, ರಾಜ್ಯ ಸರ್ಕಾರದ ಕಾರ್ಯವೈಖರಿ, ಭ್ರಷ್ಟಾಚಾರ ಪ್ರಕರಣಗಳ ಬಗ್ಗೆಯೂ ಮಾಹಿತಿ ನೀಡಿದರು. ಈ ವೇಳೆ ಮಾತನಾಡಿದ ಅಮಿತ್ ಶಾ, ಪಕ್ಷದ ಚಟುವಟಿಕೆಗಳಲ್ಲಿ ಭಾಗವಹಿಸಿ, ಪಕ್ಷದ ಕಚೇರಿ ಹೋಗಿ ಮಾರ್ಗದರ್ಶನ ನೀಡಬೇಕು ಎಂದು ಯಡಿಯೂರಪ್ಪ ಅವರಿಗೆ ಸಲಹೆ ನೀಡಿದರು ಎಂದು ಮೂಲಗಳು ಹೇಳಿವೆ.

ಇದರ ಬೆನ್ನಲ್ಲೇ ಶುಕ್ರವಾರ ಬೆಳಿಗ್ಗೆ ಪಕ್ಷದ ಕಚೇರಿಗೆ ಬಂದ ಯಡಿಯೂರಪ್ಪ ಅವರು ಸುದ್ದಿಗಾರರ ಜತೆ ಮಾತನಾಡಿದರು. 'ಅಸಮಾಧಾನ ಗೊಂಡವರನ್ನು ಕರೆದು ಮಾತನಾಡಿ ಸಮಸ್ಯೆ ಬಗೆಹರಿಸುವುದಾಗಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ. ಅವರ ಪ್ರಯತ್ನವನ್ನು ಸ್ವಾಗತಿಸುತ್ತೇನೆ. ಮಾತನಾಡಲು ನಾನು ಸಿದ್ಧ. ಪ್ರತಿ ನಿತ್ಯ ಪಕ್ಷದ ಕಚೇರಿಗೆ ಬಂದು ಮಧ್ಯಾಹ್ನದವರೆಗೆ ಕೂರುತ್ತೇನೆ. ಪ್ರತಿ ವಾರ ಒಂದೆರಡು ಜಿಲ್ಲೆಗೆ ಭೇಟಿ ನೀಡುತ್ತೇನೆ' ಎಂದು ಯಡಿಯೂರಪ್ಪ ಹೇಳಿದರು.

'ರಾಜ್ಯದಲ್ಲಿ ಬಿಎಸ್‌ವೈ ಅಸ್ತಿತ್ವ ಇಲ್ಲ'



ಬಸನಗೌಡ ಯತ್ನಾಳ

ವಿಜಯಪುರ: 'ರಾಜ್ಯದಲ್ಲಿ ಯಡಿಯೂರಪ್ಪನವರ ಅಸ್ತಿತ್ವ ಉಳಿದಿಲ್ಲ ಎಂಬುದು ಗೃಹ ಸಚಿವ ಅಮಿತ್ ಶಾ ಅವರಿಗೆ ಗೊತ್ತಾಗಬೇಕು. ಅವರು ಇನ್ನೂ ಯಡಿಯೂರಪ್ಪಾಜಿ ಎನ್ನುತ್ತಿದ್ದರೆ, ಬಿಜೆಪಿ ಭವಿಷ್ಯದಲ್ಲಿ ಹೀನಾಯವಾಗಿ ಸೋಲಲಿದೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

'ರಾಜ್ಯ ಬಿಜೆಪಿಯಲ್ಲಿ ಸಂಘಟನೆ ಉಳಿದಿಲ್ಲ. ಮಿತ್ರಪಕ್ಷ ಜೆಡಿಎಸ್‌ನವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ರಾಜ್ಯದಲ್ಲಿ ನಾಯಕತ್ವವೇ ಸರಿಯಿಲ್ಲ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಕಾಂಗ್ರೆಸ್ ಸರ್ಕಾರ ಬಿಜೆಪಿ ಕಾರ್ಯಕರ್ತರ ವಿರುದ್ಧ ನಿತ್ಯ ಪ್ರಕರಣಗಳನ್ನು ದಾಖಲಿಸುತ್ತಿದೆ. ಪಕ್ಷದ ಕಾರ್ಯಕರ್ತರು ಹಿಂದುತ್ವಕ್ಕಾಗಿ ಪ್ರಾಣ ಕಳೆದು ಕೊಳ್ಳುತ್ತಿದ್ದಾರೆ. ಮತ್ತೊಂದೆಡೆ, ಯಡಿಯೂರಪ್ಪ ಮೊಮ್ಮಗನ ಮದುವೆಯಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಜಮೀರ್ ಅಹಮದ್ ಅವರೊಂದಿಗೆ ಸಂತೋಷವಾಗಿದ್ದಾರೆ. ಇದು ಕಾರ್ಯಕರ್ತರಿಗೆ ಯಾವ ಸಂದೇಶ ನೀಡುತ್ತದೆ. ಅವರೊಂದಿಗೆ ಅಷ್ಟು ಆತ್ಮೀಯತೆ ಇದ್ದರೆ, ಕಾಂಗ್ರೆಸ್ ಸೇರಿಕೊಳ್ಳಲಿ' ಎಂದರು.


ಸುದ್ದಿ 2 ನಿಮಿಷ

ಜನಾರ್ದನ ರೆಡ್ಡಿ ಶಾಸಕತ್ವ ಮರು ಸ್ಥಾಪನೆ

ಬೆಂಗಳೂರು: ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಸಿಬಿಐ ವಿಶೇಷ ನ್ಯಾಯಾಲಯದಿಂದ ಏಳು ವರ್ಷ ಶಿಕ್ಷೆಗೆ ಗುರಿಯಾಗಿದ್ದ ಗಂಗಾವತಿ ಕ್ಷೇತ್ರದ ಬಿಜೆಪಿ ಶಾಸಕ ಜಿ.ಜನಾರ್ದನರೆಡ್ಡಿ ಅವರನ್ನು ಅನರ್ಹಗೊಳಿಸಿದ್ದ ಆದೇಶವನ್ನು ಕರ್ನಾಟಕ ವಿಧಾನಸಭೆ ಹಿಂದಕ್ಕೆ ಪಡೆದಿದೆ.

ಸಿಬಿಐ ವಿಶೇಷ ನ್ಯಾಯಾಲಯದ ತೀರ್ಪಿಗೆ ತೆಲಂಗಾಣ ಹೈಕೋರ್ಟ್ ತಡೆ ನೀಡಿರುವ ಕಾರಣ ಅನರ್ಹತೆ ಆದೇಶವನ್ನು ಹಿಂದಕ್ಕೆ ಪಡೆಯಲಾಗಿದೆ. ತೀರ್ಪಿಗೆ ನ್ಯಾಯಾಲಯ ತಡೆ ನೀಡಿದರೆ ಅಥವಾ ತೀರ್ಪನ್ನು ರದ್ದು ಮಾಡಿದರೆ ಅನರ್ಹತೆ ಆದೇಶ ಹಿಂದಕ್ಕೆ ಪಡೆಯಲು ಅವಕಾಶ ಇದೆ ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ.

ಸಿಬಿಐ ವಿಶೇಷ ನ್ಯಾಯಾಲಯವು ಶಿಕ್ಷೆ ಪ್ರಕಟಿಸಿದ ಬಳಿಕ ವಿಧಾನಸಭೆ ಕಾರ್ಯದರ್ಶಿ ಅಧಿಸೂಚನೆ ಹೊರಡಿಸಿ, ಮೇ 6ರಿಂದ ಅನರ್ಹ ಆದೇಶವು ಜಾರಿಗೆ ಬರಲಿದೆ. 6 ವರ್ಷಗಳವರೆಗೆ ಮುಂದುವರಿಯಲಿದೆ. ಆದ್ದರಿಂದ, ರಾಜ್ಯ ವಿಧಾನಸಭೆಯಲ್ಲಿ ಒಂದು ಸ್ಥಾನ ಖಾಲಿ ಆಗಲಿದೆ ಎಂದು ಹೇಳಿದ್ದರು.



ಕರ್ನಾಟಕ–ಆಂಧ್ರ ಗಡಿಯ ಓಬುಳಾಪುರಂನಲ್ಲಿ ಅಕ್ರಮ ಗಣಿಗಾರಿಕೆ ನಡೆಸಿದ ಪ್ರಕರಣದಲ್ಲಿ ನ್ಯಾಯಾಲಯವು ರೆಡ್ಡಿ ಮತ್ತು ಇತರ ಮೂವರಿಗೆ ಏಳು ವರ್ಷಗಳ ಶಿಕ್ಷೆ ಮತ್ತು ₹10 ಸಾವಿರ ದಂಡ ವಿಧಿಸಿತ್ತು.

'ಅಧ್ಯಕ್ಷ ಸ್ಥಾನಕ್ಕೆ ಯೋಗ್ಯನಲ್ಲ'

ಬಳ್ಳಾರಿ: 'ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ಹಾದಿ ಬೀದಿಯಲ್ಲಿ ಹೋಗುವವರು ಅಷ್ಟೇ ಅಲ್ಲ, ಅನಕ್ಷರಸ್ಥರೂ ಪ್ರಶ್ನಿಸುವ ಹಕ್ಕು ಇದೆ. ಅಧ್ಯಕ್ಷರಾದವರು ಸೌಜನ್ಯದಿಂದ ಉತ್ತರಿಸಬೇಕು. ಸರ್ವಾಧಿಕಾರಿ, ಧಿಮಾಕು, ಅಧಿಕಾರಶಾಹಿ ಮನಸ್ಥಿತಿ ವ್ಯಕ್ತಿಯು ಅಧ್ಯಕ್ಷ ಸ್ಥಾನಕ್ಕೆ ಯೋಗ್ಯನಲ್ಲ' ಎಂದು ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಅವರು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿಯವರ ಹೆಸರು ಪ್ರಸ್ತಾಪಿಸದೇ ವಾಗ್ದಾಳಿ ನಡೆಸಿದರು.

'ಸರ್ಕಾರವು ಪರಿಷತ್ತಿಗೆ ಕೂಡಲೇ ಆಡಳಿತಾಧಿಕಾರಿಯನ್ನು ನೇಮಿಸಬೇಕು. ಆರ್ಥಿಕ ದುರಾಡಳಿತ ಪರಿಶೀಲಿಸಬೇಕು. ಸಲ್ಲಿಕೆ ಆಗುವ ವರದಿ ಆಧರಿಸಿ ಅವರನ್ನು ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಸಬೇಕೇ ಅಥವಾ ಬೇಡವೇ ಎಂಬುದನ್ನು ನಿರ್ಧರಿಸಬೇಕು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಬಳ್ಳಾರಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆ-ಯುತ್ತಿರುವುದು ಸಂತೋಷದ ವಿಷಯ. ಆದರೆ, ಸಮ್ಮೇಳನವು ಲೋಲುಪತೆ, ಅಪವ್ಯಯ ಮತ್ತು ಅದ್ದೂರಿಯ ಜಾತ್ರೆ ಆಗಬಾರದು. ಅರಿವಿನ ಜಾತ್ರೆ ಆಗಬೇಕು. ಸಮ್ಮೇಳನ ಬಳಿಕ ಉಳಿಯುವ ಹಣವನ್ನು ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ವಿನಿಯೋಗಿಸಬೇಕು' ಎಂದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	117.40	23,473	1,251
ಹಾರಂಗಿ	2,859	2,849.77	3,070	2,041
ಕಬಿನಿ	2,284.00	2,279.36	16,933	25,000
ಹೇಮಾವತಿ	2,922	2,913.40	13,273	4,750
ಲಿಂಗನಮಕ್ಕಿ	1,819	1,772,80	17,636	4,659
ಸೂಪಾ (ಮೀ)	564	531.6	10,615.48	1,835.78
ಮಾಣಿ	595	580.38	3,001	-
ತುಂಗಭದ್ರಾ	1,633	1,610.52	51,261	256
ಮಲಪ್ರಭಾ	2,079.5	2,054.10	4,258	194
ಘಟಪ್ರಭಾ	2175	2,115.75	8,468	110
ಭದ್ರಾ *	186	149.9	14,992	1,275
ಆಲಮಟ್ಟಿ (ಮೀ)	519.6	515.55	70,440	70,440
ನಾರಾಯಣಪುರ (ಮೀ)	492.25	490.35	75,000	75,015

* ನೆಲಮಟ್ಟದಿಂದ

ಸೀಟ್ ಬ್ಲಾಕಿಂಗ್: 400 ಮಂದಿ ಶ್ರೇಯಾಂಕಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೀಟುಗಳನ್ನು ಬ್ಲಾಕ್ ಮಾಡಿದ್ದ ಆರೋಪ ಎದುರಿಸುತ್ತಿರುವ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು 2025–26ನೇ ಸಾಲಿನಲ್ಲೂ ಪರೀಕ್ಷೆ ಬರೆದಿದ್ದು, ಅಂತಹವರ ಶ್ರೇಯಾಂಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಡೆ ಹಿಡಿದಿದೆ.

2024–25ನೇ ಸಾಲಿನ ಪ್ರವೇಶದ ವೇಳೆ ಸೀಟ್ ಬ್ಲಾಕಿಂಗ್ ದಂಧೆ ನಡೆದಿತ್ತು. ಈ ಸಂಬಂಧ ಮಲ್ಲೇಶ್ವರದ ಸೈಬರ್ ಅಪರಾಧ ಹಾಗೂ ಮಾದಕ ವಸ್ತುಗಳ ನಿಯಂತ್ರಣ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು.

ಸಿಇಟಿಯಲ್ಲಿ ಉನ್ನತ ರ್‍ಯಾಂಕ್ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳು ಎರಡನೇ ಸುತ್ತು ಪೂರ್ಣಗೊಳ್ಳುವವರೆಗೂ ಸೀಟು ಹಿಡಿದಿಟ್ಟುಕೊಂಡು ಕೊನೆಯ ಸುತ್ತಿನ ನಂತರ ತಮಗೆ ಹಂಚಿಕೆಯಾದ ಕಾಲೇಜುಗಳಿಗೆ ಪ್ರವೇಶ ಪಡೆಯದೇ ಇತರೆ ವಿದ್ಯಾರ್ಥಿಗಳಿಗೆ ನಷ್ಟ ಮಾಡಿದ್ದರು ಎಂದು ಕೆಇಎ ಆರೋಪಿಸಿತ್ತು. ಅಂತಹ 2,348 ವಿದ್ಯಾರ್ಥಿಗಳಿಗೆ ಕೆಇಎ ನೋಟಿಸ್ ನೀಡಿತ್ತು. ಕೆಲವರು ಉತ್ತರ ನೀಡಿದರೆ, ಬಹುತೇಕ ವಿದ್ಯಾರ್ಥಿಗಳು ನೋಟಿಸ್‌ಗೆ ಉತ್ತರ ನೀಡಿರಲಿಲ್ಲ.

'ನೋಟಿಸ್ ನೀಡಿದ್ದರೂ ಉತ್ತರ ನೀಡದ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಬಾರಿಯೂ ಸಿಇಟಿ ಬರೆದಿದ್ದಾರೆ. ಅಂಥವರ ಶ್ರೇಯಾಂಕವನ್ನು ತಡೆಹಿಡಿಯಲಾಗಿದೆ. ಕೆಲವರು ಶ್ರೇಯಾಂಕ ನೀಡುವಂತೆ ಮನವಿ ಸಲ್ಲಿಸಿದ್ದು, ಅವರ ಅಹವಾಲು ಆಲಿಸಲು ಸಮಿತಿ ರಚಿಸಲಾಗಿದೆ. ಸಮಿತಿ ವರದಿ ಹಾಗೂ ಪೊಲೀಸರು ಸಲ್ಲಿಸಿದ ದೋಷಾರೋಪ ಪಟ್ಟಿ ಪರಿಶೀಲನೆಯ ನಂತರ ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದರು.

ಭರಚುಕ್ಕಿ ಜಲಪಾತದ ಸೊಬಗು



ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಪ್ರಸಿದ್ಧ ಭರಚುಕ್ಕಿ ಜಲಪಾತಕ್ಕೆ ಜೀವಕಳೆ ಬಂದಿದ್ದು ಪ್ರವಾಸಿಗರನ್ನು ಆಕರ್ಷಿಸುತ್ತಿದೆ

ಪ್ರಜ್ವಲ್ ರೇವಣ್ಣ ವಿರುದ್ಧದ ವಿಚಾರಣೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮನೆ ಕೆಲಸದಾಕೆ ಮೇಲೆ ಅತ್ಯಾಚಾರ ಎಸಗಿದ ಆರೋಪ
- ನ್ಯಾಯಿಕ ಪ್ರಕ್ರಿಯೆಗೆ ಮಾತ್ರವೇ ತಡೆ: ಕೋರ್ಟ್



ಪ್ರಜ್ವಲ್



ಬೆಂಗಳೂರು: 'ಮನೆ ಕೆಲಸದಾಕೆ ಮೇಲೆ ಅತ್ಯಾಚಾರ ಎಸಗಿದ ಆರೋಪದ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ವಿಚಾರಣೆಯನ್ನು, ವಿಚಾರಣಾ ನ್ಯಾಯಾಲಯ ಮುಂದುವರಿಸಬಹುದು' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

'ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಎಫ್‌ಐಆರ್, ದೋಷಾರೋಪಪಟ್ಟಿ ಮತ್ತು ಈ ಕುರಿತ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ಜೆಡಿಎಸ್ ಶಾಸಕ ಹಾಗೂ ಪ್ರಜ್ವಲ್ ತಂದೆ ಎಚ್.ಡಿ.ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಎಚ್.ಡಿ.ರೇವಣ್ಣ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್, 'ರೇವಣ್ಣ ಅವರಿಗೆ ಸೀಮಿತಗೊಳಿಸಿ ಈ ನ್ಯಾಯಾಲಯ ಮಧ್ಯಂತರ ಆದೇಶ ನೀಡಿದೆ. ಹಾಗಾಗಿ, ಪ್ರಜ್ವಲ್ ವಿರುದ್ಧದ ವಿಚಾರಣೆ ಮುಂದುವರಿಸಲು ಯಾವುದೇ ಅಡ್ಡಿಯಿಲ್ಲ' ಎಂದರು. ಈ ಮಾತಿಗೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್ ಸಹಮತ ವ್ಯಕ್ತಪಡಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ರೇವಣ್ಣ ವಿರುದ್ಧದ ನ್ಯಾಯಿಕ ಪ್ರಕ್ರಿಯೆಗೆ ಮಾತ್ರವೇ ತಡೆ ನೀಡಲಾಗಿದೆ. ಹೀಗಾಗಿ, ಪ್ರಜ್ವಲ್ ವಿರುದ್ಧದ ವಿಚಾರಣೆಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮುಂದುವರಿಸಬಹುದು' ಎಂದು ಸ್ಪಷ್ಟಪಡಿಸಿ, ವಿಚಾರಣೆಯನ್ನು ಜುಲೈ 4ಕ್ಕೆ ಮುಂದೂಡಿತು.

ಜಾಮೀನು ಕೋರಿಕೆ: ಇದೇ ವೇಳೆ ಪ್ರಜ್ವಲ್ ಸಲ್ಲಿಸಿರುವ ಜಾಮೀನು ಅರ್ಜಿಗೆ ವಿಶೇಷ ಪ್ರಾಸಿಕ್ಯೂಟರ್ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಇದೇ ರೀತಿಯ ಆರೋಪಗಳನ್ನು ಒಳಗೊಂಡಿರುವ ಇನ್ನೊಂದು ಪ್ರಕರಣ-ದಲ್ಲಿ ವಿಚಾರಣೆ ಈಗಾಗಲೇ ಬಹುತೇಕ ಮುಕ್ತಾಯಗೊಂಡಿದೆ. ಆ ಪ್ರಕರಣ ಮುಗಿದ ತಕ್ಷಣ ಈ ಪ್ರಕರಣದ ವಿಚಾರಣೆ ಕೈಗೆತ್ತಿಕೊಳ್ಳುವಂತೆ ವಿಚಾರಣಾ ನ್ಯಾಯಾಲಯಕ್ಕೆ ಮನವಿ ಮಾಡಲಾಗಿದೆ. ಮುಂದಿನ ವಾರ ಅಥವಾ 15 ದಿನಗಳಲ್ಲಿ ವಿಚಾರಣೆ ಆರಂಭವಾಗುವ ಸಾಧ್ಯತೆ ಇದೆ' ಎಂದರು.

ಇದನ್ನು ಅಲ್ಲಗಳೆದ ಪ್ರಜ್ವಲ್ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ಅವರು, 'ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಪ್ರಜ್ವಲ್ ಬಂಧನದಲ್ಲಿದ್ದಾರೆ. 157 ಸಾಕ್ಷ್ಯಗಳನ್ನು ಉಲ್ಲೇಖಿಸಲಾಗಿದೆ. ಮೊದಲ ಜಾಮೀನು ಅರ್ಜಿ ತಿರಸ್ಕೃತವಾದ ದಿನದಿಂದ ಈತನಕ ವಿಚಾರಣೆ ಒಂದಿಂಚೂ ವೇಗ ಪಡೆದಿಲ್ಲ. ಈ ರೀತಿಯಲ್ಲಿ ಪ್ರಜ್ವಲ್ ಜೈಲಿನಲ್ಲಿ ಕೊಳೆಯುವಂತೆ ಮಾಡಲಾಗದು' ಎಂದರು. ವಿಚಾರಣೆಯನ್ನು ಜೂನ್ 24ಕ್ಕೆ ಮುಂದೂಡಲಾಗಿದೆ. ಈ ಪ್ರಕರಣದಲ್ಲಿ ಎಚ್.ಡಿ.ರೇವಣ್ಣ ಅವರಿಗೆ ಈಗಾಗಲೇ ಜಾಮೀನು ದೊರೆತಿದೆ.

ಛಲವಾದಿ, ಸಿ.ಟಿ.ರವಿ ವಿರುದ್ಧದ ಪ್ರಕರಣಕ್ಕೆ ತಡೆ: ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆಗ್ರಹಿಸಿ ರಸ್ತೆಯಲ್ಲಿ ಪ್ರತಿಭಟನೆ ನಡೆಸಿ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಪಡಿಸಿದ ಮತ್ತು ನಗರದ ಸೌಂದರ್ಯಕ್ಕೆ ಧಕ್ಕೆ ತಂದ ಆರೋಪದಡಿ ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಛಲವಾದಿ ನಾರಾಯಣ ಸ್ವಾಮಿ, ಮಾಜಿ ಸಚಿವ ಸಿ.ಟಿ.ರವಿ ಮತ್ತಿತರ ಬಿಜೆಪಿ ನಾಯಕರ ವಿರುದ್ಧದ ತನಿಖೆಗೆ ಹೈಕೋರ್ಟ್ ತಡೆ ನೀಡಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ವಿರುದ್ಧ ಹೈಗ್ರೌಂಡ್ಸ್ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಮತ್ತು ನಗರದ ಜನಪ್ರತಿನಿಧಿಗಳ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಲಾದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ.ವಿನೋದ್ ಕುಮಾರ್ ಮಂಡಿಸಿದ ವಾದ ಪುರಸ್ಕರಿಸಿದ ನ್ಯಾಯಪೀಠ ಛಲವಾದಿ ನಾರಾಯಣ ಸ್ವಾಮಿ, ಸಿ.ಟಿ.ರವಿ, ರವಿಕುಮಾರ್ ಮತ್ತು ಉಮೇಶ್ ಶೆಟ್ಟಿ ಸೇರಿದಂತೆ ಒಟ್ಟು 12 ಮಂದಿ ವಿರುದ್ಧದ ಕ್ರಿಮಿನಲ್ ಪ್ರಕರಣದ ವಿಚಾರಣೆಗೆ ಮಧ್ಯಂತರ ತಡೆ ನೀಡಿ ಆದೇಶಿಸಿತು.

ಪ್ರತಿವಾದಿ ಹೈಗ್ರೌಂಡ್ಸ್ ಠಾಣಾ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಲಾಗಿದೆ.

ನನಗೆ ದಾರಿದ್ರ್ಯ ಬಂದಿಲ್ಲ: ಎಚ್‌ಡಿಕೆ

ಬೆಂಗಳೂರು: 'ಡಿ.ಕೆ.ಶಿವಕುಮಾರ್ ಅವರಿಂದ ಬಟ್ಟೆ ಹೊಲಿಸಿಕೊಳ್ಳುವಂತಹ ದಾರಿದ್ರ್ಯ ನನಗೆ ಬಂದಿಲ್ಲ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, '2028ಕ್ಕೆ ಜೆಡಿಎಸ್ -ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ತಾನೇ ಬಟ್ಟೆ ಹೊಲಿಸಿಕೊಡ್ತೀನಿ ಎಂದು ಶಿವಕುಮಾರ್ ಹೇಳಿದ್ದಾರೆ. ಆ ವ್ಯಕ್ತಿಯಿಂದ ಬಟ್ಟೆ ಹೊಲಿಸಿ ಕೊಳ್ಳುವಷ್ಟು ದಾರಿದ್ರ್ಯವನ್ನು ಈ ನಾಡಿನ ಜನ ನನಗೆ ಕೊಟ್ಟಿಲ್ಲ' ಎಂದರು.

'ಜನರಿಂದ ಕೊಳ್ಳೆ ಹೊಡೆದ ಆ ವ್ಯಕ್ತಿಯ ಪಾಪದ ಹಣದಿಂದ ನಾನು ಬಟ್ಟೆ ಹೊಲಿಸಿಕೊಳ್ಳಬೇಕಾ? ನನಗೆ ಬಟ್ಟೆ ಬೇಕಾದರೆ ನಾಡಿನ ಜನರಿದ್ದಾರೆ. ದಾರಿದ್ರ್ಯ ಇರುವುದು ಆ ವ್ಯಕ್ತಿಗೆ. ಅವರಿಗಿರುವುದು ಮನುಷ್ಯತ್ವದ ದಾರಿದ್ರ್ಯ' ಎಂದರು.

ಅಧಿಕಾರಕ್ಕೆ ಬರುತ್ತೇವೆ ಎಂದಿದ್ದರು: ಡಿಕೆಶಿ

'ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ಎಲ್ಲ ತಯಾರಾಗಿ' ಎಂದು ಕುಮಾರಸ್ವಾಮಿ ಹೇಳಿದ್ದರು. ಹಾಗಾಗಿ, ಅವರಿಗೆ ಬಟ್ಟೆ ಉಡುಗೊರೆ ನೀಡುವುದಾಗಿ ವ್ಯಂಗ್ಯ ಮಾಡಿದ್ದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. 'ಕುಮಾರಸ್ವಾಮಿ ಕನಸು ಕಂಡಂತೆ ಬಿಜೆಪಿ–ಜೆಡಿಎಸ್ ಮೈತ್ರಿ ಸರ್ಕಾರ ಬರುವುದಿಲ್ಲ. 2028ರ ವಿಧಾನಸಭಾ ಚುನಾವಣೆಯಲ್ಲಿ ಆ ಎರಡೂ ಪಕ್ಷಗಳು ಬಹುಮತ ಪಡೆಯುವುದೂ ಇಲ್ಲ' ಎಂದರು.

ರವಿಕುಮಾರ್ ಕ್ಷಮೆ: ಪ್ರಮಾಣ ಪತ್ರ



ಬೆಂಗಳೂರು: ಕಲಬುರಗಿ ಜಿಲ್ಲಾಧಿಕಾರಿ ಫೌಝಿಯಾ ತರನ್ನುಮ್ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಕ್ಷಮೆ ಕೇಳಿರುವುದಾಗಿ ಆರೋಪಿಯಾದ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎನ್.ರವಿಕುಮಾರ್ ಹೈಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿದ್ದಾರೆ.

'ಕಲಬುರಗಿಯ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಬಿಜೆಪಿ ಶಾಸಕ ಎನ್. ರವಿಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ.ವಿನೋದ್ ಕುಮಾರ್, 'ಈ ಹಿಂದಿನ ವಿಚಾರಣೆಯ ವೇಳೆ ನ್ಯಾಯಪೀಠ ನೀಡಿದ ಸೂಚನೆಯಂತೆ ಅರ್ಜಿದಾರರು ಜಿಲ್ಲಾಧಿಕಾರಿ ಬಳಿ ತೆರಳಿ ಕ್ಷಮೆ ಯಾಚಿಸಿದ್ದಾರೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಈ ಮಾತಿಗೆ ಪ್ರಾಸಿಕ್ಯೂಷನ್ ಪರ ಹಾಜರಿದ್ದ ವಕೀಲರು, 'ಅರ್ಜಿದಾರರು ಕ್ಷಮೆ ಕೇಳಲು ತೆರಳುವಾಗ ದೊಡ್ಡ ರ್‍ಯಾಲಿ ನಡೆಸಿದ್ದಾರೆ' ಎಂದು ಆಕ್ಷೇಪಿಸಿದರು. ವಿನೋದ್ ಕುಮಾರ್ ಇದನ್ನು ಅಲ್ಲಗಳೆದರಾದರೂ, ಜಗದೀಶ್, 'ಈ ಕುರಿತ ವಿಡಿಯೊ ಇದೆ' ಎಂದರು. ಇದಕ್ಕೆ ನ್ಯಾಯಪೀಠ ರ್‍ಯಾಲಿ ನಡೆಸುವ ಅವಶ್ಯವೇನಿತ್ತು' ಎಂದು ಅಸಮಾಧಾನ ವ್ಯಕ್ತಪಡಿಸಿತು.

ವಾದ-ಪ್ರತಿವಾದ ಆಲಿಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ನೀಡಿದ್ದ ಮಧ್ಯಂತರ ಆದೇಶವನ್ನು ವಿಸ್ತರಿಸಿತು. ಅಂತೆಯೇ ದೂರುದಾರರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು. ಈ ಪ್ರಕರಣದಲ್ಲಿ ರವಿಕುಮಾರ್ ಅವರಿಗೆ ವಿಚಾರಣಾ ನ್ಯಾಯಾಲಯ ಈಗಾಗಲೇ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಕೋರ್ಟ್‌ನಲ್ಲಿ ಅಂಬೇಡ್ಕರ್ ಭಾವಚಿತ್ರ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ಬೆಂಗಳೂರು ಪ್ರಧಾನ ಪೀಠ, ಧಾರವಾಡ, ಕಲಬುರಗಿ ಪೀಠ, ಜಿಲ್ಲಾ ಕೋರ್ಟ್‌ಗಳು ಹಾಗೂ ಎಲ್ಲ ವಿಚಾರಣಾ ಕೋರ್ಟ್‌ಗಳಲ್ಲಿ ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ಅಳವಡಿಸಲು ಹೈಕೋರ್ಟ್ ತೀರ್ಮಾನ ಕೈಗೊಂಡಿದೆ.

'ಇತ್ತೀಚೆಗೆ ನಡೆದ ಹೈಕೋರ್ಟ್ ನ್ಯಾಯಮೂರ್ತಿಗಳ ಫುಲ್ ಕೋರ್ಟ್ ಸಭೆಯಲ್ಲಿ ಈ ಕುರಿತಂತೆ ಒಮ್ಮತದ ನಿರ್ಣಯ ಕೈಗೊಳ್ಳಲಾಗಿದೆ. ಕೋರ್ಟ್ ಹಾಲ್‌ಗಳ ಪ್ರಮುಖ ಸ್ಥಳಗಳಲ್ಲಿ ಅಂಬೇಡ್ಕರ್ ಅವರ ಭಾವಚಿತ್ರ ಅಳವಡಿಸಲಾಗುತ್ತದೆ' ಎಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಕೆ.ಎಸ್.ಭರತ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರ ಕಥಾ ಸಂಕಲನ

ರಂಗ ಮಂಚ ಏರಲಿದೆ 'ಎದೆಯ ಹಣತೆ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಹೆಗ್ಗೋಡಿನ ಸತ್ಯಶೋಧನ ರಂಗ ಸಮುದಾಯ ತಂಡ
- ಜುಲೈ 5ರಂದು ನಾಟಕ ಪ್ರದರ್ಶನ
- ನಟ ಪ್ರಕಾಶ್ ರಾಜ್, ಕವಯಿತ್ರಿ ಸವಿತಾ ನಾಗಭೂಷಣ್ ನೆರವು



ಬಾನು ಮುಷ್ತಾಕ್ ಅವರ 'ಎದೆಯ ಹಣತೆ' ಕತೆಯನ್ನು ರಂಗಕ್ಕೆ ತರಲು ಸಿದ್ಧವಾಗಿರುವ ಹೆಗ್ಗೋಡಿನ ಸತ್ಯಶೋಧನ ರಂಗ ಸಮುದಾಯ ತಂಡ

ಸಾಗರ (ಶಿವಮೊಗ್ಗ): ಅಂತರ ರಾಷ್ಟ್ರೀಯ ಬೂಕರ್ ಪ್ರಶಸ್ತಿ ಪಡೆದ ಬಾನು ಮುಷ್ತಾಕ್ ಅವರ 'ಎದೆಯ ಹಣತೆ' ಕಥಾ ಸಂಕಲನದಲ್ಲಿನ 'ಎದೆಯ ಹಣತೆ' ಕತೆಯು ರಂಗ ರೂಪ ಪಡೆದು ಪ್ರದರ್ಶನಗೊಳ್ಳಲು ಸಿದ್ಧವಾಗಿದೆ.

ಹೆಗ್ಗೋಡಿನ ಸತ್ಯಶೋಧನ ರಂಗ ಸಮುದಾಯ ತಂಡವು (ಜನಮನದಾಟ) ಎಂ.ಗಣೇಶ್ ನಿರ್ದೇಶನದಲ್ಲಿ ಇದನ್ನು ರಂಗದ ಮೇಲೆ ಪ್ರದರ್ಶಿಸಲು ಮುಂದಾಗಿದೆ. ಎನ್.ಎಸ್.ಡಿ ಪದವೀಧರೆ ಸಲ್ಮಾ ದಂಡಿನ್ ಅವರನ್ನೊಳಗೊಂಡ ಎಂಟು ಜನರ ತಂಡ ಈ ಕಾರ್ಯಕ್ಕೆ ಮುಂದಾಗಿದೆ. ಜುಲೈ 5ರಂದು ಹೆಗ್ಗೋಡಿನ ನೀನಾಸಂ ಸಭಾಂಗಣದಲ್ಲಿ ಈ ನಾಟಕದ ಮೊದಲ ಪ್ರದರ್ಶನ ನಡೆಯಲಿದೆ.

ಉಡುಪಿ, ಮಂಗಳೂರು, ಬ್ರಹ್ಮಾವರ, ಸಕಲೇಶಪುರ, ಹೊಳೆನರಸೀಪುರ, ಚನ್ನರಾಯಪಟ್ಟಣ, ಚಿಕ್ಕಮಗಳೂರು, ಹಾಸನ, ಮಂಡ್ಯ, ಬೆಂಗಳೂರು, ಮೈಸೂರು, ತುಮಕೂರು, ಶಿವಮೊಗ್ಗದಲ್ಲಿ ಪ್ರದರ್ಶನ ಏರ್ಪಡಿಸಲಾಗಿದೆ.

'2019ರಲ್ಲಿ ಬಾನು ಮುಷ್ತಾಕ್ ಅವರ 'ಹೃದಯದ ತೀರ್ಪು' ಕತೆಯನ್ನು ರಂಗ ರೂಪಕ್ಕೆ ಅಳವಡಿಸಿ ನೀನಾಸಂ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ನಾಟಕ ಆಡಿಸಲಾಗಿತ್ತು. ಆಗಿನಿಂದಲೇ ಬಾನು ಅವರ ಕತೆಗಳ ಬಗ್ಗೆ ಆಕರ್ಷಣೆ ಬೆಳೆದಿತ್ತು. ಈಗ 'ಎದೆಯ ಹಣತೆ' ಕತೆ ಹೆಚ್ಚು ಜನರಿಗೆ ತಲುಪಲಿ ಎಂಬ ಉದ್ದೇಶದಿಂದ ಅದನ್ನು ರಂಗದ ಮೇಲೆ ತರಲಾಗುತ್ತಿದೆ' ಎಂದು ನಿರ್ದೇಶಕ ಎಂ.ಗಣೇಶ್ ಹೇಳಿದರು.

ಈ ರಂಗ ಪ್ರಯೋಗದ ಸಿದ್ಧತೆಗೆ ನೀನಾಸಂ ಸಹಕಾರ ನೀಡಿದ್ದು, ನಟ ಪ್ರಕಾಶ್ ರಾಜ್, ಕವಯಿತ್ರಿ ಸವಿತಾ ನಾಗಭೂಷಣ್ ನೆರವು ಕಲ್ಪಿಸಿದ್ದಾರೆ.

ಚಿಟಿಕೆ ಸುದ್ದಿ

ಸಸ್ಯ ಸಂತೆ: ನೋಂದಣಿಗೆ ಅವಕಾಶ



ಬೆಂಗಳೂರು: ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ(ಜಿಕೆವಿಕೆ) ವ್ಯಾಪ್ತಿಯಲ್ಲಿರುವ ತೋಟಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯದ ಆವರಣದಲ್ಲಿ ಜುಲೈ 11ರಿಂದ 13ರವರೆಗೆ 'ಸಸ್ಯ ಸಂತೆ' ಆಯೋಜಿಸಲಾಗಿದೆ.

ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಸಂಸ್ಥೆ ಆಯೋಜಿಸುವ ಈ ಸಸ್ಯ ಸಂತೆಯಲ್ಲಿ ಹಣ್ಣಿನ ಕಸಿ ಸಸಿಗಳು ಸೇರಿದಂತೆ ವಿವಿಧ ತೋಟಗಾರಿಕೆ ಪರಿಕರಗಳ ಮಾರಾಟಕ್ಕಾಗಿ ಮಳಿಗೆಗಳನ್ನು ತೆರೆಯಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

'ಸಸ್ಯ ಸಂತೆ'ಯಲ್ಲಿ ತರಕಾರಿ ಬೀಜ, ಔಷಧೀಯ ಮತ್ತು ಸುಗಂಧಿ ಸಸಿಗಳು ಮತ್ತು ಆಲಂಕಾರಿಕ ಸಸಿಗಳು, ಎರೆಹುಳು ಗೊಬ್ಬರ, ಜೈವಿಕ ಗೊಬ್ಬರ, ಇತರೆ ಸಾವಯವ ಪರಿಕರಗಳು, ಪೀಡೆನಾಶಕ, ಕೃಷಿ ಉಪಕರಣಗಳು, ಕೈತೋಟದ ಪರಿಕರಗಳು ಮತ್ತು ಹೂವಿನ ಕುಂಡಗಳನ್ನು ಹಾಗೂ ಸಾವಯವ ಆಹಾರ ಪದಾರ್ಥಗಳನ್ನು ಮಾರಾಟ ಮಾಡಬಹುದು. ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ 7795072699/ 7892057925/9538771475 ಸಂಪರ್ಕಿಸಬಹುದು ಎಂದು ಸಂಸ್ಥೆಯ ವಿಸ್ತರಣಾ ನಿರ್ದೇಶಕ ಎಸ್.ಎಲ್. ಜಗದೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಕಾರ ಡಿಪ್ಲೊಮಾ ಪ್ರವೇಶ



ಬೆಂಗಳೂರು: ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ಸಂಸ್ಥೆಯು ಆರು ತಿಂಗಳ ಅವಧಿಯ ರೆಗ್ಯುಲರ್ ಡಿಪ್ಲೊಮಾ ಇನ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. ತರಬೇತಿಯು ಜುಲೈ 1ರಿಂದ ಪ್ರಾರಂಭವಾಗಲಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ (ರಾಮನಗರ), ತುಮಕೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ ಸೇರಿರುವ ಪಿಯುಸಿ ಉತ್ತೀರ್ಣರಾಗಿರುವ ಆಸಕ್ತ ಅಭ್ಯರ್ಥಿಗಳು ಜೂನ್ 30ರೊಳಗೆ ಅರ್ಜಿ ಸಲ್ಲಿಸಬಹುದು. ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ಮಾಸಿಕ ₹500 ಶಿಷ್ಯ ವೇತನ ನೀಡಲಾಗುವುದು. ಈ ತರಬೇತಿಯು ಕೆಎಎಸ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಪೂರಕವಾಗಲಿದೆ. ಸಹಕಾರ ಸಂಸ್ಥೆಗಳ ನೇಮಕಾತಿಗಳಲ್ಲಿ ಆದ್ಯತೆ ದೊರೆಯಲಿದೆ. ಆಸಕ್ತ ಅಭ್ಯರ್ಥಿಗಳು ಕೆಐಸಿಎಂ ನಂ 1/3, 2ನೇ ಮಹಡಿ, 3ನೇ ಮುಖ್ಯ ರಸ್ತೆ, ಚಾಮರಾಜಪೇಟೆ ಬೆಂಗಳೂರು-18 ಈ ವಿಳಾಸಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-355414407, 9449007661, 8105681745 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬೆಸ್ಕಾಂ: ಗ್ರಾಹಕ ಸಂವಾದ ಸಭೆ ಇಂದು

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ(ಬೆಸ್ಕಾಂ) ಎಲ್ಲ ಕಾರ್ಯ ಮತ್ತು ಪಾಲನಾ ಉಪ ವಿಭಾಗಗಳಲ್ಲಿ ಶನಿವಾರ ಮಧ್ಯಾಹ್ನ 3 ಗಂಟೆಯಿಂದ ಸಂಜೆ 5.30ರವರೆಗೆ ಗ್ರಾಹಕ ಸಂವಾದ ಸಭೆ ನಡೆಯಲಿದೆ. ಗ್ರಾಹಕರು ಸಂವಾದ ಸಭೆಯಲ್ಲಿ ಪಾಲ್ಗೊಂಡು ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬೆಸ್ಕಾಂನ ಅಧಿಕಾರಿಗಳ ಗಮನಕ್ಕೆ ತಂದು, ಪರಿಹಾರ ಪಡೆಯಬಹುದಾಗಿದೆ ಎಂದು ಬೆಸ್ಕಾಂನ ಪ್ರಧಾನ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಯೋಗ ಮೇಳ, ಆರೋಗ್ಯ ತಪಾಸಣಾ ಶಿಬಿರ ನಾಳೆ

ನೆಲಮಂಗಲ: ಸಮೀಪದ ನಗರೂರಿನ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಪೂರ್ಣಾನಂದಪುರಿ ಸ್ವಾಮೀಜಿಯವರ ನಾಲ್ಕನೇ ಪಟ್ಟಾಭಿಷೇಕ ಮಹೋತ್ಸವದ ಅಂಗವಾಗಿ ಉದ್ಯೋಗ ಮೇಳ, ಆರೋಗ್ಯ ಶಿಬಿರ, ನೇತ್ರ ಹಾಗೂ ಹೃದಯ ತಪಾಸಣೆ ಶಿಬಿರವನ್ನು ಭಾನುವಾರ ಆಯೋಜಿಸಲಾಗಿದೆ.



ಇದರೊಂದಿಗೆ ಗಾಣಿಗ ಜನಾಂಗದ ವಧು-ವರರ ಅನ್ವೇಷಣೆ ಕಾರ್ಯಕ್ರಮ ಹಾಗೂ ಪ್ರತಿಭಾನ್ವಿತರಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 3ರವರೆಗೆ ಕಾರ್ಯಕ್ರಮಗಳು ನಡೆಯಲಿವೆ ಎಂದು ಟ್ರಸ್ಟಿ ಜಿ.ಎಸ್.ವೇಣುಗೋಪಾಲ್ ತಿಳಿಸಿದ್ದಾರೆ. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಸಮಾರಂಭ ಉದ್ಘಾಟಿಸಲಿದ್ದಾರೆ. ನೂತನ ಜ್ಞಾನ ಮಂದಿರವನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಟ್ರಸ್ಟ್ ಕಚೇರಿಯನ್ನು ಶಾಸಕ ಎಸ್.ಆರ್. ವಿಶ್ವನಾಥ್ ಉದ್ಘಾಟಿಸಲಿದ್ದಾರೆ. ಹಿಂದುಳಿದ ವರ್ಗಗಳ ವಿವಿಧ ಮಠಾಧೀಶರು ಭಾಗವಹಿಸಲಿದ್ದಾರೆ.

ಆಸ್ಪತ್ರೆ ನಿವೇಶನ ನೋಂದಣಿಗೆ ನಿರ್ಲಕ್ಷ್ಯ

ನಿವೇಶನಕ್ಕೆ ಗುತ್ತಿಗೆ ಮೊತ್ತ ಪಾವತಿಸಿ ಒಂದೂವರೆ ವರ್ಷವಾದರೂ ನೋಂದಣಿ ಮಾಡಿಸಿಕೊಳ್ಳದ ಬಿಬಿಎಂಪಿ

• ಆರ್. ಮಂಜುನಾಥ್

ಬೆಂಗಳೂರು: ಆಸ್ಪತ್ರೆ ನಿರ್ಮಿಸಲು ಬಿಡಿಎ ಹಂಚಿಕೆ ಮಾಡಿರುವ ನಾಗರಿಕ ಸೌಲಭ್ಯ (ಸಿಎ) ನಿವೇಶನಕ್ಕೆ ಗುತ್ತಿಗೆ ಮೊತ್ತ ಪಾವತಿಸಿ ಒಂದೂವರೆ ವರ್ಷವಾದರೂ ನೋಂದಣಿ ಮಾಡಿಸಿಕೊಳ್ಳಲು ಬಿಬಿಎಂಪಿ ನಿರ್ಲಕ್ಷ್ಯ ವಹಿಸಿದೆ.

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 2ನೇ ಬ್ಲಾಕ್‌ನಲ್ಲಿ ಬಿಡಿಎ ಹಂಚಿಕೆ ಮಾಡಿದ್ದ ಸಿಎ ನಿವೇಶನಕ್ಕಾಗಿ ₹1.71 ಕೋಟಿಯನ್ನು ಬಿಬಿಎಂಪಿ 2024ರ ಜನವರಿ 17ರಂದು ಪಾವತಿಸಿದೆ. ಆದರೆ, ಬಿಬಿಎಂಪಿ ರಾಜರಾಜೇಶ್ವರಿ ನಗರ ವಲಯದ ಅಧಿಕಾರಿಗಳು ಈ ನಿವೇಶನ ನೋಂದಣಿ ಬಗ್ಗೆ ಈವರೆಗೂ ಕ್ರಮಕೈಗೊಂಡಿಲ್ಲ.

ಸಿಎ ನಿವೇಶನವನ್ನು 2011ರ ಜನವರಿ 6ರಂದು ಬಿಬಿಎಂಪಿಗೆ ಹಂಚಿಕೆ ಮಾಡಿ, ಬಿಡಿಎ ಪತ್ರವನ್ನು ನೀಡಿತ್ತು. ಇದಾಗಿ 11 ವರ್ಷವಾದರೂ ಬಿಬಿಎಂಪಿ ಕ್ರಮ ಕೈಗೊಂಡಿರಲಿಲ್ಲ. ಈ ಬಗ್ಗೆ 'ಪ್ರಜಾವಾಣಿ'ಯಲ್ಲಿ 2022ರ ಅಕ್ಟೋಬರ್ 7ರಂದು 'ಬಿಬಿಎಂಪಿ ಮರೆತ ಆಸ್ಪತ್ರೆ ನಿವೇಶನ' ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು. ಇದಾದ ನಂತರ ಪ್ರಕ್ರಿಯೆ ಆರಂಭಿಸಿದ ಬಿಬಿಎಂಪಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಧ್ಯಪ್ರವೇಶದ ನಂತರ 2024ರಲ್ಲಿ ಗುತ್ತಿಗೆ ಹಣ ಪಾವತಿಸಿತ್ತು.

ಮುಖ್ಯಾಂಶಗಳು

- ಹಂಚಿಕೆಯಾದ 13 ವರ್ಷದ ನಂತರ ಗುತ್ತಿಗೆ ಹಣ ಪಾವತಿ
- ರಾಜರಾಜೇಶ್ವರಿ ನಗರ ವಲಯ ಅಧಿಕಾರಿಗಳಿಂದ ಪ್ರಕ್ರಿಯೆ ವಿಳಂಬ
- ಖಾಸಗಿ ಆಸ್ಪತ್ರೆಗಳ ಒತ್ತಡದಿಂದ ನಿಧಾನಗತಿ: ಆರೋಪ

3,432 ಚದರ ಮೀಟರ್
ಅಳತೆಯ ಸಿಎ ನಿವೇಶನ

₹31.11 ಲಕ್ಷ
ವಾರ್ಷಿಕ ಗುತ್ತಿಗೆ ಮೊತ್ತ

ಗುತ್ತಿಗೆ ಮೊತ್ತ ಪಾವತಿಸಿ ಒಂದೂವರೆ ವರ್ಷವಾದರೂ ನೋಂದಣಿ ಪ್ರಕ್ರಿಯೆಯನ್ನು ರಾಜರಾಜೇಶ್ವರಿ ನಗರ ವಲಯ ಆಯುಕ್ತರು, ಜಂಟಿ ಆಯುಕ್ತರು ನಡೆಸಿಲ್ಲ.

ಖಾಸಗಿ ಒತ್ತಡಕ್ಕೆ ಮಣೆ: 'ಕೆಂಗೇರಿ ಭಾಗದಲ್ಲಿ ಮಲ್ಟಿ ಸ್ಪೆಷಾಲಿಟಿ, ಹೆರಿಗೆ ಆಸ್ಪತ್ರೆಯ ಕೊರತೆ ಇದೆ. ಸುಮಾರು ಒಂದು ಎಕರೆ ನಿವೇಶನವಿದ್ದರೂ ಅದನ್ನು ನೋಂದಾಯಿಸಿಕೊಳ್ಳುತ್ತಿಲ್ಲ. ಖಾಸಗಿ ಆಸ್ಪತ್ರೆಗಳಿಗೆ ಮಣೆ ಹಾಕಿರುವ ಬಿಬಿಎಂಪಿ ಅಧಿಕಾರಿಗಳು, ಆಸ್ಪತ್ರೆ ನಿರ್ಮಾಣ ಪ್ರಕ್ರಿಯೆಯನ್ನು ಬೇಕೆಂದೇ ವಿಳಂಬ ಮಾಡುತ್ತಿದ್ದಾರೆ' ಎಂದು ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆಯ ಶಿವಕುಮಾರ್ ದೂರಿದರು.

ಬಿಡಿಎ ಹಂಚಿಕೆ ಮಾಡಿರುವ ನಿವೇಶನಕ್ಕೆ ಬಿಬಿಎಂಪಿ ಗುತ್ತಿಗೆ ಹಣ ಪಾವತಿಸಲು ಅಧಿಕಾರಿಗಳು ಹಾಗೂ ಉಪ ಮುಖ್ಯಮಂತ್ರಿಯವರಿಗೆ ಶಾಸಕ ಎಸ್.ಟಿ. ಸೋಮಶೇಖರ್ ಪತ್ರ ಬರೆದು ಒತ್ತಡ ಹಾಕಿದ್ದರು. ಈಗ ನಿವೇಶನವನ್ನು ನೋಂದಣಿ ಮಾಡಿಕೊಳ್ಳಿ ಎಂದು ಅಧಿಕಾರಿಗಳಿಗೆ ಹೇಳುತ್ತಲೇ ಇದ್ದಾರೆ. ಆದರೆ, ಅಧಿಕಾರಿಗಳು ನೋಂದಣಿ ಪ್ರಕ್ರಿಯೆಯನ್ನು ಆರಂಭಿಸಿಲ್ಲ.

'ಆಸ್ಪತ್ರೆಗಳು ಆರೋಗ್ಯ ಇಲಾಖೆಗೆ'

'ನಿವೇಶನ ನೋಂದಣಿ ಪ್ರಕ್ರಿಯೆಗಳನ್ನು ಆಯಾ ವಲಯ ಅಧಿಕಾರಿಗಳೇ ಪೂರ್ಣಗೊಳಿಸಬೇಕು. ಬಿಬಿಎಂಪಿ ವಶಕ್ಕೆ ನಿವೇಶನ ಬಂದ ಮೇಲೆ ಅದನ್ನು ಆರೋಗ್ಯ ವಿಭಾಗಕ್ಕೆ ತೆಗೆದುಕೊಂಡು ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುತ್ತದೆ. ಈ ನಡುವೆ, ಬಿಬಿಎಂಪಿ ನಿರ್ಮಿಸಿರುವ ಎಲ್ಲ ಬೃಹತ್ ಆಸ್ಪತ್ರೆಗಳನ್ನು ಆರೋಗ್ಯ ಇಲಾಖೆಗೆ ಹಸ್ತಾಂತರಿಸುವ ಪ್ರಸ್ತಾವವಿದೆ. ವೈದ್ಯರು ಹಾಗೂ ಸಿಬ್ಬಂದಿ ಕೊರತೆಯಿಂದ ಹಲವು ಬೃಹತ್ ಆಸ್ಪತ್ರೆಗಳಲ್ಲಿ ಸೌಲಭ್ಯ ನೀಡಲಾಗುತ್ತಿಲ್ಲ. ಹೀಗಾಗಿ, ಆರೋಗ್ಯ ಇಲಾಖೆಗೆ ಹಸ್ತಾಂತರಿಸಲು ತೀರ್ಮಾನಿಸಿದ್ದು, ಸರ್ಕಾರ ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಿದೆ' ಎಂದು ಬಿಬಿಎಂಪಿ ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಶ್ ಕಿಶೋರ್ ತಿಳಿಸಿದರು.



ಬಿಡಿಎ ಸರ್ ಎಂ. ವಿಶ್ವೇಶ್ವರಯ್ಯ 2ನೇ ಬ್ಲಾಕ್ ಬಡಾವಣೆಯಲ್ಲಿ ಬಿಬಿಎಂಪಿಗೆ ಆಸ್ಪತ್ರೆಗಾಗಿ ಹಂಚಿಕೆಯಾಗಿರುವ ಸಿಎ ನಿವೇಶನ

ಶುಲ್ಕ ಕಟ್ಟಲು ಅನುಮತಿ: ಸತೀಶ್

'ಬಿಡಿಎ ಹಂಚಿಕೆ ಮಾಡಿರುವ ಸಿಎ ನಿವೇಶನದ ಬಗ್ಗೆ ನಮಗೆ ಮಾಹಿತಿ ಇರಲಿಲ್ಲ. ಶಾಸಕ ಎಸ್.ಟಿ. ಸೋಮಶೇಖರ್ ಅವರು ಇತ್ತೀಚಿನ ಸಭೆಯೊಂದರಲ್ಲಿ ಈ ಬಗ್ಗೆ ಗಮನ ಸೆಳೆದಿದ್ದರು. ಈ ವಿಷಯದ ಬಗ್ಗೆ ಪರಿಶೀಲಿಸಲಾಗಿದೆ. ಆಸ್ಪತ್ರೆ ನಿವೇಶನದ ನೋಂದಣಿಗೆ, ನೋಂದಣಿ ಶುಲ್ಕ ಹಾಗೂ ಇತರೆ ವೆಚ್ಚಗಳನ್ನು ಯಾವ 'ಲೆಕ್ಕ ಶೀರ್ಷಿಕೆ'ಯಿಂದ ನೀಡಬೇಕೆಂಬ ಗೊಂದಲವಿತ್ತು. ಅದನ್ನು ಪರಿಹರಿಸಿ, ವೆಚ್ಚ ಭರಿಸಲು ಕಳೆದ ವಾರ ಅನುಮತಿ ನೀಡಲಾಗಿದೆ. ಜಂಟಿ ಆಯುಕ್ತರು ಹಾಗೂ ಸಹಾಯಕ ಕಂದಾಯ ಅಧಿಕಾರಿಗಳು ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ' ಎಂದು ಬಿಬಿಎಂಪಿ ರಾಜರಾಜೇಶ್ವರಿ ನಗರ ವಲಯದ ಆಯುಕ್ತ ಸತೀಶ್ ಮಾಹಿತಿ ನೀಡಿದರು. ರಾಜರಾಜೇಶ್ವರಿ ನಗರದ ಜಂಟಿ ಆಯುಕ್ತರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ಜಯನಗರ ಸುತ್ತಮುತ್ತ ಇಂದು ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಮ್ಹಾನ್ಸ್, ಜಯದೇವ ಆಸ್ಪತ್ರೆ, ಪದ್ಮನಾಭನಗರ ವಿದ್ಯುತ್ ಉಪ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಡೆಯುತ್ತಿರುವ ಕಾರಣ ಶನಿವಾರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ಜಯನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.



ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ನಿಮ್ಹಾನ್ಸ್, ಕಿದ್ವಾಯಿ, ರಾಜೀವ್ ಗಾಂಧಿ, ಸಂಜಯ್ ಗಾಂಧಿ, ಇಂದಿರಾ ಗಾಂಧಿ ಆಸ್ಪತ್ರೆಗಳ ಸುತ್ತಮುತ್ತ, ಜಯನಗರ 1, 2, 3, 4 ಮತ್ತು 9ನೇ ಟಿ ಬ್ಲಾಕ್, ಸೋಮೇಶ್ವರ ನಗರ, ವಿಲ್ಸನ್ ಗಾರ್ಡನ್, ಬನ್ನೇರುಘಟ್ಟ ರಸ್ತೆ, ಆರ್.ವಿ.ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳು. ಐಎಎಸ್ ಕಾಲೊನಿ, ಕೆಎಎಸ್ ಕಾಲೊನಿ, ಎನ್.ಎಸ್.ಪಾಳ್ಯ ಇಂಡಸ್ಟ್ರಿಯಲ್ ಏರಿಯಾ, ಜಾಹ್ನವಿ ಎನ್‌ಕ್ಲೇವ್, ಅನಂತ ಲೇಔಟ್, ಬಿಳೇಕಹಳ್ಳಿ ಮುಖ್ಯ ರಸ್ತೆ, ಜಯನಗರ ಈಸ್ಟ್ ಎಂಡ್, ಎಬಿಸಿಡಿ ರಸ್ತೆ, ಬಿಎಚ್‌ಇಎಲ್ ಲೇಔಟ್, ಎಸ್.ಆರ್. ಕೆ.ಗಾರ್ಡನ್, ಎನ್.ಎಲ್. ಲೇಔಟ್, ತಿಲಕ್ ನಗರ, ಶಾಂತಿ ಪಾರ್ಕ್, ರಂಕ ಕಾಲೊನಿ ಸುತ್ತಮುತ್ತ ವಿದ್ಯುತ್ ಇರುವುದಿಲ್ಲ.

ಎನ್.ಎಸ್. ಪಾಳ್ಯ ಮುಖ್ಯ ರಸ್ತೆ, ಬಿಸ್ಮಿಲ್ಲಾ ನಗರ, ಶೋಭಾ ಅಪಾರ್ಟ್‌ಮೆಂಟ್, ದಿವ್ಯಶ್ರೀ ಟವರ್ಸ್, ವೆಗಾಸಿಟಿ ಮಾಲ್, ಕೆಇಬಿ ಕಾಲೊನಿ, ಗುರಪ್ಪನ ಪಾಳ್ಯ, ಬಿಟಿಎಂ ಮೊದಲನೇ ಹಂತ, ಬನಗಿರಿನಗರ, ಪಾಪಯ್ಯ ಗಾರ್ಡನ್, ಬಾಲಾಜಿ ಕಲ್ಯಾಣ ಮಂಟಪ, ಸಿದ್ದಮ್ಮ ಮತ್ತು ಸಿದ್ದಯ್ಯ ರೆಡ್ಡಿ ಏರಿಯಾ, 30ನೇ ಮೇನ್, 30ನೇ ಕ್ರಾಸ್, ಬಿ.ಎನ್.ಎಂ. ಕಾಲೇಜು, ಬಿ.ಡಿ.ಎ. ಕಾಂಪ್ಲೆಕ್ಸ್, ದೇವಗಿರಿ ದೇವಸ್ಥಾನ, ಬಿಎಸ್‌ಎನ್‌ಎಲ್ ಕಚೇರಿ ಬನಶಂಕರಿ 2ನೇ ಹಂತ, ಎಸ್.ಎಲ್.ವಿ ಹೋಟೆಲ್ ನಿಂದ 24ನೇ ಕ್ರಾಸ್‌ವರೆಗೆ, ಉಪಹಾರ ಹೋಟೆಲ್, ಚನ್ನಮ್ಮನಕೆರೆ ಅಚ್ಚುಕಟ್ಟು, ಮಂಜುನಾಥ ಕಾಲೊನಿ, ಬಿಎಂಟಿಸಿ ಡಿಪೊ, ರಾಜೀವ್ ನಗರ, ಸಿಂಡಿಕೇಟ್ ಬ್ಯಾಂಕ್ ಕಾಲೊನಿ, ಪದ್ಮನಾಭನಗರ, ರಾಘವೇಂದ್ರ ಲೇಔಟ್, 18ನೇ ಮುಖ್ಯರಸ್ತೆ ಟೆಲಿಫೋನ್ ಎಕ್ಸ್‌ಚೇಂಜ್, ಕಿಡ್ನಿ ಫೌಂಡೇಷನ್, ಮಹಾರಾಜ ಆಸ್ಪತ್ರೆ, ಲಕ್ಷ್ಮೀಕಾಂತ ಕಲ್ಯಾಣ ಮಂಟಪ, ಪುಟ್ಟಲಿಂಗಯ್ಯ ರಸ್ತೆ, ಪದ್ಮನಾಭನಗರ, ಶ್ರವಂತಿ ಅಪಾರ್ಟ್‌ಮೆಂಟ್, ಆರ್.ಕೆ. ಲೇಔಟ್, ಕದಿರೇನಹಳ್ಳಿ, ಯಾರಬ್ ನಗರ, 9ನೇ ಮುಖ್ಯರಸ್ತೆ, ಮಾನೊ ಟೈಪ್, ಟೀಚರ್ಸ್ ಕಾಲೊನಿ, ಕಾವೇರಿ ನಗರ, ಡಾ.ಅಂಬೇಡ್ಕರ್ ನಗರ, ಎಂ.ಎಂ.ಇಂಡಸ್ಟ್ರಿಯಲ್ ಏರಿಯಾ, ಅಂಚೆ ಕಚೇರಿ, ಉಮಾ ಮಹೇಶ್ವರಿ ದೇವಸ್ಥಾನ, 15ರಿಂದ 17ನೇ 'ಡಿ' ಕ್ರಾಸ್‌ವರೆಗೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್- ಕೈಮಗ್ಗ ನಿಗಮ ವಿಲೀನ: ಚಿಂತನೆ

ಕೈಮಗ್ಗ ಮತ್ತು ಜವಳಿ ಖಾತೆ ಸಚಿವ ಶಿವಾನಂದ ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮ ಹಾಗೂ ಕೈಮಗ್ಗ ಅಭಿವೃದ್ಧಿ ನಿಗಮ ಎರಡನ್ನೂ ವಿಲೀನಗೊಳಿಸಿ ಒಂದೇ ನಿಗಮ ಸ್ಥಾಪಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಕೈಮಗ್ಗ ಮತ್ತು ಜವಳಿ ಖಾತೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಚರಕ ಮತ್ತು ದೇಸಿ ಟ್ರಸ್ಟ್ ಸಂಯುಕ್ತವಾಗಿ ಸಮಗತಾ ಸಭಾಂಗಣದಲ್ಲಿ ಆಯೋಜಿಸಿರುವ ಎರಡು ದಿನಗಳ 'ಕೊಡು-ಕೊಳ್ಳುವವರ ಸಮಾವೇಶ'ವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು. ನೇಕಾರ ಸಮುದಾಯ ತೀವ್ರ ಸಂಕಷ್ಟದಲ್ಲಿದೆ. ಎರಡರೆಡು ನಿಗಮಗಳಿಂದ ನೇಕಾರರ ಸಮಸ್ಯೆಗಳಿಗೆ ಸ್ಪಂದಿಸಲು ಸಾಧ್ಯವಾಗದಿರುವುದು ಮನಗಂಡು ಸರ್ಕಾರ ಈ ತೀರ್ಮಾನಕ್ಕೆ ಬಂದಿದೆ ಎಂದರು.

'ಕೈಮಗ್ಗದ ಬಟ್ಟೆಗಳನ್ನು ಸರ್ಕಾರದ ಇಲಾಖೆಗಳು ಖರೀದಿಸಬೇಕೆಂಬ ನಿಯಮ ಇದೆ. ಆದರೆ, ಕೆಲ ಅಧಿಕಾರಿಗಳ ಹಾಗೂ ಸಚಿವರ ಇಚ್ಛಾಶಕ್ತಿಯ ಕೊರತೆಯಿಂದ ಇದಕ್ಕೆ ಚಾಲನೆ ಸಿಕ್ಕಿಲ್ಲ. ಅವರಿಗೆ ಮನವರಿಕೆ ಮಾಡಿಕೊಡುವ ಕೆಲಸ ನಡೆದಿದೆ' ಎಂದರು.

ಕೈಮಗ್ಗ ಮತ್ತು ಜವಳಿ ಇಲಾಖೆ ಅಭಿವೃದ್ಧಿ ಆಯುಕ್ತೆ ಕೆ. ಜ್ಯೋತಿ ಮಾತನಾಡಿ, 'ಸರ್ಕಾರ 'ಮಹಾತ್ಮ ಗಾಂಧಿ ವಸ್ತ್ರೋದ್ಯಮ' ಯೋಜನೆ ರೂಪಿಸಿದ್ದು, ಇದರಲ್ಲಿ ಕೈಮಗ್ಗ ನೇಕಾರರನ್ನೇ ಷೇರುದಾರರನ್ನಾಗಿ ಮಾಡಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಚರಕ ಸಂಸ್ಥೆ ಸಂಸ್ಥಾಪಕ ಪ್ರಸನ್ನ, ನಬಾರ್ಡ್ ಮುಖ್ಯ ಪ್ರಧಾನ ವ್ಯವಸ್ಥಾಪಕ ಸುರೇಂದ್ರ ಬಾಬು ಮಾತನಾಡಿದರು. ಕೈಮಗ್ಗ ಮತ್ತು ಜವಳಿ ಇಲಾಖೆ ನಿವೃತ್ತ ಆಯುಕ್ತ ಬಿ.ಎಫ್. ಪಾಟೀಲ್, ನೇಕಾರ ಸೇವಾ ಕೇಂದ್ರದ ಮುಖ್ಯಸ್ಥ ಪ್ರಭಾಕರ್, ಚರಕ ಸಂಸ್ಥೆ ಅಧ್ಯಕ್ಷೆ ಮಹಾಲಕ್ಷ್ಮಿ, ಡಿಕನಿ ಡೈರಿಯ ಗೋಪಿ, ದೇಸಿ ಟ್ರಸ್ಟ್‌ನ ಶಾರದಾ ಮತ್ತಿತರರು ಉಪಸ್ಥಿತರಿದ್ದರು.



ಚರಕ ಸಂಸ್ಥೆ ಮತ್ತು ದೇಸಿ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿದ್ದ 'ಕೊಡು–ಕೊಳ್ಳುವರ' ಸಮಾವೇಶದಲ್ಲಿ ಪ್ರಸನ್ನ, ಸುರೇಂದ್ರ ಬಾಬು ಮತ್ತು ಶಿವಾನಂದ ಪಾಟೀಲ ಕೈಮಗ್ಗದ ಬಟ್ಟೆಗಳನ್ನು ವೀಕ್ಷಿಸಿದರು —ಪ್ರಜಾವಾಣಿ ಚಿತ್ರ

ಮಂತ್ರಾಲಯ ಮಠದ ಸುಬುದೇಂದ್ರ ತೀರ್ಥ ಸ್ವಾಮೀಜಿ

'ಸನಾತನ ಸಂಸ್ಕೃತಿ ವಿಶ್ವದಲ್ಲೇ ಶ್ರೇಷ್ಠ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ಸನಾತನ ಸಂಸ್ಕೃತಿ ವಿಶ್ವದ ಶ್ರೇಷ್ಠ ಸಂಸ್ಕೃತಿಯಾಗಿದೆ. ನಮ್ಮ ಧರ್ಮದಲ್ಲಿ ಮಹಿಳೆಯರಿಗೆ ವಿಶೇಷ ಮಾನ್ಯತೆ ನೀಡಲಾಗಿದೆ' ಎಂದು ಮಂತ್ರಾಲಯ ಮಠದ ಸುಬುದೇಂದ್ರ ತೀರ್ಥ ಸ್ವಾಮೀಜಿ ಹೇಳಿದರು.

ರಕ್ಷಾ ಫೌಂಡೇಷನ್ ವತಿಯಿಂದ ಜಯನಗರದಲ್ಲಿ ಆಯೋಜಿಸಲಾಗಿದ್ದ ಲಲಿತಾ ಸಹಸ್ರನಾಮ ಪೂಜೆ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಸನಾತನ ಹಿಂದೂ ಪರಂಪರೆಯಲ್ಲಿ ಮಹಿಳೆಯರಿಗೆ ದೇವಸ್ಥಾನ ಪ್ರವೇಶ, ಪೂಜೆ ಮಾಡುವ ಹಕ್ಕು ನೀಡಿದೆ. ಲಲಿತಾ ಸಹಸ್ರನಾಮ ಪೂಜಾ ಕಾರ್ಯಕ್ರಮವನ್ನು ರಕ್ಷಾ ಫೌಂಡೇಷನ್ ಪ್ರತಿ ವರ್ಷ ಆಚರಿಸುತ್ತಿದೆ. ವೇದಗಳಲ್ಲಿ ಶ್ರೀಲಲಿತಾ ಸಹಸ್ರನಾಮ ವಿಶೇಷತೆ, ಮಹಿಮೆ, ಉಪಾಸನೆ ಕುರಿತು ತಿಳಿಸಲಾಗಿದೆ. ಲಲಿತಾ ಎಂದರೆ ಸರಳ, ಮಕ್ಕಳಿಗೆ ತಾಯಿಯ ಅನುಗ್ರಹ, ಪ್ರೀತಿ ಗಳಿಸುವುದು ಸರಳ. ಸಮಸ್ತ ಲೋಕಕ್ಕೆ ಮಾತೃಸ್ವರೂಪಿಣಿ ಆದ ಲಲಿತಾದೇವಿಯ ಸಹಸ್ರನಾಮದಿಂದ ಸಕಲ ಸಂಕಷ್ಟಗಳು ನಿವಾರಣೆ ಆಗುತ್ತದೆ' ಎಂದು ಹೇಳಿದರು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್ ಮಾತನಾಡಿ, 'ಲಲಿತಾ ಸಹಸ್ರನಾಮ, ಲಲಿತಾಂಬೆ ಪೂಜೆ ಮಾಡುವುದರಿಂದ ಸಂಕಷ್ಟಗಳು ನಿವಾರಣೆಯಾಗುತ್ತವೆ ಎಂಬ ಉಲ್ಲೇಖ ಪುರಾಣಗಳಲ್ಲಿ ಇದೆ' ಎಂದು ಹೇಳಿದರು.

ಶಾಸಕ ಸಿ.ಕೆ.ರಾಮಮೂರ್ತಿ ಮಾತನಾಡಿ, 'ರೈತ ಮತ್ತು ಸೈನಿಕ ದೇಶಕ್ಕೆ ಎರಡು ಕಣ್ಣುಗಳು ಇದ್ದಂತೆ. ದೇಶ, ರಾಜ್ಯ ಸುಭೀಕ್ಷೆಯಾಗಿರಬೇಕು ಮತ್ತು ನಾಡಿನ ಸಮಸ್ತ ಜನರು ಸುಖ, ಶಾಂತಿ ನೆಮ್ಮದಿಯಿಂದ ಬಾಳಬೇಕು ಎಂದು ಲೋಕಕಲ್ಯಾಣಾರ್ಥಕ್ಕಾಗಿ ಲಲಿತಾ ಸಹಸ್ರನಾಮ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಐದು ಸಾವಿರ ಮಹಿಳೆಯರು ಭಾಗವಹಿಸಿದ್ದಾರೆ' ಎಂದು ತಿಳಿಸಿದರು.

ಚಲನಚಿತ್ರ ನಟಿ ಮಾಳವಿಕಾ ಅವಿನಾಶ್, ತಿರುಪತಿ ತಿರುಮಲ ದೇವಸ್ಥಾನ ಟ್ರಸ್ಟ್ ಸದಸ್ಯ ನರೇಶ್ ಕುಮಾರ್, ಪಾಲಿಕೆ ಮಾಜಿ ಸದಸ್ಯ ಸೋಮಶೇಖರ್, ಮಾಲತಿ ಸೋಮಶೇಖರ್, ರಮೇಶ್, ಧನರಾಜ್, ಗೋವಿಂದನಾಯ್ಡು, ಚಂದ್ರಶೇಖರ ರಾಜು, ದೀಪಿಕಾ ಮಂಜುನಾಥ್ ರೆಡ್ಡಿ, ಚನ್ನಗಿರಿಯಪ್ಪ ಭಾಗವಹಿಸಿದ್ದರು.



ಸುಬುದೇಂದ್ರ ತೀರ್ಥ ಸ್ವಾಮೀಜಿ ಲಲಿತಾ ಸಹಸ್ರನಾಮ ಪೂಜೆಗೆ ಚಾಲನೆ ನೀಡಿದರು. ಬಿ. ಸೋಮಶೇಖರ್, ಸಿ.ಕೆ. ರಾಮಮೂರ್ತಿ ಉಪಸ್ಥಿತರಿದ್ದರು

ಘಾಟಿ–ಈಶಾ: ಪ್ಯಾಕೇಜ್ ಪ್ರವಾಸಕ್ಕೆ ಚಾಲನೆ

ಬಿಎಂಟಿಸಿ ವೇಗದೂತ ಬಸ್ ಸಂಚಾರಕ್ಕೆ ಹಸಿರು ನಿಶಾನೆ ತೋರಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ವೇಗದೂತ ಬಸ್ ಸಂಚಾರಕ್ಕೆ, ಘಾಟಿ–ಈಶಾ ಫೌಂಡೇಷನ್ ಪ್ಯಾಕೇಜ್ ಪ್ರವಾಸ ಯೋಜನೆಗೆ ಸಚಿವ ರಾಮಲಿಂಗಾರೆಡ್ಡಿ ಶುಕ್ರವಾರ ಚಾಲನೆ ನೀಡಿದರು. ಅಪಘಾತದಲ್ಲಿ ಮೃತಪಟ್ಟ ಬಿಎಂಟಿಸಿ ನೌಕರರ ಕುಟುಂಬಕ್ಕೆ ನಿಗಮದಿಂದ ತಲಾ ₹50 ಲಕ್ಷ ಮತ್ತು ವಿಮಾ ಮೊತ್ತ, ಅನಾರೋಗ್ಯದಿಂದ ಮೃತಪಟ್ಟ ನೌಕರರ ಕುಟುಂಬಕ್ಕೆ ತಲಾ ₹10 ಲಕ್ಷ ವಿತರಿಸಲಾಯಿತು

ಕೆಂಪೇಗೌಡ ಬಸ್ ನಿಲ್ದಾಣದಿಂದ ಅತ್ತಿಬೆಲೆ, ಬನಶಂಕರಿ ಟಿಟಿಎಂಸಿಯಿಂದ ಅತ್ತಿಬೆಲೆ, ಕೆಂಪೇಗೌಡ ಬಸ್ ನಿಲ್ದಾಣದಿಂದ ದೇವನಹಳ್ಳಿ, ಬನಶಂಕರಿ ಟಿಟಿಎಂಸಿಯಿಂದ ಹಾರೋಹಳ್ಳಿ, ಕೆಂಪೇಗೌಡ ಬಸ್ ನಿಲ್ದಾಣದಿಂದ ನೆಲಮಂಗಲಕ್ಕೆ ಸೀಮಿತ ನಿಲುಗಡೆಯ ವೇಗದೂತ ಬಸ್‌ಗಳು ಸಂಚರಿಸಲಿವೆ ಎಂದು ಸಚಿವರು ತಿಳಿಸಿದರು.

ವೇಗದೂತ ಸಾಮಾನ್ಯ ಸೇವೆಗಳ ಮಾಸಿಕ ಪಾಸುಗಳನ್ನು ಟುಮ್ಯಾಕ್ ಅಪ್ಲಿಕೇಶನ್ ಮೂಲಕ ಡಿಜಿಟಲ್ ಮಾದರಿಯಲ್ಲಿ ವಿತರಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರು-ಈಶಾ ಫೌಂಡೇಷನ್ ವಿಶೇಷ ಪ್ರವಾಸವು ಈಗಾಗಲೇ ಜನಪ್ರಿಯಗೊಂಡಿದೆ. ಪ್ರಯಾಣಿಕರ ಒತ್ತಾಸೆಯಂತೆ ಹೆಚ್ಚುವರಿಯಾಗಿ 'ಘಾಟಿ ಈಶಾ ಫೌಂಡೇಷನ್' ಪ್ರವಾಸ ಪ್ಯಾಕೇಜ್ ರೂಪಿಸಲಾಗಿದೆ. ಜೂನ್ 21ರಂದು ಆರಂಭವಾಗಲಿದೆ ಎಂದು ಮಾಹಿತಿ ನೀಡಿದರು.

ಬೈಕ್ ಅಪಘಾತಗಳಲ್ಲಿ ಮೃತಪಟ್ಟ ಬಿಎಂಟಿಸಿಯ ಶ್ರೀನಿವಾಸ್, ಶಶಿಧರ್, ಅವರ ಕುಟುಂಬದ ಸದಸ್ಯರಿಗೆ ಕೆನರಾ ಬ್ಯಾಂಕ್ ವಿಮೆ ತಲಾ ₹1 ಕೋಟಿ, ಸಂಸ್ಥೆ ವತಿಯಿಂದ ₹50 ಲಕ್ಷ, ವಿ. ಬಾಲಕೃಷ್ಣ ಅವರಿಗೆ ವಿಮೆ ₹50 ಲಕ್ಷ, ಸಂಸ್ಥೆಯಿಂದ ₹50 ಲಕ್ಷ ವಿತರಿಸಲಾಯಿತು. ಆರೋಗ್ಯ ಸಮಸ್ಯೆಯಿಂದ ಮೃತಪಟ್ಟ 9 ನೌಕರರ ಕುಟುಂಬಕ್ಕೆ ತಲಾ ₹10 ಲಕ್ಷದ ಚೆಕ್ ವಿತರಿಸಲಾಯಿತು. ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್., ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ನಿರ್ದೇಶಕರಾದ ಅಬ್ದುಲ್ ಅಹದ್, ಶಿಲ್ಪಾ ಎಂ, ಕೆನರಾ ಬ್ಯಾಂಕ್ ಉಪಮಹಾಪ್ರಬಂಧಕಿ ಕೆ.ಕಾಳಿ ಉಪಸ್ಥಿತರಿದ್ದರು.

ಪ್ರಶಂಸನಾ ಪತ್ರ

ಬಿಎಂಟಿಸಿಯಲ್ಲಿ ಯುಪಿಐ ಆಧಾರಿತ ಪಾವತಿ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲು ಶ್ರಮಿಸಿದ ವಿವಿಧ ಘಟಕಗಳ ವ್ಯವಸ್ಥಾಪಕ ರಾದ ಸರಸ್ವತಿ ಆರ್, ಮಧುಸೂದನ್ ರೆಡ್ಡಿ ಜಿ.ಆರ್, ಮೊಹಮ್ಮದ್ ಅಕ್ಮಲ್ ಪಾಷ, ರಮೇಶ್ ಬಿ.ವೈ, ರವಿ ಚೌವ್ಹಾಣ, ಭೀಮಕುಮಾರ್ ಎಚ್, ಪ್ರಸನ್ನ ಡಿ.ಜಿ, ಮಲ್ಲಿಕಾರ್ಜುನಯ್ಯ ಪಿ.ಬಿ, ಅಣ್ಣಪ್ಪಯ್ಯ ಆಚಾರಿ, ಬಡ್ಡು ನಾಯಕ್, ಕಾಂತರಾಜು ಇ, ನಾಗೇಶ್, ಶ್ರೀನಿವಾಸ ಮೂರ್ತಿ ಅವರಿಗೆ ಪ್ರಶಂಸನಾ ಪತ್ರ ನೀಡಿ ಗೌರವಿಸಲಾಯಿತು.




ಬಿಎಂಟಿಸಿ ವೇಗದೂತ ಬಸ್ ಸಂಚಾರಕ್ಕೆ, ಘಾಟಿ–ಈಶಾ ಫೌಂಡೇಷನ್ ಪ್ಯಾಕೇಜ್ ಪ್ರವಾಸ ಯೋಜನೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಶುಕ್ರವಾರ ಚಾಲನೆ ನೀಡಿದರು ಪ್ರಜಾವಾಣಿ ಚಿತ್ರ

ದೇವೇಗೌಡರಿಗೆ ನಾಳೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್.ಡಿ. ದೇವೇಗೌಡ ಅಭಿನಂದನಾ ಸಮಿತಿಯು ಇದೇ ಭಾನುವಾರ (ಜೂನ್ 22) ಮಧ್ಯಾಹ್ನ 2 ಗಂಟೆಗೆ ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಅವರಿಗೆ 'ಶ್ರೀ ಗಂಗ ಸಾಮ್ರಾಟ ಶ್ರೀ ಪುರುಷ ಪ್ರಶಸ್ತಿ' ಹಾಗೂ 93 ಸಾಧಕರಿಗೆ 'ಎಚ್.ಡಿ. ದೇವೇಗೌಡ ಪ್ರಶಸ್ತಿ' ಪ್ರದಾನ ಸಮಾರಂಭವನ್ನು ಸುಮ್ಮನಹಳ್ಳಿ ಜಂಕ್ಷನ್ ಬಳಿ ಇರುವ ಡಾ. ಬಾಬು ಜಗಜೀವನ್ ರಾಮ್ ಭವನದಲ್ಲಿ ಹಮ್ಮಿಕೊಂಡಿದೆ.



ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಭಿನಂದನಾ ಸಮಿತಿ ಅಧ್ಯಕ್ಷ ಅ. ದೇವೇಗೌಡ, 'ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಬದುಕು ಮತ್ತು ಸಾಧನೆ' ಪುಸಕ್ತವನ್ನು ಇದೇ ಸಮಾರಂಭದಲ್ಲಿ ಬಿಡುಗಡೆ ಮಾಡಲಾಗುತ್ತದೆ. ವಿವಿಧ ಮಠಾಧೀಶರು ಸಮಾರಂಭದಲ್ಲಿ ಭಾಗವಹಿಸುತ್ತಾರೆ. ಪತ್ರಕರ್ತ ಸುಗತ ಶ್ರೀನಿವಾಸರಾಜು ಅವರು ಅಭಿನಂದನಾ ನುಡಿಗಳನ್ನಾಡುತ್ತಾರೆ. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರು ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ' ಎಂದು ತಿಳಿಸಿದರು.

'ದೇವೇಗೌಡ ಅವರ 93ನೇ ಜನ್ಮ ವರ್ಷಾಚರಣೆ ಪ್ರಯುಕ್ತ ಈ ಸಮಾರಂಭ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದರು.

ನಟನೆ ಅವಕಾಶ ಕೊಡುವುದಾಗಿ ₹22 ಲಕ್ಷ ವಂಚನೆ: ನಟ ಆರೋಪ

ಪ್ರಜಾವಾಣಿ ವಾರ್ತೆ

ಕೋಲಾರ: 'ಸಿನಿಮಾದಲ್ಲಿ ಅವಕಾಶ ಕೊಡುವುದಾಗಿ ಹೇಳಿ 9 ವರ್ಷಗಳ ಹಿಂದೆ ₹22 ಲಕ್ಷ ಪಡೆದಿದ್ದ ನಿರ್ದೇಶಕ ನಂದ ಕಿಶೋರ್ ಎಂಬುವರು ಈವರೆಗೆ ವಾಪಸ್ ಹಣವನ್ನೂ ಕೊಟ್ಟಿಲ್ಲ, ಅವಕಾಶವನ್ನೂ ನೀಡಿಲ್ಲ' ಎಂದು ಯುವ ನಟ ಶಬರೀಶ್ ಶೆಟ್ಟಿ ಆರೋಪಿಸಿದ್ದಾರೆ.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, '2016ರಲ್ಲಿ ನಂದಕಿಶೋರ್ ಜಿಮ್‌ವೊಂದರಲ್ಲಿ ಪರಿಚಯವಾದರು. ನಟನೆ ಅವಕಾಶ ನೀಡುವುದಾಗಿ ಹೇಳಿದ್ದರಿಂದ ಚಿನ್ನ ಅಡವಿಟ್ಟು ₹22ಲಕ್ಷ ನೀಡಿದ್ದೆ. ಆದರೆ, ಈಗ ನನಗೆ ವಂಚನೆಯಾಗಿದೆ' ಎಂದು ದೂರಿದ್ದಾರೆ.

'ನಾನು ಸುದೀಪ್ ಅಭಿಮಾನಿ. ಸೆಲೆಬ್ರಿಟಿ ಕ್ರಿಕೆಟ್ ಲೀಗ್ (ಸಿಸಿಎಲ್) ಟೂರ್ನಿಯ ಎರಡು ಋತುಗಳಲ್ಲಿ ಆಡಿದ್ದೆ. ಹಣ ಕೇಳಿದರೆ ಟೂರ್ನಿಯಿಂದ ಹೊರಹಾಕುವುದಾಗಿ ನಂದ ಕಿಶೋರ್ ಬೆದರಿಸುತ್ತಿದ್ದರು. ನನ್ನ ರಾಮಧೂತ ಸಿನಿಮಾ ಶೂಟಿಂಗ್ ಮುಗಿದಿದ್ದು, ಬಿಡುಗಡೆ ಮಾಡಲು ಹಣ ಇಲ್ಲವಾಗಿದೆ. ಕಾನೂನು ಮೊರೆ ಹೋಗುತ್ತೇನೆ. ಫಿಲ್ಮ್ ಚೇಂಬರ್‌ಗೂ ದೂರು ನೀಡುತ್ತೇನೆ' ಎಂದಿದ್ದಾರೆ.

'ಬಿಜಿಎಸ್ ಎಂಸಿಎಚ್' ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಉದ್ಘಾಟಿಸಿದ ಅಮಿತ್ ಶಾ ಮೆಚ್ಚುಗೆ

ಅಧ್ಯಾತ್ಮ ಪರಂಪರೆಯ ಆದಿಚುಂಚನಗಿರಿ ಮಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ನ, ಅಕ್ಷರ, ಆರೋಗ್ಯ, ಆಶ್ರಯ, ಅರಣ್ಯ, ಆರಕ್ಷಣ, ಅಧ್ಯಾತ್ಮ, ಅನುಕಂಪ, ಅನುಬಂಧ ಎಂಬ ಒಂಬತ್ತು ಅಂಶಗಳಿಗೆ ಒತ್ತು ನೀಡಿ ಜನಸಾಮಾನ್ಯರಿಗೆ ಆದಿಚುಂಚನಗಿರಿ ಮಠ ಸೇವೆ ನೀಡುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮೆಚ್ಚುಗೆ ವ್ಯಕ್ತಪಡಿಸಿದರು.

ಆದಿಚುಂಚನಗಿರಿ ವಿಶ್ವವಿದ್ಯಾಲಯ ನಗರೂರಿನಲ್ಲಿ ಆರಂಭಿಸಿರುವ 'ಬಿಜಿಎಸ್ ಎಂಸಿಎಚ್' ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಸೇವೆ, ಶಿಕ್ಷಣ ಮತ್ತು ಸಮರ್ಪಣೆಯ ಮೂಲಕ ಭಾರತದ ಅಧ್ಯಾತ್ಮ ಪರಂಪರೆಯನ್ನು ಆದಿಚುಂಚನಗಿರಿ ಮಠ ಎತ್ತಿ ಹಿಡಿದಿದೆ. ಬಹುಜನ ಹಿತಾಯ, ಬಹುಜನ ಸುಖಾಯ ಎಂದು ಕೆಲಸ ಮಾಡುವುದೇ ನಮ್ಮ ಸಂಸ್ಕೃತಿಯ ಮೂಲ. ಬಡವರು ಮತ್ತು ಮಧ್ಯಮ ವರ್ಗಕ್ಕೆ ಕೈಗೆಟಕುವ ದರದಲ್ಲಿ ಆರೋಗ್ಯ ಸೇವೆಯನ್ನು ನೀಡುತ್ತಿದೆ. ಅಧ್ಯಾತ್ಮ ಮತ್ತು ಕರ್ಮಯೋಗದ ಮೂಲಕ ಒಗ್ಗಟ್ಟು ಮೂಡಿಸುತ್ತಿದೆ' ಎಂದು ಹೇಳಿದರು.

ಮುಖ್ಯಾಂಶಗಳು

- ಬಿಜಿಎಸ್ ಎಂಸಿಎಚ್ 630 ಹಾಸಿಗೆಯಿಂದ 930 ಹಾಸಿಗೆಗೆ ವಿಸ್ತರಣೆ
- ಸಂಪೂರ್ಣ ಸೂಪರ್ ಸ್ಪೆಷಾಲಿಟಿ ಸೇವೆ
- ಗ್ರಾಮೀಣ ಪರಿಸರದಲ್ಲಿ ಆರೋಗ್ಯ ತಪಾಸಣೆ, ಚಿಕಿತ್ಸೆ ಉಚಿತ

ರೋಗ ಬರುವುದು ಸಹಜ. ಭಾರತೀಯರಿಗೆ ಆರೋಗ್ಯ ವೆಚ್ಚವನ್ನು ಭರಿಸುವುದೇ ದೊಡ್ಡ ಸಮಸ್ಯೆ ಆಗಿತ್ತು. ಆಯುಷ್ಮಾನ್ ಭಾರತ್ ಮೂಲಕ ₹5 ಲಕ್ಷದವರೆಗೆ ಜನರು ಉಚಿತವಾಗಿ ಆರೋಗ್ಯ ಸೇವೆ ಪಡೆಯಲು ಕೇಂದ್ರ ಸರ್ಕಾರ ಯೋಜನೆ ರೂಪಿಸಿತ್ತು. 60 ಕೋಟಿ ಜನ ಇದರ ಫಲಾನುಭವಿಗಳಾಗಿದ್ದಾರೆ ಎಂದು ತಿಳಿಸಿದರು.

ಮಿಷನ್ ಇಂದ್ರಧನುಷ್, ಪೋಷಣ್ ಅಭಿಯಾನ ಇನ್ನಿತರ ಯೋಜನೆಗಳ ಮೂಲಕ ಮಕ್ಕಳು ಮತ್ತು ತಾಯಂದಿರ ಆರೋಗ್ಯ ಕಾಪಾಡಲು ಬೇಕಾದ ಲಸಿಕೆ, ಪೌಷ್ಟಿಕಾಂಶ ನೀಡುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಕಡಿಮೆ ಬೆಲೆಯಲ್ಲಿ ಔಷಧ ಪಡೆಯಲು ಪ್ರಧಾನಮಂತ್ರಿ ಜನೌಷಧ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ವಿವರಿಸಿದರು.

ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, 'ಇದು ಕೇವಲ ಕಟ್ಟಡ ಕಟ್ಟುವ ಕೆಲಸವಲ್ಲ. ಮನಸ್ಸುಗಳನ್ನು ಬೆಸೆಯುವ, ವಿದ್ಯೆ ಮತ್ತು ಆರೋಗ್ಯವನ್ನು ನೀಡುವ ಮಹತ್ಕಾರ್ಯ' ಎಂದು ಬಣ್ಣಿಸಿದರು.

ರಾಜಕೋಟ್ ಅರ್ಶ ವಿದ್ಯಾಮಂದಿರದ ಪರಮಾತ್ಮಾನಂದ ಸ್ವಾಮೀಜಿ, ಮಾದಾರ ಚನ್ನಯ್ಯ ಸ್ವಾಮೀಜಿ, ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ, ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಮಾತನಾಡಿದರು.

ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಸಂಸದ ಡಾ. ಕೆ. ಸುಧಾಕರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕರಾದ ಎಸ್.ಆರ್. ವಿಶ್ವನಾಥ್, ಎನ್. ಶ್ರೀನಿವಾಸಯ್ಯ ಉಪಸ್ಥಿತರಿದ್ದರು.



ಬಿಜಿಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿಯವರಿಗೆ ನಮಸ್ಕರಿಸಿದರು ಪ್ರಜಾವಾಣಿ ಚಿತ್ರ

ಕ್ಷಮೆ ಕೇಳಿದ ಅಮಿತ್ ಶಾ

'ಮಹಾನ್ ಭಾಷೆ ಕನ್ನಡದಲ್ಲಿ ಮಾತನಾಡಲು ನನಗೆ ಆಗದೇ ಇರುವುದಕ್ಕೆ ನಿಮ್ಮೆಲ್ಲರ ಕ್ಷಮೆ ಕೇಳುತ್ತೇನೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಷಣದ ಆರಂಭದಲ್ಲೇ ತಿಳಿಸಿದರು. ಆಗ ಜನ ಚಪ್ಪಾಳೆ ತಟ್ಟಿ ಸ್ವಾಗತಿಸಿದರು. ಅಮಿತ್ ಶಾ ಮಾತುಗಳನ್ನು ಕಾರ್ಯಕ್ರಮ ನಿರೂಪಕರು ಕನ್ನಡಕ್ಕೆ ಅನುವಾದಿಸಿದರು.

ಒಳ ಮೀಸಲಾತಿ ಪ್ರಸ್ತಾಪ

'ಒಳ ಮೀಸಲಾತಿಗಾಗಿ ಮಾದಿಗ ಸಮಾಜ 30 ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿತ್ತು. ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರ ಗಮನಕ್ಕೆ ತಂದಾಗ ಅವರು ಬೆಂಬಲ ನೀಡಿದ್ದರು. ಈಗ ರಾಜ್ಯದಲ್ಲಿ ಒಳ ಮೀಸಲಾತಿ ಜಾರಿ ಮುಂದಕ್ಕೆ ಹೋಗುತ್ತಿದೆ. ಅಮಿತ್ ಶಾ ಅವರಲ್ಲಿ ಈ ವಿಚಾರ ಪ್ರಸ್ತಾಪಿಸಿದ್ದೇನೆ. ಶೋಷಿತ ಸಮುದಾಯಗಳೊಂದಿಗೆ ಇದ್ದೇನೆ ಎಂದು ಅವರು ಭರವಸೆ ನೀಡಿದ್ದಾರೆ' ಎಂದು ಮಾದಾರ ಚೆನ್ನಯ್ಯ ಸ್ವಾಮೀಜಿ ತಿಳಿಸಿದರು

ಚಿಟಿಕೆ ಸುದ್ದಿ

ರೈಲಿನಲ್ಲಿ ಕಳ್ಳತನ ಆರೋಪಿ ಸೆರೆ

ಬೆಂಗಳೂರು: ರೈಲಿನ ಹವಾನಿಯಂತ್ರಿತ ಬೋಗಿಗಳಲ್ಲಿ ಪ್ರಯಾಣಿಕರ ಚಿನ್ನಾಭರಣಗಳನ್ನು ಕಳವು ಮಾಡುತ್ತಿದ್ದ ಅಂತರರಾಜ್ಯ ಕಳ್ಳನನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

ಉತ್ತರಾಖಂಡದ ನೈನಿತಾಲ್ ನಿವಾಸಿ ಜಿತೇಂದ್ರಕುಮಾರ್ ಚಾವ್ಲಾ (37) ಎಂಬಾತನನ್ನು ಬಂಧಿಸಿ, ₹ 4.55 ಲಕ್ಷ ಮೌಲ್ಯದ ಆಭರಣ ವಶಪಡಿಸಿಕೊಳ್ಳಲಾಗಿದೆ ಎಂದು ರೈಲ್ವೆ ಎಸ್‌ಪಿ ಸೌಮ್ಯಲತಾ ತಿಳಿಸಿದ್ದಾರೆ.

ಫೆಬ್ರುವರಿ 8ರಂದು ಪಂಡಿತ್ ಶಂಕರ್ ರಾವ್ ಕುಲಕರ್ಣಿ ದಂಪತಿ, ಉಡುಪಿಯಿಂದ ಬೆಂಗಳೂರಿಗೆ ಪಂಚಗಂಗಾ ಎಕ್ಸ್‌ಪ್ರೆಸ್ ರೈಲಿನಲ್ಲಿ ಬರುವಾಗ ಅವರ ಸೀಟಿನ ಮೇಲಿದ್ದ ಎರಡು ಬ್ಯಾಗ್‌ಗಳು ಕಳ್ಳತನವಾಗಿದ್ದವು. ಅದರಲ್ಲಿ ₹ 25 ಸಾವಿರ ನಗದು ₹ 40 ಸಾವಿರ ಮೌಲ್ಯದ ಚಿನ್ನಾಭರಣಗಳು, ಡೆಬಿಟ್ ಕಾರ್ಡ್‌ಗಳು ಕಳವು ಆಗಿದ್ದವು. ಈ ಸಂಬಂಧ ಅವರ ಪುತ್ರ ಪ್ರೀತಮ್ ಕುಲಕರ್ಣಿ ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಆರೋಪಿಯನ್ನು ಬಂಧಿಸಿ, 81 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಮೂವರ ಸೆರೆ ಆರು ಓಮ್ನಿ ಜಪ್ತಿ

ಬೆಂಗಳೂರು: ಓಮ್ನಿ ಕಾರುಗಳನ್ನೇ ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.


ಉಮೇಶ


ತಬ್ರೇಜ್


ಜಬೀರ್ ಖಾನ್

ಉಮೇಶ್, ತಬ್ರೇಜ್ ಹಾಗೂ ಜಬೀರ್ ಖಾನ್ ಅವರನ್ನು ಬಂಧಿಸಿ, ₹12 ಲಕ್ಷ ಮೌಲ್ಯದ ಒಟ್ಟು ಆರು ಓಮ್ನಿ ಕಾರುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಹಿಂದೆ ಟ್ರಾಕ್ಟರ್ ಕಳ್ಳತನ ಮಾಡುತ್ತಿದ್ದ ಈ ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು 2020ರಲ್ಲಿ ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಜೈಲಿನಿಂದ ಹೊರಬಂದ ಬಳಿಕ ಆರೋಪಿಗಳು, ಹೆಚ್ಚು ಬೇಡಿಕೆ ಇರುವ ಓಮ್ನಿ ಕಾರುಗಳ ಕಳ್ಳತನ ಆರಂಭಿಸಿದ್ದರು.

ನಗರದ ವಿವಿಧೆಡೆ ಕಳವು ಮಾಡುತ್ತಿದ್ದ ಓಮ್ನಿ ಕಾರುಗಳನ್ನು ಹಳ್ಳಿಗಳಲ್ಲಿ ಮಾರಾಟ ಮಾಡುತ್ತಿದ್ದರು. ಮೇ 26 ರಂದು ವಿದ್ಯಾರಣ್ಯಪುರ ಠಾಣೆ ವ್ಯಾಪ್ತಿಯಲ್ಲಿ ಮನೆಯ ಮುಂದೆ ನಿಲ್ಲಿಸಿದ್ದ ಓಮ್ನಿ ಕಾರು ಕಳ್ಳತನವಾಗಿತ್ತು. ಮಾಲೀಕರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ನಡೆಸಲಾಯಿತು.

ಸಿ.ಸಿ.ಟಿ.ವಿ ಕ್ಯಾಮೆರಾ ಆಧರಿಸಿ ಆರೋಪಿಗಳನ್ನು ಬಂಧಿಸಿ ವಿಚಾರಣೆ ಗೊಳಪಡಿಸಿದಾಗ ಈ ಕೃತ್ಯಬಯಲಾಗಿದೆ. ಕಡಿಮೆ ಬೆಲೆಗೆ ಕಾರುಗಳನ್ನು ಮಾರಾಟ ಮಾಡುತ್ತಿದ್ದರು ಎಂದು ಪೂರ್ವ ವಲಯದ ಹೆಚ್ಚುವರಿ ಪೊಲೀಸ್ ಕಮಿಷನರ್ ರಮೇಶ್ ಬಾನೋತ್ ತಿಳಿಸಿದ್ದಾರೆ.

ಹೋರಾಟ ತೀವ್ರಗೊಳಿಸಿ: ಶಾ ಸೂಚನೆ

ಜೆಡಿಎಸ್ ಜತೆ ಹೊಂದಿಕೊಂಡು ಹೋಗುವಂತೆ ಸಲಹೆ–ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರ ಮತ್ತು ಹಗರಣಗಳಲ್ಲಿ ಮುಳುಗಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಬೇಕು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯ ಬಿಜೆಪಿ ನಾಯಕರಿಗೆ ಸಲಹೆ ನೀಡಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಉಪ ನಾಯಕ ಅರವಿಂದ ಬೆಲ್ಲದ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅವರು ಭೇಟಿ ನೀಡಿದ ಸಂದರ್ಭದಲ್ಲಿ ರಾಜ್ಯದ ರಾಜಕೀಯ ಸ್ಥಿತಿ, ಸರ್ಕಾರದ ವಿರುದ್ಧದ ಭ್ರಷ್ಟಾಚಾರ ಮತ್ತು ಹಗರಣಗಳ ಆರೋಪಗಳ ಕುರಿತು ಚರ್ಚೆ ನಡೆಸಿದರು.

'ಪಕ್ಷದ ಎಲ್ಲ ನಾಯಕರೂ ಒಗ್ಗಟ್ಟಾಗಿ ರಾಜ್ಯ ಸರ್ಕಾರದ ಜನ ವಿರೋಧಿ ನೀತಿ ವಿರುದ್ಧ ಹೋರಾಟ ನಡೆಸಬೇಕು. ಹಳ್ಳಿ–ಹಳ್ಳಿವರೆಗೂ ಸರ್ಕಾರದ ಬಂಡವಾಳ ಬಯಲು ಮಾಡಬೇಕು' ಎಂದು ಅಮಿತ್ ಶಾ ಸಲಹೆ ನೀಡಿದರು ಎಂದು ಮೂಲಗಳು ತಿಳಿಸಿವೆ.

'ಜೆಡಿಎಸ್ ಜತೆ ಹೊಂದಿಕೊಂಡು ಹೋಗಬೇಕು. ಹೋರಾಟಗಳಲ್ಲೂ ಅವರನ್ನು ತೊಡಗಿಸಿಕೊಳ್ಳಬೇಕು. ಆ ಪಕ್ಷದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಎರಡೂ ಪಕ್ಷಗಳು ಒಂದಾಗಿ ಮುನ್ನಡೆದರೆ ಚುನಾವಣೆಯಲ್ಲಿ ಅತಿ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಸಾಧ್ಯವಿದೆ. ಲೋಕಸಭಾ ಚುನಾವಣೆಯಲ್ಲೂ ಅದು ಸಾಬೀತಾಗಿದೆ ಎಂಬುದಾಗಿ ಅಮಿತ್ ಶಾ ರಾಜ್ಯ ನಾಯಕರಿಗೆ ತಿಳಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ಅಮಿತ್ ಶಾ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ವಿಜಯೇಂದ್ರ, 'ರಾಜ್ಯ ಸರ್ಕಾರ ಸದಾ ಅಲ್ಪಸಂಖ್ಯಾತರ ಓಲೈಕೆ ನಿಟ್ಟಿನಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಿದೆ. ವಸತಿ ಹಂಚಿಕೆಯಲ್ಲಿ ಅಲ್ಪಸಂಖ್ಯಾತರಿಗಿದ್ದ ಶೇ 10ರಷ್ಟು ಮೀಸಲಾತಿಯನ್ನು ಶೇ 15ಕ್ಕೆ ಏರಿಸಿದ್ದಾರೆ. ಪ್ರಧಾನಿ ಮೋದಿ ಅವರು ಹಿಂದೂಗಳು– ಅಲ್ಪಸಂಖ್ಯಾತರು ಎನ್ನುವ ತಾರತಮ್ಯ ಮಾಡದೇ ಎಲ್ಲ ಯೋಜನೆಗಳ ಲಾಭ ಎಲ್ಲರಿಗೂ ಸಿಗುವಂತೆ ಮಾಡಿದ್ದಾರೆ' ಎಂದು ಹೇಳಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಒಡೆದಾಳುವ ನೀತಿ ಅನುಸರಿಸುತ್ತಿದ್ದಾರೆ. ಅವರಿಗೆ ಭಗವಂತ ಖಂಡಿತಾ ಒಳ್ಳೆಯದು ಮಾಡಲು ಸಾಧ್ಯವಿಲ್ಲ. ಅವರು ತಮ್ಮ ಸ್ಥಾನಕ್ಕೆ ಅಪಮಾನ ಆಗುವಂತೆ ನಡೆದುಕೊಳ್ಳುತ್ತಿದ್ದಾರೆ' ಎಂದರು.

'ಈ ಸರ್ಕಾರದಲ್ಲಿ ಮುಖ್ಯಮಂತ್ರಿ ಸೇರಿ ಎಲ್ಲರೂ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಡುತ್ತಿದ್ದಾರೆ. ಬಿ.ಆರ್.ಪಾಟೀಲ ಅವರ ಆಡಿಯೊ ಇದಕ್ಕೊಂದು ಸಣ್ಣ ನಿದರ್ಶನ. ಭ್ರಷ್ಟಾಚಾರ ಮತ್ತು ಹಗರಣಗಳಿಂದ ಜನರು ಸರ್ಕಾರದ ಬಗ್ಗೆ ಬೇಸತ್ತಿದ್ದಾರೆ' ಎಂದು ವಿಜಯೇಂದ್ರ ಹೇಳಿದರು.

'ಎನ್‌ಡಿಎ ಅಂಗ ಪಕ್ಷವಾದ ಜೆಡಿಎಸ್ ಜತೆ ಸಮನ್ವಯಕ್ಕಾಗಿ ಎಚ್‌.ಡಿ.ಕುಮಾರಸ್ವಾಮಿ ಮತ್ತು ಆ ಪಕ್ಷದ ಶಾಸಕರ ಜತೆ ವಿಧಾನಮಂಡಲ ಅಧಿವೇಶನಕ್ಕೂ ಮೊದಲು ಸಭೆ ಸೇರಿ ಚರ್ಚೆ ಮಾಡುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.


ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ಗೌರವಿಸಿದ ಸಂಸದ ಬಸವರಾಜ ಬೊಮ್ಮಾಯಿ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಇದ್ದರು

ಅಲ್ಪಸಂಖ್ಯಾತರಿಗೆ ಮಿತಿ ಮೀರಿ ನೆರವು ಅಕ್ಷಮ್ಯ: ಯಡಿಯೂರಪ್ಪ

'ನಾವು ಅಲ್ಪಸಂಖ್ಯಾತರ ವಿರೋಧಿಗಳಲ್ಲ. ಆದರೆ, ಅಲ್ಪಸಂಖ್ಯಾತರಿಗೆ ಮಿತಿ ಮೀರಿ ನೆರವು ಕೊಡುವುದು ಅಕ್ಷಮ್ಯ ಅಪರಾಧ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಪಕ್ಷದ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದವರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕಾದ ಸರ್ಕಾರ ಕೇವಲ ಮತಬ್ಯಾಂಕ್ ರಾಜಕಾರಣಕ್ಕಾಗಿ ಅಲ್ಪಸಂಖ್ಯಾತರನ್ನು ತೃಪ್ತಿಪಡಿಸುವ ಕಾರ್ಯದಲ್ಲಿ ತೊಡಗಿದೆ. ಇದನ್ನು ಖಂಡಿಸುತ್ತೇವೆ' ಎಂದರು.

'ಬಿಜೆಪಿ–ಜೆಡಿಎಸ್ ಬೇರೆಯಲ್ಲ, ನಾವು ಒಟ್ಟಾಗಿಯೇ ಮುಂದುವರೆಯುತ್ತೇವೆ. ಎಚ್.ಡಿ.ದೇವೇಗೌಡ ಕೂಡ ಹಲವು ಬಾರಿ ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ನಂಬಿಕೆ, ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಬಿಜೆಪಿ–ಜೆಡಿಎಸ್ ಮುಂದಿನ ದಿನಗಳಲ್ಲಿ ಒಟ್ಟಾಗಿ ಮುನ್ನಡೆದು ಕಾಂಗ್ರೆಸ್ ಸರ್ಕಾರವನ್ನು ಇಳಿಸಿ. ಬಿಜೆಪಿ–ಜೆಡಿಎಸ್ ಮೈತ್ರಿಕೂಟವನ್ನು ಅಧಿಕಾರಕ್ಕೆ ತರಬೇಕಿದೆ. ಈ ನಿಟ್ಟಿನಲ್ಲಿ ಅಗತ್ಯ ಪ್ರಯತ್ನ ಮಾಡುತ್ತೇವೆ' ಎಂದರು.

ಸುದ್ದಿ 2 ನಿಮಿಷ

ಸಿಎಂ, ಡಿಸಿಎಂಗೆ ಅವಹೇಳನ ಪ್ರಕರಣ ದಾಖಲು

ತುಮಕೂರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಸಾಮಾಜಿಕ ಜಾಲ ತಾಣದಲ್ಲಿ ವಿಡಿಯೊ ಹಂಚಿಕೊಂಡಿದ್ದ ತಾಲ್ಲೂಕಿನ ಕಣಕುಪ್ಪೆಯ ಧನಂಜಯ ಅಲಿಯಾಸ್ ಗೌಡ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್ ಜಿಲ್ಲಾ ಘಟಕದ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಟಿ.ಎಚ್.ಅನಿಲ್‌ಕುಮಾರ್ ನೀಡಿದ ದೂರಿನ ಮೇರೆಗೆ ಹೆಬ್ಬೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



'ವಿಡಿಯೊ ಹಂಚಿಕೊಳ್ಳುವ ಮೂಲಕ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರ ಘನತೆ, ಗೌರವಕ್ಕೆ ಧಕ್ಕೆ ಉಂಟು ಮಾಡಿದ್ದಾರೆ. ಧನಂಜಯ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳುವಂತೆ' ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ನೀಡಿದ್ದ ದೂರಿನಲ್ಲಿ ಮನವಿ ಮಾಡಿದ್ದರು.

ಟರ್ಮಿನಲ್‌ಗೆ ನುಗ್ಗಲು ಯತ್ನ

ಬೆಂಗಳೂರು: ದಾಖಲೆಗಳನ್ನು ತೋರಿಸದೇ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–1ರ ಒಳಗೆ ನುಗ್ಗಲು ಯತ್ನಿಸಿದ ಶ್ರೀನಗರದ ಸದದ್ ಮೊಹಮದ್ ಬಾಬಾ (22) ಎಂಬುವರನ್ನು ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದುಕೊಂಡು, ವಿಚಾರಣೆ ನಡೆಸಿ, ಬಿಡುಗಡೆ ಮಾಡಲಾಗಿದೆ.

ಜೂನ್ 17ರಂದು ಮೊಹಮ್ಮದ್ ಅವರು ಕೆಂಪೇಗೌಡ ವಿಮಾನ ನಿಲ್ದಾಣದಿಂದ ರಾತ್ರಿ 8.19ರ ಇಂಡಿಗೋ ವಿಮಾನದ ಮೂಲಕ ಶ್ರೀನಗರಕ್ಕೆ ಪ್ರಯಾಣ ಬೆಳೆಸಲು ಹೊರಟಿದ್ದರು. ಟರ್ಮಿನಲ್ -1ರಲ್ಲಿನ ಗೇಟ್–8ರ ಬಳಿ ಏಕಾಏಕಿ ನುಗ್ಗಲು ಯತ್ನಿಸಿದರು. ತಕ್ಷಣ ಭದ್ರತಾ ಸಿಬ್ಬಂದಿ ನಿರಂಜನ್ ಸಿಂಗ್ ಮತ್ತು ವೆಲ್ಲಿಸ್ವಾಮಿ ಅವರು, ಒಳ ಹೋಗದಂತೆ ತಡೆಯಲು ಪ್ರಯತ್ನಿಸಿದರು. ಆದರೂ ಆರೋಪಿ, ಅವರನ್ನು ತಳ್ಳಿಕೊಂಡು ಒಳಗೆ ಪ್ರವೇಶಿಸಲು ಯತ್ನಿಸಿದರು ಎಂದು ಭದ್ರತಾ ವಿಭಾಗದ ಮನೀಶ್ ಕುಮಾರ್ ಅವರು ದೂರಿನಲ್ಲಿ ತಿಳಿಸಿದ್ದಾರೆ.

ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಸಿಬ್ಬಂದಿಯ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಮೊಹಮದ್ ವಿರುದ್ಧ ಕೆಂಪೇಗೌಡ ವಿಮಾನ ನಿಲ್ದಾಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಖಾಸಗಿ ಕಂಪನಿ ಉದ್ಯೋಗಿ ಆಗಿರುವ ಸದದ್ ಮೊಹಮದ್ ಅವರನ್ನು ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದರು. ಬೆಂಗಳೂರು ಭೇಟಿಗೆ ಕಾರಣವೇನು? ಯಾವಾಗ ನಗರಕ್ಕೆ ಬಂದಿದ್ದು? ಎಲ್ಲಿಂದ ಬಂದಿದ್ದು? ಕೆಲಸ ಮಾಡುತ್ತಿರುವ ಸಂಸ್ಥೆ? ಇತ್ಯಾದಿ ಮಾಹಿತಿ ಸಂಗ್ರಹಿಸಿದರು. ಬಳಿಕ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಪ್ರಕರಣ

ವಿಚಾರಣೆಗೆ ಹಾಜರಾಗದ ದಯಾನಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣದ ತನಿಖೆ ನಡೆಸುತ್ತಿರುವ ವಿಚಾರಣಾಧಿಕಾರಿ ಆಗಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಎದುರು ಶುಕ್ರವಾರ ಇಬ್ಬರು ಡಿಸಿಪಿಗಳು ಸೇರಿ ಆರು ಮಂದಿ ಪೊಲೀಸ್ ಅಧಿಕಾರಿಗಳು ವಿಚಾರಣೆಗೆ ಹಾಜರಾದರು.

ಆದರೆ, ನಗರದ ಮಾಜಿ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ವಿಚಾರಣೆಗೆ ಗೈರಾದರು. ಒಟ್ಟು 40ಕ್ಕೂ ಹೆಚ್ಚು ಪೊಲೀಸರ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಳ್ಳಲಾಯಿತು.


ದಯಾನಂದ

ಉತ್ತರ ವಿಭಾಗದ ಡಿಸಿಪಿ ಸೈದುಲ್ಲಾ ಅಡಾವತ್ ಮತ್ತು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಭರಮಸಾಗರ್, ಇಬ್ಬರು ಇನ್‌ಸ್ಪೆಕ್ಟರ್‌ಗಳು, ಇಬ್ಬರು ಎಸಿಪಿಗಳು ವಿಚಾರಣೆಗೆ ಹಾಜರಾಗಿದ್ದರು. ವಿಚಾರಣಾ ತಂಡ ಸಂಜೆ 5 ಗಂಟೆವರೆಗೂ ಅಧಿಕಾರಿಗಳನ್ನು ಪ್ರತ್ಯೇಕವಾಗಿ ವಿಚಾರಣೆಗೆ ಒಳಪಡಿಸಿ, ಅವರ ಹೇಳಿಕೆಯನ್ನು ದಾಖಲಿಸಿಕೊಂಡಿದೆ.

ಜಗದೀಶ್ ಅವರು, ಕ್ರೀಡಾಂಗಣದ ಭದ್ರತೆಗೆ ನಿಯೋಜನೆಗೊಂಡಿದ್ದ ಹಿರಿಯ ಅಧಿಕಾರಿಗಳ ಪಟ್ಟಿ ಆಧರಿಸಿ ಸುಮಾರು 45 ಮಂದಿ ಪೊಲೀಸರಿಗೆ ನೋಟಿಸ್ ನೀಡಿದ್ದರು. ಹಂತ-ಹಂತವಾಗಿ ಅಧಿಕಾರಿ-ಸಿಬ್ಬಂದಿ ವಿಚಾರಣೆಗೆ ಹಾಜರಾಗುತ್ತಿದ್ದಾರೆ.

'ಕಾಲ್ತುಳಿತಕ್ಕೆ ಕಾರಣಗಳೇನು? ಯಾವ ಗೇಟ್ ಬಳಿ ಎಷ್ಟು ಸಿಬ್ಬಂದಿ ನಿಯೋಜಿಸಲಾಗಿತ್ತು? ಕ್ರೀಡಾಂಗಣದ ಬಳಿ ಜನಸಾಗರ ಬರಲು ಕಾರಣವೇನು? ಭದ್ರತೆ ಬಗ್ಗೆ ಪೂರ್ವಭಾವಿ ಸಭೆ ನಡೆಸಲಾಗಿತ್ತಾ? ಎಂಬ ಪ್ರಶ್ನೆಗಳನ್ನು ಕೇಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಕ್ರೀಡಾಂಗಣದ ಸುತ್ತ ಬಿಗಿ ಪೊಲೀಸ್ ಭದ್ರತೆ ನಿಯೋಜಿಸಲಾಗಿತ್ತು. ಆದರೆ, ವಿಧಾನಸೌಧ ಕಾರ್ಯಕ್ರಮ ಮುಗಿದ ಬಳಿಕ ಆರ್‌ಸಿಬಿ ಆಟಗಾರರು ಕ್ರೀಡಾಂಗಣಕ್ಕೆ ಬರಲಿದ್ದಾರೆ ಎಂಬ ಮಾಹಿತಿ ತಿಳಿದು, ಲಕ್ಷಾಂತರ ಅಭಿಮಾನಿಗಳು ಕ್ರೀಡಾಂಗಣದತ್ತ ಬಂದರು. ಈ ವೇಳೆ ಜನದಟ್ಟಣೆ ನಿಯಂತ್ರಿಸಲು ಸಾಧ್ಯವಾಗಲಿಲ್ಲ' ಎಂದು ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ.

'ಸಾಧ್ಯವಾದಷ್ಟು ಲಘು ಲಾಠಿ ಪ್ರಹಾರ ನಡೆಸಿ ಗುಂಪು ಚದುರಿಸಲಾಗಿತ್ತು. ಆದರೆ, ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರಿಂದ ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಹಿರಿಯ ಅಧಿಕಾರಿಗಳು ಸೂಚಿಸಿದಂತೆ ಭದ್ರತೆ ವ್ಯವಸ್ಥೆ ಮಾಡಲಾಗಿತ್ತು' ಎಂಬುದಾಗಿ ತಿಳಿಸಿದ್ದಾರೆ ಎಂದು ಹೇಳಲಾಗಿದೆ.

ಒಳ ಮೀಸಲಾತಿ ಜಾರಿಗೆ ಒತ್ತಾಯ

ಬೆಂಗಳೂರು: 'ಪರಿಶಿಷ್ಟ ಜಾತಿಯಲ್ಲಿ ಕೈಗೊಂಡಿರುವ ಸಮೀಕ್ಷೆಯ ಅವಧಿಯನ್ನು ಮತ್ತೆ ವಿಸ್ತರಿಸದೆ, ಒಳ ಮೀಸಲಾತಿಯನ್ನು ಅನುಷ್ಠಾನಗೊಳಿಸ-ಬೇಕು' ಎಂದು ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದ ರಾಜ್ಯ ಸಮಿತಿಯು ಸರ್ಕಾರವನ್ನು ಒತ್ತಾಯಿಸಿದೆ.

ಪೆರೋಲ್ ಮೇಲೆ ಹೊರ ಬಂದು ಪರಾರಿ

ಕೃಷ್ಣಗಿರಿಯಲ್ಲಿ ಅಪರಾಧಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಿಯ ಅನಾರೋಗ್ಯದ ಕಾರಣಕ್ಕೆ ಪೆರೋಲ್ ಪಡೆದು ಅವಧಿ ಮುಗಿದ ಬಳಿಕ ಜೈಲಿಗೆ ವಾಪಸಾಗದೇ ತಲೆಮರೆಸಿಕೊಂಡಿದ್ದ ಕೈದಿಯನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೊಹಮ್ಮದ್ ಇದ್ರೀಸ್ (30) ಬಂಧಿತ ಕೈದಿ. ಬೊಮ್ಮನಹಳ್ಳಿ ಸಿಂಗಸಂದ್ರ ನಿವಾಸಿಯಾಗಿರುವ ಅಪರಾಧಿ, ತನ್ನ ತಾಯಿಗೆ ಹುಷಾರಿಲ್ಲ ಎಂಬ ಕಾರಣ ನೀಡಿ ಏಪ್ರಿಲ್ 18ರಿಂದ ಮೇ 17ರವರೆಗೆ ಪೆರೋಲ್ ಪಡೆದು ಹೊರಬಂದಿದ್ದ. ಅವಧಿ ಮುಗಿದ ಬಳಿಕ ಜೈಲಿಗೆ ಮರಳದೆ ತಲೆಮರೆಸಿಕೊಂಡಿದ್ದ.

ಈ ಬಗ್ಗೆ ಕೇಂದ್ರ ಕಾರಾಗೃಹ ಅಧೀಕ್ಷಕ ಇಮಾಮ್ ಸಾಬ್ ಮ್ಯಾಗೇರಿ ಅವರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಅಪರಾಧಿಯನ್ನು ತಮಿಳು ನಾಡಿನ ಕೃಷ್ಣಗಿರಿಯಲ್ಲಿ ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಪರಾಧ ಸುದ್ದಿ

'ಕೃಷ್ಣಗಿರಿ ಜಿಲ್ಲೆಯ ಇದ್ರೀಸ್ ವಂಚನೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಅಪರಾಧ ಸಾಬೀತಾಗಿದ್ದರಿಂದ ನ್ಯಾಯಾಲಯವು ಐದು ವರ್ಷ ಜೈಲು ಶಿಕ್ಷೆ ಹಾಗೂ ಪ್ರತ್ಯೇಕ ಐದು ಪ್ರಕರಣಗಳಲ್ಲಿ ಒಟ್ಟು ₹40 ಲಕ್ಷ ದಂಡ ವಿಧಿಸಿತ್ತು. ಶಿಕ್ಷಾ ಅವಧಿ ಪೂರ್ಣಗೊಂಡರೂ ದಂಡ ಪಾವತಿಸದ ಕಾರಣ ಜೈಲಿನಲ್ಲಿ ಉಳಿದುಕೊಂಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಪೆರೋಲ್ ಮುಗಿದ ಬಳಿಕ ಜೈಲಿಗೆ ಮರಳದೆ ಅಪರಾಧಿ ರೈಲಿನ ಮೂಲಕ ಮುಂಬೈಗೆ ಪರಾರಿಯಾಗಿದ್ದ. ಏಜೆನ್ಸಿಯೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸಕ್ಕೆ ಸೇರಿಕೊಂಡಿದ್ದ. ಕೆಲ ದಿನಗಳ ಬಳಿಕ ಉದ್ಯೋಗ ತೊರೆದು, ಚೆನ್ನೈಗೆ ತೆರಳಿದ್ದ. ಬಂಧನ ಭೀತಿಯಿಂದ ಚೆನ್ನೈಯಿಂದ ಪತ್ನಿಯೊಂದಿಗೆ ಕೃಷ್ಣಗಿರಿಗೆ ಬಂದು ಬಾಡಿಗೆ ಮನೆಯೊಂದರಲ್ಲಿ ವಾಸ್ತವ್ಯ ಹೂಡಿದ್ದ. ಅಲ್ಲಿಂದ ಬೇರೆ ರಾಜ್ಯಕ್ಕೆ ಬಸ್‌ನಲ್ಲಿ ತೆರಳುವ ವೇಳೆ ಪರಪ್ಪನ ಅಗ್ರಹಾರ ಠಾಣೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಇದ್ರೀಸ್ ವಿರುದ್ಧ ಆರು ಪ್ರಕರಣಗಳಲ್ಲಿ ಶಿಕ್ಷೆ ಪ್ರಕಟವಾಗಿದೆ. ಇನ್ನೂ ಐದು ಪ್ರಕರಣಗಳು ವಿಚಾರಣೆ ಹಂತದಲ್ಲಿವೆ' ಎಂದು ಹೇಳಿದ್ದಾರೆ.

ಗಾಯಾಳು ಸಾವು

ಕೆ.ಆರ್.ಪುರ: ಹೈಟೆನ್ಷನ್ ವಿದ್ಯುತ್ ಪ್ರವಹಿಸಿ ಗಂಭೀರವಾಗಿ ಗಾಯಗೊಂಡು ಜೀವನ್ಮರಣದ ಹೋರಾಟ ನಡೆಸುತ್ತಿದ್ದ ಬಾಲಕ ಅನಂತ್ (10) ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶುಕ್ರವಾರ ಮೃತಪಟ್ಟಿದ್ದಾನೆ.

ಮನೆ ಕೆಲಸ ಮಾಡುತ್ತಿದ್ದ ನೇಪಾಳದ ತುಲಾವೋರ್ ಮತ್ತು ದೊಡ್ಡಪ್ಪ ದೇವ ದಂಪತಿ ಪುತ್ರ ಅನಂತ್.

ಮೃತ ಬಾಲಕನ ತಾಯಿಯ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳುತ್ತೇವೆ ಎಂದು ಕೆ.ಆರ್.ಪುರ ಠಾಣೆ ಪೊಲೀಸರು ಹೇಳಿದರು. ಅಯ್ಯಪ್ಪನಗರ ಎಸ್.ಇ.ಎ. ಕಾಲೇಜು ರಸ್ತೆಯಲ್ಲಿ-ರುವ ಬಾಲರಾಜ್ ಮಾಲೀಕತ್ವದ ಕಟ್ಟಡದ ಮೂರನೇ ಮಹಡಿಯಲ್ಲಿ ಕುಟುಂಬ ವಾಸಿಸುತ್ತಿತ್ತು.

ರೆಸ್ಟೋರೆಂಟ್, ಬಾರ್‌ಗಳ ಮೇಲೆ ಪೊಲೀಸರ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶ್ಲೀಲ ನೃತ್ಯ ಪ್ರದರ್ಶನ, ಅವಧಿ ಮೀರಿ ಕಾರ್ಯಾಚರಣೆ ಆರೋಪದ ಮೇಲೆ ನಗರದ ವಿವಿಧೆಡೆ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳ ಮೇಲೆ ಪಶ್ಚಿಮ ವಲಯದ ಪೊಲೀಸರು ಗುರುವಾರ ರಾತ್ರಿ ದಾಳಿ ನಡೆಸಿದರು.

ಉಪ್ಪಾರಪೇಟೆ, ಕಾಟನ್‌ಪೇಟೆ, ಕಲಾಸಿಪಾಳ್ಯ, ಕಬ್ಬನ್‌ಪಾರ್ಕ್ ಮತ್ತು ಅಶೋಕ ನಗರ ಪೊಲೀಸ್ ಠಾಣಾ ವ್ಯಾಪ್ತಿಗಳಿಗೆ ಸೇರಿದ ಬಾರ್ ಮತ್ತು ರೆಸ್ಟೋರೆಂಟ್‌ಗಳ ಮೇಲೆ ಒಟ್ಟು 11 ವಿಶೇಷ ಪೊಲೀಸ್ ತಂಡಗಳು, ಏಕಕಾಲಕ್ಕೆ ದಾಳಿ ನಡೆಸಿದವು.

'ಯುವತಿಯರಿಗೆ ತುಂಡು ಬಟ್ಟೆ ತೊಡಿಸಿ ಅಶ್ಲೀಲ ನೃತ್ಯ ಪ್ರದರ್ಶನ, ಅವಧಿ ಮೀರಿಯೂ ಚಟುವಟಿಕೆ ನಡೆಸುತ್ತಿರುವುದು, ಮಹಿಳಾ ಭದ್ರತಾ ಸಿಬ್ಬಂದಿ ನೇಮಕ ಮಾಡಿಕೊಳ್ಳದಿರುವುದು, ಅಡುಗೆ ಕೋಣೆಯಲ್ಲಿ ಶುಚಿತ್ವ ಪಾಲಿಸದಿರುವುದು, ಧೂಮಪಾನಕ್ಕೆ ಪ್ರತ್ಯೇಕ ಸ್ಥಳ ಕಲ್ಪಿಸದಿರುವುದು ದಾಳಿ ವೇಳೆ ಕಂಡು ಬಂತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕೋಟ್ಪಾ ಕಾಯ್ದೆಯಡಿ ನಿಯಮ ಉಲ್ಲಂಘಿಸಿದ ಗ್ರಾಹಕರಿಗೆ ಸ್ಥಳದಲ್ಲೇ ದಂಡ ವಿಧಿಸಲಾಯಿತು. ನಿಯಮ ಉಲ್ಲಂಘಿಸಿದ 19 ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳ ಮಾಲೀಕರ ವಿರುದ್ಧ ಕಾನೂನು ಕ್ರಮಕ್ಕಾಗಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ವರದಿ ನೀಡಲಾಗಿದೆ' ಎಂದು ಹೇಳಿದ್ದಾರೆ.

ಅಲ್ಲದೆ ಆರೋಗ್ಯ ಮತ್ತು ಅಬಕಾರಿ ಇಲಾಖೆಗಳಿಗೆ ಸಂಬಂಧಪಟ್ಟ ನಿಯಮಗಳು ಉಲ್ಲಂಘನೆ ಆಗಿರುವುದು ಕಂಡು ಬಂದಿದೆ. ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರ ಬರೆಯಲಾಗುವುದು. ನಿಯಮ ಉಲ್ಲಂಘಿಸಿದ ವಾಣಿಜ್ಯ ಕೇಂದ್ರಗಳ ಮೇಲೆ ಸೂಕ್ತ ನಿಗಾ ಇಡಲಾಗುವುದು. ಮತ್ತೆ ನಿಯಮ ಉಲ್ಲಂಘಿಸಿದರೆ ಪರವಾನಗಿ ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆ ಉಂಟಾದಲ್ಲಿ ಇಲಾಖೆಯ ಸಹಾಯವಾಣಿ 112ಕ್ಕೆ ಕರೆ ಮಾಡಿ ಮಾಹಿತಿ ನೀಡಬಹುದು. ಅಂತಹವರ ಗುರುತು ಗೋಪ್ಯವಾಗಿ ಇಡಲಾಗುವುದು ಎಂದಿದ್ದಾರೆ.

'ಇನ್‌ಸ್ಪೆಕ್ಟರ್‌ಗಳ ಮೇಲೆ ಕ್ರಮ'

'ಕೆಲವು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದ್ದ ಬಗ್ಗೆ ದೂರುಗಳು ಬಂದ ಕಾರಣ ದಾಳಿ ಮಾಡಲಾಗಿದೆ. ದಾಳಿಯ ವೇಳೆ ನಿಯಮ ಉಲ್ಲಂಘಿಸಿರುವುದು ಗೊತ್ತಾಗಿದೆ. ಯಾವುದೇ ಕಾರಣಕ್ಕೂ ಕಾನೂನು ಬಾಹಿರ ಚಟುವಟಿಕೆಗಳಿಗೆ ಅವಕಾಶ ಕೊಡದಂತೆ ನಗರದ ಎಲ್ಲಾ ಠಾಣೆಗಳಿಗೆ ಸೂಚನೆ ನೀಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

'ಠಾಣಾ ವ್ಯಾಪ್ತಿಯಲ್ಲಿ ಅಕ್ರಮ ಚಟುವಟಿಕೆಗಳು ಕಂಡು ಬಂದರೆ ಆಯಾ ಠಾಣೆಯ ಇನ್‌ಸ್ಪೆಕ್ಟರ್‌ಗಳ ಮೇಲೆ ಕ್ರಮ ಜರುಗಿಸಲಾಗುತ್ತದೆ' ಎಂದು ಎಚ್ಚರಿಸಿದ್ದಾರೆ.

'ಭೂಮಿಕಾ ಕ್ಲಬ್' ಕಾರ್ಯಕ್ರಮ ಇಂದು


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಮಹಿಳೆಯರಿಗಾಗಿ ಸ್ಥಾಪಿಸಿರುವ 'ಭೂಮಿಕಾ ಕ್ಲಬ್' ವೇದಿಕೆ ವತಿಯಿಂದ ಜೂನ್ 21ರಂದು ಮಧ್ಯಾಹ್ನ 2.30ಕ್ಕೆ ಕೋರಮಂಗಲ ಕ್ಲಬ್‌ನಲ್ಲಿ 28ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

'ಫ್ರೀಡಂ ಹೆಲ್ತಿ ಕುಕ್ಕಿಂಗ್ ಆಯಿಲ್', 'ಮಣಿಪಾಲ್ ಆಸ್ಪತ್ರೆಗಳ ಸಮೂಹ', 'ಇಕೊ ಕ್ರಿಸ್ಟಲ್' ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಚಂದನವನದ ನಟಿ ಅಂಕಿತಾ ಅಮರ್ ಉದ್ಘಾಟಿಸಲಿದ್ದಾರೆ. ವಿಚಾರ ಸಂಕಿರಣ ಹಾಗೂ ಸಂಗೀತ ಕಾರ್ಯಕ್ರಮ ಸೇರಿ ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿರಲಿದೆ.

ಈ ಬಾರಿ ಪ್ರಮುಖ ಆಕರ್ಷಣೆಯಾಗಿ 'ಚಂದನವನ' ರಸಪ್ರಶ್ನೆಯಲ್ಲಿ ಪಾಲ್ಗೊಂಡು ಗೆಲ್ಲುವ ಮೂಲಕ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಕಾರ್ಯಕ್ರಮದಲ್ಲಿ ಭಾಗವಹಿಸಲು ಪಾಸ್‌ಗಳನ್ನು ಪಡೆಯುವ ಅವಕಾಶ ಕಲ್ಪಿಸಲಾಗಿದೆ.

ಒಗ್ಗರಣೆ ಡಬ್ಬಿ ಮುರಳಿ ಮತ್ತು ಸುಚಿತ್ರ ಅವರು ಅಡುಗೆ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.



ಮಣಿಪಾಲ್ ಆಸ್ಪತ್ರೆಯ ಹೃದಯತಜ್ಞೆ ಡಾ. ಅನುಷಾ ಎ. ರಾವ್ ಅವರು ಆರೋಗ್ಯದ ಕುರಿತು ಉಪನ್ಯಾಸ ನೀಡಲಿದ್ದಾರೆ. ಸಿನಿ ಸಮ್ಮಾನ ಪುರಸ್ಕಾರ ಸಮಾರಂಭಕ್ಕೆ ಸಿದ್ಧರಾಗುವ ಕುರಿತು ಶೋಭಾ ಬಿ.ಜಿ. ಮಾಹಿತಿ ನೀಡಲಿದ್ದಾರೆ. ದಿವ್ಯಾ ರಾಮಚಂದ್ರ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದಲ್ಲಿ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಮೋಜಿನ ಆಟಗಳು, ಹೈ-ಟೀ ಮತ್ತು ನೆಟ್‌ವರ್ಕಿಂಗ್ ಹೊಂದಿರುವ ಈ ಕಾರ್ಯಕ್ರಮಕ್ಕೆ ಪ್ರವೇಶ ಉಚಿತ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ವಿಶ್ವ ಸಂಗೀತ ದಿನದ ಅಂಗವಾಗಿ ಸಂಗೀತ ಕಾರ್ಯಕ್ರಮ: ಐಶ್ವರ್ಯ ವಿದ್ಯಾ ರಘುನಾಥನ್, ಅದಿತಿ ಕೃಷ್ಣಪ್ರಕಾಶ್, ಬಿ.ಎಸ್. ಪ್ರಶಾಂತ್, ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ, ಜೆ.ಪಿ.ನಗರ, ಬೆಳಿಗ್ಗೆ 6 ಮತ್ತು ಸಂಜೆ 5.30

ಪ್ರತಿಭಾ ವೇದಿಕೆ ಸೀಸನ್ 5ರ ಸಂಭ್ರಮ ಹಾಗೂ ಪ್ರಶಸ್ತಿ ಪ್ರದಾನ: ಅಭಿಷೇಕ್ ಎಸ್., ಪ್ರಶಸ್ತಿ ಪುರಸ್ಕೃತರು: ಟಿ.ವಿ. ಬಾಬು, ಎಂ. ಶಿವರಾಜು, ಅನನ್ಯ ಪ್ರಸಾದ್, ಶೈಲಶ್ರೀ ಹುಗ್ಗಿ, ಆಯುಷ್ ಮರಾಠೆ, ಆಯೋಜನೆ: ಕಲಾ ದರ್ಪಣ–ಆರ್ಟ್ ರಿಫ್ಲೆಕ್ಟ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಾಂಸ್ಕೃತಿಕ ಕಾರ್ಯಕ್ರಮ ಬೆಳಿಗ್ಗೆ 8.30 ಹಾಗೂ ಸಭಾ ಕಾರ್ಯಕ್ರಮ ಬೆಳಿಗ್ಗೆ 11


ನೋಟ್ ಪುಸ್ತಕ ಉಚಿತ ವಿತರಣೆ: ಲ್ಯಾಪ್‌ಟಾಪ್ ವಿತರಣೆ: ಬಿ.ವೈ. ವಿಜಯೇಂದ್ರ, ಅಧ್ಯಕ್ಷತೆ: ಆರ್. ಅಶೋಕ, ಪುಸ್ತಕ ವಿತರಣೆ: ತೇಜಸ್ವಿ ಸೂರ್ಯ, ಆಯೋಜನೆ: ರಕ್ಷಾ ಫೌಂಡೇಷನ್, ಸ್ಥಳ: ಚಂದ್ರಗುಪ್ತ ಮೌರ್ಯ (ಶಾಲಿನಿ) ಆಟದ ಮೈದಾನ, ಜಯನಗರ, ಬೆಳಿಗ್ಗೆ 11

'ಭಾರತೀಯ ನಗರಗಳಲ್ಲಿ ಶುದ್ಧ ಗಾಳಿ' ಬಗ್ಗೆ ಪ್ರಾದೇಶಿಕ ಸಮ್ಮೇಳನ: ಅತಿಥಿಗಳು: ರಾಕೇಶ್ ಸಿಂಗ್, ವಿ. ಮಂಜುಳಾ, ಅನುಮಿತಾ ರಾಯ್ ಚೌಧರಿ, ಎಸ್.ಬಿ. ಹೊನ್ನೂರ್, ಅಧ್ಯಕ್ಷತೆ: ಕೆ.ಎನ್. ನಾರಾಯಣ ಗೌಡ, ಆಯೋಜನೆ ಹಾಗೂ ಸ್ಥಳ: ಐಟಿಪಿಐ ಕರ್ನಾಟಕ ಪ್ರಾದೇಶಿಕ ವಿಭಾಗ, ಮಿಲ್ಲರ್ ಟ್ಯಾಂಕ್, ಬೆಳಿಗ್ಗೆ 10.30

ಯುವ ಸಾಧಕರ ಶೃಂಗ: ಅತಿಥಿಗಳು: ಮಾರ್ಕಂಡೇಯ ಕಾಟ್ಜು, ಯು.ಟಿ. ಖಾದರ್, ನಸೀರ್ ಅಹಮದ್, ರಹೀಂ ಖಾನ್, ರಿಜ್ವಾನ್ ಅರ್ಷದ್, ಆಯೋಜನೆ: ಫಾಲ್ಕನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತ ನಗರ, ಬೆಳಿಗ್ಗೆ 11

ರಾಜ್ಯ ಪರಿಷತ್ ಮಹಾಸಭೆ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಅಭಿನಂದನಾ ಸಮಾರಂಭ: ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ, ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ರಹಮತ್ ತರೀಕೆರೆ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 4


ರಹಮತ್ ತರೀಕೆರೆ

ಹಂಸ ಸಾಂಸ್ಕೃತಿಕ ಸಂಭ್ರಮ ಹಾಗೂ ಹಂಸ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಜಿ. ಜಗದೀಶ್, ಅಧ್ಯಕ್ಷತೆ: ಶ್ರೀನಿವಾಸ ಜಿ. ಕಪ್ಪಣ್ಣ, ಅತಿಥಿಗಳು: ಕೆ.ಎಸ್. ಲತಾಕುಮಾರಿ, ನಿರುಪಮ ಸಿ. ಮೌಳಿ, ವೂಡೇ ಪಿ. ಕೃಷ್ಣ, ಡಾ.ಸಿ. ರಾಮಚಂದ್ರ, ಆಯೋಜನೆ: ಹಂಸಜ್ಯೋತಿ ಟ್ರಸ್ಟ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 4

'ಯಕ್ಷ ಸಿಂಧೂರ' ಯಕ್ಷಗಾನಗಳ ಪ್ರದರ್ಶನ: 'ಶ್ರೀರಾಮ ಪಟ್ಟಾಭಿಷೇಕ' ಯಕ್ಷಗಾನ, ಹಿಮ್ಮೇಳ: ಕೊಳಗಿ ಕೇಶವ ಹೆಗಡೆ, ಮುಮ್ಮೇಳ: ಬಳ್ಕೂರು ಕೃಷ್ಣ ಯಾಜಿ, ಸುಧೀರ್ ಉಪ್ಪೂರು, ಸಿದ್ದಾಪುರ ಅಶೋಕ ಭಟ್, ಗಣಪತಿ ಹೆಗಡೆ ತೋಟಿಮನೆ, ಪ್ರಕಾಶ್ ಕಿರಾಡಿ, ನಾಗರಾಜ್ ದೇವಲ್ಕುಂದ, ಪ್ರಶಾಂತ್ ಹೆಗಡೆ, 'ಸುದರ್ಶನ ವಿಜಯ' ಯಕ್ಷಗಾನ, ಹಿಮ್ಮೇಳ: ರಾಮಕೃಷ್ಣ ಹೆಗಡೆ ಹಿಲ್ಲೂರು, ಶ್ರೇಯಾ ಆಚಾರ್ಯ ಅಲಂಕಾರು, ಮುಮ್ಮೇಳ: ಜಯಪ್ರಕಾಶ್ ಪೆರ್ಮುದೆ, ಸಂತೋಷ್ ಹಿಲಿಯಾಣ, ವಿದ್ಯಾಧರ ಜಲವಳ್ಳಿ, ವಿಶ್ವನಾಥ ಹೆನ್ನಾಬೈಲ್, ಪ್ರಜ್ವಲ್ ಕುಮಾರ್, 'ರುಕ್ಮಿಣಿ ಕಲ್ಯಾಣ' ಯಕ್ಷಗಾನ, ಹಿಮ್ಮೇಳ: ಸುರೇಶ ಶೆಟ್ಟಿ ಶಂಕರನಾರಾಯಣ, ಮುಮ್ಮೇಳ: ಸುನಿಲ್ ಹೊಲಾಡು, ಸುಬ್ರಹ್ಮಣ್ಯ ಚಿಟ್ಟಾಣಿ, ಗೋಪಾಲ ಆಚಾರ್, ನಾಗರಾಜ್ ದೇವಲ್ಕುಂದ, ಶೇಖರ ಶೆಟ್ಟಿ ಎಳಬೇರು, ಪ್ರಶಾಂತ್ ಹೆಗಡೆ, ಆಯೋಜನೆ: ಟೀಮ್ ಕದಳಿ ಸಂಘಟನೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ರಾತ್ರಿ 10


ಬಳ್ಕೂರು ಕೃಷ್ಣ ಯಾಜಿ

ಬಾಹ್ಯಾಕಾಶದ ಪ್ರಯೋಜನಗಳು ಉಪನ್ಯಾಸ ಸರಣಿ: ಉಪನ್ಯಾಸಕರು: ಬಿ.ಆರ್. ಗುರುಪ್ರಸಾದ್, ಆಯೋಜನೆ ಹಾಗೂ ಸ್ಥಳ: ಜವಾಹರ್‌ಲಾಲ್ ನೆಹರೂ ತಾರಾಲಯ, ಸಂಜೆ 4

ಗಾಯನ–ಸನ್ಮಾನ–ವಾದನ: ಗಾಯನ: ಅರ್ಚನಾ ಶೆಣೈ, ತಬಲಾ: ಯೋಗೀಶ ಭಟ್ಟ, ಹಾರ್ಮೋನಿಯಂ: ವಿಘ್ನೇಶ ಭಾಗವತ, ಸನ್ಮಾನ: ಜಿ.ಜಿ. ಹೆಗಡೆ, ಮುಖ್ಯ ಅತಿಥಿ: ರವೀಂದ್ರ ಯಾವಗಲ್, ವಾದನ: ಗಜಾನನ ಸಭಾಹಿತ, ಸುಮಾ ಹೆಗಡೆ, ಗುರುಮೂರ್ತಿ ವೈದ್ಯ, ಆಯೋಜನೆ: ಸಪ್ತಕ, ಸ್ಥಳ: ಸೇವಾ ಸದನ, 14ನೇ ಕ್ರಾಸ್, ಮಲ್ಲೇಶ್ವರ, ಸಂಜೆ 5

ಪ್ರಬೀರ್ ಪುರಕಾಯಸ್ತ ಅವರ 'ಆರದ ಹೋರಾಟದ ಕಿಚ್ಚು' ಪುಸ್ತಕ ಬಿಡುಗಡೆ: ಭಾಗವಹಿಸುವವರು: ಗೀತಾ ಹರಿಹರನ್, ದಿನೇಶ್ ಅಮಿನ್ ಮಟ್ಟು, ರಾಜೇಂದ್ರ ಚೆನ್ನಿ, ಎ. ನಾರಾಯಣ, ಕೆ.ಎಸ್. ವಿಮಲಾ, ಸದಾನಂದ ಆರ್., ಉಗ್ರನರಸಿಂಹೇಗೌಡ, ಆಯೋಜನೆ: ಮೈಸೂರಿನ ಅಭಿರುಚಿ ಪ್ರಕಾಶನ, ಕ್ರಿಯಾ ಮಾಧ್ಯಮ, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತದ ಬಳಿ, ಸಂಜೆ 5

'ಹಸಿರೆ ಹೊನ್ನು' ನಾಟಕ ಪ್ರದರ್ಶನ: ಆಯೋಜನೆ ಹಾಗೂ ಸ್ಥಳ: ಸತೀಶ್ ಧವನ್ ಆಡಿಟೋರಿಯಂ, ಭಾರತೀಯ ವಿಜ್ಞಾನ ಸಂಸ್ಥೆ, ಸಿ.ವಿ.ರಾಮನ್ ರಸ್ತೆ, ಸಂಜೆ 5

ಯುವ ಸಂಗೀತೋತ್ಸವ: ವೀಣಾ ವಾದನ: ಮನೋಜ್ ಕೆ. ಜಗನ್ನಾಥ್, ಮೃದಂಗ: ನೀಲಭ್ ಧೋಗ್ರೆ, ಘಟ: ಅಭಯ್ ಆದಿತ್ಯ, ಗಾಯನ: ಸಾರಂಗ್ ಭಾಗವತ್, ಪಿಟೀಲು: ಪ್ರಣವಿ ಜಿ., ಮೃದಂಗ: ಶ್ರೀನಿವಾಸ್ ಬಿ.ಜಿ., ಘಟ: ಸುನಿಧಿ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

ತಿಂಗಳ ನಾಟಕ ಸಂಭ್ರಮ: ತಿಂಗಳ ಅತಿಥಿ: ಸಿಂ.ರಾ. ಹೊನ್ನಲಿಂಗಯ್ಯ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ನಾಟಕ ಪ್ರದರ್ಶನ: ಸವದತ್ತಿಯ ರಂಗ ಆರಾಧನಾ ಸಾಂಸ್ಕೃತಿಕ ಸಂಘಟನೆಯಿಂದ 'ನೆಲಮುಗಿಲು', ನಿರ್ದೇಶನ: ಝುಕೀರ ನದಾಫ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

'ಸಮರ್ಥನಂ ಸಿಸ್ಟರ್ಸ್' ಸಂಗೀತ ಕಾರ್ಯಕ್ರಮ: ಅತಿಥಿಗಳು: ದಿನೇಶ್ ಗುಂಡೂರಾವ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಯೋಗರಾಜ್ ಭಟ್, ಸಿ.ಕೆ. ರಾಮಮೂರ್ತಿ, ಆರ್.ಪಿ. ಪಟ್ನಾಯಕ್, ಆದರ್ಶ ಶಾಸ್ತ್ರಿ, ಸುಮುಖ, ರವಿಚಂದ್ರ, ಆಯೋಜನೆ: ಸಮರ್ಥನಂ ಅಂಗವಿಕಲರ ಸಂಸ್ಥೆ, ಸ್ಥಳ: ವೈಟ್ ಪೆಟಲ್ಸ್, ಗೇಟ್ ಸಂಖ್ಯೆ 3, ಅರಮನೆ ಮೈದಾನ, ಸಂಜೆ 6.30

'ಆನಂದ ರಾಮಾಯಣ' ಧಾರ್ಮಿಕ ಪ್ರವಚನ: ಚಂದ್ರಶೇಖರ ಆಚಾರ್ಯ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಮತ್ತಿಕೆರೆ, ಸಂಜೆ 7

ಯೋಗ ದಿನದ ವಿಶೇಷ



ಸಾಮೂಹಿಕ ಯೋಗಾಭ್ಯಾಸ: ಉಪಸ್ಥಿತಿ: ಥಾವರಚಂದ್ ಗೆಹಲೋತ್, ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಎಸ್. ಹೊರಟ್ಟಿ, ಯು.ಟಿ. ಖಾದರ್, ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಅನಿರುದ್ಧ, ಶ್ರುತಿ ಹರಿಹರನ್, ಶೈನ್ ಶೆಟ್ಟಿ, ಆಯೋಜನೆ: ಆಯುಷ್ ಇಲಾಖೆ, ಸ್ಥಳ: ವಿಧಾನಸೌಧದ ಮುಂಭಾಗ: ಬೆಳಿಗ್ಗೆ 6ರಿಂದ 9

ಸಾಮೂಹಿಕ ಯೋಗಾಭ್ಯಾಸ, ಯೋಗ ಮತ್ತು ಧ್ಯಾನದ ಬಗ್ಗೆ ವಿಚಾರಸಂಕಿರಣ, ಆಯೋಜನೆ: ರೇವಾ ವಿಶ್ವವಿದ್ಯಾಲಯ, ಇಂಡಿಯನ್ ಯೋಗ ಅಸೋಸಿಯೇಷನ್, ಮಹಾವತಾರ್ ಫೌಂಡೇಷನ್, ಸ್ಥಳ: ರೇವಾ ವಿಶ್ವವಿದ್ಯಾಲಯ, ರುಕ್ಮಿಣಿ ನಾಲೆಡ್ಜ್ ಪಾರ್ಕ್, ಯಲಹಂಕ, ಬೆಳಿಗ್ಗೆ 6.30ರಿಂದ

ಯೋಗಾಭ್ಯಾಸ: ಅತಿಥಿಗಳು: ಶಿವರುದ್ರ ಸ್ವಾಮೀಜಿ, ಮಿಲಿಂದ ಗೋಖಲೆ, ಪಿ.ಸಿ. ಮೋಹನ್, ಜಗ್ಗೇಶ್, ಆಯೋಜನೆ: ಅಂತರರಾಷ್ಟ್ರೀಯ ಯೋಗ ದಿನ ಸಮಿತಿ, ಪಂಡಿತ್ ಶ್ರೀ ದಿನದಯಾಳ್ ಸೇವಾ ಸಮಿತಿ, ಸ್ಥಳ: ಚಿಕ್ಕಲಾಲ್‌ಬಾಗ್ ಆಟದ ಮೈದಾನ, ಬೆಳಿಗ್ಗೆ 6.30

ಯೋಗದ ಜತೆಗೆ ಸಂಗೀತ–ನೃತ್ಯ ಪ್ರದರ್ಶನ, ವಿಶ್ವ ದಾಖಲೆ ಪ್ರಯತ್ನ: ಮುಖ್ಯ ಅತಿಥಿಗಳು: ಪ್ರತಾಪ್‌ರಾವ್ ಜಾಧವ್, ಶೋಭಾ ಕರಂದ್ಲಾಜೆ, ಡಾ.ಸಿ.ಎನ್. ಮಂಜುನಾಥ್, ಸಂತೋಷ್ ಶುಕ್ಲಾ, ನಮ್ರತಾ ಗೌಡ, ರಿಕಿ ಕೇಜ್, ಆಯೋಜನೆ: ಲೈಫ್ ಎಟರ್ನಲ್ ಟ್ರಸ್ಟ್, ಸಹಜ ಯೋಗ ಕರ್ನಾಟಕ, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬಳ್ಳಾರಿ ರಸ್ತೆ, 7.30

ಯೋಗಾಸನಗಳಲ್ಲಿ 12 ಗಿನ್ನಿಸ್ ದಾಖಲೆ ಪ್ರಯತ್ನ: ಆಯೋಜನೆ: ಅಕ್ಷರ ಯೋಗ ಕೇಂದ್ರ, ಸ್ಥಳ: ಪ್ರಿನ್ಸೆಸ್ ಶ್ರೈನ್, ಗೇಟ್ ನಂ. 9, ಅರಮನೆ ಮೈದಾನ, ಬೆಳಿಗ್ಗೆ 8

ಯೋಗಾಭ್ಯಾಸ: ಉದ್ಘಾಟನೆ: ಕಾಮೇಶ್ವರ ರಾವ್, ಅತಿಥಿಗಳು: ಅನು ಶಿವರಾಮನ್, ಕೆ.ಎಸ್. ಮುದ್ಗಲ್, ಆಯೋಜನೆ ಹಾಗೂ ಸ್ಥಳ: ಹೈಕೋರ್ಟ್, ಬೆಳಿಗ್ಗೆ 8.30

ಯೋಗಾಭ್ಯಾಸ: ಆಯೋಜನೆ ಹಾಗೂ ಸ್ಥಳ: ಆರ್ಟ್ ಆಫ್ ಲಿವಿಂಗ್ ಇಂಟರ್‌ನ್ಯಾಷನಲ್ ಆಶ್ರಮ, ಕನಕಪುರ ರಸ್ತೆ, ಬೆಳಿಗ್ಗೆ 8.45

ಯೋಗಾಭ್ಯಾಸ: ಅಧ್ಯಕ್ಷತೆ: ಪ್ರೊ.ಕೆ.ಆರ್. ಜಲಜಾ, ತರಬೇತುದಾರರು: ಪ್ರಕಾಶ್ ಯೋಗ ಗುರೂಜಿ, ಸ್ಥಳ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 9.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in


ಕೆಎಂಎಫ್
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಸಹಕಾರ ಕ್ಷೇತ್ರದ ಅಭಿವೃದ್ಧಿಯ ಹರಿಕಾರ, "ಸಹಕಾರ ರತ್ನ"
ಮಾನ್ಯ ಸಹಕಾರ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾದ
ಶ್ರೀ ಕೆ.ಎನ್. ರಾಜಣ್ಣರವರ
75ನೇ ಜನ್ಮದಿನ ಅಮೃತ ಮಹೋತ್ಸವದ
ಶುಭಾಶಯಗಳು
"ಲಕ್ಷಾಂತರ ಜನರ ನೆಚ್ಚಿನ ಆಯ್ಕೆ"
ನಂದಿನಿ ®
ನಂದಿನಿ ಹಾಲು
ಮತ್ತು ಹಾಲಿನ ಉತ್ಪನ್ನಗಳು
Nandini
CURD
ಮೊಸರು
ನಂದಿನಿ Nandini
ಪನೀರ್ PANEER
BUTTER
Cheddar Cheese Block
GULAB JAMOON MIX
MUFFINS
Spongy
ಟಿ.ಹೆಚ್.ಎಂ. ಕುಮಾರ್, ಭಾಆಸೇ
ಆಡಳಿತಾಧಿಕಾರಿಗಳು, ಕೆಎಂಎಫ್
ಹಾಗೂ ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ
ಬಿ. ಶಿವಸ್ವಾಮಿ, ಕಆಸೇ
ವ್ಯವಸ್ಥಾಪಕ ನಿರ್ದೇಶಕರು
ಕೆಎಂಎಫ್
ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

‘ಇಂಗ್ಲಿಷ್ ಸಬಲೀಕರಣದ ಭಾಷೆ’

ಇದು ನಾಚಿಕೆಪಡಿಸುವ ಭಾಷೆಯಲ್ಲ • ಪ್ರತಿ ಮಗುವೂ ಕಲಿಯಬೇಕು–ರಾಹುಲ್ ಗಾಂಧಿ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ (ಪಿಟಿಐ): ‘ಇಂಗ್ಲಿಷ್ ನಮ್ಮನ್ನು ಸಬಲೀಕರಿಸುವ ಭಾಷೆಯೇ ಹೊರತು ನಾಚಿಕೆ ಪಡಿಸುವ ಭಾಷೆಯಲ್ಲ. ಹೀಗಾಗಿ ಅದನ್ನು ಪ್ರತಿ ಮಗುವಿಗೂ ಕಲಿಸಬೇಕು’ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ಪ್ರತಿಪಾದಿಸಿದ್ದಾರೆ.


ರಾಹುಲ್ ಗಾಂಧಿ

‘ಆದರೆ ಬಡ ಮಕ್ಕಳು ಇಂಗ್ಲಿಷ್ ಕಲಿಯುವುದು ಆರ್‌ಎಸ್‌ಎಸ್– ಬಿಜೆಪಿಗೆ ಬೇಕಿಲ್ಲ. ಏಕೆಂದರೆ, ಈ ಭಾಷೆಯನ್ನು ಕಲಿತರೆ ಅವರು ಪ್ರಶ್ನಿಸುತ್ತಾರೆ ಮತ್ತು ಸಮಾನತೆ ಪಡೆಯುತ್ತಾರೆ ಎಂಬುದೇ ಅವರ ಆತಂಕವಾಗಿದೆ’ ಎಂದು ರಾಹುಲ್ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಗೃಹ ಸಚಿವ ಅಮಿತ್ ಶಾ ಅವರು, ‘ಇಂಗ್ಲಿಷ್ ಮಾತನಾಡುವವರು ನಾಚಿಕೆಪಟ್ಟುಕೊಳ್ಳುವ ಕಾಲ ದೂರವಿಲ್ಲ’ ಎಂದು ಹೇಳಿಕೆ ನೀಡಿದ, ಮರು ದಿನ ರಾಹುಲ್ ಪ್ರತಿಕ್ರಿಯಿಸಿದ್ದಾರೆ.

‘ಇಂಗ್ಲಿಷ್ ಭಾಷೆ ಅಣೆಕಟ್ಟೆಯಲ್ಲ, ಬದಲಿಗೆ ಅದು ಸೇತುವೆ. ಇಂಗ್ಲಿಷ್ ಕಲಿತರೆ ನಾಚಿಕೆ ಆಗುವುದಿಲ್ಲ, ಬದಲಿಗೆ ಸಬಲೀಕರಣ ಆಗುತ್ತದೆ. ಇಂಗ್ಲಿಷ್ ಭಾಷೆ ಸರಪಳಿಯಲ್ಲ, ಬದಲಿಗೆ ಅದು ಸರಪಳಿ ಭೇದಿಸುವ ಸಾಧನವಾಗಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಾತೃಭಾಷೆಯಷ್ಟೇ ಇಂಗ್ಲಿಷ್ ಕೂಡ ಮುಖ್ಯ. ಅದು ಉದ್ಯೋಗ ಒದಗಿಸುವುದರ ಜತೆಗೆ ಆತ್ಮವಿಶ್ವಾಸವನ್ನೂ ವೃದ್ಧಿಸುತ್ತದೆ’ ಎಂದು ಅವರು ಹೇಳಿದ್ದಾರೆ.

‘ಸಮಾನತೆಗೆ ದಾರಿ’: ‘ನಮ್ಮ ದೇಶದ ಪ್ರತಿ ಭಾಷೆಗೂ ಆತ್ಮ, ಸಂಸ್ಕೃತಿ, ಜ್ಞಾನವಿದೆ. ನಾವು ಅವುಗಳನ್ನು ಪೋಷಿಸಬೇಕು. ಅದರ ಜತೆಗೆ ಪ್ರತಿ ಮಗುವಿಗೂ ಇಂಗ್ಲಿಷ್ ಕಲಿಸಬೇಕು. ಸ್ಪರ್ಧಾ ಜಗತ್ತಿನಲ್ಲಿ ಪ್ರತಿ ಮಗುವಿಗೂ ಸಮಾನ ಅವಕಾಶ ಕಲ್ಪಿಸಲು ಇದು ಪ್ರಮುಖ ದಾರಿಯಾಗಿದೆ’ ಎಂದು ವಿವರಿಸಿದ್ದಾರೆ.

‘ಬಿಜೆಪಿ ಸಚಿವರು ಮತ್ತು ಅವರ ಮಕ್ಕಳನ್ನು ಗಮನಿಸಿ. ಅವರೆಲ್ಲ ಅಧ್ಯಯನಕ್ಕೆ ಇಂಗ್ಲೆಂಡ್‌ಗೆ ಹೋಗುತ್ತಾರೆ. ಅವರಿಗೆ ಇಂಗ್ಲಿಷ್ ಒಂದು ಅಸ್ತ್ರ. ನೀವೂ ಇಂಗ್ಲಿಷ್ ಕಲಿತರೆ ಅಮೆರಿಕ, ಜಪಾನ್ ಸೇರಿದಂತೆ ಎಲ್ಲಿಗೆ ಬೇಕಾದರೂ ಹೋಗಬಹುದು’ ಎಂದಿದ್ದಾರೆ.

‘ಆದರೆ, ಇಂಗ್ಲಿಷ್ ಕಲಿಯಬೇಡಿ ಎಂದು ಬಿಜೆಪಿ– ಆರ್‌ಎಸ್‌ಎಸ್ ಹೇಳುತ್ತಿರುವುದರ ಹಿಂದೆ ಏನಿದೆ ಎಂಬುದು ತಿಳಿದಿದೆಯಾ?... ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳುವ ಬೋರ್ಡ್ ಕೊಠಡಿಗಳಲ್ಲಿ ನಿಮ್ಮ ಪ್ರವೇಶವನ್ನು ಅವರು ನೋಡಲು ಬಯಸುವುದಿಲ್ಲ. ಕೋಟ್ಯಂತರ ರೂಪಾಯಿ ವೇತನದ ಉದ್ಯೋಗಗಳು ನಿಮಗೆ ದೊರೆಯುವುದೂ ಅವರಿಗೆ ಬೇಕಿಲ್ಲ. ನಿಮಗೆ ಮಹತ್ವದ ಅವಕಾಶಗಳ ಬಾಗಿಲು ಮುಚ್ಚಿರಬೇಕು ಎಂಬುದೇ ಅವರ ಉದ್ದೇಶ’ ಎಂದು ರಾಹುಲ್ ಗಾಂಧಿ ಆರೋಪ ಮಾಡಿದ್ದಾರೆ.

ಮುಖ್ಯಾಂಶಗಳು

- ಇಂಗ್ಲಿಷ್ ಭಾಷೆ ಅಣೆಕಟ್ಟೆ ಅಲ್ಲ, ಸೇತುವೆ
- ಉದ್ಯೋಗದ ಜತೆಗೆ ಆತ್ಮವಿಶ್ವಾಸವನ್ನೂ ಹೆಚ್ಚಿಸುತ್ತದೆ
- ಬಡ ಮಕ್ಕಳು ಇಂಗ್ಲಿಷ್ ಕಲಿಯುವುದು ಬಿಜೆಪಿಗೆ ಬೇಕಿಲ್ಲ

‘ಭಾರತದಾದ್ಯಂತ ಸಂಪರ್ಕ ಭಾಷೆ’

ಇಂಗ್ಲಿಷ್ ಭಾರತದಾದ್ಯಂತ ಸಂಪರ್ಕ ಭಾಷೆಯಾಗಿದೆ. ಜಾಗತಿಕ ಮಟ್ಟದಲ್ಲಿ ಪ್ರಯೋಜನ ಕಲ್ಪಿಸುವುದರ ಜತೆಗೆ ಅದು ಜನರ ಜ್ಞಾನವನ್ನು ಹೆಚ್ಚಿಸುತ್ತದೆ. ಇದನ್ನು ಮಾತನಾಡುವ ಭಾರತೀಯರು ನಾಚಿಕೆಪಡಬೇಕಾದ ಅಗತ್ಯವಿಲ್ಲ

ಸಾಗರಿಕಾ ಘೋಷ್, ಟಿಎಂಸಿ ರಾಜ್ಯಸಭಾ ಸದಸ್ಯೆ

ಯಾವುದೇ ಭಾಷೆ ಅಥವಾ ಉಪ ಭಾಷೆ ಮಾತನಾಡಿದರೆ ಹೇಗೆ ನಾಚಿಕೆಯಾಗುತ್ತದೆ. ಭಾಷೆಗಳ ನಡುವೆ ಸಹೋದರ ಸಂಬಂಧ ಸ್ಥಾಪಿಸಲು ನೆರವಾಗಬೇಕಾದದ್ದು ಸಾರ್ವಜನಿಕ ಜೀವನದಲ್ಲಿರುವ ಪ್ರತಿಯೊಬ್ಬರ ಕರ್ತವ್ಯ

ಮನೋಜ್ ಕೆ. ಝಾ, ಆರ್‌ಜೆಡಿ ಸಂಸದ

ಅಮಿತ್ ಶಾ ಅವರ ಹೇಳಿಕೆಯು, ಆರ್‌ಎಸ್‌ಎಸ್‌ನ ಹಿಂದಿ– ಹಿಂದೂ– ಹಿಂದೂಸ್ತಾನ ದೃಷ್ಟಿಕೋನಕ್ಕೆ ಅನುಗುಣವಾಗಿರದ ಪ್ರತಿ ಭಾಷೆಯನ್ನೂ ಅವಮಾನಿಸಿದಂತಿದೆ

ಸಿಪಿಐ

ಚಿಟಿಕೆ ಸುದ್ದಿ

ಮದುರೈಗೆ ಹೊರಟಿದ್ದ ವಿಮಾನ ವಾಪಸ್



ಚೆನ್ನೈ (ಪಿಟಿಐ): ಚೆನ್ನೈನಿಂದ ಮದುರೈಗೆ ಹೊರಟಿದ್ದ ಇಂಡಿಗೊ ವಿಮಾನದಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಮರಳಿ ವಾಪಸ್ ಆಗಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಹಾರಾಟ ನಡೆಸಿದ ಅರ್ಧಗಂಟೆಯಲ್ಲಿ ತಾಂತ್ರಿಕ ಸಮಸ್ಯೆ ಇರುವುದನ್ನು ಪೈಲಟ್ ಗಮನಿಸಿದ್ದಾರೆ. ಮರಳಿ ಚೆನ್ನೈ ವಿಮಾನ ನಿಲ್ದಾಣದಲ್ಲಿ ಕೆಳಗಿಳಿಸಲು ಅನುಮತಿ ಕೇಳಿದ್ದಾರೆ ಎಂದು ತಿಳಿಸಿದರು.

‘68 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ವಿಮಾನವು ನಂತರ ಚೆನ್ನೈನಲ್ಲಿ ಸುರಕ್ಷಿತವಾಗಿ ಕೆಳಗಿಳಿದು, ಎಲ್ಲಾ ಪ್ರಯಾಣಿಕರನ್ನು ಇಳಿಸಲಾಯಿತು’ ಎಂದಿದ್ದಾರೆ.

ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಯಿತು.

‘ಆ್ಯಕ್ಸಿಯಂ–4’ ಮಿಷನ್ ಮತ್ತೆ ಮುಂದೂಡಿಕೆ

ನವದೆಹಲಿ (ಪಿಟಿಐ): ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಮತ್ತು ಇತರ ಮೂವರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಕಳುಹಿಸುವ ‘ಆ್ಯಕ್ಸಿಯಂ–4’ ಮಿಷನ್ ಭಾನುವಾರ ನಿಗದಿಯಾಗಿದ್ದ ಉಡಾವಣೆಯನ್ನು ನಾಸಾ ಮುಂದೂಡಿದೆ. ರಷ್ಯನ್ ವಿಭಾಗದಲ್ಲಿ ರಿಪೇರಿಯಾದ ಕಕ್ಷೆಯ ಪ್ರಯೋಗಾಲಯದಲ್ಲಿ ಕಾರ್ಯಾಚರಣೆಯ ಮೌಲ್ಯಮಾಪನ ಮಾಡಲು ಇನ್ನಷ್ಟು ಸಮಯ ಬೇಕಿರುವ ಕಾರಣ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.

‘ಜೂನ್ 30ರವರೆಗೆ ಉಡಾವಣೆಗೆ ಸಾಕಷ್ಟು ಅವಕಾಶಗಳಿವೆ. ಹೊಸ ದಿನಾಂಕವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು’ ಎಂದು ನಾಸಾದ ವ್ಯವಸ್ಥಾಪಕಿ ಡಾನ ವಿಗೇಲ್ ತಿಳಿಸಿದ್ದಾರೆ.

‘ಕೇಂದ್ರದ ಮಾರ್ಗಸೂಚಿಯಂತೆ ಮೀಸಲಾತಿ’

ವಿವಿಧ ವಸತಿ ಯೋಜನೆಗಳಲ್ಲಿ ಮೀಸಲು ಸಮರ್ಥಿಸಿದ ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಮಂತ್ರಿ ಅವರ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ 15 ಅಂಶಗಳ ಕಾರ್ಯಕ್ರಮದ (2019) ಮಾರ್ಗಸೂಚಿಯಂತೆಯೇ ವಸತಿ ಯೋಜನೆಗಳಲ್ಲಿ ಅಲ್ಪಸಂಖ್ಯಾತರಿಗೆ ಶೇ 15 ಮೀಸಲು ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.


ಸಿದ್ದರಾಮಯ್ಯ

ಕೇಂದ್ರ ಮತ್ತು ರಾಜ್ಯದ ಅನುಷ್ಠಾನ ಸಂಸ್ಥೆಗಳು ಅಲ್ಪಸಂಖ್ಯಾತರಿಗೆ ಶೇ 15ರಷ್ಟು ಭೌತಿಕ ಮತ್ತು ಆರ್ಥಿಕ ಗುರಿಗಳನ್ನು ಮೀಸಲಿಡುವಂತೆ ಕೇಂದ್ರ ಸರ್ಕಾರ ಸ್ಪಷ್ಟ ನಿರ್ದೇಶನ ನೀಡಿದೆ. ಕೇಂದ್ರದ ಮಾರ್ಗಸೂಚಿಗಳಿಗೆ ಅನುಗುಣವಾಗಿಯೇ ಕ್ರೈಸ್ತರು, ಜೈನರು, ಮುಸ್ಲಿಮರು ಸೇರಿದಂತೆ ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಮೀಸಲು ನೀಡಲು ಸಚಿವ ಸಂಪುಟ ಅನುಮೋದಿಸಿದೆ. ಈ ಮಾರ್ಗಸೂಚಿಯನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವೇ ಹೊರಡಿಸಿದೆ. ಹಲವು ವರ್ಷಗಳಿಂದ ಈ ನೀತಿ ಜಾರಿಯಲ್ಲಿದೆ. ಪ್ರಧಾನಮಂತ್ರಿ ಆವಾಸ್‌ನಂತಹ ಕೇಂದ್ರ ಯೋಜನೆಗಳಲ್ಲೇ ಶೇ 15ರಷ್ಟು ಮೀಸಲು ನಿಗದಿ ಮಾಡಲಾಗಿದೆ ಎಂದಿದ್ದಾರೆ.

ಅಲ್ಪಸಂಖ್ಯಾತರಿಗೆ ಶೇ 15ರಷ್ಟು ಮೀಸಲಿಡುವುದು ಅಸಾಂವಿಧಾನಿಕ ಎನ್ನುವುದಾದರೆ ಕೇಂದ್ರ ಸರ್ಕಾರ ಏಕೆ ಪಾಲನೆ ಮಾಡುತ್ತಿದೆ? ಎಲ್ಲಾ ರಾಜ್ಯಗಳಿಗೆ ಏಕೆ ಮಾರ್ಗಸೂಚಿ ಕಳುಹಿಸಿದೆ ಎಂದು ಪ್ರಶ್ನಿಸಿದ್ದಾರೆ.

ಕೋಟಾದ ಸಂಪೂರ್ಣ ಹೆಚ್ಚಳಕ್ಕೆ ಸಚಿವ ಸಂಪುಟ ಅವಕಾಶ ನೀಡಿಲ್ಲ. ಅಲ್ಪಸಂಖ್ಯಾತರ ಜನಸಂಖ್ಯೆ ಶೇ 10ಕ್ಕಿಂತ ಕಡಿಮೆ ಇರುವ ಪಂಚಾಯಿತಿಗಳಲ್ಲಿ ಈಗಿರುವ ಶೇ 10ರಷ್ಟು ಗುರಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ಹೆಚ್ಚಿನ ಜನಸಂಖ್ಯೆ ಇರುವ ಪಂಚಾಯಿತಿಗಳಲ್ಲಿ ಮರುಹಂಚಿಕೆಗೆ ಅವಕಾಶ ಮಾಡಿಕೊಡಲಾಗಿದೆ. ಇದು ಪರಿಶಿಷ್ಟರು ಅಥವಾ ಹಿಂದುಳಿದ ವರ್ಗಗಳ ಮೀಸಲಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಈ ನಿರ್ಧಾರ ಕಾನೂನುಬದ್ಧವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಬಿಜೆಪಿಯ ಪ್ರತಿಕ್ರಿಯೆ ಬೂಟಾಟಿಕೆ ಮತ್ತು ರಾಜಕೀಯ ಪ್ರೇರಿತವಾಗಿದೆ. ರಾಷ್ಟ್ರಮಟ್ಟದ ವಸತಿ ಯೋಜನೆಗಳಲ್ಲಿ ಅಲ್ಪಸಂಖ್ಯಾತರಿಗೆ ಶೇ 15 ಮೀಸಲಿಟ್ಟಿರುವ ಅದೇ ಪಕ್ಷ ರಾಜ್ಯ ಯೋಜನೆಗಳಿಗೆ ಅದೇ ತತ್ವವನ್ನು ಅನ್ವಯಿಸಿದ್ದಕ್ಕಾಗಿ ತುಷ್ಟೀಕರಣದ ಆರೋಪ ಮಾಡುತ್ತಿದೆ. ಇದು ಕೋಮು ಭಾವನೆ ಕೆರಳಿಸುವ ಮತ್ತು ರಾಜ್ಯದ ಬಡ ಕುಟುಂಬಗಳನ್ನು ಮೇಲೆತ್ತುವ ಪ್ರಯತ್ನಗಳನ್ನು ಹಳಿತಪ್ಪಿಸುವ ಬಿಜೆಪಿ ನಡೆ. ಇಂತಹ ಕಿರಿದಾದ ರಾಜಕೀಯ ಲೆಕ್ಕಾಚಾರಗಳನ್ನು ಮೀರಿ ಬಡವರನ್ನು ಮೇಲಕ್ಕೆತ್ತುವ ಕ್ರಮಗಳನ್ನು ಬಿಜೆಪಿ ನಾಯಕರು ಬೆಂಬಲಿಸಲಿ ಎಂದು ಒತ್ತಾಯಿಸಿದ್ದಾರೆ.

‘ಎಚ್‌ಡಿಕೆ ಅವಧಿಯ ಶಿಫಾರಸಿನಂತೆ ಮೀಸಲು’


ಜಮೀರ್

ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾದ್ದ 2019ರ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ರಚಿಸಿದ್ದ ಸಂಪುಟ ಉಪಸಮಿತಿ ಶಿಫಾರಸಿನಂತೆ ವಸತಿ ಯೋಜನೆಗಳಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಶೇ 15ರಷ್ಟು ಮೀಸಲಿಡಲಾಗಿದೆ ಎಂದು ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಹೇಳಿದ್ದಾರೆ.

ಸಾಚಾರ್ ಸಮಿತಿ ವರದಿ ಪ್ರಕಾರ ವಸತಿ ಯೋಜನೆಗಳಲ್ಲಿ ಕೇಂದ್ರ ಸರ್ಕಾರ ಅಲ್ಪಸಂಖ್ಯಾತ ಸಮುದಾಯಕ್ಕೆ ಶೇ 15ರಷ್ಟು ಮೀಸಲಿಟ್ಟಿದೆ. ಅದೇ ರೀತಿ ರಾಜ್ಯದಲ್ಲೂ ನೀಡಬೇಕು ಎಂಬ ಬೇಡಿಕೆ ಇತ್ತು. ಸಂಪುಟ ಉಪಸಮಿತಿ ಶಿಫಾರಸಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯ ಸಚಿವ ಸಂಪುಟ ಸಭೆ ಸಮ್ಮತಿ ನೀಡಿದೆ. ಕೇಂದ್ರದ ಮಾದರಿಯನ್ನೇ ಅನುಸರಿಸಿ ಮೀಸಲಾತಿ ಮರುನಿಗದಿ ಮಾಡಿದೆ ಎಂದಿದ್ದಾರೆ.

ಅಲ್ಪಸಂಖ್ಯಾತ ಸಮುದಾಯದಲ್ಲಿ ಬಡ ಕುಟುಂಬಗಳಿವೆ. ವಸತಿರಹಿತರ ಸಂಖ್ಯೆ ಹೆಚ್ಚಾಗಿದೆ. 2021 ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗವು ಸಹ ಶೇ 15 ರಷ್ಟು ಮೀಲು ಜಾರಿಗೊಳಿಸಬೇಕು ಎಂದು ಸೂಚಿಸಿತ್ತು. ಹೀಗಾಗಿ ಮೀಸಲು ಪ್ರಮಾಣ ಹೆಚ್ಚಿಸಲಾಗಿದೆ. ವಾಸ್ತವಾಂಶ ಅರ್ಥಮಾಡಿಕೊಳ್ಳದೆ ವಿರೋಧ ಪಕ್ಷಗಳು ಅನಗತ್ಯ ಟೀಕೆ ಮಾಡುತ್ತಿವೆ ಎಂದು ಅವರು ದೂರಿದ್ದಾರೆ.

ಸರ್ಕಾರಿ ಶಾಲೆಗೆ ‘ಖಾಸಗಿ’ ಮಕ್ಕಳು....

ಒಂದನೇ ಪುಟದಿಂದ...

‘ನಮ್ಮ ಮಕ್ಕಳು ಅನುತ್ತೀರ್ಣರಾಗುವಷ್ಟು ಕಲಿಕೆಯಲ್ಲಿ ಹಿಂದುಳಿದಿರಲಿಲ್ಲ. ಖಾಸಗಿ ಶಾಲೆಯಲ್ಲೇ ಪಾಠ ಮಾಡಿದ್ದಾರೆ. ಪರೀಕ್ಷೆಗಾಗಿ ಸರ್ಕಾರಿ ಶಾಲೆಗೆ ಸೇರಿಸಿದ್ದಾರೆ. ಆದರೆ, ಸರ್ಕಾರಿ ಶಾಲೆಯಲ್ಲಿ ನಿಗದಿತ ಹಾಜರಾತಿ ದೊರೆಯದ ಕಾರಣ ಅಲ್ಲಿ ಆಂತರಿಕ ಅಂಕಗಳನ್ನು ನೀಡಿಲ್ಲ. ಇದರಿಂದ ಮಕ್ಕಳು ಅನುತ್ತೀರ್ಣರಾಗಿದ್ದಾರೆ. ಹೀಗೆ 10 ಮಕ್ಕಳಿಗೆ ಅನ್ಯಾಯವಾಗಿದೆ’ ಎಂದು ಮತ್ತೊಬ್ಬ ಪೋಷಕರು ಆರೋಪಿಸಿದ್ದಾರೆ.

‘ಪೋಷಕರ ಗಮನಕ್ಕೂ ಬಾರದೆ ಅನಾಥ ಮಕ್ಕಳು ಎಂದು ಸರ್ಕಾರಿ ಶಾಲೆಗೆ ಸೇರಿಸಿದ್ದಾರೆ. ಸರ್ಕಾರಿ ಶಾಲೆ ಸಮವಸ್ತ್ರ ಹಾಕಿ ಫೋಟೊ ಸಹ ತೆಗೆದುಕೊಂಡಿದ್ದಾರೆ. ನಂತರ ಪರೀಕ್ಷೆಯ ಪ್ರವೇಶಪತ್ರ ನೀಡಿ, ಸರ್ಕಾರಿ ಶಾಲೆಯಲ್ಲೇ ಪರೀಕ್ಷೆ ಬರೆಸಿದ್ದಾರೆ’ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಚುನಾವಣೆ ವೆಚ್ಚ: ಬಿಜೆಪಿಯಿಂದಲೇ ಹೆಚ್ಚು

ನವದೆಹಲಿ (ಪಿಟಿಐ): ಲೋಕಸಭೆ, 4 ರಾಜ್ಯಗಳ ವಿಧಾನಸಭೆಗೆ 2024ರಲ್ಲಿ ನಡೆದಿದ್ದ ಚುನಾವಣೆಗಳಲ್ಲಿ ಬಿಜೆಪಿ ಅತ್ಯಧಿಕ ಹಣ ವ್ಯಯಿಸಿದೆ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಪ್ರಕಾರ, ಬಿಜೆಪಿ ₹ 1,494 ಕೋಟಿ ವ್ಯಯಿಸಿದೆ.

ರಾಷ್ಟ್ರೀಯ, ಪ್ರಾದೇಶಿಕ ಪಕ್ಷಗಳು ಸೇರಿ 32 ಪಕ್ಷಗಳ ಚುನಾವಣಾ ವೆಚ್ಚದ ವಿವರ ಆಧರಿಸಿದ ವಿಶ್ಲೇಷಣೆಯನ್ನು ಎಡಿಆರ್ ಬಿಡುಗಡೆ ಮಾಡಿದೆ. ವೆಚ್ಚ ಕುರಿತ ಪಟ್ಟಿಯಲ್ಲಿ ಬಿಜೆ ಪ್ರಥಮ ಸ್ಥಾನದಲ್ಲಿದೆ ಎಂದು ವರದಿ ಉಲ್ಲೇಖಿಸಿದೆ.

ಅಂಕಿ ಅಂಶಗಳು

₹3,353 ಕೋಟಿ ಪಕ್ಷಗಳು ಮಾಡಿರುವ ಒಟ್ಟು ವೆಚ್ಚ

21 ವಿವರ ಸಲ್ಲಿಸದ ಪಕ್ಷಗಳು

₹6,930 ಕೋಟಿ ರಾಷ್ಟ್ರೀಯ ಪಕ್ಷಗಳು ಸಂಗ್ರಹಿಸಿದ ದೇಣಿಗೆ

₹515 ಕೋಟಿ ಪ್ರಾದೇಶಿಕ ಪಕ್ಷಗಳು ಸಂಗ್ರಹಿಸಿದ ದೇಣಿಗೆ

ಪ್ರಮುಖ ಪಕ್ಷಗಳಿಂದ ವೆಚ್ಚ (ಕೋಟಿಗಳಲ್ಲಿ)

ಪಕ್ಷ	ಮೊತ್ತ	ಶೇಕಡವಾರು
ಬಿಜೆಪಿ	₹1,494 ಕೋಟಿ	44.56%
ಕಾಂಗ್ರೆಸ್	₹620 ಕೋಟಿ	18.5%

ಯಾವುದಕ್ಕಾಗಿ ಅಧಿಕ ವೆಚ್ಚ? (₹ ಕೋಟಿಗಳಲ್ಲಿ)

ಪ್ರಚಾರ	2,008
ಮುಖಂಡರ ಪ್ರಯಾಣ	795
ಅಭ್ಯರ್ಥಿಗಳಿಗೆ ನೆರವು	402
ವರ್ಚುಯಲ್ ಪ್ರಚಾರ	132

ವರದಿ ಮುಖ್ಯಾಂಶಗಳು...

- 2024ರಲ್ಲಿ ಲೋಕಸಭೆ ಜೊತೆಗೆ ಆಂಧ್ರಪ್ರದೇಶ, ಅರುಣಾಚಲ ಪ್ರದೇಶ, ಒಡಿಶಾ, ಸಿಕ್ಕಿಂ ವಿಧಾನಸಭೆಗಳಿಗೂ ಚುನಾವಣೆ ನಡೆದಿತ್ತು
- ಚುನಾವಣೆ ನಡೆದ 90 ದಿನದಲ್ಲಿ ವೆಚ್ಚದ ವಿವರ ಸಲ್ಲಿಸಬೇಕು ಎಂಬುದು ನಿಯಮ. ವರದಿ ಸಿದ್ಧಪಡಿಸುವಾಗ ಎನ್‌ಸಿಪಿ, ಸಿಪಿಐ, ಜೆಎಂಎಂ, ಶಿವಸೇನೆ (ಉದ್ಧವ್ ಬಣ) ಸೇರಿ 21 ಪಕ್ಷಗಳು ವರದಿ ಸಲ್ಲಿಸಿರಲಿಲ್ಲ ಎಂದು ತಿಳಿಸಿದೆ.
- ಆಮ್ ಆದ್ಮಿ ಪಕ್ಷ (ಎಎಪಿ) 168 ದಿನದ ನಂತರ, ಬಿಜೆಪಿ 139 ದಿನದ ನಂತರ ವರದಿ ಸಲ್ಲಿಸಿವೆ. ಕಾಂಗ್ರೆಸ್ ಪಕ್ಷ ಮಾತ್ರವೇ ನಿಗದಿತ ವೇಳೆಗೆ ವರದಿ ಸಲ್ಲಿಸಿದೆ.
- ಚುನಾವಣೆಗೆ ಸ್ಪರ್ಧಿಸಿದ್ದರೂ ನಯಾಪೈಸೆ ವ್ಯಯಿಸಿಲ್ಲ ಎಂದು ಜಮ್ಮು ಮತ್ತು ಕಾಶ್ಮೀರ ಪಿಡಿಪಿ ಮತ್ತು ಕೇರಳದ ಕಾಂಗ್ರೆಸ್ (ಎಂ) ವರದಿ ಸಲ್ಲಿಸಿವೆ.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್‌ಗೆ ಪ್ರಿಯಾಂಕ್ ಖರ್ಗೆ ಪತ್ರ

‘ಅನುಮತಿ ನಿರಾಕರಿಸಿದ್ದಕ್ಕೆ ವಿವರಣೆ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಮೆರಿಕಕ್ಕೆ ಅಧಿಕೃತ ಭೇಟಿಗೆ ಅನುಮತಿಯನ್ನು ಏಕೆ ನಿರಾಕರಿಸಲಾಯಿತು ಎಂಬುದಕ್ಕೆ ವಿವರಣೆ ನೀಡಿ’ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರಿಗೆ ಪತ್ರ ಬರೆದಿದ್ದಾರೆ.


ಪ್ರಿಯಾಂಕ್ ಖರ್ಗೆ

ಶುಕ್ರವಾರ ಪತ್ರ ಬರೆದಿರುವ ಅವರು, ‘ಅಮೆರಿಕದ ಬಾಸ್ಟನ್ ಮತ್ತು ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ನಡೆದ ಎರಡು ತಂತ್ರಜ್ಞಾನ ಶೃಂಗಸಭೆಯಲ್ಲಿ ನಾನು ಕರ್ನಾಟಕ ಸರ್ಕಾರ ಮತ್ತು ಸಂಬಂಧಿತ ಇಲಾಖೆಯ ಸಚಿವರ ಮಟ್ಟದ ಪ್ರತಿನಿಧಿಯಾಗಿ ಭಾಗಿಯಾಗಬೇಕಿತ್ತು. ವಿದೇಶಾಂಗ ಸಚಿವಾಲಯವು (ಎಂಇಎ) ಯಾವುದೇ ಸ್ಪಷ್ಟ ಕಾರಣ ನೀಡದೆ ಅನುಮತಿ ನಿರಾಕರಿಸಿದ್ದರಿಂದ ಅಂತಹ ಅವಕಾಶ ತಪ್ಪಿದೆ’ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಕರ್ನಾಟಕವು ಮಾಹಿತಿ ತಂತ್ರಜ್ಞಾನ, ನವೋದ್ಯಮಗಳನ್ನು ಮುಂಚೂಣಿಯಲ್ಲಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವು ಭಾರತಕ್ಕೆ ಮಾತ್ರವಲ್ಲ, ಆಗ್ನೇಯ ಏಷ್ಯಾಕ್ಕೇ ಕೇಂದ್ರ ಸ್ಥಾನದಲ್ಲಿದೆ. ಅಮೆರಿಕದಲ್ಲಿ ನಡೆದ ಆ ಎರಡು ತಂತ್ರಜ್ಞಾನ ಶೃಂಗಸಭೆಗಳಲ್ಲಿ ಭಾಗಿಯಾಗಿ ರಾಜ್ಯಕ್ಕೆ ಬಂಡವಾಳ ಆಕರ್ಷಣೆ, ಸಹಯೋಗ ಕುರಿತ ಸಾಧ್ಯತೆಗಳ ಪರಿಶೀಲನೆ ನಡೆಸುವುದು ಈ ಪ್ರವಾಸದ ಗುರಿಯಾಗಿತ್ತು’ ಎಂದಿದ್ದಾರೆ.

‘ಅಧಿಕಾರಿಗಳಿಗೆ ಅನುಮತಿ’: ‘ಅಮೆರಿಕಕ್ಕೆ ನಿಯೋಗ ಹೋಗುವುದಾಗಿ ಮೇ 15ರಂದು ಎಂಇಎಗೆ ಮಾಹಿತಿ ನೀಡಲಾಗಿತ್ತು. ಯಾವುದೇ ಕಾರಣ ಕೊಡದೆ ಜೂನ್ 4ಕ್ಕೆ ಅರ್ಜಿಯನ್ನು ತಿರಸ್ಕರಿಸಲಾಗಿತ್ತು’ ಎಂದು ಪ್ರಿಯಾಂಕ್ ಖರ್ಗೆ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದ್ದರು.

‘ಜೂನ್ 6ರಂದು ನನ್ನ ಹೆಸರು ತೆಗೆದು ನಿಯೋಗದಲ್ಲಿದ್ದ ಅಧಿಕಾರಿಗಳ ಹೆಸರನ್ನು ಮಾತ್ರ ಎಂಇಎಗೆ ಕಳುಹಿಸಿದೆ. ಅದಕ್ಕೆ 11ರಂದು ಅನುಮತಿ ನೀಡಿದ್ದಾರೆ. 12ರಂದು ಶರತ್ ಬಚ್ಚೇಗೌಡ ಹೆಸರನ್ನು ಕಳುಹಿಸಿದೆ. 14ಕ್ಕೆ ಅವರಿಗೂ ಅನುಮತಿ ನೀಡಲಾಗಿದೆ. ಆದರೆ, ನನಗೆ ಮಾತ್ರ ಅನುಮತಿ ನಿರಾಕರಿಸಲಾಗಿದೆ’ ಎಂದಿದ್ದರು.

ಮುಖ್ಯಾಂಶಗಳು

- ಅಮೆರಿಕ ಪ್ರವಾಸಕ್ಕೆ ಅನುಮತಿ ತಿರಸ್ಕರಿಸಿದ್ದ ಸಚಿವಾಲಯ
- ಇದೇ 14ರಿಂದ 17ರಂದು ಅಮೆರಿಕದ ಶೃಂಗಸಭೆಗಳಲ್ಲಿ ಭಾಗಿಯಾಗಬೇಕಿದ್ದ ಪ್ರಿಯಾಂಕ್

‘ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆ’

‘ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವು ದೇಶವನ್ನು ಮುನ್ನೆಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಭಾರತದಲ್ಲೇ ತಯಾರಿಸಿ, ವಿಕಸಿತ ಭಾರತ ಎಂದೆಲ್ಲಾ ಹೇಳುತ್ತಾರೆ. ಆದರೆ ವಿದೇಶಾಂಗ ಸಚಿವಾಲಯದ ಈ ನಡೆಯಿಂದ ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆಯಾಗಿದೆ’ ಎಂದು ಪ್ರಿಯಾಂಕ್ ಖರ್ಗೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಮೋದಿಯವರು ಕನಸು ಕಾಣುವುದಷ್ಟೆ. ಅದನ್ನು ನನಸು ಮಾಡುತ್ತಿರುವವರು ನಾವು. ನಮ್ಮ ವಿದೇಶಾಂಗ ನೀತಿಯನ್ನು ಅಮೆರಿಕಕ್ಕೆ ಅಡ ಇಟ್ಟಿದ್ದಾರೆ. ಈಗ ನಮ್ಮ ಬಂಡವಾಳ ನೀತಿಯನ್ನೂ ಅಡ ಇಟ್ಟಿದ್ದಾರೆ. ಪ್ರಿಯಾಂಕ್ ಅಂದರೆ ಅವರಿಗೆ ನೋವು. ಪ್ರಿಯಾಂಕ್ ಖರ್ಗೆ ಅಂದರೆ ಇನ್ನೂ ನೋವು’ ಎಂದು ಕೇಂದ್ರ ಸರ್ಕಾರವನ್ನು ಟೀಕಿಸಿದರು,

‘ಒಂದೆರಡು ರಫೇಲ್ ಬಿದ್ದಿವೆಯಂತೆ’

‘ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ನಡೆದ ವೈಮಾನಿಕ ಪ್ರದರ್ಶನದಲ್ಲಿ ಭಾಗಿಯಾಗಿದ್ದೆ. ಆಪರೇಷನ್ ಸಿಂಧೂರ ಕಾರ್ಯಾಚರಣೆ ಸಂದರ್ಭದಲ್ಲಿ ಒಂದೆರಡು ರಫೇಲ್ ಬಿದ್ದಿವೆಯಂತೆ. ಫ್ರಾನ್ಸ್‌ಗೆ ಹೋಗಿದ್ದಾಗ ಆ ಮಾಹಿತಿ ಸಿಕ್ಕಿತು’ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

‘ರಫೇಲ್ ಯುದ್ಧ ವಿಮಾನದ ಸಾಮರ್ಥ್ಯದ ಬಗ್ಗೆ ನಾವು ಪ್ರಶ್ನೆ ಮಾಡಿಲ್ಲ. ನಾವು ಅದರ ವೆಚ್ಚದ ಬಗ್ಗೆ ಪ್ರಶ್ನೆ ಮಾಡಿದ್ದೇವೆ. ಪೇಪರ್ ಬೋಟ್ ಮಾಡುವ ಕಂಪನಿಗೆ ರಫೇಲ್ ಕೊಟ್ಟಿದ್ದಾರೆ. ಇದನ್ನು ಕೇಳುವುದು ತಪ್ಪೇ?’ ಎಂದರು.

ಸುದ್ದಿ 2 ನಿಮಿಷ


ಗಡಿ ವಿವಾದ: ಉನ್ನತಾಧಿಕಾರ ಸಮಿತಿ ಪುನರ್‌ರಚನೆ

ಮುಂಬೈ: ಮಹಾರಾಷ್ಟ್ರ–ಕರ್ನಾಟಕ ಗಡಿ ವಿವಾದಕ್ಕೆ ಸಂಬಂಧಿಸಿದ ಉನ್ನತಾಧಿಕಾರ ಸಮಿತಿಯನ್ನು ಮಹಾರಾಷ್ಟ್ರ ಸರ್ಕಾರ ಪುನರ್‌ರಚನೆ ಮಾಡಿದೆ.

ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಸಮಿತಿ ಅಧ್ಯಕ್ಷರಾಗಿರುವರು. ಈ ಕುರಿತು ರಾಜ್ಯ ಸರ್ಕಾರ ಗುರುವಾರ ಅಧಿಸೂಚನೆ ಹೊರಡಿಸಿದೆ.

ಉಪಮುಖ್ಯಮಂತ್ರಿಗಳಾದ ಏಕನಾಥ ಶಿಂದೆ, ಅಜಿತ್ ಪವಾರ್, ಎನ್‌ಸಿಪಿ(ಎಸ್‌ಪಿ) ವರಿಷ್ಠ ಶರದ್ ಪವಾರ್, ಕಾಂಗ್ರೆಸ್‌ನ ಹಿರಿಯ ನಾಯಕ ಪೃಥ್ವಿರಾಜ್ ಚವಾಣ್, ಲೋಕಸಭೆಯ ಬಿಜೆಪಿ ಸಂಸದ ನಾರಾಯಣ ರಾಣೆ, ಸೇರಿದಂತೆ 18 ಮಂದಿ ಸಮಿತಿ ಸದಸ್ಯರಾಗಿದ್ದಾರೆ.

ವಿಧಾನಸಭೆಯಲ್ಲಿ ವಿಪಕ್ಷ ನಾಯಕ ಕೂಡ ಸಮಿತಿ ಸದಸ್ಯರಾಗಿದ್ದರೂ, ಅಗತ್ಯ ಸಂಖ್ಯಾಬಲ ಇಲ್ಲದ ಕಾರಣ, ಈ ಸ್ಥಾನ ಖಾಲಿ ಇದೆ. ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಶಿವಸೇನಾದ (ಯುಬಿಟಿ) ಅಂಬಾದಾಸ್ ದನ್ವೆ ಅವರೂ ಈ ಸಮಿತಿ ಸದಸ್ಯರಾಗಿದ್ದಾರೆ.



ಪೃಥ್ವಿರಾಜ್ ಚವಾಣ್ ಮುಖ್ಯಮಂತ್ರಿಯಾಗಿದ್ದಾಗ 2014ರ ಮೇ 26ರಂದು ಮೊದಲ ಬಾರಿಗೆ ಈ ಉನ್ನತಾಧಿಕಾರ ಸಮಿತಿ ರಚಿಸಲಾಗಿತ್ತು. ಉದ್ಧವ್ ಠಾಕ್ರೆ ಮುಖ್ಯಮಂತ್ರಿಯಾಗಿದ್ದ ವೇಳೆ, 2020ರ ಮೇ 2ರಂದು ಸಮಿತಿಯನ್ನು ಪುನರ್‌ರಚಿಸಲಾಗಿತ್ತು. ಬೆಳಗಾವಿ, ಕಾರವಾರ, ನಿಪ್ಪಾಣಿ, ಬೀದರ್ ಅಲ್ಲದೇ, ಗಡಿಗೆ ಹೊಂದಿರುವ 814 ಗ್ರಾಮಗಳು ತನಗೆ ಸೇರಿದವು ಎಂದು ಹೇಳಿಕೊಳ್ಳುವ ಮಹಾರಾಷ್ಟ್ರ, ಈ ಪ್ರದೇಶಗಳನ್ನು ರಾಜ್ಯಕ್ಕೆ ಸೇರ್ಪಡೆ ಮಾಡುವಂತೆ ಒತ್ತಾಯಿಸುತ್ತಲೇ ಇದೆ.

ಎಲೆಕ್ಟ್ರಾನಿಕ್ ದತ್ತಾಂಶ ಅಳಿಸಲು ಇ.ಸಿ ಸೂಚನೆ

ನವದೆಹಲಿ (ಪಿಟಿಐ): ಚುನಾವಣೆ ಪ್ರಕ್ರಿಯೆಗೆ ಸಂಬಂಧಿಸಿದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ, ವೆಬ್‌ಕಾಸ್ಟಿಂಗ್ ಮತ್ತು ಇತರ ವಿಡಿಯೊಗಳನ್ನು ಚುನಾವಣೆ ನಡೆದ 45 ದಿನಗಳ ಬಳಿಕ ಅಳಿಸಿ ಹಾಕುವಂತೆ ಚುನಾವಣಾ ಆಯೋಗವು (ಇ.ಸಿ) ತನ್ನ ಎಲ್ಲ ರಾಜ್ಯ ಚುನಾವಣಾ ಅಧಿಕಾರಿಗಳಿಗೆ ಸೂಚಿಸಿದೆ.

ಎಲೆಕ್ಟ್ರಾನಿಕ್ ದತ್ತಾಂಶಗಳನ್ನು ಆಯೋಗದ ಬಗ್ಗೆ ‘ದುರುದ್ದೇಶಪೂರಿತ ನಿರೂಪಣೆ’ಗಳನ್ನು ಹರಡಲು ಬಳಸುವ ಸಾಧ್ಯತೆಯಿರುವುದರಿಂದ ಈ ನಿರ್ಧಾರ ತೆಗೆದುಕೊಂಡಿದೆ.

ಚುನಾವಣಾ ಪ್ರಕ್ರಿಯೆಯ ವಿವಿಧ ಹಂತಗಳ ವೆಬ್‌ಕಾಸ್ಟಿಂಗ್, ಫೋಟೊಗ್ರಫಿ ಮತ್ತು ವಿಡಿಯೋ ಚಿತ್ರೀಕರಣ ಮಾಡಬೇಕು ಹಾಗೂ ಸಿ.ಸಿ.ಟಿ.ವಿ ಕ್ಯಾಮೆರಾ ಮೂಲಕ ಸೆರೆ ಹಿಡಿಯಬೇಕು ಎಂದು ಚುನಾವಣಾ ಆಯೋಗವು ಮೇ 30ರಂದು ವಿವಿಧ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಬರೆದ ಪತ್ರದಲ್ಲಿ ಸೂಚಿಸಿತ್ತು.

ಬಹು ಹಂತಗಳ ಸಾಧನ ಬಳಸಿ ಚುನಾವಣಾ ಪ್ರಕ್ರಿಯೆಯ ರೆಕಾರ್ಡಿಂಗ್ ಮಾಡುವುದನ್ನು ಚುನಾವಣಾ ನಿಯಮ ಕಡ್ಡಾಯಗೊಳಿಸಿಲ್ಲ. ಆದರೂ, ಆಯೋಗವು ಚುನಾವಣಾ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ಅವುಗಳನ್ನು ಆಂತರಿಕ ನಿರ್ವಹಣಾ ಸಾಧನವಾಗಿ ಬಳಸುತ್ತದೆ.

‘ಚುನಾವಣಾ ಆಯೋಗದ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ತಪ್ಪು ಮಾಹಿತಿ ಹರಡಲು ಕೆಲವರು ಈ ದೃಶ್ಯಾವಳಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ’ ಎಂದು ಆಯೋಗವು ಪತ್ರದಲ್ಲಿ ಹೇಳಿದೆ.

‘ಒಂದು ನಿರ್ದಿಷ್ಟ ಕ್ಷೇತ್ರದ ಚುನಾವಣೆಯ ಫಲಿತಾಂಶವನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಯಾವುದೇ ಅರ್ಜಿಗಳು ಸಲ್ಲಿಕೆಯಾಗದಿದ್ದರೆ, ಈ ಎಲ್ಲ ಎಲೆಕ್ಟ್ರಾನಿಕ್ ದತ್ತಾಂಶಗಳನ್ನು ಅಳಿಸಿ ಹಾಕಬೇಕು’ ಎಂದು ಸೂಚಿಸಿದೆ. ಚುನಾವಣಾ ಫಲಿತಾಂಶದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಯಾವುದೇ ವ್ಯಕ್ತಿ ಸಂಬಂಧಪಟ್ಟ ಹೈಕೋರ್ಟ್‌ನಲ್ಲಿ 45 ದಿನಗಳ ಒಳಗಾಗಿ ಅರ್ಜಿ ಸಲ್ಲಿಸಬಹುದು.



ಯೋಗಾ ಯೋಗ...

ಪ್ರಜಾವಾಣಿ ಚಿತ್ರ ತಾಜುದ್ದೀನ್ ಆಜಾದ್

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ ಹಾಗೂ ಆಯುಷ್ ಇಲಾಖೆಯಿಂದ ಕಲಬುರಗಿಯ ಜಗತ್ ವೃತ್ತದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಜಾಥಾದಲ್ಲಿ ವಿದ್ಯಾರ್ಥಿನಿಯರು ನಾಮಫಲಕ ಹಿಡಿದು ಜಾಗೃತಿ ಮೂಡಿಸಿದರು

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald-Prajavani relief Trust'**ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು **dept.finc@printersmysore.co.in**ಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001





ಸಂಘಟನಾ ಚತುರ, ಶಿಸ್ತಿನ ಸಿಪಾಯಿ

ಸಚಿವ ಎನ್.ಎಸ್. ಭೋಸರಾಜು



ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು ಅವರು ವಹಿಸಿಕೊಳ್ಳುವ ಯಾವುದೇ ಜವಾಬ್ದಾರಿ ಅತ್ಯಂತ ಶಿಸ್ತು ಮತ್ತು ಕ್ರಮಬದ್ಧವಾಗಿ ಪೂರ್ಣಗೊಳಿಸುವ ವ್ಯಕ್ತಿತ್ವ ಹೊಂದಿದ್ದಾರೆ. ಜಿಲ್ಲಾ ಅಧ್ಯಕ್ಷ ಸ್ಥಾನದಿಂದ ಹಿಡಿದು ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಪಕ್ಷದ ವಿವಿಧ ಉನ್ನತ ಹುದ್ದೆ ನಿರ್ವಹಿಸಿ ಅನುಭವವುಳ್ಳ ಅವರು ತಮ್ಮ ಅಧಿಕಾರಾವಧಿಯಲ್ಲಿ ಮಾದರಿಯ ಕಾರ್ಯನಿರ್ವಹಿಸಿದ ನಾಯಕ ಎನಿಸಿದ್ದಾರೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೆ ಜಿ.ಪರಮೇಶ್ವರ ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಭೋಸರಾಜು ಅವರು ಪ್ರಧಾನ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಿದ್ದರು. ಸುಮಾರು ಏಳು ವರ್ಷಗಳ ಕಾಲ ನಿರಂತರ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಅವರು, ಬೆಳಿಗ್ಗೆ ಪಕ್ಷದ ಕಚೇರಿಗೆ ಆಗಮಿಸಿದರೆ, ತಮ್ಮ ನಿತ್ಯದ ಕೆಲಸ ಕಾರ್ಯಗಳು ಪೂರ್ಣಗೊಳಿಸಿದ ನಂತರವೇ ಮನೆಗೆ ಹಿಂದಿರುಗುತ್ತಿದ್ದರು.

ಪಕ್ಷ ಸಂಘಟನೆಯಲ್ಲಿ ಮನಸೋ ಇಚ್ಛೆ ಕಾರ್ಯನಿರ್ವಹಿಸದೆ, ವೃತ್ತಿಪರತೆ ಇಚ್ಛಾಶಕ್ತಿಯೊಂದಿಗೆ ಸಂಪೂರ್ಣ ಸಮಯ ನೀಡುವ ಮೂಲಕ ಪಕ್ಷದ ಸಂಘಟನೆಯಲ್ಲಿ ತೊಡಗಿಕೊಂಡವರು. ಅವರ ಕಾರ್ಯಕ್ಷಮತೆ ಇಂದಿಗೂ ಕೆಪಿಸಿಸಿ ಕಚೇರಿಯಲ್ಲಿ ಮಾದರಿಯಾಗಿ ಪರಿಗಣಿಸಲಾಗುತ್ತದೆ. ಮಕ್ಕಳು ಶಾಲೆಗೆ ಬರುವ ರೀತಿಯಲ್ಲಿ ಮಧ್ಯಾಹ್ನದ ಊಟದೊಂದಿಗೆ ಕೆಪಿಸಿಸಿ ಕಚೇರಿಗೆ ಆಗಮಿಸುವ ಭೋಸರಾಜು ಅವರು ಮನೆಗೆ ಮರಳುವುದು ಅಂದಿನ ಕೆಲಸ ಪೂರ್ಣಗೊಂಡನಂತರವೇ.

ವಹಿಸಿಕೊಂಡ ಎಲ್ಲ ಜವಾಬ್ದಾರಿ ಅಚ್ಚುಕಟ್ಟಾಗಿ ನಿರ್ವಹಿಸುವ ಮತ್ತು ಪಕ್ಷದ ಎಲ್ಲ ಮುಖಂಡರೊಂದಿಗೆ ಉತ್ತಮ ಬಾಂಧವ್ಯ ಕಾಯ್ದುಕೊಂಡ, ಅವರು ಪಕ್ಷದಲ್ಲಿ ಸಮಸ್ಯೆ ಉಂಟಾದ ಸಂದರ್ಭದಲ್ಲಿ ರಾಜ್ಯದಾದ್ಯಂತ ಪ್ರವಾಸ ಮಾಡಿ ಅದನ್ನು ಪರಿಹರಿಸುವ "ಟ್ರಬಲ್ ಶೂಟರ್" ಆಗಿ ಸೇವೆ ಸಲ್ಲಿಸಿದ್ದಾರೆ. ಭೋಸರಾಜು ಅವರ ಸಂಘಟನಾ ಶಕ್ತಿಯಿಂದಲೇ ಅವರು ಕಾಲಘಟ್ಟದಲ್ಲಿ ಕೆಪಿಸಿಸಿ ಉಪಾಧ್ಯಕ್ಷರಾಗಿ ನಂತರ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾಗಿ ಪದೋನ್ನತಿ ಹೊಂದಿ ಸೇವೆ ಸಲ್ಲಿಸುವ ಅವಕಾಶ ಪಡೆದರು ಎಂದರೆ ತಪ್ಪಾಗಲಿಕ್ಕಿಲ್ಲ.

ರಾಜಕೀಯ ಚಾಣಕ್ಯ: ಪಕ್ಷದಲ್ಲಿ ಯಾವುದೇ ಸಮಸ್ಯೆ ಉದ್ಭವಿಸಿದರು ಸಹ ಆ ಸಮಸ್ಯೆ ನಿವಾರಿಸುವ ಮತ್ತು ಇದಕ್ಕೆ ಸಂಬಂಧಪಟ್ಟ ಪಕ್ಷದ ಎಲ್ಲ ಹಂತದ ಮುಖಂಡರನ್ನು ಮನವೊಲಿಸುವ ಅವರ ರಾಜಕೀಯ ಚಾಣಕ್ಯತನದಿಂದಾಗಿ ಅವರನ್ನು ತೆಲಂಗಾಣ ರಾಜ್ಯದ ಉಸ್ತುವಾರಿ ಕಾರ್ಯದರ್ಶಿಗಳನ್ನಾಗಿ ನೇಮಿಸುವ ಮೂಲಕ ಅಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಜವಾಬ್ದಾರಿ ನೀಡಲಾಯಿತು.

ತೆಲಂಗಾಣ ರಾಜ್ಯದ ಕಾಂಗ್ರೆಸ್ ಸಂಘಟನೆ ಮತ್ತು ಅಲ್ಲಿಯ ಶಮನಗೊಳಿಸುವಲ್ಲಿ ಭೋಸರಾಜು ಅವರ ರಾಜಕೀಯ ಚಾಣಾಕ್ಷತನ, ಅವರನ್ನು ಪಕ್ಷದ ಸರ್ವೋಚ್ಚ ನಾಯಕರೆಂದೇ ಗುರುತಿಸಿಕೊಂಡ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿಯವರ ನಿಕಟವರ್ತಿಗಳಾಗಿ ಗುರುತಿಸಿಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸಿತು ಎಂದರೆ ಅತಿಶಯೋಕ್ತಿಯಲ್ಲ.



ತೆಲಂಗಾಣದಲ್ಲಿ ಕಾಂಗ್ರೆಸ್ ಅಧಿಕಾರ: ಭೋಸರಾಜು ನಿರ್ಣಾಯಕ ಪಾತ್ರ

ಅಖಂಡ ಆಂಧ್ರ ಪ್ರದೇಶದಲ್ಲಿ ತೆಲಂಗಾಣ ಹೋರಾಟ ಒಂದು ಐತಿಹಾಸಿಕ ಹೋರಾಟವಾಗಿ ಗುರುತಿಸಿಕೊಂಡಿದೆ. ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರದಲ್ಲಿರುವ ಅವಧಿಯಲ್ಲಿ ತೆಲಂಗಾಣ ಜನಸಮುದಾಯಕ್ಕೆ ಯುಪಿಎ ಸಮನ್ವಯ ಸಮಿತಿ ಅಧ್ಯಕ್ಷರಾದ ಸೋನಿಯಾ ಗಾಂಧಿಯವರು ನೀಡಿದ ಭರವಸೆಯಂತೆ 2014ರಲ್ಲಿ ಅಖಂಡ ಆಂಧ್ರ ಪ್ರದೇಶವನ್ನು ತೆಲಂಗಾಣ ಮತ್ತು ಆಂಧ್ರ ಪ್ರದೇಶವಾಗಿ ವಿಭಜಿತಗೊಳಿಸಿದರು.

ತೆಲಂಗಾಣ ಜನರ ದಶಕಗಳ ಬೇಡಿಕೆಯನ್ನು ಕಾಂಗ್ರೆಸ್ ಈಡೇರಿಸಿದ್ದರೂ ಚುನಾವಣೆ ಸಂದರ್ಭದಲ್ಲಿ ಇದರ ಸಂಪೂರ್ಣ ಲಾಭ ತೆಲಂಗಾಣ ರಾಷ್ಟ್ರ ಸಮಿತಿ ಪಕ್ಷದ ಪಾಲಾಯಿತು. ಮುಂದಿನ 10 ವರ್ಷಗಳ ಕಾಲ ಇತ್ತ ತೆಲಂಗಾಣ, ಅತ್ತ ಆಂಧ್ರದಲ್ಲಿ ಕಾಂಗ್ರೆಸ್ ಪಕ್ಷ ಅಸ್ತಿತ್ವವನ್ನೇ ಕಳೆದುಕೊಂಡಿತ್ತು. 2024ರ ಚುನಾವಣೆ ಪೂರ್ವ, ತೆಲಂಗಾಣ ಗೆಲ್ಲುವ ಸಂಕಲ್ಪದ ಹಿನ್ನೆಲೆಯಲ್ಲಿ ಸಂಘಟನಾ ಚತುರರು, ಟ್ರಬಲ್ ಶೂಟರ್ ಮತ್ತು ಎಲ್ಲರನ್ನೂ ಒಗ್ಗೂಡಿಸುವ ಸಮರ್ಥ ನಾಯತ್ವ ಗುಣಹೊಂದಿದ ಎನ್.ಎಸ್. ಭೋಸರಾಜು ಅವರನ್ನು ಉಸ್ತುವಾರಿಯನ್ನಾಗಿ ನಿಯತ್ತಿಗೊಳಿಸಲಾಯಿತು.

ತೆಲಂಗಾಣ ಉಸ್ತುವಾರಿ ವಹಿಸಿಕೊಂಡ ನಂತರ ಪಕ್ಷದ ರಾಜ್ಯಾಧ್ಯಕ್ಷರವರಿಂದ ಹಿಡಿದು ಕಟ್ಟ ಕಡೆ ಕಾರ್ಯಕರ್ತನವರೆಗೂ, ವಿಶ್ವಾಸ ಗಳಿಸುವ ಮೂಲಕ ವಿಧಾನಸಭೆ ಚುನಾವಣೆಯ ಗೆಲುವಿಗೆ ರಣತಂತ್ರದೊಂದಿಗೆ ರೂಪಿಸಿದರು. ಹತ್ತು ವರ್ಷಗಳ ತೆಲಂಗಾಣ ರಾಷ್ಟ್ರ ಸಮಿತಿಯ ಸರ್ಕಾರ ಪತನಗೊಂಡು ಮುಖ್ಯಮಂತ್ರಿ ರೇವಂತರ ರೆಡ್ಡಿ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಪುನಃ ಅಧಿಕಾರಕ್ಕೆ ಬರಲು ಭೋಸರಾಜು ಅವರು ಮಹತ್ವದ ಪಾತ್ರ ವಹಿಸಿದ್ದರು.

ಕೆಲ ತಿಂಗಳ ಹಿಂದೆಯಷ್ಟೇ ಅತ್ಯಂತ ಯಶಸ್ವಿಯಾದ ರಾಹುಲ್ ಗಾಂಧಿ ನೇತೃತ್ವದ 'ಭಾರತ ಜೋಡೋ ಯಾತ್ರೆ' ಪ್ರಭಾವ ಮತ್ತು ಚುನಾವಣೆಯಲ್ಲಿ ಭಿನ್ನಮತ ಶಮನ ಹಾಗೂ ಅತ್ಯಂತ ಪ್ರಭಾವಿಗಳು ಎನಿಸಿಕೊಂಡಿದ್ದ 19 ಮುಖಂಡರನ್ನು ವಿವಿಧ ಕಾರಣಕ್ಕೆ ಚುನಾವಣೆ ಸ್ಪರ್ಧೆಯಿಂದ ದೂರ ಉಳಿಯುವಂತೆ ಮನವೊಲಿಸಿ ತೆಲಂಗಾಣ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಸಾಧಿಸಲು ನೆರವಾದರು.


ಇದೇ ಕಾರಣಕ್ಕೆ ತೆಲಂಗಾಣ ಮುಖ್ಯಮಂತ್ರಿಗಳಾದ ರೇವಂತರೆಡ್ಡಿ ಅವರು ಸಭೆ ಸಮಾರಂಭಗಳಲ್ಲಿ, Bosaraju most power full person (ಭೋಸರಾಜು ಅವರು ಅತ್ಯಂತ ಪ್ರಭಾವಿ ವ್ಯಕ್ತಿ) ಎಂದು ಹೇಳಿರುವುದನ್ನು ಇಲ್ಲಿ ಸ್ಮರಿಸಲೇಬೇಕಾಗಿದೆ.

ಸಚಿವರಾಗಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ರಾಜ್ಯದಲ್ಲಿ ಸಣ್ಣ ನೀರಾವರಿ ಹಾಗೂ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ನಂತರ ಭೋಸರಾಜು ಅವರು ಅದೇ ವೇಗದಲ್ಲಿ ಅನೇಕ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ.


- ನಗರಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸುವ ಐತಿಹಾಸಿಕ ನಿರ್ಧಾರಕ್ಕೆ ಭೋಸರಾಜು ಅವರು ಪ್ರಮುಖ ಕಾರಣ.
- ವಿಮಾನ ನಿಲ್ದಾಣ ನಿರ್ಮಾಣಕ್ಕೆ ಇರುವ ಅಡ್ಡಿ ನಿವಾರಿಸಿ, ಕಾಮಗಾರಿ ಸುಗಮ.
- ಐತಿಹಾಸಿಕ ಮಾವಿನ ಕೆರೆಯ ಬಹುದಿನಗಳ ನಗರದ ಬೇಡಿಕೆ ಈಗ ಸುಸಜ್ಜಿತ ಆಧುನಿಕ ಲೇಕ್ ಮಾದರಿ ರೂಪ ಪಡೆಯುವಂತೆ ಮಾಡಲಾಗಿದೆ.
- ಮಹಿಳಾ ಸಮಾಜ, ಮುಕ್ತಿಧಾಮ, ಶತಮಾನಗಳ ಕರ್ನಾಟಕ ಸಂಘ ಅಭಿವೃದ್ಧಿಗೆ ಬಹುದೊಡ್ಡ ಕೊಡುಗೆ.
- ಕೇಶಿಫ್ ರಸ್ತೆ ನಿರ್ಮಾಣದ ನೇತೃತ್ವ ವಹಿಸಿದ ನಾಯಕ ಭೋಸರಾಜು ಅವರು ಕಲ್ಮಲಾ ಕ್ರಾಸ್ ನಿಂದ ಸಿಂಧನೂರು ವರೆಗೆ ₹1,700 ಕೋಟಿ ವೆಚ್ಚದಲ್ಲಿ ಚತುಷ್ಪಥ ರಸ್ತೆ ನಿರ್ಮಾಣದ ಮೂಲಕ ಈ ರಸ್ತೆಗೆ ಹೊಸ ರೂಪ ನೀಡಿದ ಶಿಲ್ಪಿಯಾಗಿದ್ದಾರೆ.
- ಅಲ್ಪಸಂಖ್ಯಾತರಿಗೂ ಅನೇಕ ಅಭಿವೃದ್ಧಿ ಯೋಜನೆಗಳೊಂದಿಗೆ ವಕ್ಫ್ ಆಸ್ಪತ್ರೆಗೆ ಅನುದಾನ, ನೂತನ ಈದ್ಗಾ ಮೈದಾನ ನಿರ್ಮಾಣದಲ್ಲಿ ಮುಂಚೂಣಿಯಲ್ಲಿ ನಿಂತಿದ್ದರು. ದೇವರಾಜ್ ಟ್ರಾಕ್ ಟರ್ಮಿನಲ್ ಗೆ ಜಮೀನು ಒದಗಿಸಿದ್ದಾರೆ.

ಈ ರೀತಿಯಾಗಿ ತಮ್ಮ ಅಧಿಕಾರ ಅವಧಿಯಲ್ಲಿ ಬಂದೊದಗಿದ ಸ್ಥಾನಮಾನದ ಮೂಲಕ ಅಭಿವೃದ್ಧಿಗೆ ಹೊಸ ರೂಪ ನೀಡಿದ ಚೈತನ್ಯ ಸಾಗರದ ಸ್ವರೂಪಿಯಾದ ಅವರು ಜಿಲ್ಲೆಯಲ್ಲಿ ಮಾತ್ರವಲ್ಲ ರಾಜ್ಯದಲ್ಲಿಯೇ ಅಭಿವೃದ್ಧಿಗೆ ಮಾದರಿಯಾಗಿ ನಿಂತಿದ್ದಾರೆ.



2 ವರ್ಷ: ಸಾರ್ಥಕ ಸಾಧನೆ

ಕಳೆದ ಎರಡು ವರ್ಷಗಳಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳು ಸಚಿವರಾದ ಭೋಸರಾಜು ಅವರ ಮಾರ್ಗದರ್ಶನದಲ್ಲಿ ಅಂತರ್ಜಲ ಅಭಿವೃದ್ಧಿ, ಜಲ ಮೂಲಗಳ ಸಂರಕ್ಷಣೆ ಹಾಗೂ ವಿಜ್ಞಾನವನ್ನು ನಾಡಿನ ಜನರ ಬದುಕಿನ ಭಾಗವನ್ನಾಗಿಸುವಲ್ಲಿ ಯಶಸ್ವಿಯಾಗಿದೆ.



- ಈ ಎರಡು ವರ್ಷಗಳಲ್ಲಿ ₹4,492 ಕೋಟಿ ವೆಚ್ಚದಲ್ಲಿ 6,758 ಕೋಟಿ ನೀರಾವರಿ ಕಾಮಗಾರಿಗಳಿಗೆ ಅನುಮೋದನೆ ದೊರೆತಿದ್ದು, ಏತ ನೀರಾವರಿ ಯೋಜನೆಗಳನ್ನು ಸಮರ್ಥವಾಗಿ ಜಾರಿಗೊಳಿಸಿರುವುದರಿಂದ ರಾಜ್ಯದ ಅಂತರ್ಜಲ ಮರುಪೂರಣ ದರದಲ್ಲಿ ಶೇ.28 ರಷ್ಟು ಏರಿಕೆ ಕಂಡಿದೆ. ಜೊತೆಗೆ 25 ಲಕ್ಷ ಎಕರೆ ಪ್ರದೇಶಗಳಿಗೆ ನೀರಿನ ಸೌಲಭ್ಯ ಹರಿದು ಬಂದಿದೆ.
- ಕೆ.ಸಿ. ಹೆಚ್ಎನ್, ವೃಷಭಾವತಿ ವ್ಯಾಲಿ ಯೋಜನೆಗಳು ನದಿ, ಸಮುದ್ರಗಳ ಒತ್ತಾಸೆಯ ಇಲ್ಲದೆ ಬರದ ನಾಡಾಗಿದ್ದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಬೆಂಗಳೂರು ಗ್ರಾಮಾಂತರ ಪ್ರದೇಶಗಳ ಜೀವಸೆಲೆಯಾಗಿವೆ.
- ಬೆಂಗಳೂರಿನ ತ್ಯಾಜ್ಯ ನೀರನ್ನು 2 ಹಂತಗಳಲ್ಲಿ ಸಂಸ್ಕರಿಸಿ, 3 ಜಿಲ್ಲೆಗಳ 407 ಕೆರೆಗಳಿಗೆ ಭರ್ತಿ ಮಾಡುವಲ್ಲಿ ಕೆ.ಸಿ. ಹೆಚ್ಎನ್ ವ್ಯಾಲಿ ಯೋಜನೆಗಳು ಅಭೂತಪೂರ್ವ ಯಶಸ್ಸು ಕಂಡಿವೆ. ವೃಷಭಾವತಿ ವ್ಯಾಲಿ ಯೋಜನೆ ಮೂಲಕ ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರದ 259 ಕೆರೆಗಳಿಗೆ ಬೆಂಗಳೂರಿನ ಸಂಸ್ಕರಿಸಿದ ನೀರನ್ನು ತುಂಬಿ ಅವುಗಳನ್ನು ಪುನರುಜ್ಜೀವನಗೊಳಿಸಲು ಸಚಿವರು ಟೊಂಕಕಟ್ಟಿ ನಿಂತಿದ್ದಾರೆ.
- ವೃಷಭಾವತಿ ವ್ಯಾಲಿ ಯೋಜನೆ ಮೂಲಕ ₹1,081 ಕೋಟಿ ವೆಚ್ಚದಲ್ಲಿ ಬೆಂಗಳೂರು ನಗರ-ಗ್ರಾಮಾಂತರದ 70 ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ಹರಿಸಿ ಜನರ, ರೈತರ ಬವಣೆ ನೀಗಿಸಲು ಮುಂದಾಗಿದ್ದಾರೆ.
- ಸಚಿವರಾದ ಭೋಸರಾಜು ಜನರ ಬದುಕಿನ ಭಾಗವಾಗಿಸಲು ಮಕ್ಕಳಿಗೆ ವಿಜ್ಞಾನದ ಬಗ್ಗೆ ಒಲವು ಮೂಡಿಸುವ ಅನೇಕ ಉಪಕ್ರಮಗಳನ್ನು ಕೈಗೊಂಡಿದ್ದಾರೆ.
- ₹3 ಕೋಟಿ ವೆಚ್ಚದಲ್ಲಿ 833 ಶಾಲೆಗಳಿಗೆ ಟೆಲಿಸ್ಕೋಪ್ ಗಳನ್ನು ನೀಡಿರುವುದು, ಎಚ್.ಎನ್ ಪ್ರಾಧಿಕಾರದ ರಚನೆ ಹಾಗೂ ಸಂಚಾರಿ ಡಿಜಿಟಲ್ ತಾರಾಲಯಗಳು 2,552 ಶಾಲೆಗಳಿಗೆ ಭೇಟಿ ನೀಡಿ 5.77 ಲಕ್ಷ ಮಕ್ಕಳಲ್ಲಿ ಖಗೋಳ ಶಾಸ್ತ್ರದ ಒಲವನ್ನು ಮೂಡಿಸಿದೆ.

ರಾಜ್ಯದಲ್ಲಿ ಸ್ಥಾಪಿಸಿರುವ ತಾರಾಲಯಗಳು, ವಿಜ್ಞಾನ ಕೇಂದ್ರಗಳು ವಿಜ್ಞಾನದ ದೀವಿಗೆಯನ್ನು ಹಚ್ಚುವ ಮೂಲಕ ವೈಚಾರಿಕ ಹಾಗೂ ಸಮಸಮಾಜ ನಿರ್ಮಾಣಕ್ಕೆ ಮುನ್ನುಡಿ ಬರೆದಿದೆ.









ರಾಯಚೂರು ಅಭಿವೃದ್ಧಿ ಧಾರೆಯ ರೂವಾರಿ

ರಾಯಚೂರು ಜಿಲ್ಲೆಯ ವಿವಿಧ ಯೋಜನೆಗಳಿಗೆ ಹೆಚ್ಚಿನ ಅನುದಾನ ಹಾಗೂ ವಿಶೇಷ ಅನುದಾನ ತರುವಲ್ಲಿ ಸಿದ್ಧಹಸ್ತರಾದ ಭೋಸರಾಜು ಅವರು ಅಕ್ಷರಶಃ ಅಭಿವೃದ್ಧಿ ಹರಿಕಾರರು.

ರಾಯಚೂರು ನಗರ ಕುಡಿಯುವ ನೀರಿನ ಸಮಸ್ಯೆ ಹಾಗೂ ತುಂಗಭದ್ರ ಎಡದಂಡೆ ಕಾಲುವೆ ಕೆಳಭಾಗದ ರೈತರ ನೀರಿನ ಸಮಸ್ಯೆ ನಿವಾರಣೆಗಾಗಿ ಅಸಾಧ್ಯವೆನಿಸಿದ 'ಗಣೆಕಲ್ ಸಮತೋಲನ ಜಲಾಶಯ' ನಿರ್ಮಿಸುವ ಮೂಲಕ ರಾಜ್ಯದಲ್ಲಿಯೇ ಈ ರೀತಿ ಜಲಾಶಯ ನಿರ್ಮಾಣ ಸಾಧ್ಯ ಎನ್ನುವ ಪರಿಕಲ್ಪನೆಗೆ ಭೋಸರಾಜು ಜೀವಾಳವಾಗಿದ್ದಾರೆ.

ಓಪೆಕ್ ನೆರವಿನ ಅನುದಾನವನ್ನು ಹಿಂದುಳಿದ ಜಿಲ್ಲೆಗೆ ತರುವ ಮೂಲಕ ಇಂದು 'ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ'ಯಾಗಿ ತಲೆಯೆತ್ತಲು ಇವರು ಕಾರಣರು. ಕಾಡಾ ಅಧ್ಯಕ್ಷ ಅಧಿಕಾರ ಅವಧಿಯಲ್ಲಿ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ಸಮಗ್ರ ದುರಸ್ತಿ ಮತ್ತು ಬಲವರ್ಧನೆಗೆ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸಿದ ಎನ್.ಎಸ್. ಭೋಸರಾಜು ಅವರನ್ನು ಆಧುನಿಕ ಭಗೀರಥ ಎಂದೆ ಖ್ಯಾತಿ ಹೊಂದಿದವರು.

ಧರಂಸಿಂಗ್ ಅವರು ಲೋಕೋಪಯೋಗಿ ಮಂತ್ರಿಯಾಗಿದ್ದ ಅವಧಿಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ರಾಯಚೂರು ಜಿಲ್ಲೆಗೆ 500 ಶಾಲಾ ಕಟ್ಟಡ ನಿರ್ಮಾಣಕ್ಕೆ ಮೂಲ ಆಧಾರವಾಗಿ ನಿಂತರು. ಸ್ಥಳೀಯ ಶಾಸಕರು ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಅನುದಾನದ ಅಡಿ 500 ಶಾಲಾ ಕೊಠಡಿ ನಿರ್ಮಾಣದ ಮೂಲಕ ವಿದ್ಯಾರ್ಥಿಗಳಿಗೆ ನೆರಳಿನ ಶೈಕ್ಷಣಿಕ ಅಭಿವೃದ್ಧಿಗೆ ನೆರವಾದರು.

ಧರ್ಮಸಿಂಗ್ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ರಾಜಕೀಯ ಕಾರ್ಯದರ್ಶಿಗಳಾಗಿದ್ದ ಎನ್ ಎಸ್ ಭೋಸರಾಜು ಅವರು ಈ ಅಧಿಕಾರವನ್ನು ಸಮರ್ಥವಾಗಿ ಬಳಸಿಕೊಂಡು ಕೆ-ಶಿಪ್ ಮೂಲಕ ಜಿಲ್ಲೆಯ ಪ್ರಮುಖ ರಾಜ್ಯ ಹೆದ್ದಾರಿಗಳನ್ನು ಸಂಪರ್ಕ ವ್ಯವಸ್ಥೆ ಸುಧಾರಿಸಿದರು. ಶಕ್ತಿನಗರದಿಂದ ಮಾನ್ವಿ, ಸಿಂಧನೂರು, ಗಂಗಾವತಿ, ಗಿಣಿಗೇರವರಿಗೆ ಅದ್ಭುತ ರಸ್ತೆ ನಿರ್ಮಾಣ ಈ ಭಾಗದ ಜನರ ಹೋರಾಟದ ಸಂಚಾರ ಸುಧಾರಣೆಗೆ ಅನುಕೂಲವಾಯಿತು.

ಜಿಲ್ಲೆಯ ಸಮಗ್ರ ಬೆಳವಣಿಗೆಯ ಕಾರಣಕರ್ತ



ಕಲ್ಮಲಾ ಕ್ರಾಸ್ ನಿಂದ ಮುದುಗಲ್ ವರೆಗೆ ಹಾಗೂ ಲಿಂಗಸೂಗೂರು ರಸ್ತೆಯಿಂದ ಯರಮರಸ್ ವರೆಗೆ ಕೆ-ಶಿಪ್ ಯೋಜನೆಯಲ್ಲಿ ರಸ್ತೆ ನಿರ್ಮಾಣಕ್ಕೆ ಅನುದಾನ ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಬಹುದಿನಗಳ ಬೇಡಿಕೆಯಾಗಿದ್ದ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಗೆ ಅನುಮೋದನೆಯೊಂದಿಗೆ ಅನುಷ್ಠಾನಗೊಳ್ಳುವಂತೆ ಶ್ರಮ ವಹಿಸಿದರು.

ನಗರದ ಉದ್ಯಾನವನದಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ನಿಧಿಯಿಂದ ಡಿಜಿಟಲ್ ಲೈಬ್ರರಿ ನಿರ್ಮಿಸುವ ಮೂಲಕ ಈ ಭಾಗದ ಸ್ಪರ್ಧಾತ್ಮಕ ಪರೀಕ್ಷೆ ಸಿದ್ಧತೆ ವಿದ್ಯಾರ್ಥಿಗಳ ಕೊರತೆ ನೀಗಿಸಿದ ಕೀರ್ತಿ ಭೋಸರಾಜು ಅವರಿಗೆ ಸಲ್ಲುತ್ತದೆ. ಮಹಿಳಾ ಪದವಿ ಕಾಲೇಜ್ ಸ್ಥಾಪನೆಗೂ ನಾಯಕತ್ವ ನೀಡಿದರು.

ಧರಂಸಿಂಗ್ ಅವರು ಮುಖ್ಯಮಂತ್ರಿ ಹಾಗೂ ಸಿದ್ದರಾಮಯ್ಯ ಅವರು ಉಪಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅವರ ಸಂಪುಟದಲ್ಲಿ ಗೃಹ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಅವರ ನೆರವಿನೊಂದಿಗೆ ಸಿ.ಎಂ ರಾಜಕೀಯ ಕಾರ್ಯದರ್ಶಿಗಳಾಗಿದ್ದ ಭೋಸರಾಜು ಅವರು ಜಿಲ್ಲೆಯಲ್ಲಿ ಬೃಹತ್ ಮತ್ತು ಸುಸಜ್ಜಿತ ಜಿಲ್ಲಾ ಪೊಲೀಸ್ ಇಲಾಖೆಯ ಕಚೇರಿ ಕಟ್ಟಡ ನಿರ್ಮಿಸುವಲ್ಲಿ ಶ್ರಮವಹಿಸಿದರು.

ನಗರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜ್ ರಿಮ್ಸ್ ಆಸ್ಪತ್ರೆಯೊಂದಿಗೆ ನಗರದಲ್ಲಿ ₹12 ಕೋಟಿ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸಹಕಾರಿ ಅವರ ಅಭಿವೃದ್ಧಿ ಮುನ್ನೋಟಕ್ಕೆ ನಿದರ್ಶನವಾಗಿದೆ. 1917-18ರ ಅವಧಿಯಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಭೋಸುರಾಜು ಅವರು ತಮ್ಮಿಂದಲೇ ಮಂಜೂರಾಗಿದ್ದ, ರಾಯಚೂರಿನಲ್ಲಿ ಗುಲ್ಬರ್ಗ ಸ್ನಾತಕೋತರ ಕೇಂದ್ರವನ್ನು, ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯವಾಗಿ ಮೇಲ್ದರ್ಜೆಗೆರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಶತಮಾನಗಳ ಇತಿಹಾಸ ಹೊಂದಿದ ಜಿಲ್ಲಾಧಿಕಾರಿಯ ಕಚೇರಿಗೆ ಪರ್ಯಾಯವಾಗಿ ನೂತನ ಜಿಲ್ಲಾಧಿಕಾರಿ ಕಚೇರಿ ನಿರ್ಮಿಸುವಲ್ಲಿ ಭೋಸರಾಜು ಅವರು ಮಹತ್ವದ ಹೆಜ್ಜೆ ಇಟ್ಟರು. ಬೆಳೆಯುತ್ತಿರುವ ನಗರ ಮತ್ತು ಭವಿಷ್ಯತ್ತಿನ ಕಣ್ಣೋಟದೊಂದಿಗೆ ನೂತನ ಜಿಲ್ಲಾಧಿಕಾರಿಗಳ ಕಟ್ಟಡ ನಿರ್ಮಾಣದೊಂದಿಗೆ ಕಚೇರಿ ಸ್ಥಳಾಂತರಕ್ಕೂ ಗಮನ ಹರಿಸಿದರು.

ಶೋಷಿತ ಸಮುದಾಯದ ಪರ ಸದಾ ಚಿಂತನೆ ಮಾಡುವ ಭೋಸರಾಜು ಅವರು ಬಾಬು ಜಗಜೀವನ್ ರಾಮ್ ಮತ್ತು ಅಂಬೇಡ್ಕರ್ ಕಲ್ಯಾಣ ಮಂಟಪ ನಿರ್ಮಾಣಕ್ಕೆ ₹5.5 ಕೋಟಿ ಮಂಜೂರಾಗುವಂತೆ ಮಾಡಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಸಮಾಜ ಕಲ್ಯಾಣ ಇಲಾಖೆ ಮಂತ್ರಿಯಾಗಿದ್ದ ಎಚ್. ಆಂಜನೇಯ ಅವರ ಮನ ಒಲಿಸಿ ಅನುದಾನ ಪಡೆದು ಬೃಹತ್ ಕಲ್ಯಾಣ ಮಂಟಪ ಲೋಕಾರ್ಪಣೆ ಮಾಡಿದ್ದಾರೆ.

ರಾಯಚೂರು ರಾಜಕೀಯ ಕರ್ಮಭೂಮಿ

ಆಂಧ್ರ ಪ್ರದೇಶದ ಮೊಗಲ್ಲು ವಿನಲ್ಲಿ ಹುಟ್ಟಿ 1968ರಲ್ಲಿ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಜೀನೂರಿಗೆ ಬಂದ ಭೋಸರಾಜು ಅವರು ರಾಯಚೂರನ್ನು ರಾಜಕೀಯ ಕರ್ಮಭೂಮಿ ಮಾಡಿಕೊಂಡರು. ಹಾಗಾಗಿ, ರಾಯಚೂರನ್ನು ನವ ನಗರವನ್ನಾಗಿ ರೂಪಿಸಲು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಐತಿಹಾಸಿಕ ಮಾವಿನಕೆರೆಯ ಪುನರುಜ್ಜೀವನ ಗೊಳಿಸಿ, ಅಲ್ಲಿನ ಜನರ ನೀರ ಬವಣೆ ನೀಗಲು ಶ್ರಮಿಸುತ್ತಿದ್ದಾರೆ. ಇವರ ಸಮರ್ಥ ನಾಯಕತ್ವದಲ್ಲಿ ರಾಯಚೂರು ಮುನಿಸಿಪಾಲಿಟಿ ಮಹಾನಗರ ಪಾಲಿಕೆಯಾಗಿ ರೂಪುಗೊಂಡಿತು. ಮೇಯರ್, ಡೆಪ್ಯುಟಿ ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್ ಜಯದ ನಗೆ ಬೀರಲು ಇವರೇ ಕಾರಣ. ಮಾನ್ವಿಯಿಂದ ರಾಯಚೂರಿಗೆ 4 ಪಥದ ರಸ್ತೆ ನಿರ್ಮಾಣವಾಗಿದ್ದು, ನನೆಗುದಿಗೆ ಬಿದ್ದಿದ್ದ ₹220 ಕೋಟಿ ವೆಚ್ಚದ ರಾಯಚೂರು ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣದ ಕಾಮಗಾರಿಗಳು ವೇಗ ಪಡೆದುಕೊಂಡವು. ಸಚಿವರಾದ ಭೋಸರಾಜು ಅವರ ಕಾಳಜಿಯಿಂದಲೇ ರಾಯಚೂರಿಗೆ ಕಿದ್ವಾಯಿ ಪೆರಿಫೆರಲ್ ಕ್ಯಾನ್ಸರ್ ಚಿಕಿತ್ಸಾ ಘಟಕ ಬಂದಿದೆ.



ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಪ್ರಜಾವಾಣಿ
ಶನಿವಾರ ● ಜೂನ್ 21, 2025
ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನಿಮ್ಮನ್ನು ನೀವು ನಂಬುವವರೆಗೆ ದೇವರನ್ನು ನಂಬಲಾರಿರಿ.
–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಇಂಗ್ಲಿಷ್ ನಿರಾಕರಣೆಯ ಹಿಂದೆ ಹಿಂದಿ ಹೇರಿಕೆ ಹುನ್ನಾರ ಅಡಗಿದೆ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಂಗ್ಲಿಷ್ ಭಾಷೆಯನ್ನು ನಿರಾಕರಿಸಿ ನೀಡಿರುವ ಹೇಳಿಕೆಯು ಅಪಕ್ವ ಮತ್ತು ಅಜ್ಞಾನದಿಂದ ಕೂಡಿದ್ದಾಗಿದೆ. ಇಂತಹ ಮನೋಭಾವವು ದೇಶದ ಒಗ್ಗಟ್ಟು ಮತ್ತು ಅಭಿವೃದ್ಧಿಗೆ ಮಾರಕವಾಗಿ ಕೆಲಸ ಮಾಡುತ್ತದೆ. ನಿವೃತ್ತ ಅಧಿಕಾರಿಯೊಬ್ಬರು ಬರೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ದೆಹಲಿಯಲ್ಲಿ ಗುರುವಾರ ಶಾ ಅವರು ಮಾತನಾಡಿದ್ದಾರೆ. 'ದೇಶದಲ್ಲಿರುವ ಇಂಗ್ಲಿಷ್ ಮಾತನಾಡುವ ಜನರು ನಾಚಿಕೆ ಪಟ್ಟುಕೊಳ್ಳುವ ದಿನ ಬಹಳ ದೂರವೇನೂ ಇಲ್ಲ' ಎಂದು ಅವರು ಹೇಳಿದ್ದಾರೆ. ಇಂಗ್ಲಿಷ್ ಕುರಿತು ಇರುವ ಪೂರ್ವಗ್ರಹವು ಅವರ ಪಕ್ಷದ ಸಿದ್ಧಾಂತ ಮತ್ತು ರಾಜಕಾರಣದ ಭಾಗವೇ ಆಗಿದೆ ಮತ್ತು ಶಾ ಅವರು ಅದನ್ನು ವ್ಯಕ್ತಪಡಿಸಿದ್ದಾರೆ ಅಷ್ಟೇ. ನಮ್ಮ ದೇಶದ ಭಾಷೆಗಳು ನಮ್ಮ ಸಂಸ್ಕೃತಿಯ ಆಭರಣಗಳಿದ್ದಂತೆ ಎಂಬ ಶಾ ಅವರ ಮಾತು ಸರಿಯಾದುದೇ ಆಗಿದೆ. ಆದರೆ, ಸಂಪರ್ಕ ಭಾಷೆ ಮತ್ತು ಒಟ್ಟೂ ಜಗತ್ತಿನೊಡನೆ ಸಂವಹನ ಭಾಷೆಯಾಗಿ ಇಂಗ್ಲಿಷ್‌ನ ಪಾತ್ರವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ನಮ್ಮ ಭಾಷೆ ಕುರಿತು ನಮಗೆ ಹೆಮ್ಮೆ ಇರಬೇಕು ಎಂಬ ಅವರ ಮಾತು ಕೂಡ ಸರಿಯಾದುದೇ ಆಗಿದೆ. ಆದರೆ, ಒಂದು ಭಾಷೆಯ ಕುರಿತು ಇರುವ ಹೆಮ್ಮೆಯು ಬೇರೊಂದು ಭಾಷೆ ಕುರಿತು ಅಸಹನೆಯಾಗಿ ಪರಿವರ್ತನೆ ಆಗಬಾರದು. ಭಾಷೆಯು ಪೈಪೋಟಿಯ ವಿಚಾರ ಅಲ್ಲ. ಬೇರೊಂದು ಭಾಷೆಯನ್ನು ತಿಳಿದಿರುವುದು ಎಂದರೆ ಮಾತೃಭಾಷೆಯನ್ನು ಕೀಳಾಗಿ ನೋಡಿದಂತೆ ಅಥವಾ ಅವಮಾನ ಮಾಡಿದಂತೆ ಅಲ್ಲ. ಸಂವಹನದ ಮೂಲಕ ಭಾಷೆಗಳು ಬೆಳೆಯುತ್ತವೆ. ಭಾರತದ ಎಲ್ಲ ಭಾಷೆಗಳೂ ಇಂಗ್ಲಿಷ್‌ನೊಂದಿಗಿನ ಒಡನಾಟದಿಂದಾಗಿ ಸಮೃದ್ಧಗೊಂಡಿವೆ.



ಇಂಗ್ಲಿಷ್ ಭಾಷೆಯು ಎಲ್ಲ ರೀತಿಯಲ್ಲಿಯೂ ಜಗತ್ತಿನೆಡೆಗೆ ಇರುವ ಭಾರತದ ಕಿಟಕಿಯಾಗಿದೆ. ಈ ಕಿಟಕಿಯನ್ನು ಮುಚ್ಚಿದರೆ ಅದರಿಂದ ಹಾನಿಯಷ್ಟೇ ಆಗುತ್ತದೆ

ಭಾರತದಲ್ಲಿ ಹತ್ತು ಕೋಟಿಗೂ ಹೆಚ್ಚು ಜನರು ಇಂಗ್ಲಿಷ್ ಮಾತನಾಡುತ್ತಾರೆ ಮತ್ತು ಇತರ ಯಾವುದೇ ಭಾಷೆ ಮಾತನಾಡುವವರಿಗಿಂತ ಇಂಗ್ಲಿಷ್ ಮಾತನಾಡುವವರ ಸಂಖ್ಯೆ ಹೆಚ್ಚು. ಕೆಲವು ರಾಜ್ಯಗಳಲ್ಲಿ ಇಂಗ್ಲಿಷ್‌ಗೆ ಅಧಿಕೃತ ಭಾಷೆಯ ಮಾನ್ಯತೆ ನೀಡಲಾಗಿದೆ. ಜಗತ್ತಿನಲ್ಲಿ ಇಂಗ್ಲಿಷ್ ಮಾತನಾಡುವ ಅತಿಹೆಚ್ಚು ಜನರು ಇರುವ ದೇಶಗಳಲ್ಲಿ ಭಾರತಕ್ಕೆ ಎರಡನೇ ಸ್ಥಾನ ಇದೆ. ಹಲವು ಭಾಷೆಗಳಿರುವ ನಮ್ಮ ದೇಶದಲ್ಲಿ ಇಂಗ್ಲಿಷ್ ಭಾಷೆಯು ಅಧಿಕೃತ ಮತ್ತು ಸಂಪರ್ಕ ಭಾಷೆಯಾಗಿ ಇದ್ದು, ಈ ಭಾಷೆ ಬಗ್ಗೆ ಜನರಿಗೆ ಒಲವು ಇದೆ. ಹಾಗಾಗಿ, ಈ ಭಾಷೆಯು ತನ್ನ ಸ್ಥಾನವನ್ನು ಕಳೆದುಕೊಳ್ಳಬಹುದು ಎಂಬುದನ್ನು ಕಲ್ಪಿಸಿಕೊಳ್ಳುವುದೇ ಕಷ್ಟ. ಭಾಷೆಯೊಂದರ ಉಪಯುಕ್ತತೆ ಮತ್ತು ಜನಪ್ರಿಯತೆಯು ಆ ಭಾಷೆಯ ಕುರಿತು ಜನರು ಯಾವ ಧೋರಣೆ ಹೊಂದಿದ್ದಾರೆ ಎಂಬುದನ್ನು ಅವಲಂಬಿಸಿ ಇರುತ್ತದೆಯೇ ಹೊರತು ಸರ್ಕಾರ ಅಥವಾ ಇನ್ಯಾವುದೇ ಸಂಸ್ಥೆ ನೀತಿಗಳ ಮೇಲೆ ಅಲ್ಲ. ಭಾಷೆಯ ಜೊತೆಗೆ ಜನರ ಸಂಬಂಧವು ಭಾವನಾತ್ಮಕವಾದುದು. ಹಾಗಾಗಿ, ಇಂತಹ ಸೂಕ್ಷ್ಮ ವಿಷಯಗಳನ್ನು ಸರ್ಕಾರವು ಅತೀವ ಎಚ್ಚರಿಕೆ ಮತ್ತು ಜಾಗರೂಕತೆಯಿಂದ ನಿರ್ವಹಿಸಬೇಕು.

ಹಿಂದಿ ಭಾಷೆಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ಮತ್ತು ಬಿಜೆಪಿ ನಿರಂತರವಾಗಿ ಪ್ರಯತ್ನಿಸುತ್ತಲೇ ಇವೆ. ಶಾ ಅವರ ಇಂಗ್ಲಿಷ್ ದೂಷಣೆಯನ್ನು ಈ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಶಾ ಅವರ ಹೇಳಿಕೆ ಹಿಂದಿಯೇತರ ಭಾಷಿಕ ರಾಜ್ಯಗಳಲ್ಲಿ ಹಿಂದಿ ಹೇರಿಕೆಯ ಕಳವಳ ಮೂಡಲು ಕಾರಣವಾಗಿದೆ. ವಸಾಹತುಶಾಹಿ ಕಾಲದಲ್ಲಿ ಇಂಗ್ಲಿಷ್ ಅಧಿಕಾರದ ಭಾಷೆಯಾಗಿತ್ತು. ಸ್ವಾತಂತ್ರ್ಯದ ಬಳಿಕ ಇದು ಸಂಪರ್ಕ ಭಾಷೆಯಾಗಿದೆ ಮತ್ತು ದೇಶದ ಎಲ್ಲ ಜನರಿಗೂ ಈ ಭಾಷೆಯ ಜೊತೆಗೆ ಸಮಾನವಾದ ಸಂಬಂಧ ಇದೆ. ಇಂಗ್ಲಿಷ್ ಭಾಷೆಯನ್ನು ನಿರಾಕರಿಸುವುದರಿಂದ ಆ ಸ್ಥಾನಕ್ಕೆ ಹಿಂದಿಯು ಬರುತ್ತದೆ. ಹಾಗಾದರೆ, ಅದಕ್ಕೆ ರಾಜಕೀಯ ಅರ್ಥಗಳೂ ಇರುತ್ತವೆ. ಇಂಗ್ಲಿಷ್ ಭಾಷೆಯು ಎಲ್ಲ ರೀತಿಯಲ್ಲಿಯೂ ಜಗತ್ತಿನೆಡೆಗೆ ಇರುವ ಭಾರತದ ಕಿಟಕಿಯಾಗಿದೆ. ಈ ಕಿಟಕಿಯನ್ನು ಮುಚ್ಚಿದರೆ ಅದರಿಂದ ಹಾನಿಯಷ್ಟೇ ಆಗುತ್ತದೆ ಮತ್ತು ದೇಶವು ಹಿಂದಕ್ಕೆ ಚಲಿಸಿದಂತಾಗುತ್ತದೆ. ವಿದೇಶಿ ಭಾಷೆಯೊಂದಿಗೆ ಭಾರತವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಶಾ ಹೇಳಿದ್ದಾರೆ. ಭಾರತ ಎಂಬ ಕಲ್ಪನೆಯು ಸ್ಥಾವರವಲ್ಲ; ಇಲ್ಲಿ ಇಂಗ್ಲಿಷ್‌ಗೂ ಸ್ಥಾನ ಇದೆ. ಹಾಗೆಯೇ ಇಂಗ್ಲಿಷ್ ಅನ್ನು ವಿದೇಶಿ ಭಾಷೆ ಎಂದು ಪರಿಗಣಿಸಲೂ ಆಗುವುದಿಲ್ಲ.

ಜಾಲಡಾ

'ಕಾವೇರಿ'ಯ ಪುಳಕ...



ತಮಿಳುನಾಡಿನ ನದಿ ಮುಖಜ ಭೂಮಿಗೆ 'ಕಾವೇರಿ'ಯ ಪ್ರವೇಶವಾಗಿದೆ. ಅವಳ ಆಗಮನದೊಂದಿಗೆ ಎಲ್ಲರ ಹೃದಯವೂ ಉಲ್ಲಾಸಮಯ ಆಗುತ್ತದೆ– ಮುಂಗಾರಿನ ಮೊದಲ ಮಳೆಯ ಆಗಮನದ ಸಂತೋಷದಂತೆ... ಸರಳ ಪೂಜೆ, ದೊಡ್ಡ ನಗುವಿನೊಂದಿಗೆ ಆಕೆಯನ್ನು ನಮ್ಮಲ್ಲಿ ಒಬ್ಬಳಂತೆ ಎಲ್ಲರೂ ಸ್ವಾಗತಿಸುತ್ತಾರೆ... ಅದಕ್ಕಾಗಿಯೇ ನಾನು ನೀರು ಉಕ್ಕುವಿಕೆಯನ್ನು ನೋಡಲು ಉತ್ಸುಕನಾಗಿರುವೆ. ಅದು ನೀರಲ್ಲ... ಅದೊಂದು ಭಾವಪರವಶತೆ...

ನವೀನ್ ರೆಡ್ಡಿ, ಟೆಕಿ
'ಎಕ್ಸ್'ನಿಂದ

ಕಿಡಿನುಡಿ



ಒಂದೆಡೆ ಬೆಲೆ ಏರಿಕೆಯ ಸಂಕಟ, ಮತ್ತೊಂದೆಡೆ ಲಂಚ, ವಸೂಲಿ, ಲೂಟಿಕೋರತನದ ಹಾವಳಿಯಿಂದ ರಾಜ್ಯದ ಜನ ತತ್ತರಿಸುತ್ತಿದ್ದಾರೆ. ಪಂಚ ಭಾಗ್ಯಗಳನ್ನು ಮುಂದಿಟ್ಟುಕೊಂಡು ತಮ್ಮ ಹುಳುಕುಗಳನ್ನೆಲ್ಲ ಮುಚ್ಚಿಕೊಳ್ಳಲು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ವ್ಯರ್ಥ ಕಸರತ್ತು ನಡೆಸುತ್ತಿದೆ.

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಬುಧವಾರ, 21-6-2000

- **ಕಡು ಬಡವರಿಗೆ ಜನಶ್ರೀ ವಿಮಾ ಯೋಜನೆ**

ನವದೆಹಲಿ, ಜೂನ್ 20 (ಪಿಟಿಐ)– ಬಡವರಿಗೆ ಸಾಮಾಜಿಕ ಭದ್ರತೆ ಒದಗಿಸುವುದಕ್ಕಾಗಿ ಕೇಂದ್ರ ಸರ್ಕಾರ, ಬಡತನ ರೇಖೆಯ ಕೆಳಗಿರುವವರಿಗೆ ಹೊಸ ಸಮೂಹ ವಿಮಾ ಯೋಜನೆಯಾದ 'ಜನಶ್ರೀ ವಿಮಾ ಯೋಜನೆ'ಗೆ ಇಂದು ಮಂಜೂರಾತಿ ನೀಡಿತು.

18ರಿಂದ 60 ವರ್ಷ ವಯಸ್ಸಿನ ಕಡು ಬಡವರಿಗೆ ಈ ಯೋಜನೆಯ ಪ್ರಯೋಜನ ಸಿಗಲಿದೆ ಎಂದು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಪ್ರಮೋದ್ ಮಹಾಜನ ಅವರು, ಸುದ್ದಿಗಾರರಿಗೆ ತಿಳಿಸಿದರು.

ಕನಿಷ್ಠ 25 ಜನರು ಒಂದುಗೂಡಿ ಈ ಗುಂಪು ವಿಮಾ ಯೋಜನೆಯ ಪ್ರಯೋಜನ ಪಡೆಯಬಹುದಾಗಿದೆ.

- **ನೈರುತ್ಯ ರೈಲ್ವೆ ವಲಯ ಸ್ಥಳಾಂತರ ಆಜ್ಞೆ ರದ್ದು**

ಬೆಂಗಳೂರು, ಜೂನ್ 20– ನೈರುತ್ಯ ರೈಲ್ವೆ ವಲಯ ಕಚೇರಿಯನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸಿ ಕೇಂದ್ರ ಸರ್ಕಾರವು 1999ರ ಏಪ್ರಿಲ್ 12ರಂದು ಹೊರಡಿಸಿದ್ದ ಆಜ್ಞೆಯನ್ನು ಹೈಕೋರ್ಟ್ ಇಂದು ರದ್ದುಪಡಿಸಿತು. ಮೊದಲಿನ ತೀರ್ಮಾನದಂತೆ ಬೆಂಗಳೂರಿನಲ್ಲಿ ವಲಯ ಕಚೇರಿಯನ್ನು ತೆರೆಯುವ ಬಗ್ಗೆ ಇಂದಿನಿಂದ 6 ವಾರಗಳಲ್ಲಿ ಅಧಿಸೂಚನೆ ಹೊರಡಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಆದೇಶಿಸಿತು.

75 ವರ್ಷಗಳ ಹಿಂದೆ

ಬುಧವಾರ, 21-6-1950

- **ಭಾರತದ ಪ್ರಧಾನಿಗೆ ರಂಗೂನ್‌ನಲ್ಲಿ ಪ್ರಚಂಡ ಸ್ವಾಗತ**

ರಂಗೂನ್, ಜೂನ್ 20– ಭಾರತದ ಪ್ರಧಾನಿ ಪಂಡಿತ ನೆಹರೂ ಅವರು ತಮ್ಮ ಪುತ್ರಿ ಇಂದಿರಾ ಗಾಂಧಿ ಮತ್ತು ಆಕೆಯ ಈರ್ವರು ಪುತ್ರರನ್ನೊಡಗೂಡಿ ಇಂದು ಪೆನಾಂಗ್‌ನಿಂದ ರಂಗೂನಿಗೆ ವಿಮಾನದಲ್ಲಿ ಆಗಮಿಸಿದರು.

ಬರ್ಮಾದ ಪ್ರಧಾನಿ ಥುಕಿನ್‌ನೂ ಮತ್ತು ಇತರ ಸಚಿವರು ಭಾರತದ ಪ್ರಧಾನಿಗೆ ಸುಸ್ವಾಗತ ನೀಡಿದರು.

- **ದಕ್ಷಿಣ ಆಫ್ರಿಕಾ ಪ್ರಧಾನಿ ಗೃಹಕ್ಕೆ ಬೆಂಕಿ**

ಕೇಪ್‌ಟೌನ್, ಜೂನ್ 20– ದಕ್ಷಿಣ ಆಫ್ರಿಕಾ ಪ್ರಧಾನಿ ಮಾಲನ್ ಅವರ ವಸತಿ ಗೃಹಕ್ಕೆ ಈ ಬೆಳಿಗ್ಗೆ ಬೆಂಕಿ ಬಿದ್ದಾಗ ಹೊರ ಪಾರ್ಶ್ವದ ಬಾಲ್ಕನಿಯಲ್ಲಿದ್ದ ಡಾ.ಮಾಲನ್ ಮತ್ತು ಅವರ ದತ್ತು ಪುತ್ರಿ ಮೇರೀಟ್ಟ ಅವರನ್ನು ಅಗ್ನಿಶಾಮಕ ಪಡೆಯವರು ಪಾರು ಮಾಡಿದರು. ಶ್ರೀಮತಿ ಮಾಲನ್ ಯಾರ ನೆರವಿಲ್ಲದೆಯೇ, ಹೊಗೆ ತುಂಬಿದ್ದ ಮನೆಯಿಂದ ಹೊರಗೆ ಬಂದರು.

ಲಿಬರಲ್ ಶಿಕ್ಷಣ: 'ಶೋಕ'ಸಮಯ



ವಿಶ್ಲೇಷಣೆ

ಯೋಗೇಂದ್ರ ಯಾದವ್

ಪ್ರತಿಯೊಂದು ಪ್ರಶ್ನೆಗೂ ಉತ್ತರ ಕಂಡುಕೊಳ್ಳಲು ನಾವು ಕೃತಕ ಬುದ್ಧಿಮತ್ತೆಯನ್ನು (ಎ.ಐ.) ಅವಲಂಬಿಸುತ್ತೇವೆ ಎಂದಾದರೆ, ಸರಿಯಾದ ಪ್ರಶ್ನೆಗಳನ್ನು ಕೇಳಲು ನಮಗೆ ಎ.ಐ. ನೆರವು ಸಿಗುವುದಿಲ್ಲವೇ? ಸಂಜೀವ್ ಬಿಖ್‌ಚಂದಾನಿ ಅವರು ಅಶೋಕ ವಿಶ್ವವಿದ್ಯಾಲಯಕ್ಕೆ ಬರೆದ ಮತ್ತು ಈಗ ಬಹಿರಂಗವಾಗಿರುವ ಪತ್ರವನ್ನು ಓದಿದಾಗ ನನ್ನ ಮನಸ್ಸಿಗೆ ಬಂದ ಮೊದಲ ಯೋಚನೆ ಇದು. ಅವರು ಸಾರ್ವಜನಿಕವಾಗಿ ಆಡಿದ ಮಾತುಗಳ ಕುರಿತು ನನಗೆ ತೀವ್ರವಾದ ಭಿನ್ನಾಭಿಪ್ರಾಯ ಇದ್ದರೂ ಪತ್ರವನ್ನು ಸಹಾನುಭೂತಿಯಿಂದಲೇ ಓದಿದೆ.

ಪ್ರಥಮದರ್ಜೆಯ ಲಿಬರಲ್ ವಿಶ್ವವಿದ್ಯಾಲಯವೊಂದನ್ನು ಕಟ್ಟುವುದಕ್ಕಾಗಿ 'ಅಶೋಕ' ಸ್ಥಾಪಕರು ತಮ್ಮ ಸಮಯ, ಶಕ್ತಿ ಮತ್ತು ಹಣವನ್ನು ವ್ಯಯ ಮಾಡಿರುವುದು ಅಭಿನಂದನೆಗೆ ಅರ್ಹವಾದುದು. ಉದಾರವಾದಕ್ಕೆ ಮನ್ನಣೆ ಇರುವ ಕಾಲದಲ್ಲಿ ಸಂಸ್ಥೆಯೊಂದನ್ನು ಕಟ್ಟಿ ಬೆಳೆಸಿಕೊಂಡು ಹೋಗುವುದೇ ತ್ರಾಸದಾಯಕ ಮತ್ತು ಕೃತಜ್ಞತೆ ಇಲ್ಲದ ಕೆಲಸ. ಅಂತಹುದರಲ್ಲಿ ಈಗಿನ ಸರ್ಕಾರದ ಅಡಿಯಲ್ಲಿ ಅದಿನ್ನೂ ಕಷ್ಟಕರ.

ಬಿಖ್‌ಚಂದಾನಿ ಅವರದು ಕಳಪೆ ಅಭಿರುಚಿಯ ತೆಳುವಾದ ಪ್ರಶ್ನೆ. 'ಎಲ್ಲ ಲಿಬರಲ್ ವಿಶ್ವವಿದ್ಯಾಲಯಗಳು ತಮ್ಮ ಸ್ವರೂಪದಲ್ಲಿಯೇ ಹೋರಾಟದ ಮನಃಸ್ಥಿತಿಯನ್ನು ಹೊಂದಿವೆಯೇ' ಎಂಬುದು ಅವರ ಪ್ರಶ್ನೆ. ಇದಕ್ಕೆ ಇರಬಹುದಾದ ಒಂದೇ ಉತ್ತರ, 'ಇಲ್ಲ' ಎನ್ನುವುದಾಗಿದೆ. ಎಲ್ಲ ವಿಶ್ವವಿದ್ಯಾಲಯಗಳು ಒಂದೇ ರೀತಿಯಲ್ಲಿರಲು ಹೇಗೆ ಸಾಧ್ಯ? ಅಶೋಕ ವಿಶ್ವವಿದ್ಯಾಲಯಕ್ಕೆ ಇತರ ವಿಶ್ವವಿದ್ಯಾಲಯಗಳು ಮಾನದಂಡ ಏಕಾಗಬೇಕು? ಯಾವುದೇ ರೀತಿಯಲ್ಲಿ ನೋಡಿದರೂ 'ಆ್ಯಕ್ಟಿವಿಸ್ಟ್ ಸ್ವರೂಪದ ವಿಶ್ವವಿದ್ಯಾಲಯಗಳು' ಅಂದರೆ ಏನರ್ಥ?

ಒಂದು ಸಂಸ್ಥೆಯಾಗಿ ವಿಶ್ವವಿದ್ಯಾಲಯವು ಆ್ಯಕ್ಟಿವಿಸ್ಟ್ ಆಗಿ ಪರಿವರ್ತನೆಯಾಗಬೇಕು ಎಂದು ಬಯಸುವುದೇ ಹಾಸ್ಯಾಸ್ಪದ. ಬಿಖ್‌ಚಂದಾನಿ ಅವರೇ ಟ್ರಸ್ಟಿಯಾಗಿರುವ ವಿಶ್ವವಿದ್ಯಾಲಯದಲ್ಲಿ ದೇಶದಲ್ಲಿಯೇ ಅತ್ಯುತ್ತಮವಾದ ನೂರಾರು ಶಿಕ್ಷಕರಿದ್ದಾರೆ. ಅವರನ್ನು ಕೇಳುವ ಬದಲು ಚಾಟ್‌ಬಾಟ್‌ಗೆ ಈ ಪ್ರಶ್ನೆ ಕೇಳಿದ್ದರು ಎನ್ನುವುದೇ ನನ್ನನ್ನು ಮುಜುಗರಕ್ಕೆ ಈಡುಮಾಡಿದೆ.

ಬಿಖ್‌ಚಂದಾನಿ ಕೇಳಬೇಕಿರುವ ಪ್ರಶ್ನೆಗಳು ಬೇರೆ ಇವೆ: ಲಿಬರಲ್ ಕಲಾಶಿಕ್ಷಣವು ತನ್ನ ಸ್ವರೂಪದಲ್ಲಿಯೇ ಒಂದು ರೀತಿಯ ಆ್ಯಕ್ಟಿವಿಸಂ ಒಳಗೊಂಡಿದೆಯೇ? ಹೌದಾಗಿದ್ದರೆ, ಲಿಬರಲ್ ಕಲಾಶಿಕ್ಷಣ ನೀಡುವ ವಿಶ್ವವಿದ್ಯಾಲಯವು ಅದನ್ನು ಹೇಗೆ ನಿಭಾಯಿಸಬೇಕು? ನಮ್ಮ ಕಾಲದ ವಿಚಾರಗಳ ಜೊತೆಗಿನ ಸಕ್ರಿಯ ಮುಖಾಮುಖಿಗೆ ವಿಶ್ವವಿದ್ಯಾಲಯದ ಪಠ್ಯಕ್ರಮ ಮತ್ತು ಶಿಕ್ಷಣ ಶಾಸ್ತ್ರದಲ್ಲಿ ಒತ್ತು ನೀಡಬೇಕೆ? ವಿಶ್ವವಿದ್ಯಾಲಯದಲ್ಲಿ ಇಂತಹುದಕ್ಕೆ ಉತ್ತೇಜನ ನೀಡಬೇಕೆ? ವಿಶ್ವವಿದ್ಯಾಲಯದ ಒಳಗೆ ಮತ್ತು ಹೊರಗೆ ಬೋಧಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯ ಇಂತಹ ಮುಖಾಮುಖಿಯನ್ನು ಗೌರವಿಸದೇ ಇದ್ದರೂ ಅದಕ್ಕೆ ಅವಕಾಶ ಕೊಡಬೇಕೆ?

ಇವುಗಳಲ್ಲಿ ಹಲವು, ಖಂಡಿತವಾಗಿಯೂ ಯಾವುದೇ ಶಿಕ್ಷಣ ಸಂಸ್ಥೆಗೆ ಸಾಮಾನ್ಯ ಪ್ರಶ್ನೆಗಳು. ಕಲೆ, ವಿಜ್ಞಾನ ಸೇರಿದಂತೆ ಯಾವುದೇ ಉತ್ತಮ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವಿಕೆಯ ಸ್ಫೂರ್ತಿಯನ್ನು ತುಂಬಲೇಬೇಕು. ಪಡೆದುಕೊಂಡ ವಿವೇಕವನ್ನು ವಿಶ್ಲೇಷಣೆಗೆ ಒಳಪಡಿಸಲು ಮತ್ತು ವ್ಯವಸ್ಥೆಯನ್ನು ಪ್ರಶ್ನಿಸಲು ತರಬೇತಿ ನೀಡುವ ಮೂಲಕ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸಬೇಕು. ಪಾವ್ಲೊ ಫ್ರೈರೆ ಹೇಳಿದಂತೆ, ಶಿಕ್ಷಣವು ಬುಡಮೇಲುಗೊಳಿಸುವಿಕೆಯನ್ನು ತನ್ನ ಅಂತರಂಗದಲ್ಲಿಯೇ ಹುದುಗಿಸಿಕೊಂಡಿದೆ.

ಲಿಬರಲ್ ಕಲೆಯು ಇದನ್ನು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಒಯ್ಯುತ್ತದೆ. ವಿಮರ್ಶಾತ್ಮಕ ಚಿಂತನೆಯನ್ನು ಸಮಾಜ ಮತ್ತು ಜೀವನಗಳ ಮೇಲೆ ಅನ್ವಯಿಸಲು ಅದು ಉತ್ತೇಜಿಸುತ್ತದೆ. ಅಲ್ಲಿನ ಪೂರ್ವಗ್ರಹಗಳು ಮತ್ತು ವಿಶೇಷಾಧಿಕಾರಗಳನ್ನು ಪ್ರಶ್ನಿಸಲು ದಾರಿ ಮಾಡಿಕೊಡುತ್ತದೆ. ರಾಜಕೀಯ ಶಾಸ್ತ್ರದ ಬೋಧಕರು ಮತ್ತು ವಿದ್ಯಾರ್ಥಿಗಳಂತೂ (ಪ್ರೊ.ಅಲಿ ಖಾನ್ ಮಹಮೂದಾಬಾದ್ ಅವರಂತೆ) ಸದಾ ಕಾಲವೂ ರಾಜಕೀಯ ಅಧಿಕಾರಸ್ಥರ ಹೇಳಿಕೆಗಳನ್ನು ಪ್ರಶ್ನಿಸಲೇಬೇಕು.

ಅಶೋಕ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿ ಕಾರ್ತಿಕೇಯ ಭಟೋಟಿಯಾ ಅವರು, ಇತ್ತೀಚಿನ ಪ್ರಕರಣದಲ್ಲಿ ವಿಶ್ವವಿದ್ಯಾಲಯದ ಪಾತ್ರವನ್ನು ತೀವ್ರ ವಿಮರ್ಶೆಗೆ ಒಳಪಡಿಸಿದ್ದಾರೆ: 'ಲಿಬರಲ್ ಕಲಾಶಿಕ್ಷಣವು ಅದರ ಸಂರಚನೆಯಲ್ಲಿಯೇ ವಿಮರ್ಶಾತ್ಮಕ ಚಿಂತನೆ, ಭಿನ್ನಮತ ಮತ್ತು ನೈತಿಕ ವಿಮರ್ಶೆಯನ್ನು ಪೋಷಿಸಬೇಕು. ಹಾಗಾಗಿ, ಆ್ಯಕ್ಟಿವಿಸಂ ಕಡ್ಡಾಯವೇನೂ ಅಲ್ಲ. ಆದರೆ, ಈ ಪರಂಪರೆ ಅನ್ಯವಾದದ್ದೂ ಅಲ್ಲ'.

ಒಂದು ರೀತಿಯಲ್ಲಿ ಲಿಬರಲ್ ಕಲಾ ವಿಶ್ವವಿದ್ಯಾಲಯದ ಪ್ರಶ್ನೆಯು ಇಲ್ಲಿಗೆ ಬಂದು ನಿಲ್ಲುತ್ತದೆ: ವಿಶ್ವವಿದ್ಯಾಲಯವು ಬೋಧನೆಗೆ ಇರುವ ಪೂರ್ವಷರತ್ತುಗಳು ಮತ್ತು ಅದರ ಪರಿಣಾಮಗಳನ್ನು ಹೇಗೆ ನಿಭಾಯಿಸಬೇಕು? ಗುಣಮಟ್ಟದ ಲಿಬರಲ್ ಶಿಕ್ಷಣವನ್ನು ನೀಡುವವರು ವಿಮರ್ಶಾತ್ಮಕವಾಗಿ ಚಿಂತಿಸಲು ಶಕ್ತರಾಗಿರಬೇಕು ಮತ್ತು ಸಂಸ್ಥೆಯು ಅಭಿಪ್ರಾಯಗಳ ಮುಕ್ತ ವಿನಿಮಯಕ್ಕೆ ವೇದಿಕೆ ಒದಗಿಸಬೇಕು. ಸ್ವತಂತ್ರ ನಿರ್ಧಾರ ಕೈಗೊಳ್ಳುವಿಕೆ ಮತ್ತು ವಾಸ್ತವ ಜೀವನದಲ್ಲಿ ತಮ್ಮ ಅಭಿಮತಕ್ಕೆ ಅನುಸಾರ ನಡೆದುಕೊಳ್ಳಲು ಸಾಧ್ಯವಾಗುವ ಮನುಷ್ಯರ ತಯಾರಿಯೇ ಉತ್ತಮ 'ಮಾನವಿಕ' ಶಿಕ್ಷಣದ ಫಲಿತಾಂಶವಾಗಿದೆ.

ಲಿಬರಲ್ ಕಲಾ ವಿಶ್ವವಿದ್ಯಾಲಯಗಳನ್ನು ಬದಿಗಿಡಿ, ಯಾವುದೇ ವಿಶ್ವವಿದ್ಯಾಲಯ ಈ ಕಾಲದ ವಾಸ್ತವದ ಪ್ರಶ್ನೆಗಳ ಜೊತೆಗೆ ಸಕ್ರಿಯ ಮುಖಾಮುಖಿಯನ್ನು ಗೌರವಿಸಿ ಪೋಷಿಸದೆ ತನ್ನ ಶೈಕ್ಷಣಿಕ ಧ್ಯೇಯವನ್ನು ಪೂರೈಸುವುದು ಸಾಧ್ಯವೇ?

> ಅಲಿ ಖಾನ್ ಅವರ ಬಂಧನಕ್ಕೆ ಸಂಬಂಧಿಸಿದಂತೆ ಅಶೋಕ ವಿಶ್ವವಿದ್ಯಾಲಯದ ಪ್ರತಿಕ್ರಿಯೆಯು ಲಿಬರಲ್ ಕಲಾಶಿಕ್ಷಣಕ್ಕೆ ಒದಗಿರುವ ಕುತ್ತಿನ ಸಂಕೇತದಂತಿದೆ. ಈ ವಿದ್ಯಮಾನ, ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಲಿಬರಲ್ ಶಿಕ್ಷಣ ಹೇಗೆ ಬುಡಮೇಲಾಗಿದೆ ಎನ್ನುವುದಕ್ಕೆ ನಿದರ್ಶನದಂತಿದೆ

ಇಂತಹ ಸಕ್ರಿಯ ಮುಖಾಮುಖಿಯನ್ನು ನಾಗರಿಕ ಮೌಲ್ಯವಾಗಿ ಸಂಭ್ರಮಿಸಬೇಕು. ಇದು ಆ್ಯಕ್ಟಿವಿಸಂ ಎಂದಾದರೆ, ಲಿಬರಲ್ ಕಲಾಶಿಕ್ಷಣ ಮತ್ತು ಆ್ಯಕ್ಟಿವಿಸಂ ನಡುವೆ ಹೊಕ್ಕುಳಬಳ್ಳಿಯ ಸಂಬಂಧವಿದೆ.

ವಿಶ್ವವಿದ್ಯಾಲಯವೊಂದು ಯಾವುದೇ ರೀತಿಯ ಪಕ್ಷಪಾತವನ್ನು ಉತ್ತೇಜಿಸಬೇಕು ಎಂಬುದು ಇದರ ಅರ್ಥವಲ್ಲ. ಎಲ್ಲ ರೀತಿಯ ಚಿಂತನೆಗಳು ಮತ್ತು ಸಿದ್ಧಾಂತಗಳಿಗೆ ನ್ಯಾಯಯುತ ಅವಕಾಶ ಸಿಗುವುದನ್ನು ಖಾತರಿಪಡಿಸಬೇಕು. ಅಲಿ ಖಾನ್ ಅವರಂತಹ ಬೋಧಕರ ರಾಜಕೀಯ ನಿಲುವು ಚರ್ಚೆಗೆ ಮುಕ್ತ ಎಂಬಂತೆ ಇರುವವರೆಗೆ ಶಿಕ್ಷಣಕ್ಕೆ ಅದು ಅಡ್ಡಿಯಾಗದು. ಅಂಗೀಕಾರವಿಲ್ಲದ ಅಥವಾ ಸಾಮಾನ್ಯ ಜ್ಞಾನದ ಮೂಲಕವೇ ಪಸರಿಸುವ ಪಕ್ಷಪಾತವೇ ಸಿದ್ಧಾಂತ ಹೇರಿಕೆಯು ನಿಜವಾದ ಅಪಾಯ.

ಅಲಿ ಖಾನ್ ಪ್ರಕರಣದಲ್ಲಿ ಇರುವ ಸಂಕುಚಿತ ಪ್ರಶ್ನೆಯ ಕಾರಣಕ್ಕೆ ಈ ಮೂಲಭೂತ ಚರ್ಚೆಯು ದಾರಿ ತಪ್ಪಬಾರದು. ಬೋಧಕರು ಅಥವಾ ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸುವ ಪ್ರತಿಯೊಂದು ಪೋಸ್ಟ್ ಅಥವಾ ಪ್ರಬಂಧವನ್ನು ನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯವು ಸಮರ್ಥಿಸಿಕೊಳ್ಳಬೇಕು ಎಂದು ಯಾರೂ ಹೇಳುವುದಿಲ್ಲ. ನಿಜವಾದ ಪ್ರಶ್ನೆಗಳು ಇವು: ವಿಶ್ವವಿದ್ಯಾಲಯ ಅಥವಾ ಇತರ ಸಂಸ್ಥೆಗಳು ರಾಜಕೀಯ ದುರುದ್ದೇಶದ ದ್ವೇಷ ಸಾಧನೆಯ ಸಂದರ್ಭದಲ್ಲಿ ಅವರ ಪರವಾಗಿ ನಿಲ್ಲಬೇಕೇ ಬೇಡವೇ? ಅಥವಾ ವಿವಾದ ಸೃಷ್ಟಿಯಾದ ಕೂಡಲೇ ಅವರನ್ನು ಕೈಬಿಡಬೇಕೆ ಮತ್ತು ಅವರು ತಮ್ಮವರಲ್ಲ ಎಂದು ಹೇಳಿಬಿಡಬೇಕೆ? ಕಾನೂನು ಬೆಂಬಲ ನೀಡುವುದು ಸಂಸ್ಥೆಗೆ ಸಾಧ್ಯವಿಲ್ಲದೇ ಇದ್ದರೂ ನೈತಿಕ ಬೆಂಬಲವನ್ನು ನೀಡಲು ಸಾಧ್ಯವಿಲ್ಲವೇ? ಅದೂ ಆಗದಿದ್ದರೆ ಕನಿಷ್ಠ ಪಕ್ಷ ಸುಮ್ಮನಾದರೂ ಇರಬಹುದಲ್ಲವೇ?

ಅಶೋಕ ವಿಶ್ವವಿದ್ಯಾಲಯದ ಪ್ರತಿಕ್ರಿಯೆಯು ಬೇಸರದಾಯಕ ಮತ್ತು ಸಂಸ್ಥೆ ಮಾಡಬೇಕಾದುದನ್ನು ಮಾಡಿಲ್ಲ ಎಂಬ ಭಾವವನ್ನು ಮೂಡಿಸಿದೆ. ಮೊದಲನೆಯದಾಗಿ, ಅಲಿ ಖಾನ್ ಅವರ ಬಂಧನಕ್ಕೂ ಮುನ್ನವೇ ಅವರ ಪೋಸ್ಟ್ ಸಶಸ್ತ್ರ ಪಡೆಗಳ ವಿರುದ್ಧವಾಗಿದೆ ಎಂಬ ಆರೋಪವನ್ನು ಒಪ್ಪಿಕೊಂಡಿತು. ಬಂಧನದ ಬಳಿಕ, ಮಾಧ್ಯಮ ಮತ್ತು ಸರ್ಕಾರದ ರೀತಿಯಲ್ಲಿಯೇ ವಿಶ್ವವಿದ್ಯಾಲಯ ಕೂಡ ಅವರು ತಪ್ಪಿತಸ್ಥ ಎಂಬ ಭಾವನೆಯನ್ನು ಹೊಂದಿತು. ಈಗ, ಬಿಖ್‌ಚಂದಾನಿ ಅವರ ಪತ್ರವು ಎಲ್ಲವನ್ನೂ ಬಿಡಿಸಿಟ್ಟಿದೆ. ಅಲಿ ಖಾನ್ ಅವರ ಮೇಲೆ, ಸಂಸ್ಥೆಯನ್ನು ಸ್ವಾರ್ಥಕ್ಕಾಗಿ ದುರುಪಯೋಗ ಮಾಡಿಕೊಂಡ ಹಾಗೂ ರಾಜಕೀಯ ಕಾರ್ಯಸೂಚಿಗಾಗಿ ಅಶೋಕ ವಿಶ್ವವಿದ್ಯಾಲಯದ ವೇದಿಕೆಯನ್ನು ದುರುಪಯೋಗ ಮಾಡಿಕೊಂಡಿರುವ ಆರೋಪ ಹೊರಿಸಿ, ಇಂತಹ 'ರಾಜಕೀಯ ಉದ್ದೇಶದ ವ್ಯಕ್ತಿ'ಗಳಿಂದ ವಿಶ್ವವಿದ್ಯಾಲಯವನ್ನು ರಕ್ಷಿಸಲು ನೀತಿಯೊಂದನ್ನು ರೂಪಿಸಬೇಕಾಗಿದೆ ಎಂದು ಹೇಳಲಾಗಿದೆ.

ಬಿಖ್‌ಚಂದಾನಿ ಅವರ ಪತ್ರವನ್ನು ಸ್ಥಾಪಕರ ಸಂದೇಶ ಎಂದು ಭಾವಿಸಿದರೆ, ಅಲ್ಲಿ ಇರುವ ಸುಳಿವುಗಳು ಬಹಳ ಸ್ಪಷ್ಟ ಮತ್ತು ಕಳವಳಕಾರಿ.

ವಿಶ್ವವಿದ್ಯಾಲಯದ ಆಡಳಿತವು ಯಾವ ಎಡರು ತೊಡರುಗಳ ನಡುವೆ ಕೆಲಸ ಮಾಡುತ್ತಿದೆ ಎಂಬುದು ನಮಗೆ ತಿಳಿದಿಲ್ಲ. ಲಿಬರಲ್ ವಿಶ್ವವಿದ್ಯಾಲಯವೊಂದನ್ನು ಲಿಬರಲ್ ಅಲ್ಲದ ಆಡಳಿತದ ಅಡಿಯಲ್ಲಿ ನಡೆಸಿಕೊಂಡು ಹೋಗುವುದೇ ಒಂದು ವೈರುಧ್ಯ. ಇನ್ನೂ ಹೆಚ್ಚಿನದಕ್ಕೆ ತಲೆ ಕೊಡಲು ಸಾಧ್ಯವಿಲ್ಲ ಎಂದು ಸ್ಥಾಪಕರು ಭಾವಿಸಿರಬಹುದು. ಸಂಸ್ಥೆಯ ಅಸ್ತಿತ್ವವನ್ನೇ ಅಪಾಯಕ್ಕೆ ಒಡ್ಡಿ ತಮ್ಮ ಕನಸುಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಭಾವಿಸಿರಬಹುದು ಅಥವಾ ಅವರ ವ್ಯಾಪಾರ ಹಿತಾಸಕ್ತಿಗಳೂ ಅಡ್ಡ ಬಂದಿರಬಹುದು. ಇವುಗಳನ್ನೆಲ್ಲ ಅರ್ಥ ಮಾಡಿಕೊಳ್ಳಬಹುದು. ಆದರೆ, ವಿಶ್ವವಿದ್ಯಾಲಯವು ನೈತಿಕ ಮೇಲ್ಮೆಯನ್ನು ಮೆರೆಯುವ ಅಗತ್ಯ ಇರಲಿಲ್ಲ. ಸಂತ್ರಸ್ತರನ್ನು ಸಮರ್ಥಿಸಿಕೊಳ್ಳಲು ಆಗುತ್ತಿಲ್ಲ ಎಂದಮೇಲೆ ಅವರ ಮೇಲೆ ಮತ್ತೊಂದು ಕಲ್ಲು ಹಾಕುವ ಕೆಲಸ ಮಾಡಬಾರದು.

ಕೊನೆಯದಾಗಿ ಒಂದು ಚಿಂತನೆ. ಈ ಚರ್ಚೆಯು ಅಶೋಕ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಮತ್ತು ಅದರ ಸ್ಥಾಪಕರನ್ನು ಮೀರಿ ಬೋಧಕರು, ವಿದ್ಯಾರ್ಥಿಗಳು, ಹೆತ್ತವರು ಮತ್ತು ಹಳೆ ವಿದ್ಯಾರ್ಥಿಗಳನ್ನು ಒಳಗೊಂಡ ಅಶೋಕ ಸಮುದಾಯಕ್ಕೂ ಪಸರಿಸಬಾರದೇ? ಏಕೆಂದರೆ, ಈ ಶಿಕ್ಷಣ ಸಂಸ್ಥೆಯಲ್ಲಿ ಲಿಬರಲ್ ಶಿಕ್ಷಣವನ್ನು ಸಂರಕ್ಷಿಸುವುದರಲ್ಲಿ ಇವರೆಲ್ಲರೂ ಭಾಗಿಯಾಗಬೇಕು.

ಈ ಚರ್ಚೆಯು ಅಶೋಕ ವಿಶ್ವವಿದ್ಯಾಲಯದಂತಹ ಪ್ರಸಿದ್ಧ ಮತ್ತು ಪ್ರಮುಖ ಇತರ ಸಂಸ್ಥೆಗಳನ್ನೂ ಒಳಗೊಳ್ಳಬೇಡವೇ? ದೇಶದಲ್ಲಿ ಲಿಬರಲ್ ಶಿಕ್ಷಣದ ನಿಜವಾದ ದುರಂತವು ಅಶೋಕ ವಿಶ್ವವಿದ್ಯಾಲಯದಲ್ಲಿ ಏನು ನಡೆಯಿತು ಎಂಬುದಷ್ಟೇ ಅಲ್ಲ. ಲಿಬರಲ್ ಶಿಕ್ಷಣಕ್ಕೆ ಹೆಸರಾದ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯ, ದೆಹಲಿ ವಿಶ್ವವಿದ್ಯಾಲಯ ಮತ್ತು ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್‌ನಂತಹ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಲಿಬರಲ್ ಶಿಕ್ಷಣವನ್ನು ಹೇಗೆ ಬುಡಮೇಲು ಮಾಡಲಾಗಿದೆ ಎಂಬುದಾಗಿದೆ. ಪ್ರತಿಷ್ಠಿತ ಸಂಸ್ಥೆಗಳು ಮತ್ತು ಅವುಗಳಿಗೆ ದೇಣಿಗೆ ನೀಡುವ ಶ್ರೀಮಂತರು ಆ್ಯಕ್ಟಿವಿಸಂ ಅನ್ನು ಬೆಂಬಲಿಸುವುದಿಲ್ಲ. ಆ್ಯಕ್ಟಿವಿಸಂ ಅನ್ನು ಜನರೇ ಬೆಂಬಲಿಸಬೇಕಾಗಿದೆ. ಅದನ್ನು ಹೇಳಲು ನಮಗೆ ಚಾಟ್‌ಬಾಟ್‌ನ ಅವಶ್ಯಕತೆ ಇಲ್ಲವೇ ಇಲ್ಲ.

ವಾಚಕರ ವಾಣಿ

ಹೃದಯಾಘಾತ: ಜಾಗೃತಿಯೇ ಮದ್ದು

'ದಿಢೀರ್ ಹೃದಯಾಘಾತ: ಯಾಕೆ?' ಲೇಖನದಲ್ಲಿ (ಪ್ರ.ವಾ., ಜೂನ್ 20) ಡಾ.ಲಕ್ಷ್ಮಣ ವಿ.ಎ. ಅವರು, ಹೃದಯಾಘಾತಕ್ಕೆ ಕಾರಣಗಳೇನು ಎಂಬುದನ್ನು ವಿವರಿಸಿದ್ದಾರೆ. ದೈಹಿಕ ಫಿಟ್‌ನೆಸ್ ಬಗ್ಗೆ ಯುವಪೀಳಿಗೆಗೆ ಅತಿಯಾದ ಮೋಹ. ಇದು ಅವರನ್ನು ಸಾವಿನ ಬಾಗಿಲು ತಟ್ಟುವಂತೆ ಮಾಡುತ್ತಿದೆ. ಹೃದ್ರೋಗ ಕುರಿತು ಅವರಿಗಿರುವ ಅಜ್ಞಾನವೂ ಮತ್ತೊಂದು ಕಾರಣವಾಗಿದೆ. ಜಾಗೃತಿಯೊಂದೇ ಇದಕ್ಕೆ ಮದ್ದು.

ಅನಿಲಕುಮಾರ ಮುಗಳಿ, ಧಾರವಾಡ

ಅರ್ಹರ ನೇಮಕವಾಗಲಿ

ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳ ನೇಮಕಾತಿಯಲ್ಲಿ ಪದವೀಧರ ಮಹಿಳೆಯರಿಗೆ ಆದ್ಯತೆ ನೀಡುವ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮುಂದಾಗಿರುವುದು ವರದಿಯಾಗಿದೆ. ಇದು ಶ್ಲಾಘನೀಯ ಕ್ರಮವೂ ಆಗಿದೆ. ಆದರೆ, ಪೂರ್ವ ಪ್ರಾಥಮಿಕ ಶಿಕ್ಷಣವು ಚಿಣ್ಣರ ಬದುಕಿನಲ್ಲಿ ಮಹತ್ವದ ಘಟ್ಟ. ಮಕ್ಕಳ ಮನಸ್ಸನ್ನು ಸರಿಯಾಗಿ ಅರ್ಥೈಸಿಕೊಂಡು ಅವರಿಗೆ ಸ್ಪಂದಿಸುವವರನ್ನು ನೇಮಿಸಬೇಕಿದೆ. ಉನ್ನತ ವಿದ್ಯಾಭ್ಯಾಸವೊಂದೇ ಈ ಹುದ್ದೆಗೆ ಮಾನದಂಡವಾಗಬಾರದು. ಮಕ್ಕಳ ಕಲಿಕಾ ಸಾಮರ್ಥ್ಯ ಮತ್ತು ಅವರ ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ಒತ್ತು ನೀಡುವಂತಹ ಅಭ್ಯರ್ಥಿಗಳ ನೇಮಕದತ್ತ ಸರ್ಕಾರ ಗಮನ ಹರಿಸಲಿ.

ಗಿರಿಯಪ್ಪ ಕೊಳ್ಳಣ್ಣವರ, ತುಮಕೂರು

ಸಚಿವರ ಭೇಟಿ: ಫಲಶ್ರುತಿ ಶೂನ್ಯ

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಬೆಂಗಳೂರು ದಕ್ಷಿಣ ತಾಲ್ಲೂಕು ಕಚೇರಿಗೆ ದಿಢೀರ್ ಭೇಟಿ ನೀಡಿ, ಅಲ್ಲಿನ ಆಡಳಿತದ ಅವ್ಯವಸ್ಥೆ ಬಗ್ಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ (ಪ್ರ.ವಾ., ಜೂನ್ 20). ಸಚಿವರು ರಾಜ್ಯದ ವಿವಿಧ ತಾಲ್ಲೂಕು ಕಚೇರಿಗಳಿಗೆ ದಿಢೀರ್ ಭೇಟಿ ನೀಡಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳುವ ಬಗ್ಗೆ ಮಾಧ್ಯಮಗಳಲ್ಲಿ ಆಗಾಗ್ಗೆ ಸುದ್ದಿಯಾಗುತ್ತಲೇ ಇದೆ. ಆ ನಂತರ ಅಧಿಕಾರಿಶಾಹಿಯ ಕಾರ್ಯವೈಖರಿಯಲ್ಲಿ ಬದಲಾವಣೆಯಾಗಿದೆಯೇ?

ಕಂದಾಯ ಇಲಾಖೆ ಕಚೇರಿಗಳಲ್ಲಿನ ಅವ್ಯವಸ್ಥೆಗೆ ಕೊನೆ ಮೊದಲೆಂಬುದಿಲ್ಲ. ತಾಲ್ಲೂಕು ಕಚೇರಿಗಳಿಗೆ ಆಗಾಗ್ಗೆ ಲೋಕಾಯುಕ್ತ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸುತ್ತಾರೆ. ಇಂಥ ತರಾಟೆಗಳಿಂದ ಅಧಿಕಾರಿಗಳು ಮನಃಸ್ಥಿತಿ ಬದಲಾಯಿಸಿಕೊಂಡು ಸೇವೆಯಲ್ಲಿ ಪ್ರಾಮಾಣಿಕತೆ ತೋರಿದ ನಿದರ್ಶನ ಇಲ್ಲ!

ಜಿ. ಬೈರೇಗೌಡ, ನೆಲಮಂಗಲ

ಹಟಮಾರಿ ಧೋರಣೆ ಸರಿಯೇ?

ನಂದಿ ಬೆಟ್ಟಕ್ಕೆ ರೋಪ್ ವೇ ನಿರ್ಮಾಣಕ್ಕೆ ಪರಿಸರವಾದಿಗಳು ಸೇರಿ ನಾಗರಿಕರ ಪ್ರಬಲ ವಿರೋಧವಿದೆ. ಇದನ್ನು ಲೆಕ್ಕಿಸದೆ ರಾಜ್ಯ ಸರ್ಕಾರವು ರೋಪ್ ವೇ ನಿರ್ಮಾಣಕ್ಕೆ ಮುಂದಾಗಿರುವುದು ಕಳವಳಕಾರಿ. ಈ ಬೆಟ್ಟವು ಭೌಗೋಳಿಕ ವೈವಿಧ್ಯಗಳಿಂದ ಕೂಡಿದೆ. ಬೆಂಗಳೂರು ಸೇರಿ ಸುತ್ತಲಿನ ಗ್ರಾಮಗಳಿಗೆ ಸ್ವಾಭಾವಿಕ ಜಲ ಸೆಲೆಯಾಗಿದೆ. ರೋಪ್ ವೇ ನಿರ್ಮಾಣದಿಂದ ಜಲಮೂಲಗಳಿಗೆ ಹಾನಿಯಾಗುವ ಸಾಧ್ಯತೆಯೇ ಹೆಚ್ಚು. ರಿಯಲ್ ಎಸ್ಟೇಟ್ ಕುಳಗಳಿಗೆ ಅನುಕೂಲ ಕಲ್ಪಿಸುವ ಹುನ್ನಾರ ಇದರ ಹಿಂದಿದೆ. ಸರ್ಕಾರದ ನಿರ್ಧಾರವು ಹುಚ್ಚುತನದಿಂದ ಕೂಡಿದೆ. ತನ್ನ ಹಟಮಾರಿ ಧೋರಣೆಯನ್ನು ಬದಲಾಯಿಸಿಕೊಳ್ಳಬೇಕಿದೆ.

ರಮೇಶ್, ಬೆಂಗಳೂರು

ಎಲ್ಲದಕ್ಕೂ ಶಿಕ್ಷಕರೇ ಹೊಣೆಯಲ್ಲ

ಎರಡು ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಕಳಪೆ ಸಾಧನೆ ತೋರಿದ ಶಾಲೆಗಳಿಗೆ ನೋಟಿಸ್ ನೀಡಲಾಗಿದೆ. ಜೊತೆಗೆ, ಅಂತಹ ಶಾಲೆಗಳ ಅನುದಾನ ಹಾಗೂ ಶಿಕ್ಷಕರ ವಾರ್ಷಿಕ ಮುಂಬಡ್ತಿ ಕಡಿತಕ್ಕೂ ರಾಜ್ಯ ಸರ್ಕಾರ ಮುಂದಾಗಿದೆ. ಇದೊಂದು ಸ್ವಾಗತಾರ್ಹ ಕ್ರಮವೇ ಆದರೂ ಕಳಪೆ ಫಲಿತಾಂಶಕ್ಕೆ ಶಿಕ್ಷಕರೊಬ್ಬರೇ ಕಾರಣವಲ್ಲ. ಅದಕ್ಕೆ ಶಿಕ್ಷಣ ವ್ಯವಸ್ಥೆಯಲ್ಲಿನ ಹಲವು ಲೋಪಗಳು ಕಾರಣವಾಗಿವೆ. ಹಲವು ಶಾಲೆಗಳಲ್ಲಿ ವಿಷಯವಾರು ಶಿಕ್ಷಕರೇ ಇಲ್ಲ. ಸುಸಜ್ಜಿತ ಕೊಠಡಿಗಳು ಮತ್ತು ಗ್ರಂಥಾಲಯವಿಲ್ಲ. ಶಿಕ್ಷಕರಿಗೆ ಕಾಲಕ್ಕೆ ತಕ್ಕಂತೆ ಪುನಶ್ಚೇತನ ಕಾರ್ಯಕ್ರಮ ನಡೆಸುವುದಿಲ್ಲ. ಅದರ ಬದಲಾಗಿ ಇಲಾಖೆಯ ಹತ್ತಾರು ಸುತ್ತೋಲೆಗಳಿಗೆ ಮಾಹಿತಿ ಒದಗಿಸುವುದರಲ್ಲೇ ಸಮಯ ವ್ಯರ್ಥವಾಗುತ್ತಿದೆ. ಇಷ್ಟೆಲ್ಲಾ ಸಮಸ್ಯೆಗಳ ನಡುವೆ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆ ಎಂದರೆ ನಿರ್ಗತಿಕ ಮಕ್ಕಳ, ಬಡವರ ಮಕ್ಕಳ ಶಾಲೆ ಎಂಬ ಹಣೆಪಟ್ಟಿ ಕಟ್ಟಲಾಗಿದೆ.

ಎಲ್ಲದಕ್ಕೂ ಶಿಕ್ಷಕರನ್ನೇ ಹೊಣೆ ಮಾಡಬಾರದು. ಒಂದು ಕೈಯಿಂದ ಚಪ್ಪಾಳೆ ತಟ್ಟಲು ಸಾಧ್ಯವಿಲ್ಲ. ಕಡಿಮೆ ಫಲಿತಾಂಶಕ್ಕೆ ಆಯಾ ಬಿಇಒಗಳು ಮತ್ತು ಡಿಡಿಪಿಐ ಕೂಡ ಪರೋಕ್ಷವಾಗಿ ಕಾರಣರಾಗಿದ್ದಾರೆ. ಅವರ ಮುಂಬಡ್ತಿಯನ್ನೂ ತಡೆಹಿಡಿಯಬೇಕಲ್ಲವೇ?

ಸುರೇಂದ್ರ ಪೈ, ಭಟ್ಕಳ

ವಿಶೇಷ ಬೋಧನೆ ಮತ್ತು ಸವಾಲು

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಕಳೆದ ವರ್ಷದಿಂದ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಕೊರತೆ ಇರುವ 3ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆಯನ್ನು ಅನುಷ್ಠಾನಗೊಳಿಸಿದೆ. ಆದರೆ, ಇದಕ್ಕೆ ಸಂಬಂಧಿಸಿದ ನಮೂನೆಗಳು ಮತ್ತು ಅಂಕಿ ಅಂಶ ನಿರ್ವಹಿಸುವುದು ವಿದ್ಯಾರ್ಥಿಗಳಿಗೆ ಕಲಿಸುವುದಕ್ಕಿಂತಲೂ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಜೊತೆಗೆ, ಸವಾಲಿನಿಂದಲೂ ಕೂಡಿದೆ.ಈ ನಮೂನೆಗಳು ಮತ್ತು ಅಂಕಿ ಅಂಶಗಳಿಂದ ವಿದ್ಯಾರ್ಥಿಗಳಿಗೆ ಮತ್ತು ಇಲಾಖೆಗೆ ಯಾವ ರೀತಿಯ ಉಪಯೋಗವಾಗುತ್ತದೆ ಎಂಬುದು ತಿಳಿಯದಾಗಿದೆ. ಆದರೆ, ಇದರಿಂದ ಮಾನವ ಸಂಪನ್ಮೂಲ ಮತ್ತು ಸಮಯ ವ್ಯರ್ಥವಾಗುತ್ತಿರುವುದು ಸತ್ಯ.

ಅಶೋಕ ಎನ್.ಎಚ್., ಕೋಲಾರ

ಚುರುಮುರಿ



ಯೇಗ್ದಾಗೆಲ್ಲಾ ಐತೆ!

● ತುರುವೇಕೆರೆ ಪ್ರಸಾದ್

'ಏನ್ರಲಾ, ಇವತ್ತು ವಿಶ್ವ ಯೋಗ ದಿನ... ಎಲ್ಲಾ ಯೋಗ ಮುಗುಸ್ಕೊಂಡ್ ಬಂದ್ರೋ ಎಂಗೆ?' ಮಾತು ತೆಗೆದ ಮಾಲಿಂಗ.

'ಅಯ್ಯೋ! ದಿನಾ ಸಂಸಾರದಲ್ಲಿ ಯೇಗೋನಿಗೆ ಯಾವ ಯೋಗನ್ಲಾ? ಕುಕ್ಕರಕಾಲಲ್ಲಿ ಕುಂತ್ಕಂಡು ಪಾತ್ರೆ ತೊಳೆದು, ಬಟ್ಟೆ ಒಗುದ್ರೆ ಕುಕ್ಕುಟಾಸನ, ಬಗ್ಗಿ ಇಡೀ ಮನೆ ಒರೆಸುದ್ರೆ ದಂಡಾಸನ, ಮನೆ ಶಲಬೆ ತೆಗುದ್ರೆ ಶಲಬಾಸನ ಹೀಗೆ ಎಲ್ಲಾ ಸರ್ವಾಂಗಾಸನಗಳನ್ನೂ ಮಾಡಿದಂಗಾಗುತ್ತೆ' ಎಂದ ಗುದ್ಲಿಂಗ.

'ಹೌದು, ಈ ಯೋಗಕ್ಕೂ ಆಸನಕ್ಕೂ ಏನ್ಲಾ ವ್ಯತ್ಯಾಸ?' ಕಲ್ಲೇಶಿ ಕೇಳಿದ.

'ಲೇಯ್ ಬಡತ್ತುದೇ, ಅಷ್ಟೂ ಗೊತ್ತಿಲ್ವೇನ್ಲಾ? ದಣೀದಂಗೆ ಸುಮ್ಕೆ ಬರೋದು ಯೋಗ, ಅದು ಅಸಾಮಾನ್ಯರಿಗೆ!' ದಣಿದು ಮಾಡೋದು ಶ್ರೀಸಾಮಾನ್ಯರ ಆಸನ'.

'ಒಗಟೊಗಟಾಗಿ ಯೋಳ್ದೆ ಸ್ವಲ್ಪ ಬಿಡ್ಸಿ ಯೋಳ್ಲಾ...'

'ನೋಡ್ರುಲಾ, ಬೇರೆ ಪಕ್ಷದಿಂದ ಹರ್ಕಂಡು ಬಂದು ಮಂತ್ರಿ ಆಗಾದು, ಹಳೆಬ್ರನ್ನೆಲ್ಲ ಮೂಲೆಗುಂಪಾಗ್ಸಿ ಅಧ್ಯಕ್ಷ ಆಗೋದು,ಸದಾ ಹಗರಣಗಳಲ್ಲೇ ಬಿದ್ದು ಹೊಳ್ಕಾಡ್ತಿದ್ರೂ ಆಯೋಗ ನೇಮಕ ಆಗ್ದೇ ಬಚಾವ್ ಆಗಾದು, ಕುತ್ತಿಗೆಗೆ ಬಂದ ಸಿಬಿಐ ಕೇಸ್‌ಗೆ ಸರ್ಕಾರ ಅನುಮತಿ ಕೊಡ್ದೇ ಇರಾದು, ಎಂಎಲ್‌ಎ ಸೀಟು ಬರಕಾಸ್ತಾಯ್ತು ಅಂತ ಉಪ ಚುನಾವಣೆಗೆ ರೆಡಿಯಾಗೋ ಹೊತ್ಗೆ ಜೈಲಲ್ಲಿದ್ದ ನಾಯಕ ಶಿರೋಮಣಿಗೆ ಜಾಮೀನ್ ಸಿಗೋದು ಇವೆಲ್ಲಾ ಯೋಗ ಕಣ್ರಲಾ'.

'ಶ್ರೀಸಾಮಾನ್ಯರ ಆಸನ ಅಂದ್ರೆ?'

'ಅವೇನ್ ಒಂದಾ ಎಲ್ದಾ? ಯಾವ ಗುರು ಹಂಗೂ ಇಲ್ದೆ ದಿನವೆಲ್ಲಾ ಈ ಪಟ್ಟುಗಳನ್ನ ಆಕ್ತಾನೇ ಇರ್ತೀವಿ. ಧರಣಿ ಮುಷ್ಕರ ಮಾಡಕ್ಕೆ ಏಕಪಾದಾಸನ, ಆ ಮೇಲೆ ಗಂಡುಸ್ರು ಬಸ್ ಮೆಟ್ರೊ ಹಿಡಿಯಕ್ಕೆ, ಟೇಬಲ್ ಕೆಳಗೆ ಮಾಮೂಲಿ ತಗಳಕ್ಕೆ ತ್ರಿಕೋನಾಸನ, ಹೋಟ್ಲು, ಮಾಲು ಬಿಲ್ ಎತ್ತೋಕೆ ಧನುರಾಸನ, ಮಕ್ಕಳ ಸ್ಕೂಲ್ ಬ್ಯಾಗ್ ಹೊರಕ್ಕೆ ಭುಜಂಗಾಸನ, ರಾತ್ರಿ ಎಣ್ಣೆ ಹೊಡೆದ್ ಮೇಲೆ ತಾಡಾಸನ, ಕೊನೆಗೆ ಕಪಾಳ ಭಾತಿ'

'ಅದ್ಯಾಕೆ ಇವೆಲ್ಲೂ ಕೊನೆಗೆ?'

'ತಾಡಾ ಅಂದ್ರೆ ಪಾಮ್, ಈಚಲ, ತಾಡಾಸನ ಅಂದ್ರೆ ಎಣ್ಣೆ ಹಾಕಿ ಅಲ್ಲಾಡದಂಗೆ ನಿಂತ್ಕೊಳಾದು'.

'ಹೌದೌದು, ಮಿಸ್ಸಾಗಿ ಬೀದೀಲೇ ಬಿದ್ರೆ ಶವಾಸನ. ಮನೆ ತಲುಪುದ್ರೆ ಕಪಾಳ ಭಾತಿ ಅಂದ್ರೆ ಹೆಂಡತಿ ಕಪಾಳಕ್ಕೆ ಹೊಡೆದು ಬಾತುಕೊಳ್ಳುತ್ತೆ' ಎಂದ ರೇಶ್ಮಿ. ಎಲ್ಲಾ ಗೊಳ್ಳನೆ ನಕ್ಕರು.

ಸಂಗತ


'ವಚನ ದರ್ಶನ' ಹೆಸರಲ್ಲಿ ಅಪಚಾರ

'ವಚನ ದರ್ಶನ' ಕೃತಿ ಅಸತ್ಯವನ್ನು ಸತ್ಯವೆಂದು ಸಾಧಿಸಲು ನಡೆಸಿರುವ ಹುನ್ನಾರ. ವಚನಗಳನ್ನು ಉಪನಿಷತ್ತುಗಳಿಗೆ ಅಧೀನಗೊಳಿಸುವುದು ಅಪಚಾರ

● ವಿಜಯ್ ಮಹಾಂತೇಶ ಪಾಪನಾಳ

'ವಚನ ದರ್ಶನ' (ಪ್ರ: ಅಯೋಧ್ಯಾ ಪಬ್ಲಿಕೇಷನ್ಸ್) ಕೃತಿಯು ವಚನಗಳನ್ನು ಉಪನಿಷತ್ತಿಗೆ ಅಧೀನಗೊಳಿಸುವ ಪ್ರಯತ್ನದ ಮೂಲಕ, ಕನ್ನಡದ ವಚನಗಳ ಸ್ವೋಪಜ್ಞ ಜ್ಞಾನಕ್ಕೆ ಅವಮಾನ ಮಾಡುವ ಉದ್ದೇಶ ಹೊಂದಿದೆ. ಕೃತಿಯಲ್ಲಿರುವ ತಪ್ಪುಗಳದ್ದೇ ಒಂದು ತೂಕವಾದರೆ, ಅದರ ತಾತ್ವಿಕ ವೈಫಲ್ಯ ಮತ್ತು ಅದರ ಹಿಂದಿರುವ ಕಪಟತನದ ನಡೆಗಳದ್ದು ಇನ್ನೊಂದು ತೂಕ.

ಪುಸ್ತಕದ ಮುನ್ನುಡಿಯಲ್ಲಿ ಮಲ್ಲೇಪುರಂ ಜಿ. ವೆಂಕಟೇಶ ಅವರು, ಎಂ.ಆರ್. ಶ್ರೀನಿವಾಸಮೂರ್ತಿ (ಎಂಆರ್‌ಶ್ರೀ) ಅವರ 'ವಚನ ಧರ್ಮಸಾರ' ಕೃತಿಯನ್ನು ಉದ್ಧರಿಸುತ್ತ ಹೀಗೆ ಬರೆಯುತ್ತಾರೆ: 'ವಚನ ಸಾಹಿತ್ಯ ಉಪನಿಷತ್ತುಗಳ ತಿಳಿ ಬೆಳಕಿನಲ್ಲಿ ಬೆಳೆದು ಬಂದಿದೆಯೆಂದೂ, ವಚನಗಳು ಕನ್ನಡದ ಉಪನಿಷತ್ತುಗಳೆಂದೂ ಎಂಆರ್‌ಶ್ರೀ ಅವರು ಆ ಕೃತಿಯಲ್ಲಿ ಸಾಧಾರವಾಗಿಯೂ ಯುಕ್ತಿ- ಯುಕ್ತವಾಗಿಯೂ ಪ್ರತಿಪಾದಿಸಿದ್ದರು'. ಇದು ಸತ್ಯದೂರವಾದ ಅಭಿಪ್ರಾಯವಾಗಿದೆ. ಎಂಆರ್‌ಶ್ರೀ ಅವರು ತಮ್ಮ ಗ್ರಂಥದಲ್ಲಿ ಎಲ್ಲಿಯೂ ಹಾಗೆ ಹೇಳಿಯೇ ಇಲ್ಲ. ಮೈಸೂರು ವಿಶ್ವವಿದ್ಯಾಲಯವು 1942ರಲ್ಲಿ ಪ್ರಕಟಿಸಿದ 'ವಚನ ಧರ್ಮಸಾರ' ಕೃತಿಯಲ್ಲಿ ಎಂಆರ್‌ಶ್ರೀ ಅವರು, 'ವಚನ ಸಾಹಿತ್ಯ ಎರವಲು ತಂದದ್ದಲ್ಲ; ಅದು ಕನ್ನಡದ ಸ್ವಾರ್ಜಿತ ಸ್ವತ್ತು. ವಚನಕಾರರು ಸಂಸ್ಕೃತದ ಆಚಾರ್ಯರಲ್ಲ; ಅವರು ಅಚ್ಚಗನ್ನಡದ ಬೇಸಾಯಗಾರರು' ಎಂದಿದ್ದರು.



'ವಚನ ದರ್ಶನ' ಕೃತಿಯ ಒಂದಂಶದ ಗುರಿಯೇ ವಚನಗಳನ್ನೂ ಶರಣರನ್ನೂ ಅಪಮೌಲ್ಯಗೊಳಿಸುವುದು ಹಾಗೂ ಅವರ ಜ್ಞಾನವೆಲ್ಲವೂ ಉಪನಿಷತ್ತುಗಳಿಂದ ಬಂದದ್ದು ಎಂಬಂತೆ ಚಿತ್ರಿಸುವುದು. ಇದು ಮನದಟ್ಟಾಗಬೇಕೆಂದರೆ, ಕೆರೂರು ಚರಂತಿಮಠದ ಶಿವಕುಮಾರ ಶಿವಾಚಾರ್ಯರು ಬರೆದ ಲೇಖನವನ್ನೊಮ್ಮೆ ಓದಬೇಕು. ಉಪನಿಷತ್ತುಗಳು ಮತ್ತು ಉಪನಿಷತ್‌ಕಾರರ ಅಮೋಘ ವೈಭವೀಕರಣದ ಮೂಲಕ, ವಚನಗಳು ಮತ್ತು ವಚನಕಾರರನ್ನು ಗೌಣಗೊಳಿಸುವ ಕೆಲಸವನ್ನು ಅವರು ಮಾಡಿದ್ದಾರೆ.

ತಮ್ಮ ವಾದಕ್ಕೆ ಅವರು ಕೊಡುವ ಕಾರಣವೆಂದರೆ, ಬೆರಳೆಣಿಕೆಯಷ್ಟು ವಚನಗಳಲ್ಲಿ ಕಂಡುಬರುವ ಉಪನಿಷತ್ ಉಕ್ತಿಗಳು. ಆದರೆ, ಸುಮಾರು 20 ಸಾವಿರಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿರುವ ವಚನಗಳಲ್ಲಿ ಅಂಥ ವಚನಗಳ ಸಂಖ್ಯೆ ಶೇ 4ರಷ್ಟು ಮಾತ್ರ ಎನ್ನುವುದನ್ನು ಗಮನಿಸಬೇಕು. ಮಿಕ್ಕ ಶೇ 96ರಷ್ಟು ವಚನಗಳು ಏನು ಹೇಳುತ್ತವೆ ಎನ್ನುವ ಪರಿಗಣನೆಯನ್ನು 'ವಚನ ದರ್ಶನ' ಕೃತಿ ಯಾಕೆ ಮಾಡುವುದಿಲ್ಲ?

'ವಚನ ದರ್ಶನ' ಕೃತಿಯ ಪ್ರವರ್ತಕರಿಗೆ ಒಂದು ಸರಳ ತಾರ್ಕಿಕ ಪ್ರಶ್ನೆ: ಕೇವಲ ಶೇ 4ರಷ್ಟು ವಚನಗಳಲ್ಲಿ ಉಪನಿಷತ್ ಉಕ್ತಿಗಳಿವೆ ಎಂಬ ಆಧಾರದಲ್ಲಿ ವಚನಗಳು ಉಪನಿಷತ್ತಿಗೆ ಅಧೀನ, ವಚನಕಾರರು ಉಪನಿಷತ್ ಕಾರರನ್ನು ಅನುಕರಿಸಿದ್ದಾರೆ ಎನ್ನುವುದಾದರೆ, ಅದೇ ತರ್ಕದ ಆಧಾರದಲ್ಲಿ ಭಗವದ್ಗೀತೆಯನ್ನು ಉಪನಿಷತ್ತಿಗೆ ಅಧೀನ ಎಂದೂ, ಭಗವದ್ಗೀತೆಯ ಕರ್ತೃವು ಉಪನಿಷತ್‌ಕಾರರನ್ನು ಅನುಕರಿಸಿದ್ದಾನೆ ಎಂದೂ ಹೇಳಬಹುದೆ?

'ವಚನ ದರ್ಶನ' ಕೃತಿಯ ಲೇಖನವೊಂದರಲ್ಲಿ ರಾಜಾರಾಂ ಹೆಗಡೆ ಅವರು, 'ವಚನಗಳ ವಾರಸುದಾರರು ಎಂದು ಕರೆದುಕೊಳ್ಳುವವರಲ್ಲಿ ಅವನ್ನು ಅರ್ಥೈಸುವ ಹೊಸ ಅಸಾಂಪ್ರದಾಯಿಕ ಜಾಡೊಂದು ಇತ್ತೀಚೆಗೆ ತೆರೆಯಿತು' (ಪುಟ: 19) ಎಂದು ಹೇಳಿದ್ದಾರೆ. ವಚನಗಳ ಪ್ರವೇಶಿಕೆಗೆ ಪೂರ್ವ ಪೀಠಿಕೆಯೊಂದರ ಅಗತ್ಯ ಇದೆ ಎನ್ನುತ್ತಾ, ಅದನ್ನು ಕ್ರೈಸ್ತ ಧರ್ಮದ ಕ್ಯಾಥೊಲಿಕ್- ಪ್ರಾಟೆಸ್ಟೆಂಟ್ ಹೋರಾಟಗಳ ನೆಲಗಟ್ಟಿನಲ್ಲಿ ವಿವರಿಸುತ್ತಾರೆ.

ಇಂದಿನ ಕೆಲವು ಚಿಂತಕರಿಗೇನೋ ಕ್ಯಾಥೊಲಿಕ್- ಪ್ರಾಟೆಸ್ಟೆಂಟ್ ತಿಕ್ಕಾಟಗಳ ಬೌದ್ಧಿಕ ಸಂದರ್ಭದ ಹಿನ್ನೆಲೆ ಇರಬಹುದು. ಆದರೆ, ಬಸವಣ್ಣನವರು ಅಗ್ರಹಾರ ಸಂಸ್ಕೃತಿಯನ್ನು 'ನಾನೊಲ್ಲೆ' ಎಂದು ಹೊರಬಂದು ಕೂಡಲಸಂಗಮಕ್ಕೆ ನಡೆದು ಸಂಗಮನಾಥನ ಎದುರು ಪ್ರಾಣಲಿಂಗಧರರಾದವರು. ಅವರಿಗೆ ಯಾವ ಕ್ಯಾಥೊಲಿಕ್- ಪ್ರಾಟೆಸ್ಟೆಂಟ್ ಹಿನ್ನೆಲೆ ಇತ್ತು? ಅವರಷ್ಟೇ ಅಲ್ಲ, ಬಿಜ್ಜಳ ರಾಜನ ಆಸ್ಥಾನದಲ್ಲಿ ಕರಣಿಕರಾಗಿದ್ದ ಸೊಡ್ಡಳ ಬಾಚರಸರು ಮತ್ತು ಶಾಂತರಸರೂ ಪ್ರಾಣಲಿಂಗಧರರಾದರಲ್ಲ, ಅವರಿಗೆಲ್ಲ ಯಾವ ಕ್ಯಾಥೊಲಿಕ್- ಪ್ರಾಟೆಸ್ಟೆಂಟ್ ಹಿನ್ನೆಲೆಯಿತ್ತು? ಹೆಗಡೆ ಅವರು ಮೊದಲು ಇಂಥ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲಿ.

ಅಲ್ಲಮಪ್ರಭು ಅವರು, 'ಅರಿದೆವರಿದೆವೆಂಬಿರಿ, ಅರಿದ ಪರಿಯೆಂತು ಹೇಳಿರೆ? ಅರಿದವರು ಅರಿದೆವೆಂಬರೆ? ಅರಿಯಬಾರದ ಘನವನರಿದು, ಅರಿಯದಂತಿಪ್ಪರು ಗುಹೇಶ್ವರಾ' ಎನ್ನುತ್ತಾರೆ. ಅಂಥ 'ಅರಿವಿನ ಅರಿವು' ಈ 'ವಚನ ದರ್ಶನ' ಪುಸ್ತಕದ ಪ್ರಕಟಣೆಯಲ್ಲಿ ಭಾಗಿಯಾದ ಸಮಸ್ತರಿಗೂ ಆಗಲಿ. ಆ ಮೂಲಕ, ಸಮಾಜದ ಸಾಮರಸ್ಯ, ಸ್ವಾಸ್ಥ್ಯವನ್ನು ಕದಡುವ ಕುಟಿಲ ಯೋಜನೆಗಳು ನಿಲ್ಲಲಿ.


ಲೇಖಕ: ಪ್ರಾಚೀನ ಇತಿಹಾಸ, ಶಾಸನ ಕ್ಷೇತ್ರದ ಸ್ವತಂತ್ರ ಸಂಶೋಧಕ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭೂಕುಸಿತ ಏಕೆ ಆಗುತ್ತದೆ? ತಡೆ ಸಾಧ್ಯವಿಲ್ಲವೇ? ಅಭಿವೃದ್ಧಿ ಮತ್ತು ಪ್ರಕೃತಿಯ ಸಮತೋಲನ ಹೇಗೆ?

ಭೂಕುಸಿತ: ಭೂಮಿಯ ವಿಕಾಸ ಪ್ರಕ್ರಿಯೆಯ ಒಂದು ಭಾಗ

● ಬಿ.ಸಿ.ಪ್ರಭಾಕರ್



ನಾವು ಕಾಣುವ ಬೆಟ್ಟ, ಗುಡ್ಡ, ಪರ್ವತ, ನದಿ, ಸಮುದ್ರ, ಮರಳುಗಾಡು... ಮುಂತಾದ ಮೇಲ್ಮೈ ಸ್ವರೂಪಗಳು ಭೂಮಿಯ ಒಳ ಮತ್ತು ಹೊರಗೆ ನಿರಂತರವಾಗಿ ಘಟಿಸುತ್ತಿರುವ ತುಮುಲಗಳ ದೆಸೆಯಿಂದ ಮೈತಳೆದಂತಹವು. ಲಕ್ಷಾಂತರ ವರ್ಷಗಳ ಹಿಂದೆ ಇದ್ದ ಹಲವು ಸಮುದ್ರಗಳು ಇಂದು ಭೂಭಾಗವಾಗಿವೆ. ಹಿಂದೆ ಇದ್ದ ಅನೇಕ ಭೂಭಾಗಗಳು ಭೂಮಿಯ ಒಳಗೆ ಜರುಗಿ ಅಂತರ್ಧಾನವಾಗಿವೆ. ಹಿಂದೆ ಇದ್ದ ಕೆಲವು ನದಿಗಳು 'ಕಣ್ಮರೆ'ಯಾಗಿದ್ದರೆ ಮತ್ತೆ ಕೆಲವು ತಮ್ಮ ಪಥ ಬದಲಿಸಿವೆ. ಸಮುದ್ರದೊಳಗೆ ಹಿಮಾಲಯಕ್ಕೂ ಎತ್ತರದ ಪರ್ವತಗಳು ಸೃಷ್ಟಿಯಾಗಿ ತಣ್ಣಗೆ ಕುಳಿತಿವೆ. ಅಂದು ಅನೇಕ ದಟ್ಟ ಅರಣ್ಯಗಳಿದ್ದ ಜಾಗ ಇಂದು ಕಲ್ಲಿದ್ದಲಿನ ನಿಕ್ಷೇಪಗಳಾಗಿವೆ. ಹೀಗೆ ಲೆಕ್ಕವಿಲ್ಲದಷ್ಟು ಭೂಕ್ರಿಯೆಗಳು ನಿರಂತರವಾಗಿ ಘಟಿಸುತ್ತಿದ್ದು, ಭೂಕುಸಿತ ಕೂಡ ಇಂತಹ ಪ್ರಕ್ರಿಯೆಗಳ ಒಂದು ಭಾಗವಷ್ಟೇ. ಆದರೆ ಮಾನವನ ಮೇಲೆ ಅವು ಉಂಟುಮಾಡುವ ಪರಿಣಾಮ ಮಾತ್ರ ಭೀಕರ.

ಪ್ರಪಂಚದ ವಿವಿಧ ಕಡೆ ಭೂಕುಸಿತ ಸಂಭವಿಸುತ್ತಿದ್ದರೂ ಏಷ್ಯಾ ಖಂಡ, ಅದರಲ್ಲೂ ಚೀನಾದಲ್ಲಿ ಈ ಅವಘಡಗಳು ಹೆಚ್ಚು. ಭೂಕುಸಿತದ ಇತಿಹಾಸದಲ್ಲಿ ಅತ್ಯಂತ ಘೋರ ಭೂಕುಸಿತ ಸಂಭವಿಸಿದ್ದು ಚೀನಾದ ಹೈಯುವಾನ್ ಪ್ರಾಂತ್ಯದಲ್ಲಿ. 1920ರ ಡಿಸೆಂಬರ್‌ನಲ್ಲಿ ಅಲ್ಲಿ ಉಂಟಾದ ದೊಡ್ಡ ಭೂಕಂಪದಿಂದ ತೀವ್ರ ಪ್ರಮಾಣದ ಭೂಕುಸಿತ ಉಂಟಾಗಿ ಅನೇಕ ಹಳ್ಳಿಗಳು ಮಣ್ಣಿನಲ್ಲಿ ಸಂಪೂರ್ಣ ಹುದುಗಿಹೋಗಿ 2 ಲಕ್ಷದಷ್ಟು ಜನರು ಪ್ರಾಣ ಕಳೆದುಕೊಂಡರು. ಭಾರತವು ಸೇರಿದಂತೆ ಕೊಲಂಬಿಯಾ, ನೇಪಾಳ, ಫಿಲಿಪ್ಪೀನ್ಸ್, ಜಪಾನ್, ಇಂಡೊನೇಷ್ಯಾ, ಪೆರು, ಅಫ್ಗಾನಿಸ್ತಾನ, ಪಾಕಿಸ್ತಾನ ಮುಂತಾದ ದೇಶಗಳು ಭೂಕುಸಿತದ ಆತಂಕವನ್ನು ಎದುರಿಸುತ್ತಿವೆ.

ಭಾರತದಲ್ಲಿ ಪಶ್ಚಿಮ ಘಟ್ಟ ಪ್ರದೇಶ ಮತ್ತು ಹಿಮಾಲಯ ಪರ್ವತ ಶ್ರೇಣಿಗಳ ಪ್ರದೇಶಗಳು ಭೂಕುಸಿತದ ಅವಘಡಗಳಿಗೆ ಹೆಚ್ಚು ಈಡಾಗುತ್ತಿವೆ. ಈ ವಿಕೋಪ ಸಮುದಾಯದ ಮೇಲೆ, ಕುಟುಂಬಗಳ ಮೇಲೆ, ಬದುಕುಳಿದವರ ಮೇಲೆ ಉಂಟುಮಾಡುವ ಮಾನಸಿಕ, ದೈಹಿಕ, ಆರ್ಥಿಕ ಮತ್ತು ಸಾಮಾಜಿಕ ಆಘಾತ ವರ್ಣನೆಗೆ ನಿಲುಕದ್ದು.

ಕರ್ನಾಟಕದ ಚಿತ್ರಣವನ್ನೇ ತೆಗೆದುಕೊಳ್ಳುವುದಾದರೆ, ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಭೂಕುಸಿತ ಸಾಮಾನ್ಯ ಎಂಬ ಸನ್ನಿವೇಶ ಉಂಟಾಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರದ ವರದಿಯಂತೆ ರಾಜ್ಯದ ಶೇ 15ರಷ್ಟು ಅಂದರೆ ಸುಮಾರು 29,350 ಚದರ ಕಿ.ಮೀ. ವ್ಯಾಪ್ತಿಯ ಪ್ರದೇಶ ಭೂ ಕುಸಿತಕ್ಕೆ ಈಡಾಗುವ ಅಪಾಯವಿದ್ದು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು, ಉಡುಪಿ, ಹಾಸನ ಜಿಲ್ಲೆಗಳ 29 ತಾಲ್ಲೂಕುಗಳು ಸೂಕ್ಷ್ಮ ಪ್ರದೇಶಗಳಾಗಿವೆ. ಈ ವರ್ಷದ ಮುಂಗಾರಿನ ಆರಂಭದಲ್ಲೇ ಮನಕಲಕುವ ಸಾವು ನೋವು ಮಂಗಳೂರಿನ ಸುತ್ತಮುತ್ತ ಜರುಗಿವೆ. ಹವಾಮಾನ ಇಲಾಖೆ ಈ ವರ್ಷ ವಾಡಿಕೆಗಿಂತ ಹೆಚ್ಚು ಮಳೆ ಆಗಲಿದೆ ಎಂಬ ಸೂಚನೆ ಕೊಟ್ಟಿದ್ದು, ಅದಕ್ಕೆ ಸರಿಯಾಗಿ ಮುಂಗಾರಿನ ಆರಂಭದಲ್ಲೇ ಹೆಚ್ಚು ಮಳೆ ಮತ್ತು ಪ್ರವಾಹದ ಪರಿಸ್ಥಿತಿ ಕಂಡು ಬರುತ್ತಿದೆ.

ಹಿಂದೆಯೂ ಸಂಭವಿಸಿತ್ತು: ಭೂಕುಸಿತಗಳು ಸಂಭವಿಸುವುದಕ್ಕೆ ಮಾನವನ ಹಸ್ತಕ್ಷೇಪವೇ ಮುಖ್ಯ ಕಾರಣವೆಂಬುದು ಅನೇಕರ ಅನಿಸಿಕೆ. ಆದರೆ, 450 ಕೋಟಿ ವರ್ಷ ಇತಿಹಾಸದ ಈ ಭೂಮಿಯ ಮೇಲೆ ಮನುಷ್ಯನ ಅಸ್ತಿತ್ವವೇ ಇಲ್ಲದ ಸಮಯದಲ್ಲೂ (ಮನುಷ್ಯ ಈ ಭೂಮಿಯಲ್ಲಿ ಅವತರಿಸಿದ್ದು ಕೇವಲ 20 ಲಕ್ಷ ವರ್ಷಗಳ ಹಿಂದೆ) ಭೂಕುಸಿತಗಳು ಸಂಭವಿಸಿರುವುದು ಭೂ ವೈಜ್ಞಾನಿಕ ಸಂಶೋಧನೆ ಹಾಗೂ ದಾಖಲೆಗಳಿಂದ ಸಾಬೀತಾಗಿದೆ. ಅತ್ಯಂತ ಭೀಕರ ಭೂಕುಸಿತ ಸಂಭವಿಸಿದ್ದು ಎರಡು ಕೋಟಿ ವರ್ಷಗಳ ಹಿಂದೆ ಅಮೆರಿಕದ ಯೂಟಾ (Utah) ಪ್ರಾಂತ್ಯದ ಮಾರ್ಗಂಟ್ ಎಂಬ ಪ್ರದೇಶದಲ್ಲಿ. 2014ರಲ್ಲಿ ಜರ್ನಲ್ ಆಫ್ ಜಿಯಾಲಜಿ ಎಂಬ ಪ್ರಸಿದ್ಧ ನಿಯತಕಾಲಿಕ ಇದನ್ನು ಪ್ರಕಟಿಸಿದೆ. ಇಂತಹ ಸಾವಿರಾರು ಭೂಕುಸಿತಗಳು ಭೂಮಿಯ ಮೇಲೆ ಮಾನವನಿಲ್ಲದ ಸಮಯದಲ್ಲಿಯೂ ಜರುಗಿವೆ. ಅಷ್ಟೇ ಅಲ್ಲ, ಭೂಕುಸಿತಗಳು ಸಮುದ್ರ ತಳದಲ್ಲಿ ಮತ್ತು ಚಂದ್ರ, ಮಂಗಳ, ಬುಧ, ಶುಕ್ರನ ಮೇಲೂ ಸಂಭವಿಸಿರುವ ಮಾಹಿತಿ ಬಾಹ್ಯಾಕಾಶ ಸಂಶೋಧನೆಗಳಿಂದ ತಿಳಿದುಬಂದಿದೆ. ಇದರ ಅರ್ಥ ಭೂಕುಸಿತವಾಗಲು ಅಧಿಕ ಮಳೆ ಸುರಿಯಬೇಕೆಂದೇನೂ ಇಲ್ಲ- ಇಳಿಜಾರುಗಳು ಅತ್ಯಂತ ಕಡಿದಾಗಿದ್ದರೆ ಭೂಮಿಯ ಸಹಜ ಗುರುತ್ವಾಕರ್ಷಣೆ ಶಕ್ತಿಯಿಂದಲೇ ಕೋಡುಗಲ್ಲಿನಂತೆ ನಿಂತಿರುವ ಬೆಟ್ಟಗಳು ಕುಸಿಯಬಹುದು. ಭೂ ವಿಜ್ಞಾನ ಪರಿಭಾಷೆಯಲ್ಲಿ ಇದನ್ನು ಮಾಸ್ ವೇಸ್ಟಿಂಗ್ ಎಂದು ಕರೆಯುತ್ತಾರೆ.

ಭೂಕುಸಿತಕ್ಕೆ ಕಾರಣವಾಗುವ ನೈಸರ್ಗಿಕ ಕ್ರಿಯೆಗಳನ್ನು ಅವಲೋಕಿಸಿದಾಗ ಮುಖ್ಯವಾಗಿ ಗೋಚರಿಸುವ ಕಾರಣಗಳೆಂದರೆ, (1) ಹೆಚ್ಚು ಮಳೆ ಮತ್ತು ಮಣ್ಣಿನ ರಂಧ್ರಗಳಲ್ಲಿ ಹೆಚ್ಚಾಗುವ ನೀರಿನ ಒತ್ತಡ, (2) ಕಲ್ಲು ಮತ್ತು ಮಣ್ಣಿನ ನಿರಂತರ ಸವಕಳಿ ಮತ್ತು ಸವೆತ, (3) ಕಡಿದಾದ ಪ್ರದೇಶಗಳ ಇಳಿಜಾರಿನ ನೈಸರ್ಗಿಕ ವಿನ್ಯಾಸ, (4) ಕಾಳ್ಗಿಚ್ಚು ಮತ್ತು ಸಸ್ಯಗಳಿಗೆ ಹಬ್ಬುವ ರೋಗಗಳ ಕಾರಣದಿಂದ ಕ್ಷೀಣಿಸುವ ಸಸ್ಯ ಸಂಪತ್ತು ಮತ್ತು (5) ಭೂಕಂಪ ಕ್ರಿಯೆಗಳು.

> ಭೂಕುಸಿತದ ಬಗ್ಗೆ ಸಂಪೂರ್ಣ ತಿಳಿವಳಿಕೆ ಮತ್ತು ಅವುಗಳನ್ನು ತಡೆಯಬಹುದಾದ ತಾಂತ್ರಿಕ ವ್ಯವಸ್ಥೆಗಳ ಸಾಮರ್ಥ್ಯವಿದ್ದರೂ ಭೂಕುಸಿತಗಳಿಂದ ಸಾವು ನೋವುಗಳು ಉಂಟಾಗುವುದು ವಿಷಾದದ ಸಂಗತಿ. ಮಾನವನ ಅಭಿವೃದ್ಧಿ ಕಾರ್ಯಗಳ ಜೊತೆ ವೈಜ್ಞಾನಿಕ, ಯೋಜನಾಬದ್ಧ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಮತ್ತು ತೀವ್ರ ಭೂಕುಸಿತಕ್ಕೆ ಒಳಗಾಗುವ ಪ್ರದೇಶಗಳಲ್ಲಿ ಜನರ ಶಾಶ್ವತ ಪುನರ್ವಸತಿ ಮಾಡಬೇಕಾಗಿರುವುದು ಅತ್ಯಂತ ಜರೂರಾಗಿದೆ. ಪಶ್ಚಿಮ ಘಟ್ಟಗಳ ಉಳಿವು ಮತ್ತು ಅದರ ತಪ್ಪಲಿನಲ್ಲಿ ವಾಸಿಸುವ ಜನರ ಕ್ಷೇಮದ ದೃಷ್ಟಿಯಿಂದ ಗಾಡ್ಗೀಳ್ ಮತ್ತು ಕಸ್ತೂರಿ ರಂಗನ್ ವರದಿಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗಂಭೀರವಾಗಿ ಪರಿಗಣಿಸಿ ಜಾರಿಗೊಳಿಸಬೇಕು

ಪಶ್ಚಿಮ ಘಟ್ಟಗಳಂತಹ ಪ್ರದೇಶದಲ್ಲಿ ಪ್ರತಿ ವರ್ಷ ಸರಾಸರಿ 300 ಸೆಂ.ಮೀನಷ್ಟು ಮಳೆಯಾಗುತ್ತದೆ. ಕೆಲವು ಬಾರಿ ಒಮ್ಮೆಲೇ ಹೆಚ್ಚು ಮಳೆ ಸುರಿದರೆ ಹೋದ ವರ್ಷ ಕೇರಳದ ವಯನಾಡಿನಲ್ಲಿ ಆದಂತೆ ಭಾರಿ ಭೂಕುಸಿತ ಅವಘಡಗಳು ಜರುಗುತ್ತವೆ. ಕರ್ನಾಟಕದ ಕರಾವಳಿ ಉದ್ದಕ್ಕೂ ಹರಡಿರುವ ಪಶ್ಚಿಮ ಘಟ್ಟಗಳ ಬಹಳ ಪ್ರದೇಶಗಳಲ್ಲಿ ಕಡಿದಾದ ಅಂದರೆ ಇಳಿಜಾರು ಕೋನ 45 ಡಿಗ್ರಿಗಿಂತ ಹೆಚ್ಚು ಇರುವ ಕಡೆ, ಭೂಕುಸಿತದ ಸಂಭಾವ್ಯ ಅಪಾಯ ಹೆಚ್ಚು. ಅಂತಹ ಪ್ರದೇಶಗಳಲ್ಲಿ ಭೂಕಂಪ ಸಂಭವಿಸಿದರಂತೂ ಇಡೀ ಪ್ರದೇಶವನ್ನು ಅಲುಗಾಡಿಸಿ ದೊಡ್ಡ ಭೂಕುಸಿತಗಳು ಸಂಭವಿಸಬಹುದು.

ಆದರೆ, ಇತ್ತೀಚಿನ ವರ್ಷಗಳಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಆಗುತ್ತಿರುವ ರಸ್ತೆ ಕಾಮಗಾರಿಗಳು, ಸುರಂಗ ಮಾರ್ಗ ಕೊರೆಯುವಿಕೆ, ಅರಣ್ಯ ನಾಶ, ನಗರೀಕರಣ , ಹೋಂಸ್ಟೇಗಳ ನಿರ್ಮಾಣ, ಬೆಟ್ಟಗಳ ಮೇಲೆ ಕೆರೆಕಟ್ಟೆ ನಿರ್ಮಾಣ ಮುಂತಾದ ಚಟುವಟಿಕೆಗಳು ಭೂ ಮೇಲ್ಮೈನ ಪರಿಸರವನ್ನು ಮಾರ್ಪಾಡು ಮಾಡುವುದರಿಂದ ನೀರಿನ ಸಹಜ ಹರಿಯುವಿಕೆ ಮತ್ತು ಇಳಿಜಾರುಗಳು ಸ್ಥಿತ್ಯಂತರಗೊಂಡು ಭೂಕುಸಿತಕ್ಕೆ ಆಹ್ವಾನ ನೀಡುತ್ತಿವೆ. ಯಾವುದೇ ಇಳಿಜಾರು ಪ್ರದೇಶದ ಬುಡದಲ್ಲಿ ಅಗೆಯುವ ಅಥವಾ ಮಣ್ಣು ತೆಗೆಯುವ ಕಾರ್ಯ ಜರುಗಿದರೆ ಇಡೀ ಗುಡ್ಡ ಪ್ರದೇಶದ ಧಾರಣಾ ಶಕ್ತಿಗೆ ಹೊಡೆತ ಬಿದ್ದು ಭೂಕುಸಿತಕ್ಕೆ ದಾರಿ ಮಾಡಿಕೊಡುತ್ತದೆ. ಇಂತಹ ಚಟುವಟಿಕೆಗಳಿಂದ ನಶಿಸುವ ಗಿಡಮರಗಳು ಮಣ್ಣನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಕಳೆದುಕೊಂಡು ಅಪಾಯಗಳಿಗೆ ಎಡೆ ಮಾಡಿಕೊಡುತ್ತವೆ.

ನಿಯಂತ್ರಣ ಸಾಧ್ಯ: ನೈಸರ್ಗಿಕ ಕಾರಣಕ್ಕೆ ಘಟಿಸುವ ಭೂಕುಸಿತಗಳನ್ನು ತಡೆಯುವುದು ಕಷ್ಟ ಸಾಧ್ಯವಾದರೂ ಜನ ವಸತಿ ಪ್ರದೇಶಗಳಿರುವ ಕಡೆ ಮತ್ತು ಪ್ರಮುಖ ಮೂಲ ಸೌಕರ್ಯಗಳಿರುವ ಕಡೆ ವೈಜ್ಞಾನಿಕವಾಗಿ ಹಲವಾರು ಕ್ರಮಗಳನ್ನು ಅಳವಡಿಸುವ ಮೂಲಕ ಅವುಗಳನ್ನು ನಿಯಂತ್ರಿಸಬಹುದಾಗಿದೆ. (1) ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ವಿವರವಾದ ಭೂವೈಜ್ಞಾನಿಕ ನಕ್ಷೆ ತಯಾರಿಸಿ ಅಪಾಯದ ವಲಯಗಳನ್ನು ಗುರುತಿಸುವುದು, (2) ಭೂ ಭೌತ ಸಂವೇದಕಗಳು, ಮಳೆಮಾಪನಗಳು ಮತ್ತು ಸಂವಹನ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಭೂಕುಸಿತಗಳನ್ನು ಮುಂಚೆಯೇ ಅರಿತುಕೊಳ್ಳುವುದು, (3) ಜೈವಿಕ ಎಂಜಿನಿಯರಿಂಗ್ ವ್ಯವಸ್ಥೆಯ ಮೂಲಕ ಇಳಿಜಾರುಗಳನ್ನು ಸ್ಥಿರಗೊಳಿಸುವುದು (4) ರಾಕ್ ಬೋಲ್ಟ್ ಮತ್ತು ಆ್ಯಂಕರ್ ಅಳವಡಿಕೆ ಮತ್ತು ತಡೆಗೋಡೆ ನಿರ್ಮಾಣ (5) ಮಣ್ಣು ಮತ್ತು ಶಿಲೆಯ ಗುಣಲಕ್ಷಣಗಳನ್ನು ವಿಶ್ಲೇಷಿಸಲು ಸಮಗ್ರ ಅಧ್ಯಯನ ಕೈಗೊಳ್ಳುವುದು (6) ನೈಲಿಂಗ್ ಮತ್ತು ನೆಟ್ಟಿಂಗ್ ಪದ್ಧತಿಗಳ ಅಳವಡಿಕೆ, (7) ಪರಿಣಾಮಕಾರಿ ಜಲ ಹರಿವಿನ ವ್ಯವಸ್ಥೆ ಮಾಡುವುದು... ಮುಂತಾದ ಕ್ರಮಗಳು ಪರಿಣಾಮಕಾರಿ ಎಂಬುದು ಅನೇಕ ಭೂಕುಸಿತ ಪ್ರದೇಶಗಳಲ್ಲಿ ಸಾಬೀತಾಗಿದೆ.

ಜೊತೆಗೆ, ಭೂಕುಸಿತ ಸಂಭಾವ್ಯ ಪ್ರದೇಶಗಳಲ್ಲಿ ಸಮಯೋಚಿತ ಎಚ್ಚರಿಕೆಗಳನ್ನು ಕೊಡುವುದು, ಜನರನ್ನು ಮುಂಚೆಯೇ ಸ್ಥಳಾಂತರಗೊಳಿಸುವುದು, ಸಾರ್ವಜನಿಕ ಜಾಗೃತಿ ಅಭಿಯಾನಗಳನ್ನು ಏರ್ಪಡಿಸುವುದು, ತರಬೇತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು... ಮುಂತಾದ ಕಾರ್ಯಕ್ರಮಗಳಿಂದ ಭೂಕುಸಿತದ ಅಪಾಯಗಳನ್ನು ತಗ್ಗಿಸಬಹುದಾಗಿದೆ.

ಇಷ್ಟೆಲ್ಲಾ ಸಂಶೋಧನೆ ಹಾಗೂ ತಾಂತ್ರಿಕ ವ್ಯವಸ್ಥೆಗಳ ಸಾಮರ್ಥ್ಯವಿದ್ದರೂ ಭೂಕುಸಿತಗಳಿಂದ ಸಾವು ನೋವುಗಳು ಉಂಟಾಗುವುದು ವಿಷಾದದ ಸಂಗತಿ. ಆದ್ದರಿಂದ ಮಾನವನ ಅಭಿವೃದ್ಧಿ ಕಾರ್ಯಗಳ ಜೊತೆ ವೈಜ್ಞಾನಿಕ ಯೋಜನಾಬದ್ಧ ಕ್ರಮಗಳನ್ನು ಅಳವಡಿಸಿಕೊಳ್ಳುವ ಮೂಲಕ ಮತ್ತು ತೀವ್ರ ಭೂಕುಸಿತಕ್ಕೆ ಒಳಗಾಗುವ ಪ್ರದೇಶಗಳಲ್ಲಿ ಜನರ ಶಾಶ್ವತ ಪುನರ್ವಸತಿ ಮಾಡಬೇಕಾಗಿರುವುದು ಅತ್ಯಂತ ಜರೂರಿನ ಕೆಲಸ. ಅಷ್ಟೇ ಅಲ್ಲದೆ ಪಶ್ಚಿಮ ಘಟ್ಟಗಳ ಉಳಿವಿನ ದೃಷ್ಟಿಯಿಂದ ಮತ್ತು ಅದರ ತಪ್ಪಲಿನಲ್ಲಿ ವಾಸಿಸುವ ಜನರ ಕ್ಷೇಮದ ದೃಷ್ಟಿಯಿಂದ ವಿವರವಾದ ಅಧ್ಯಯನ ಮಾಡಿ ಸಲ್ಲಿಸಿರುವ ಮಾಧವ ಗಾಡ್ಗೀಳರ 2011ರ ವರದಿ ಮತ್ತು ನಂತರದ ಕಸ್ತೂರಿರಂಗನ್ ಅವರ ವರದಿಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗಂಭೀರವಾಗಿ ಪರಿಗಣಿಸಿ ಜಾರಿಗೊಳಿಸಬೇಕಾಗಿದೆ.

ಲೇಖಕ: ನಿವೃತ್ತ ಭೂ ವಿಜ್ಞಾನ ಪ್ರಾಧ್ಯಾಪಕ

ನಮಗೆ ಅಭಿವೃದ್ಧಿಯೂ ಬೇಕು ಪರಿಸರವೂ ಉಳಿಯಬೇಕು

● ಜಿ.ಎಸ್.ಶ್ರೀನಿವಾಸರೆಡ್ಡಿ



ಭೂಕುಸಿತ ಉಂಟಾಗುವ ಪ್ರದೇಶಗಳು ಪರಿಸರ ಸೂಕ್ಷ್ಮ ಪ್ರದೇಶಗಳಾಗಿರುತ್ತವೆ. ನಮ್ಮ ರಾಜ್ಯದಲ್ಲಿ ವಾರ್ಷಿಕ ಸರಾಸರಿ 115 ಸೆಂ.ಮೀ. ಮಳೆ ಬಿದ್ದರೆ, ಈ ಪ್ರದೇಶಗಳಲ್ಲಿ ವಾರ್ಷಿಕವಾಗಿ 300–600 ಸೆಂ.ಮೀ ಮಳೆ ಬೀಳುತ್ತದೆ. ಇವು ಇಳಿಜಾರಿನ, ಕಡಿದಾದ ಪ್ರದೇಶಗಳಾಗಿರುತ್ತವೆ. ಇಂಥ ಪ್ರದೇಶಗಳಲ್ಲಿ ಯಾವುದೇ ರೀತಿಯ ಮಾನವ ಹಸ್ತಕ್ಷೇಪವು ಪ್ರಕೃತಿಗೆ, ತನ್ಮೂಲಕ ಮನುಷ್ಯನಿಗೆ ಮಾರಕವಾಗಬಲ್ಲುದು. ಶೇ 70ರಷ್ಟು ಭೂಕುಸಿತಗಳು ಸಂಭವಿಸಿರುವುದು ಅಭಿವೃದ್ಧಿ ಕಾರ್ಯಗಳು ನಡೆದ ಪ್ರದೇಶಗಳಲ್ಲಿಯೇ ಎನ್ನುವುದು ಗಮನಾರ್ಹ ವಿಚಾರ. ಅವೈಜ್ಞಾನಿಕ ಕಾಮಗಾರಿಗಳೇ ಅದಕ್ಕೆ ಕಾರಣ.

ರಾಜ್ಯದ ಪಶ್ಚಿಮ ಘಟ್ಟ ಪ್ರದೇಶದ ಮಲೆನಾಡಿನ ನಾಲ್ಕು ಜಿಲ್ಲೆ, ಕರಾವಳಿಯ ಮೂರು ಜಿಲ್ಲೆ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಕೆಲವು ಭಾಗಗಳನ್ನು ಒಳಗೊಂಡಂತೆ ರಾಜ್ಯದ ಸುಮಾರು ಶೇ 15ರಷ್ಟು ಭೌಗೋಳಿಕ ಪ್ರದೇಶ ಭೂಕುಸಿತ ಅಪಾಯದ ವಲಯದಲ್ಲಿದೆ. ಈ ಪ್ರದೇಶಗಳಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುಂಚೆ ಅಲ್ಲಿನ ಭೂಬಳಕೆ, ಶಿಲಾರಚನೆ, ಮಣ್ಣಿನ ಗುಣಲಕ್ಷಣ, ಭೂಕುಸಿತದ ಹಿಂದಿನ ಘಟನೆಗಳು, ಹವಾಮಾನ ಮತ್ತು ಜಲಮೂಲಗಳ ದತ್ತಾಂಶವನ್ನು ಅಧ್ಯಯನ ಮಾಡಬೇಕಾಗುತ್ತದೆ. ಆ ದತ್ತಾಂಶ ಆಧರಿಸಿ ಭೂಕುಸಿತದ ಸಂಭವನೀಯತೆಯ ನಕ್ಷೆಯನ್ನು ತಯಾರು ಮಾಡಬೇಕಾಗುತ್ತದೆ.

ಭೂಕುಸಿತದ ಪ್ರದೇಶಗಳಲ್ಲಿ ನಡೆಯುವ ಪ್ರಮುಖ ಅಭಿವೃದ್ಧಿ ಕಾರ್ಯಗಳಲ್ಲಿ ರಸ್ತೆ, ರೈಲು ಮಾರ್ಗ, ವಿದ್ಯುತ್ ಕಂಬಗಳ ಅಳವಡಿಕೆ, ಅಣೆಕಟ್ಟಿನ ನೀರು ಹರಿಯಲು ಕಾಲುವೆ ನಿರ್ಮಾಣ ಮಾಡುವುದು ಪ್ರಮುಖವಾಗಿವೆ. ಸಾಮಾನ್ಯವಾಗಿ ಸಂಭವನೀಯ ಭೂಕುಸಿತ ಪ್ರದೇಶಗಳಲ್ಲಿ, ಮುಖ್ಯವಾಗಿ ಕಾಡು, ಘಟ್ಟ ಪ್ರದೇಶಗಳಲ್ಲಿ, ಕೈಗೊಳ್ಳುವ ಅಭಿವೃದ್ಧಿ ಚಟುವಟಿಕೆಗಳಿಗೆ ಇತರೆಡೆಗಳಿಗಿಂತ ಹೆಚ್ಚು ಹಣ ವೆಚ್ಚವಾಗುತ್ತದೆ, ಹೆಚ್ಚು ಭೂಪ್ರದೇಶವೂ ಬೇಕಾಗುತ್ತದೆ.

ಸಂಭವನೀಯ ಭೂಕುಸಿತದ ಪ್ರದೇಶಗಳನ್ನು ಮೂರು ವಿಭಾಗಗಳನ್ನಾಗಿ–ಅತಿ ಅಪಾಯ, ಮಧ್ಯಮ ಅಪಾಯ ಮತ್ತು ಕಡಿಮೆ ಅಪಾಯ– ಗುರುತಿಸಲಾಗುತ್ತದೆ. ಆ ಪ್ರದೇಶಗಳಲ್ಲಿ ಯಾವುದೇ ಅಭಿವೃದ್ಧಿ ಚಟುವಟಿಕೆಯನ್ನು ಕೈಗೆತ್ತಿಕೊಳ್ಳಬೇಕು ಎಂದರೂ, ಅದು ಯಾವ ವಿಭಾಗಕ್ಕೆ ಸೇರಿದೆ ಎನ್ನುವುದನ್ನು ಆಧರಿಸಿ, ಅಲ್ಲಿನ ಅಪಾಯದ ಮಟ್ಟವನ್ನು ತಿಳಿದು, ಅದಕ್ಕೆ ತಕ್ಕಂತೆ ಯೋಜಿಸಬೇಕಾಗುತ್ತದೆ. ಅಂದರೆ, ಭೂಕುಸಿತದ ನಕ್ಷೆಯೊಂದಿಗೆ ಯೋಜನೆಯನ್ನು ಜೋಡಿಸಬೇಕು.

ಮುನ್ನೆಚ್ಚರಿಕೆ, ಸಿದ್ಧತೆ ಅಗತ್ಯ: ಯಾವುದೇ ಅಭಿವೃದ್ಧಿ ಚಟುವಟಿಕೆ ಕೈಗೊಳ್ಳುವ ಮುನ್ನ ಅದು ಯಾವ ವಿಭಾಗದಲ್ಲಿ ಬರುತ್ತದೆ ಎನ್ನುವುದನ್ನು ನಕ್ಷೆಯ ಮೂಲಕ ಅರಿಯಬೇಕು. ಅದು ಅತಿ ಅಪಾಯದ ಪ್ರದೇಶದ ವ್ಯಾಪ್ತಿಯಲ್ಲಿದ್ದರೆ, ಯಾವುದೇ ಕಾರಣಕ್ಕೂ ಅಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಚಟುವಟಿಕೆ ನಡೆಸಬಾರದು. ಮಧ್ಯಮ ಅಪಾಯದ ಪ್ರದೇಶದಲ್ಲಿ, ತೀರಾ ಅನಿವಾರ್ಯವಾದರೆ ಕೆಲವು ಪೂರ್ವಸಿದ್ಧತೆಗಳೊಂದಿಗೆ ಕಾಮಗಾರಿ ಕೈಗೊಳ್ಳಬೇಕಾಗುತ್ತದೆ. ಕಡಿಮೆ ಅಪಾಯದ ಪ್ರದೇಶಗಳೂ ಇಳಿಜಾರು ಪ್ರದೇಶ, ಗುಡ್ಡಗಾಡು ಪ್ರದೇಶ, ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳೇ ಆಗಿರುವುದರಿಂದ ಯೋಜನೆ ರೂಪಿಸುವಾಗ ಎಲ್ಲ ರೀತಿಯ ಎಚ್ಚರಿಕೆ ವಹಿಸಬೇಕು. ಕಾಮಗಾರಿ ನಡೆಸುವ ಮುನ್ನ ಅಲ್ಲಿನ ಮಣ್ಣು, ಶಿಲಾ ರಚನೆ, ಅಲ್ಲಿನ ಜಲಮೂಲಗಳು, ಹವಾಮಾನ ಎಲ್ಲವನ್ನೂ ಪರಿಶೀಲಿಸಬೇಕು. ಕಾಮಗಾರಿ ಮಾಡುವಾಗ ಇಳಿಜಾರು ಪ್ರದೇಶವನ್ನು ಅಸ್ಥಿರಗೊಳಿಸಬಾರದು; ಯಾವುದೇ ಕಾರಣಕ್ಕೂ 45 ಡಿಗ್ರಿಗಿಂತ ಹೆಚ್ಚು ಭೂಮಿ ಕತ್ತರಿಸಬಾರದು. ಅನಿವಾರ್ಯವಾದರೆ ಹೆಚ್ಚು ಜಾಗ ತೆಗೆದುಕೊಂಡು ಕಾಮಗಾರಿ ನಡೆಸಬೇಕು.

ಭೂಕುಸಿತ ತಡೆಯುವ ದಿಸೆಯಲ್ಲಿ ಬಹಳ ಮುಖ್ಯ ಕಾರ್ಯ ಎಂದರೆ, ತಡೆಗೋಡೆ ನಿರ್ಮಾಣ ಮಾಡುವುದು. ಅಲ್ಲಿ ಎಷ್ಟು ಒತ್ತಡ ಇದೆ, ಮಣ್ಣು ಕುಸಿದರೆ ಎಷ್ಟು ಕುಸಿಯಬಹುದು ಎನ್ನುವುದನ್ನು ಅಧ್ಯಯನ ಮಾಡಿ ಅದನ್ನು ತಡೆಯುವ ರೀತಿಯಲ್ಲಿ ಗೋಡೆ ನಿರ್ಮಾಣ ಮಾಡಬೇಕು. ಇದು ಬಹಳ ಮುಖ್ಯವಾದ ಕ್ರಮವಾಗಿದೆ. ನಂತರದಲ್ಲಿ ಪಾಲಿಸಬೇಕಾದ ಮುಖ್ಯ ಕ್ರಮವೆಂದರೆ, ಅರಣ್ಯೀಕರಣ; ಭೂಕುಸಿತ ತಡೆಯಬಲ್ಲ ಗಿಡ, ಹುಲ್ಲು ಬೆಳೆಸುವುದು. ಇದಕ್ಕಾಗಿ ಹೆಚ್ಚು ಆಳಕ್ಕೆ ಹೋಗುವಂಥ, ಹೆಚ್ಚು ಬೇರು ಬಿಡುವಂಥ ಗಿಡ, ಸ್ಥಳೀಯವಾದ, ನಿರ್ದಿಷ್ಟವಾದ ಮರ, ಗಿಡಗಳನ್ನೇ ಆಯ್ದುಕೊಳ್ಳಬೇಕು. ಗಿಡ ಮರಗಳ ಬೇರುಗಳು ಮಣ್ಣಿನ ಆಳಕ್ಕೆ ಹೋದರೆ, ಮಣ್ಣಿನೊಂದಿಗೆ ಅವುಗಳಿಗೆ ಹೆಣಿಗೆ ಉಂಟಾಗಿ, ಮಣ್ಣು ಕುಸಿತ ತಡೆಯುತ್ತದೆ.



> ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಎಲ್ಲ ಪ್ರದೇಶಗಳಿಗೂ ಅನ್ವಯವಾಗುವಂತಹ ಒಂದು ಪ್ರಮಾಣಿತ ಕಾರ್ಯವಿಧಾನ ಇಲ್ಲ; ಪ್ರತಿಯೊಂದು ಯೋಜನೆಯನ್ನೂ ಸ್ಥಳ ನಿರ್ದಿಷ್ಟ ಚಟುವಟಿಕೆಯನ್ನಾಗಿಯೇ ರೂಪಿಸಬೇಕು. ಈ ಸ್ಥಳ ನಿರ್ದಿಷ್ಟ ಯೋಜನೆಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೇ ರೂಪಿಸಬೇಕಾಗುತ್ತದೆ. ಪರಿಸರ ಸೂಕ್ಷ್ಮ ಪ್ರದೇಶಗಳು ಯಾವ ಮಟ್ಟದ ಅಪಾಯದ ಸ್ಥಿತಿಯಲ್ಲಿವೆ, ಅವುಗಳನ್ನು ತಡೆಯಲು ಏನೇನು ಪೂರ್ವಸಿದ್ಧತೆಗಳನ್ನು ಮಾಡಬೇಕಾಗುತ್ತದೆ, ವಿಪತ್ತು ಉಂಟಾದರೆ ಅದನ್ನು ಹೇಗೆ ನಿರ್ವಹಣೆ ಮಾಡುವುದು ಎಲ್ಲವೂ ಅದರಲ್ಲಿ ಇರಬೇಕು. ವಿಪತ್ತು ನಿರ್ವಹಣೆಗೂ ಗ್ರಾಮ ಮಟ್ಟದಲ್ಲಿ, ಪಂಚಾಯಿತಿ ಮಟ್ಟದಲ್ಲಿಯೇ ಯೋಜನೆ ರೂಪಿಸಬೇಕು

ಮತ್ತೊಂದು ಪ್ರಮುಖ ತಂತ್ರ ಎಂದರೆ, ಉಕ್ಕಿನ ತಂತಿಗಳ ಮೆಷ್ ಹಾಕುವುದು. ಅದು ಮಣ್ಣು ಜಾರದಂತೆ, ಗುಡ್ಡ ಕುಸಿಯದಂತೆ ರಕ್ಷಿಸುತ್ತದೆ. ಇನ್ನು ಕೆಲವು ಕಡೆಗಳಲ್ಲಿ ಕಲ್ಲುಗಳು ಕೂಡ ಕುಸಿಯುತ್ತವೆ, ಜಾರುತ್ತವೆ. ಅದಕ್ಕೆ ರಾಕ್ ಬೋಲ್ಟಿಂಗ್ ತಂತ್ರಜ್ಞಾನದ ಮೂಲಕ ರಕ್ಷಣೆ ನೀಡಬೇಕು. ಕಲ್ಲನ್ನು ಎಷ್ಟು ಸಾಧ್ಯವೋ ಅಷ್ಟು ಕೊರೆದು, ಅಲ್ಲಿಗೆ ಬೋಲ್ಟ್ ಅಳವಡಿಸಬೇಕು. ಅದು ಕಲ್ಲು ಕುಸಿಯದಂತೆ, ಜಾರದಂತೆ ಹಿಡಿದು ನಿಲ್ಲಿಸುತ್ತದೆ.

ಅಂಥದೇ ಇನ್ನೊಂದು ಕ್ರಮ, ಮಡ್ ಸೋರ್ಸಿಂಗ್; ಬಸಿಗಾಲುವೆ ನಿರ್ಮಿಸಿ, ನೀರು ಸರಾಗವಾಗಿ ಹರಿದುಹೋಗುವಂತೆ ಮಾಡುವುದು. ಯಾವುದೇ ಪ್ರದೇಶದಲ್ಲಾಗಲಿ, ತೇವಾಂಶ ಹೆಚ್ಚು ಇದ್ದರೆ ಮಾತ್ರವೇ ಭೂಕುಸಿತ ಉಂಟಾಗುವುದು. ಹಾಗಾಗಿ ರಸ್ತೆ, ರೈಲ್ವೆ ಮಾರ್ಗ ಮಾಡುವಾಗ ಇಳಿಜಾರಿನ ಕಡೆ ಮಣ್ಣನ್ನು ಹೆಚ್ಚು ಅಗೆಯಬಾರದು; ಗುಡ್ಡದ ಕಡೆ ಹೆಚ್ಚು ಅಗೆಯಬೇಕು.

ಸ್ಥಳೀಯ ಸಂಸ್ಥೆ, ಜನಸಮುದಾಯಗಳ ಪಾತ್ರ: ಭೂಕುಸಿತವನ್ನು ತಡೆಯುವಲ್ಲಿ ಸರ್ಕಾರ/ಸ್ಥಳೀಯ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ. ಆಯಾ ಪ್ರದೇಶದ ಭೂಬಳಕೆಗೆ ತಕ್ಕಂತೆ ನಿಯಮಗಳನ್ನು ಅವು ರೂಪಿಸಬೇಕು. ಸರ್ಕಾರಿ ಯೋಜನೆ ಇರಲಿ, ಖಾಸಗಿ ಯೋಜನೆ ಇರಲಿ, ಅನುಮತಿ ನೀಡುವುದಕ್ಕೆ ಮುಂಚೆ ಎಲ್ಲ ಅಂಶಗಳನ್ನು ಪರಿಶೀಲಿಸಬೇಕು; ತಜ್ಞರ ಸಲಹೆಯನ್ನೂ ಪಡೆಯಬೇಕು. ಬೃಹತ್ ಆದ ಯೋಜನೆ ಕೈಗೊಳ್ಳುವುದು ತೀರಾ ಅನಿವಾರ್ಯ ಎನ್ನಿಸಿದರೆ, ಅದಕ್ಕೆ ಪೂರ್ವಭಾವಿಯಾಗಿ ಅಗತ್ಯವಾದ ಅಧ್ಯಯನ, ತಯಾರಿ ನಡೆಸುವುದು ಕಡ್ಡಾಯವಾಗಬೇಕು.

ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಎಲ್ಲ ಪ್ರದೇಶಗಳಿಗೂ ಅನ್ವಯವಾಗುವಂತಹ ಒಂದು ಪ್ರಮಾಣಿತ ಕಾರ್ಯವಿಧಾನ ಇಲ್ಲ; ಪ್ರತಿಯೊಂದು ಯೋಜನೆಯನ್ನೂ ಸ್ಥಳ ನಿರ್ದಿಷ್ಟ ಚಟುವಟಿಕೆಯನ್ನಾಗಿಯೇ ರೂಪಿಸಬೇಕು. ಈ ಸ್ಥಳ ನಿರ್ದಿಷ್ಟ ಯೋಜನೆಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೇ ರೂಪಿಸಬೇಕಾಗುತ್ತದೆ. ಪರಿಸರ ಸೂಕ್ಷ್ಮ ಪ್ರದೇಶಗಳು ಯಾವ ಮಟ್ಟದ ಅಪಾಯದ ಸ್ಥಿತಿಯಲ್ಲಿವೆ, ಅವುಗಳನ್ನು ತಡೆಯಲು ಏನೇನು ಪೂರ್ವಸಿದ್ಧತೆಗಳನ್ನು ಮಾಡಬೇಕಾಗುತ್ತದೆ, ವಿಪತ್ತು ಉಂಟಾದರೆ ಅದನ್ನು ಹೇಗೆ ನಿರ್ವಹಣೆ ಮಾಡುವುದು ಎಲ್ಲವೂ ಅದರಲ್ಲಿ ಇರಬೇಕು. ಸಮುದಾಯವನ್ನು ಒಳಗೊಳ್ಳುವುದರಿಂದ ತಮ್ಮ ಗ್ರಾಮ ಎಂಥ ಅಪಾಯದ ಸ್ಥಿತಿಯಲ್ಲಿ ಇದೆ ಎನ್ನುವುದು ಅವರಿಗೆ ತಿಳಿಯುತ್ತದೆ. ವಿಪತ್ತು ನಿರ್ವಹಣೆಗೂ ಗ್ರಾಮ ಮಟ್ಟದಲ್ಲಿ, ಪಂಚಾಯಿತಿ ಮಟ್ಟದಲ್ಲಿಯೇ ಯೋಜನೆ ರೂಪಿಸಬೇಕು.

ಜಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಸಂಭವನೀಯ ಪ್ರದೇಶಗಳ ಬಗ್ಗೆ, ಭೂಕುಸಿತ ಘಟನೆಗಳ ಬಗ್ಗೆ ಒಂದು ಹಂತದವರೆಗೆ ಅಧ್ಯಯನ ಮಾಡಿ ನಕ್ಷೆ ತಯಾರಿಸುತ್ತದೆ. ಅದರ ದತ್ತಾಂಶದ ಆಧಾರದಲ್ಲಿ ಮುನ್ನೆಚ್ಚರಿಕೆ ವ್ಯವಸ್ಥೆಯನ್ನೂ ರೂಪಿಸಬೇಕಾದದ್ದು ಸರ್ಕಾರದ, ಅದರಲ್ಲೂ ಮುಖ್ಯವಾಗಿ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕೆಲಸ. ಅಪಾಯವನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗದಿದ್ದರೂ, ಮುನ್ನೆಚ್ಚರಿಕೆ ವಹಿಸಿದರೆ ಅದರ ತೀವ್ರತೆಯನ್ನಾದರೂ ತಡೆಗಟ್ಟಬಹುದು.

ಈಗಾಗಲೇ ರಾಜ್ಯದಲ್ಲಿ ಕೆಲವು ಕಡೆ ಮಳೆಮಾಪನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮಳೆ ಅಳೆಯುವ ಜತೆಗೆ, ಅಲ್ಲಿನ ಮಣ್ಣು ಹೇಗಿದೆ, ಅದರಲ್ಲಿ ನೀರು ಎಷ್ಟು ಇಂಗಿದೆ ಎನ್ನುವುದನ್ನು ಅಳೆಯಲೂ ನಿರ್ದಿಷ್ಟ ಮಾಪಕಗಳು ಇವೆ. ಸ್ವಲ್ಪ ಮಣ್ಣು ಜರುಗಿದರೆ ಅದರ ಮುನ್ಸೂಚನೆ ನೀಡುವಂಥ ತಾಂತ್ರಿಕತೆಯೂ ಲಭ್ಯವಿದೆ. ಜತೆಗೆ, ಭೂಕುಸಿತದ ಬಗ್ಗೆ ಇನ್ನೂ ಹೆಚ್ಚಿನ ವೈಜ್ಞಾನಿಕ ಮಾಹಿತಿ ಅಭಿವೃದ್ಧಿಪಡಿಸಬೇಕು. ಅದಕ್ಕೆ ಪೂರಕವಾದ ಸಂಶೋಧನೆಗಳು ನಡೆಯಬೇಕು. ಈ ಎಲ್ಲವನ್ನೂ ಅಳವಡಿಸಿದರೆ ಅದೊಂದು ಉತ್ತಮ ಮುಂಜಾಗ್ರತಾ ವ್ಯವಸ್ಥೆ ಆಗುತ್ತದೆ.

ಇತ್ತೀಚಿನ ದಿನದಲ್ಲಿ ಹವಾಮಾನ ಬದಲಾವಣೆಯಿಂದ ಭಾರಿ ಮಳೆ, ಬಿಸಿಗಾಳಿ, ಪ್ರವಾಹ ಇಂಥವು ಹೆಚ್ಚಾಗಿವೆ. ಇವು ಮುಂದಿನ ದಿನಗಳಲ್ಲಿ ಇನ್ನೂ ಜಾಸ್ತಿಯಾಗಬಹುದು. ಸೂಕ್ಷ್ಮ ಪರಿಸರ ಪ್ರದೇಶಗಳಲ್ಲಿ ಮುಂದಿನ ಯೋಜನೆಗಳನ್ನು ರೂಪಿಸುವಾಗ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. 2018ರಿಂದ ಭೂಕುಸಿತಗಳು ಹೆಚ್ಚಾದಾಗ 2019–20ರಲ್ಲಿ ರಾಜ್ಯ ಸರ್ಕಾರವು ಭೂಕುಸಿತ ತಡೆಗೆ ಅನಂತ ಹೆಗಡೆ ಅಶೀಸರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತ್ತು. ನಾನೂ ಅದರ ಭಾಗವಾಗಿದ್ದೆ. ಆ ವರದಿಯ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಬೇಕು. ಪಶ್ಚಿಮ ಘಟ್ಟಗಳಂಥ ಸೂಕ್ಷ್ಮ ಭೂಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಾಗ ಜೀವವೈವಿಧ್ಯವನ್ನು ಗಮನದಲ್ಲಿಟ್ಟುಕೊಳ್ಳುವುದು ಅತ್ಯವಶ್ಯಕ. ಸ್ಫೋಟಕಗಳನ್ನು ಸಿಡಿಸುವಾಗ, ಜೀವವೈವಿಧ್ಯಕ್ಕೆ ಧಕ್ಕೆ ಆಗದಂತೆ ಎಚ್ಚರಿಕೆ ವಹಿಸಬೇಕು. ಸೈಲೆನ್ಸ್ ಬ್ಲಾಸ್ಟಿಂಗ್‌ನಂತಹ ತಾಂತ್ರಿಕತೆಯನ್ನು ಅನುಸರಿಸಬೇಕು.

ಸುಸ್ಥಿರ ಅಭಿವೃದ್ಧಿ ಗುರಿಗಳು (13, 14 ಮತ್ತು 15) ಹವಾಮಾನ, ಜಲ ಜೀವರಾಶಿ, ಭೂಮಿಯ ಮಹತ್ವದ ಬಗ್ಗೆ ವಿವರಿಸುತ್ತವೆ. ಒಂದು ಭೂ ಪ್ರದೇಶದಲ್ಲಿರುವ ಪರಿಸರ ವ್ಯವಸ್ಥೆಗಳನ್ನು ಸಂರಕ್ಷಿಸುವುದು, ಸುಸ್ಥಿರವಾದ ಬಳಕೆಯನ್ನು ಪ್ರೋತ್ಸಾಹಿಸುವುದು, ಮಣ್ಣಿನ ಸವಕಳಿಯನ್ನು ತಡೆಯುವುದು, ಜೀವವೈವಿಧ್ಯ ನಷ್ಟವನ್ನು ತಡೆಗಟ್ಟುವುದು ಅದರಲ್ಲಿ ಸೇರಿವೆ; ರಾಜ್ಯದ ಉನ್ನತಿಯ ದೃಷ್ಟಿಯಿಂದ ಅಭಿವೃದ್ಧಿ ಕಾರ್ಯಗಳೂ ನಡೆಯಬೇಕು, ಪರಿಸರವೂ ಉಳಿಯಬೇಕು ಎನ್ನುವುದನ್ನು ಮರೆಯಬಾರದು.

ಲೇಖಕ: ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಜಿ ನಿರ್ದೇಶಕ

ನಿರೂಪಣೆ: ಬಿ.ವಿ.ಶ್ರೀನಾಥ್

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

21 ಜೂನ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ದಶಮಿ ಗಂ. 7-19 ನಂತರ ಏಕಾದಶಿ ಗಂ. 28-28 ನಕ್ಷತ್ರ: ಅಶ್ವಿನಿ ಗಂ. 19-50 ಯೋಗ: ಅತಿಗಂಡ ಗಂ. 20-29, ಮಿಥುನ ಮಾಸದ 07 ನೇ ದಿನ. ಮಳೆ ನಕ್ಷತ್ರ : ಮೃಗಶಿರ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 – 10-30 ,ಸೂರ್ಯೋದಯ : 06-08 ಸೂರ್ಯಾಸ್ತ : 06-55, ಮುಸ್ಲಿಂ ದಿನಾಂಕ : 24 ಜುಲ್‌ಹಿಜಾ ,ಅದೃಷ್ಟ ಸಂಖ್ಯೆ : 8, 12.

ಮೇಷ: ಘಟನೆಯಿಂದಾಗಿ ಸಂಸಾರದ ಜವಾಬ್ದಾರಿ ಹೆಚ್ಚಲಿದೆ. ತೆಂಗಿನಕಾಯಿ, ತೆಂಗಿನ ಎಣ್ಣೆ ವ್ಯಾಪಾರಿಗಳು ಲಾಭ ಪಡೆಯಬಹುದು. ಧಾರ್ಮಿಕ ಗ್ರಂಥಗಳ ಅಧ್ಯಯನ ನಡೆಸುವ ಬಗ್ಗೆ ಆಸಕ್ತಿ ಮೂಡುವುದು.

ವೃಷಭ: ಮಾಧ್ಯಮ, ಪತ್ರಿಕಾ ವೃತ್ತಿಯಲ್ಲಿರುವವರಿಗೆ ಹೆಸರು ಹಾಗೂ ಕೀರ್ತಿ ಸಂಪಾದಿಸಲು ವೇದಿಕೆ ಸಿಗುತ್ತದೆ. ಕೆಲಸಕ್ಕೆ ಇನ್ನೊಬ್ಬರನ್ನು ಅವಲಂಬಿಸುವ ನಿಮಗೆ ಮಿತ್ರರೊಂದಿಗೆ ಒಡನಾಟ ಹೆಚ್ಚಲಿದೆ.

ಮಿಥುನ: ಒತ್ತಡ ತರುವ ಕೆಲಸಗಳಿಂದ ದೂರ ಉಳಿದು, ಯೋಜನಾ ಬದ್ಧ ಕೆಲಸ ಹಾಕಿಕೊಳ್ಳಿರಿ. ಪ್ರೀತಿ ವಿಷಯದಲ್ಲಿ ನಿಸ್ಸಂಕೋಚವಾಗಿ ಮಾತನಾಡಿ. ಹಣಕಾಸು ಪರಿಸ್ಥಿತಿ ಉತ್ತಮಗೊಳ್ಳಲಿದೆ.

ಕರ್ಕಾಟಕ: ಸಾಂಸಾರಿಕ ವಿಚಾರದಲ್ಲಿ ಬೇರೆಯವರ ಸಲಹೆಗಳನ್ನು ಕಡೆಗಣಿಸುವುದು. ಬೇರೆಯವರ ಕುಟುಂಬದ ಹೋಲಿಕೆಯನ್ನು ನಿಮ್ಮ ಕುಟುಂಬಕ್ಕೆ ತೆಗೆದುಕೊಳ್ಳದೇ ಇರುವುದು ಒಳ್ಳೆಯದು.

ಸಿಂಹ: ಸರ್ಕಾರಿ ಅಧಿಕಾರಿಗಳಿಗೆ ವರ್ಗಾವಣೆ ಸಂಭವವಿದೆ. ಹೊಸ ವ್ಯವಹಾರದಲ್ಲಿ ಹಣ ತೊಡಗಿಸುವ ತೀರ್ಮಾನಕ್ಕೆ ಬಂದವರಿಗೆ ಮತ್ತೆ ಈ ದಿನ ಗೊಂದಲ ಉಂಟಾಗಲಿದೆ. ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ.

ಕನ್ಯಾ: ಅತ್ಯಾಪ್ತರಿಗಾಗಿ ಉಡುಗೊರೆ ಕೊಡುವ ಸಲುವಾಗಿ ಹುಡುಕುತ್ತಿರುವ ವಸ್ತುವು ಲಭ್ಯವಾಗುವುದು. ಜಾಹೀರಾತುಗಳ ಮೂಲಕ ವಹಿವಾಟನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನವನ್ನು ಮಾಡಬಹುದು.

ತುಲಾ: ವಿವಾಹದ ಭಾವನೆಗಳನ್ನು ತಂದೆ ತಾಯಿಯ ಬಳಿ ವ್ಯಕ್ತಪಡಿಸಲು ಇದು ಸುಸಮಯ. ಆಭರಣಗಳಿಗಾಗಿ ಹಣ ಖರ್ಚು ಮಾಡುವಿರಿ. ಸಹೋದ್ಯೋಗಿಗಳ ಬೆಂಬಲ ಚೆನ್ನಾಗಿರುತ್ತದೆ.

ವೃಶ್ಚಿಕ: ಕೆಲಸವನ್ನು ಪೂರೈಸಲು ಮಾಡಿದ ಪ್ರಯತ್ನವು ನೀರಿನಲ್ಲಿ ಹೋಮ ಮಾಡಿದಂತೆ ಆಗದಿರಲು ಮುನ್ನೆಚ್ಚರಿಕೆ ವಹಿಸಿ. ವಾರದ ಸಂಪಾದನೆಯು ಮಕ್ಕಳಿಂದ ಒಂದೇ ದಿನದಲ್ಲಿ ನೀರಿನಂತೆ ಖರ್ಚಾಗಬಹುದು.

ಧನು: ಬದುಕಿನ ಗತಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ. ವೃತ್ತಿಯಲ್ಲಿ ಕಾರ್ಯನಿರ್ವಹಣೆ ಮೆಚ್ಚುಗೆಗೆ ಪಾತ್ರವಾಗುವುದು. ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಲಿದ್ದೀರಿ.

ಮಕರ: ಆಸ್ತಿ ಪಾಲುದಾರಿಕೆಯಂಥ ಮಹತ್ತರ ಕಾರ್ಯಗಳಲ್ಲಿ ತಾಳ್ಮೆ ವಹಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸೂಕ್ತ. ಜಾಣನಡೆಯಿಂದಾಗಿ ಬಂಧುಮಿತ್ರರಲ್ಲಿ ವೈಮನಸ್ಸು ಉಂಟಾಗುವುದನ್ನು ತಪ್ಪಿಸಬಹುದು.

ಕುಂಭ: ಮನೆ ಬದಲಾವಣೆ ವಿಚಾರಗಳು ಚರ್ಚೆಗೆ ಬಂದು ಹಿರಿಯರ ಮಾತಿನಂತೆಯೇ ನಡೆದರೆ ಉತ್ತಮ. ದುಗುಡಗಳು, ಬಿಕ್ಕಟ್ಟಿನ ಪರಿಸ್ಥಿತಿಗಳನ್ನು ಎದುರಿಸುವ ಸಾಮರ್ಥ್ಯಕ್ಕೆ ಕೆಟ್ಟದೃಷ್ಟಿ ತಗುಲಿ ಗೊಂದಲಕ್ಕೆ ಒಳಗಾಗಬಹುದು.

ಮೀನ: ಉನ್ನತ ವಿದ್ಯಾಭ್ಯಾಸ ನಡೆಸಲು ವಿದೇಶಕ್ಕೆ ಹೋಗಬೇಕೆಂದುಕೊಂಡಿರುವವರಿಗೆ ವಿವಿಧ ರೀತಿಯ ಅಡಚಣೆಗಳು ಉಂಟಾಗುವ ಸಾಧ್ಯತೆ ಇದೆ. ರೇಷ್ಮೆ ವಸ್ತುಗಳ ಮಾರಾಟದಿಂದ ಲಾಭ ಹೊಂದುವಿರಿ.

ಪದಬಂಧ 6080

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಈತ ತಂದೆಯ ತಂದೆ (4)
3. ಮನಸ್ಸಿನ ಕೆಚ್ಚು (4)
5. ವಿರಾಟರಾಜನ ಸೇನಾಪತಿ (3)
6. ಕತ್ತು ತಿರಿಗಿಸುತ್ತಾ ಮಾಡಿದ ವ್ಯಾಯಾಮ (4)
7. ಸೇನಾನಾಯಕನಿವನು (4)
9. ಈ ತರ ಬಂದಿರುವ ಏರ್ಪಾಟು (4)
11. ಸಂಭ್ರಮಕ್ಕಿಲ್ಲಿ ಗರ ಬಡಿದಿದೆ! (4)
13. ಕೊನೆಗೆ ಕೈ ಕೊಟ್ಟಿರುವ ಆಳು (3)
15. ಸುಮಾರು ಮೂರು ಮೈಲುಗಳ ಒಂದು ಅಳತೆ (4)
16. ಒಳ್ಳೆಯ ಅಭಿಪ್ರಾಯ (4)

ಮೇಲಿಂದ ಕೆಳಕ್ಕೆ

1. ಪಿನಾಕದ ಹತ್ತಿರವಿರುವ ಕೋಗಿಲೆ (2)
2. ಹತ್ತು ಹೇಳುತ್ತಲೇ ಹೂಡಿರುವ ಸಂಚು (4)
3. ಹೂವಿನಲ್ಲಿಯ ಸಿಹಿರಸ (4)
4. ಹಣದ ಅಧಿದೇವತೆ (2)
6. ಖೋತಾ ಎಂದಾಗ ಆಗಿರುವ ನವೆ (3)
8. ಇಲ್ಲಿ ಅಂಧಕಾರವಿದೆ (3)
10. ಈತ ಕೆಟ್ಟ ನಡತೆಯವನು (4)
11. ಸರಸ ಹಾಗೂ ವಿರಸ ಸಮನಾಗಿರುವಿಕೆ (4)
12. ಉದಾಹರಣೆ ನೀಡುವಾಗ ಆದ ಬಾಯಾರಿಕೆ (2)
14. ಆಮನೆ ಹತ್ತಿರವಿರುವ ಗಜ (2)



6079ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ನಿಷ್ಪಕ್ಷಪಾತ 4.ಆಮೋದ 5.ಕರ 7.ವಿಧ 10.ಕರಿ 13.ನಾಮ 15.ಸಿಕತ 16.ಗಗನಚುಂಬಿ

ಮೇಲಿಂದ ಕೆಳಕ್ಕೆ: 1.ಅಕ್ಷರಸ್ಥ 2.ಪಾತಕ 3.ನಿದರ್ಶನ 4.ಆರಾಧಕ 6.ರವಿ 8.ಧನವಂತ 9.ಕ್ರರಸಿಬಿ 11.ರಿನಾ 12.ಬಡನಡು 14.ಮಗಳು

ಸುಡೊಕು 6464

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	9		2		5		6	
			4			8		5
	4	5			9		3	
4	6		9		7			
				4		1		6
8		7	5		6		4	
		4			2			
7	2			5		6		3
	8		7				5	

6463 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ವಿನಿಮಯ ದರ: ಡಾಲರ್ 86.55 ↑ | ಪೌಂಡ್ 116.87 ↑ | ಯುರೊ 99.83 ↑ | ಯೆನ್ (100ಕ್ಕೆ) 59 ↑

ಷೇರುಪೇಟೆ ವಹಿವಾಟು

ಹಿಂದಿನ ಅಂತ್ಯ 81,361 — ಇಂದಿನ ಅಂತ್ಯ 82,408 (↑1046)

(82,500 / 82,000 / 81,500 / 81,000; 10:00, 12:00, 14:00, 16:00)

ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ:	24,793
ಇಂದಿನ ಅಂತ್ಯ:	25,112
ದಿನದ ಗರಿಷ್ಠ:	25,136
↑	319

ಮೊಟ್ಟೆ ಧಾರಣೆ (ಎನ್ಇಸಿಸಿ)

ಬೆಂಗಳೂರು	
100 ಕ್ಕೆ	₹585
12 ಕ್ಕೆ	₹78
ಮೈಸೂರು: 100 ಕ್ಕೆ	₹590

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹269-562
ದ್ವಿತಳಿ (ಬಿ.ವಿ)	₹407-680

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1,400-1,800
ಮಧ್ಯಮ	₹1,000-1,400
ಸಣ್ಣ	₹500-1,000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1390 (1400)
ಸೋಯಾ (ರಿಫೈನ್ಡ್)	₹1205 (1190)
ಸೂರ್ಯಕಾಂತಿ (ರಿಫೈನ್ಡ್)	₹1350 (1350)
ಪಾಮೋಲಿನ್	₹1190 (1190)

ಕೊಬ್ಬರಿ ದರ (ಕ್ವಿಂಟಲ್‌ಗೆ)

ಅರಸೀಕೆರೆ	₹12000-23700
ತುಮಕೂರು	₹15500-18600

ಅಡಿಕೆ ಧಾರಣೆ

ಕುಮಟಾ	
ಚಾಲಿ	38569-42398
ಚಿಪ್ಪು	24089-28999
ಕೋಕ	7089-19029
ಫ್ಯಾಕ್ಟರಿ	5509-23999
ಹೊಸಚಾಲಿ	34999-42509
ಪುತ್ತೂರು	
ಕೋಕ	20000-30500
ಹೊಸತು	26000-47500
ಹಳತು	39000-51000
ಶಿವಮೊಗ್ಗ	
ಬೆಟ್ಟೆ	48310-58919
ಗೊರಬಲು	17009-29599
ರಾಶಿ	46599-57399
ಸರಕು	62699-99696
ಸಿದ್ದಾಪುರ	
ಬಿಳಿಗೋಟು	24599-31000
ಚಾಲಿ	33809-40100
ಕೋಕ	15699-25699
ಕೆಂಪುಗೋಟು	22119-22119
ರಾಶಿ	42009-46099
ತಟ್ಟಿಬೆಟ್ಟೆ	30609-37999
ಶಿರಸಿ	
ಬೆಟ್ಟೆ	27299-36899
ಬಿಳಿಗೋಟು	15000-31823
ಚಾಲಿ	34698-42199
ಕೆಂಪುಗೋಟು	20021-24299
ರಾಶಿ	41999-47399
ಯಲ್ಲಾಪುರ	
ಅಪಿ	57410-59699
ಬಿಳಿಗೋಟು	15969-32000
ಚಾಲಿ	32629-41111
ಕೋಕ	8899-16900
ಕೆಂಪುಗೋಟು	17016-26399
ರಾಶಿ	39469-54639
ತಟ್ಟಿಬೆಟ್ಟೆ	28809-38399

ಮುಂಬೈ ಧಾರಣೆ (ಶೇಂಗಾ)

20-06-2025	
ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1400 (1410)
ಒಂದು ವಾರದ ಡೆಲಿವರಿ	1395 (1405)
ಪಾಮ್ ವಾರದ ಡೆಲಿವರಿ	1188 (1188)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1275)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	98,450 (99,000)
ಬೆಳ್ಳಿ ಕೆ.ಜಿಗೆ	1,06,650 (1,07,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಬೆಳ್ಳಿ ದರ ಕೆ.ಜಿಗೆ ₹2 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9ರಷ್ಟು ಪರಿಶುದ್ಧತೆ) ₹600 ಕಡಿಮೆಯಾಗಿ, ₹99,960ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ಬೆಲೆಯು (ಶೇ 99.5 ಪರಿಶುದ್ಧತೆ) ₹550 ಇಳಿಕೆಯಾಗಿ, ₹99,250 ಆಗಿದೆ.

ಬೆಳ್ಳಿ ದರ ಕೆ.ಜಿಗೆ ₹2 ಸಾವಿರ ಕಡಿಮೆಯಾಗಿ, ₹1,05,200ಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕಿರುಸಾಲ: ಗ್ರಾಹಕರಿಗೆ ಸಹಾಯವಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿರು ಹಣಕಾಸು ಕ್ಷೇತ್ರದ ಬಲವರ್ಧನೆ ಮತ್ತು ಸಾಲ ಪಡೆದ ಗ್ರಾಹಕರ ರಕ್ಷಣೆ ಸೇರಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಆರ್‌ಬಿಐ ಸ್ವಯಂ ನಿಯಂತ್ರಣ ಒಕ್ಕೂಟವು (ಎಸ್‌ಆರ್‌ಒ) ಸಹಾಯವಾಣಿ ಆರಂಭಿಸಿದೆ.

ಸಾಲ ವಸೂಲಾತಿ ಸಮಸ್ಯೆ, ಸಾಲಗಾರರು ಎದುರಿಸುತ್ತಿರುವ ಒತ್ತಡ ಮತ್ತು ಇನ್ನಿತರ ಸನ್ನಿವೇಶಗಳ ಹಿನ್ನಲೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ಸಣ್ಣ ಹಣಕಾಸು ಕ್ಷೇತ್ರದಲ್ಲಿ ಸ್ವಯಂ ನಿಯಂತ್ರಣ ಒಕ್ಕೂಟ ಸ್ಥಾಪಿಸಿದೆ. ಇದರ ಒಕ್ಕೂಟದ ರಾಷ್ಟ್ರೀಯ ಸಭೆ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆಯಿತು. ಈ ವೇಳೆ ಸಹಾಯವಾಣಿ ಪ್ರಾರಂಭಕ್ಕೆ ಚಾಲನೆ ನೀಡಿದೆ.

ಗ್ರಾಹಕರು 1800-121-1322 ಸಹಾಯವಾಣಿಗೆ ಕರೆ ಮಾಡಬಹುದಾಗಿದೆ. ಸಹಾಯವಾಣಿಯು ಪ್ರಸ್ತುತ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿದ್ದು, ಶೀಘ್ರದಲ್ಲೇ ಹತ್ತು ಪ್ರಾದೇಶಿಕ ಭಾಷೆಗಳಿಗೆ ವಿಸ್ತರಿಸಲಾಗುತ್ತಿದೆ. ಇದೇ ವೇಳೆ ಗ್ರಾಹಕರ ದೂರು ಪರಿಹಾರ ವ್ಯವಸ್ಥೆಯ (ಸಿಜಿಆರ್‌ಎಂ) ಕೈಪಿಡಿಯನ್ನು ಬಿಡುಗಡೆ ಮಾಡಲಾಯಿತು.

ಸಭೆಯಲ್ಲಿ ಕರ್ನಾಟಕದಲ್ಲಿ ಇತ್ತೀಚೆಗೆ ಕೈಗೊಂಡ, ಜಾರಿಗೊಳಿಸಲಾದ ನೀತಿ ನಿಯಮಗಳೂ ಸೇರಿದಂತೆ ಕಿರು ಹಣಕಾಸು ಕ್ಷೇತ್ರ ಎದುರಿಸುತ್ತಿರುವ ಸವಾಲುಗಳ ಚರ್ಚೆ ನಡೆಯಿತು. ಸಭೆಯಲ್ಲಿ ಕ್ಷೇತ್ರಕ್ಕೆ ಸಂಬಂಧಿಸಿದ ತಜ್ಞರು, ಪಾಲುದಾರರು ಮತ್ತು ವಿವಿಧ ಕಿರು ಹಣಕಾಸು ಕಂಪನಿಗಳ ಮುಖ್ಯಸ್ಥರು ಭಾಗವಹಿಸಿದ್ದರು.

‘ದೇಶದ ಒಟ್ಟು ಸಾಲ ವ್ಯವಸ್ಥೆಯಲ್ಲಿ ಕಿರು ಹಣಕಾಸು ನೆರವಿನ ಪಾಲು ಕೇವಲ ಶೇಕಡ ಮೂರರಷ್ಟಿದ್ದರೂ ಅದು ಬೀರುವ ಪರಿಣಾಮ ಅಗಾಧ. ಹಾಗಾಗಿ ಗ್ರಾಹಕರ ಅಗತ್ಯತೆಗಳನ್ನು ಅರ್ಥ ಮಾಡಿಕೊಂಡು, ತಂತ್ರಜ್ಞಾನ ಪರಿಹಾರಗಳನ್ನು ಬಳಸಿಕೊಂಡು ಮಾನವ ಸ್ಪರ್ಶವನ್ನು ಸಾಲ ವಿತರಣೆಯಲ್ಲಿ ಅನುಸರಿಸಬೇಕು’ ಎಂದು ಸಾ-ಧನ್‌ನ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಸಿಇಒ ಜಿ.ಜಿ. ಮಾಮ್ಮೆನ್ ಹೇಳಿದ್ದಾರೆ.

ಸಂಘರ್ಷ ಉಲ್ಬಣ: ಶಮನಕ್ಕೂ ನಡೆದಿದೆ ಯತ್ನ

ಸಂಧಾನ ಮಾತುಕತೆಗೆ ಜಿನೀವಾಗೆ ತೆರಳಿದ ಇರಾನ್ ಸಚಿವ
ದಾಳಿಯಲ್ಲಿ ಭಾಗಿ: ಎರಡು ವಾರದಲ್ಲಿ ನಿರ್ಧಾರ –ಟ್ರಂಪ್

ಟೆಲ್ ಅವೀವ್ (ಎ.ಪಿ): ಇರಾನ್ ಮತ್ತು ಇಸ್ರೇಲ್ ನಡುವಣ ಸಂಘರ್ಷ, ಕ್ಷಿಪಣಿಗಳ ದಾಳಿ ಆರಂಭವಾಗಿ ಒಂದು ವಾರ ಗತಿಸಿದ್ದು, ಮತ್ತಷ್ಟು ತೀವ್ರಗೊಳ್ಳುತ್ತಿದೆ. ಇಂತಹ ಪರಿಸ್ಥಿತಿ ಮಧ್ಯೆಯೂ, ಉಭಯ ದೇಶಗಳ ನಡುವಣ ಉದ್ವಿಗ್ನ ಶಮನಗೊಳಿಸುವ ಯತ್ನಗಳೂ ಚುರುಕು ಪಡೆದಿವೆ.

ಸಂಘರ್ಷ ಶಮನಕ್ಕೆ ರಾಜತಾಂತ್ರಿಕ ಯತ್ನ ನಡೆದಿದೆ ಎಂದು ಹೇಳಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ‘ಇರಾನ್ ವಿರುದ್ಧದ ದಾಳಿಯಲ್ಲಿ ಅಮೆರಿಕ ಸೇನೆ ನೇರವಾಗಿ ಭಾಗವಹಿಸುವ ಬಗ್ಗೆ ಎರಡು ವಾರಗಳಲ್ಲಿ ನಿರ್ಧರಿಸಲಾಗುವುದು’ ಎಂದಿದ್ದಾರೆ.

ಇರಾನ್‌ನಲ್ಲಿ ಬೆಟ್ಟಗುಡ್ಡಗಳ ನಡುವೆ, ಭೂಗರ್ಭದಲ್ಲಿ ಸ್ಥಾಪಿಸಿರುವ ಅತಿ ಭದ್ರತೆಯ, ಫೋರ್ಡೊ ಯುರೇನಿಯಂ ಸಂಸ್ಕರಣ ಘಟಕದ ಮೇಲೆ ದಾಳಿ ಮಾಡುವ ಸಾಧ್ಯತೆ ಕುರಿತೂ ತೀರ್ಮಾನಿಸಲಾಗುವುದು ಎಂದು ಹೇಳಿದ್ದಾರೆ.

ಅಣ್ವಸ್ತ್ರ ಕಾರ್ಯಕ್ರಮ ಕುರಿತು ಒಪ್ಪಂದಕ್ಕೆ ಬರಲು ಇರಾನ್‌ಗೆ ಮತ್ತೊಂದು ಅವಕಾಶ ನೀಡುತ್ತೇವೆ. ಅಲ್ಲದೆ, ಇರಾನ್ ವಿರುದ್ಧದ ದಾಳಿಯಲ್ಲಿ ಅಮೆರಿಕ ಸೇನೆ ನೇರವಾಗಿ ಭಾಗವಹಿಸುವ ಕುರಿತು ನಿರ್ಧರಿಸುತ್ತೇವೆ ಎಂದಿದ್ದಾರೆ.

ಸಂಘರ್ಷ ಶಮನ ಕುರಿತು ಮಾತುಕತೆ ಜಿನೀವಾದಲ್ಲಿ ನಡೆಯಲಿದೆ. ಇದರಲ್ಲಿ ಭಾಗವಹಿಸಲು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ತೆರಳಿದ್ದಾರೆ. ಐರೋಪ್ಯ ಒಕ್ಕೂಟದ ಹಿರಿಯ ರಾಜತಾಂತ್ರಿಕರು, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿಯ ವಿದೇಶಾಂಗ ಸಚಿವರೂ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಅರಾಗ್ಚಿ ಭಾಗವಹಿಸುವಿಕೆಯನ್ನು ಇರಾನ್ ದೃಢಪಡಿಸಿದೆ.

ಈ ಮಧ್ಯೆ, ಬಿಕ್ಕಟ್ಟು ಶಮನದ ರಾಜಿಸೂತ್ರ ಕುರಿತು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ರಾಯಭಾರಿ ಸ್ಟೀವ್ ವಿಟ್‌ಕಾಫ್ ಜೊತೆ ಚರ್ಚಿಸಿದ್ದಾಗಿ ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ತಿಳಿಸಿದ್ದಾರೆ. ಮಾತುಕತೆಯ ವಿವರ ನೀಡಿಲ್ಲ.

ಇರಾನ್ ಮತ್ತು ಇಸ್ರೇಲ್ ನಡುವೆ ಅಘೋಷಿತ ಯುದ್ಧ ಜೂನ್ 13ರಂದು ಆರಂಭವಾಗಿದ್ದು, ಉಭಯ ದೇಶಗಳು ಪರಸ್ಪರರ ನೆಲೆಗಳಲ್ಲಿ ಹಿರಿಯ ಅಧಿಕಾರಿಗಳು, ವಿಜ್ಞಾನಿಗಳು, ಸೇನಾ ನೆಲೆ ಗುರಿಯಾಗಿ ವಾಯುದಾಳಿ ನಡೆಸಿವೆ.



ಇಸ್ರೇಲ್‌ನ ಬೀರ್‌ಶೆವಾ ನಗರದ ವಸತಿ ಸಂಕೀರ್ಣದ ಬಳಿ ಅವಶೇಷ ತೆರವು ಕಾರ್ಯವನ್ನು ನಿವಾಸಿಗಳು ವೀಕ್ಷಿಸಿದರು –ಎಎಫ್‌ಪಿ ಚಿತ್ರ

ದಿನದ ಬೆಳವಣಿಗೆಗಳು...

- ಇಸ್ರೇಲ್ ದಾಳಿಯಿಂದ ವಾರದ ಹಿಂದೆ ತೀವ್ರವಾಗಿ ಗಾಯಗೊಂಡಿದ್ದ ಅಲಿ ಶಮ್‌ಖಾನಿ ಆರೋಗ್ಯ ಸ್ಥಿರವಾಗಿದೆ. ‘ನಾನು ಜೀವಂತವಾಗಿದ್ದೇನೆ. ಹೋರಾಡಲು ಸಜ್ಜಾಗಿದ್ದೇನೆ’ ಎಂದು ಹೇಳಿಕೆ ನೀಡಿದ್ದಾರೆ.
- ಇಸ್ರೇಲ್ ಕ್ಷಿಪಣಿ ದಾಳಿಯಿಂದ ಇರಾನ್‌ನ ‘ಅರಾಕ್ ಹೆವಿ ವಾಟರ್ ರಿಯಾಕ್ಟರ್’ ಘಟಕವು ತೀವ್ರವಾಗಿ ಹಾನಿಗೊಂಡಿದೆ ಎಂದು ಅಂತರ ರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆಯು ಶುಕ್ರವಾರ ತಿಳಿಸಿದೆ.
- ಇಸ್ರೇಲ್ ದಕ್ಷಿಣ ಭಾಗದ ಪ್ರಮುಖ ಆಸ್ಪತ್ರೆ ಮತ್ತು ಜನವಸತಿ ಕಟ್ಟಡ ಗುರಿಯಾಗಿ ಇರಾನ್ ಕ್ಷಿಪಣಿ ದಾಳಿ ನಡೆಸಿದ್ದು, ಕನಿಷ್ಠ 200 ಮಂದಿ ಗಾಯಗೊಂಡಿದ್ದಾರೆ ಎಂದು ವರದಿ ತಿಳಿಸಿದೆ.
- ಇರಾನ್–ಇಸ್ರೇಲ್ ಸಂಘರ್ಷದ ಹಿನ್ನೆಲೆಯಲ್ಲಿ ಬಲ್ಗೇರಿಯಾ ಇಸ್ರೇಲ್‌ನಿಂದ 80 ಪ್ರಜೆಗಳನ್ನು ಕರೆಸಿಕೊಂಡಿದೆ. ಚೀನಾ ಇಸ್ರೇಲ್‌ನಿಂದ 1,600, ಇರಾನ್‌ನಿಂದ ನೂರಾರು ಪ್ರಜೆಗಳನ್ನು ವಾಪಸು ಕರೆಸಿದೆ. ಜರ್ಮನಿಯ 345 ಪ್ರಯಾಣಿಕರು ಎರಡು ವಿಶೇಷ ವಿಮಾನಗಳಲ್ಲಿ ಟೆಲ್‌ಅವೀವ್‌ನಿಂದ ನಿರ್ಗಮಿಸಿದ್ದಾರೆ.
- ಐರೋಪ್ಯ ಒಕ್ಕೂಟವು ತನ್ನ ಸದಸ್ಯ ರಾಷ್ಟ್ರಗಳಿಗೆ ಸೇರಿ 400 ಪ್ರಜೆಗಳ ಸುರಕ್ಷಿತ ನಿರ್ಗಮನಕ್ಕಾಗಿ ನೆರವು ನೀಡಿದೆ. ವಿಮಾನಯಾನ ವೆಚ್ಚದ ಶೇ 75ರಷ್ಟನ್ನು ಒಕ್ಕೂಟ ಭರಿಸಲಿದೆ ಎಂದು ಹೇಳಿಕೆ ತಿಳಿಸಿದೆ.

ಮೈಕ್ರೊಸಾಫ್ಟ್ ಕಚೇರಿ ಸಮೀಪ ದಾಳಿ

ಟೆಲ್ ಅವೀವ್ (ರಾಯಿಟರ್ಸ್): ಇಸ್ರೇಲ್‌ನ ಬೀರ್‌ಶೆವಾ ನಗರವನ್ನು ಗುರಿಯಾಗಿ ಇರಾನ್ ಶುಕ್ರವಾರ ಹಲವು ಕ್ಷಿಪಣಿ ದಾಳಿ ನಡೆಸಿತು. ಮೈಕ್ರೊಸಾಫ್ಟ್ ಕಚೇರಿ ಸೇರಿ ಹಲವು ಪ್ರಮುಖ ಕಚೇರಿಗಳಿರುವ ಟೆಕ್ ಪಾರ್ಕ್ ಬಳಿಯೇ ದಾಳಿ ನಡೆದಿದ್ದು, ಬೆಂಕಿ ಹೊತ್ತಿಕೊಂಡಿತು ಎಂದು ಸಿಎನ್‌ಎನ್ ವರದಿ ಮಾಡಿದೆ.

ಕ್ಷಿಪಣಿ ದಾಳಿ ಅವ್ಯಾಹತ, ಹಾನಿ

ಟೆಲ್ ಅವೀವ್ (ಎ.ಪಿ): ಶುಕ್ರವಾರವೂ ಇಸ್ರೇಲ್ ಮತ್ತು ಇರಾನ್ ಪರಸ್ಪರರ ನೆಲೆಗಳನ್ನು ಗುರಿಯಾಗಿಸಿ ಕ್ಷಿಪಣಿಗಳ ದಾಳಿ ನಡೆಸಿದ್ದು, ಉಭಯ ಕಡೆಗಳಲ್ಲೂ ತೀವ್ರತರನಾದ ಹಾನಿಗಳಾಗಿವೆ.

ಇರಾನ್‌ನ ಕೈಗಾರಿಕಾ ವಲಯದ ಕ್ಷಿಪಣಿ ತಯಾರಿಕಾ ಘಟಕದ ಮೇಲೆ 60ಕ್ಕೂ ಹೆಚ್ಚು ವಿಮಾನ ಬಳಸಿ ದಾಳಿ ನಡೆಸಿದ್ದಾಗಿ ಇಸ್ರೇಲ್ ಹೇಳಿದೆ. ರಕ್ಷಣಾ ಸಂಶೋಧನೆ ಕೇಂದ್ರದ ಮೇಲೂ ದಾಳಿ ನಡೆದಿದೆ ಎಂದು ತಿಳಿಸಿದೆ. ಈ ಘಟಕದಲ್ಲೇ ಅಣ್ವಸ್ತ್ರ ಶಸ್ತ್ರಾಸ್ತ್ರಗಳ ಅಭಿವೃದ್ಧಿ, ಪರೀಕ್ಷೆ ನಡೆಯುತ್ತಿದೆ ಎಂದು ಅಮೆರಿಕ ಹಿಂದೆ ಹೇಳಿತ್ತು.

ಸಂಘರ್ಷ ಆರಂಭವಾಗಿ ವಾರ ಕಳೆದಿದೆ. ವಾಯುಗಡಿಯ ರಕ್ಷಣೆಯ ಜೊತೆಗೆ ದಾಳಿಯನ್ನು ತೀವ್ರಗೊಳಿಸಿದ್ದೇವೆ ಎಂದು ಇಸ್ರೇಲ್‌ನ ಸೇನಾ ವಕ್ತಾರ ಬ್ರಿಗೇಡಿಯರ್ ಜನರಲ್ ಎಫಿ ಡೆಫ್ರಿನ್ ತಿಳಿಸಿದ್ದಾರೆ.

ಇತ್ತ, ಇರಾನ್‌ನ ಕ್ಷಿಪಣಿ ದಾಳಿಯಿಂದಾಗಿ ಇಸ್ರೇಲ್‌ನಲ್ಲಿ ಹಲವು ವಸತಿ ಕಟ್ಟಡಗಳಿಗೆ ಹಾನಿಯಾಗಿದ್ದು, ಆತಂಕ ಮೂಡಿದೆ. ಐವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೀರ್‌ಶೆಬಾ ನಗರದ ಸೊರೊಕಾ ವೈದ್ಯಕೀಯ ಕೇಂದ್ರದಲ್ಲಿ ಮೇಲಿನ ದಾಳಿಯಲ್ಲಿ 80 ರೋಗಿಗಳು ಗಾಯಗೊಂಡರು.

ಟೆಹರಾನ್ ಮತ್ತು ಇರಾನ್‌ನ ಪಶ್ಚಿಮ ವಲಯದ ಹಲವು ಸ್ಥಳಗಳನ್ನು ಗುರಿಯಾಗಿಸಿ ದಾಳಿ ನಡೆದಿದೆ. ಕ್ಯಾಸ್ಪಿಯನ್ ತೀರ ಭಾಗದ ರಶ್ತ್ ನಗರದ ಮೇಲೆ ದಾಳಿ ನಡೆಸಲಾಗಿದೆ ಎಂದು ಇರಾನ್‌ನ ಸ್ಥಳೀಯ ಮಾಧ್ಯಮ ವರದಿ ಮಾಡಿದೆ. ಆದರೆ, ಹಾನಿ ಕುರಿತು ವಿವರಗಳು ಲಭ್ಯವಾಗಿಲ್ಲ.

> ಅಮೆರಿಕಕ್ಕೆ ಏನು ಅನುಕೂಲವೋ ಅದನ್ನು ಟ್ರಂಪ್ ಮಾಡುತ್ತಾರೆ. ಈಗಾಗಲೇ ನಮಗೆ ಅವರು ಸಾಕಷ್ಟು ನೆರವು ನೀಡುತ್ತಿದ್ದಾರೆ
> **ಬೆಂಜಮಿನ್ ನೆತನ್ಯಾಹು** ಪ್ರಧಾನಿ, ಇಸ್ರೇಲ್

> ಭವಿಷ್ಯದಲ್ಲಿ ಇರಾನ್ ಜೊತೆಗೆ ಸಂಧಾನ ಮಾತುಕತೆ ಅಸಾಧ್ಯ ಎಂಬ ಅಂಶವನ್ನು ಆಧರಿಸಿ ಸೇನಾ ದಾಳಿಯಲ್ಲಿ ಅಮೆರಿಕ ನೇರವಾಗಿ ಭಾಗವಹಿಸುವ ಕುರಿತು 2 ವಾರದಲ್ಲಿ ನಿರ್ಧರಿಸುತ್ತೇನೆ
> **ಡೊನಾಲ್ಡ್ ಟ್ರಂಪ್** ಅಧ್ಯಕ್ಷ, ಅಮೆರಿಕ

> ‘ಇಸ್ರೇಲ್ ವಾಯುದಾಳಿ ನಿಲ್ಲಿಸುವವರೆಗೂ ಮಾತುಕತೆ ಇಲ್ಲ. ಅಮೆರಿಕ, ಇಸ್ರೇಲ್ ಜೊತೆ ಕೈಜೋಡಿಸಿದೆ. ಟ್ರಂಪ್ ‘ನಾವು’ ಎಂದೇ ಮಾತನಾಡುತ್ತಿದ್ದಾರೆ
> **ಅಬ್ಬಾಸ್ ಅರಾಗ್ಚಿ,** ಇರಾನ್ ಸಚಿವ

1 ಸಾವಿರ ಭಾರತೀಯರ ಸ್ಥಳಾಂತರಕ್ಕೆ ಕ್ರಮ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಶನಿವಾರ ಇನ್ನು ಎರಡು ವಿಮಾನ ಬರುವ ಸಾಧ್ಯತೆ
- ವಿದ್ಯಾರ್ಥಿಗಳ ಸಂಚಾರಕ್ಕೆ ರಾಯಭಾರಿ ಕಚೇರಿ ಕ್ರಮ
- ಭಾರತೀಯ ರಾಯಭಾರಿ ಕಚೇರಿಯಲ್ಲಿ ಸಹಾಯವಾಣಿ

ನವದೆಹಲಿ: ಸಂಘರ್ಷ ಬಾಧಿತ ಇರಾನ್‌ನಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆದೊಯ್ಯಲು ಇರಾನ್ ಶುಕ್ರವಾರ ತನ್ನ ವಾಯುಗಡಿ ಮುಕ್ತಗೊಳಿಸಿತು. ‘ಆಪರೇಷನ್ ಸಿಂಧು’ ಅಡಿ 1,000 ವಿದ್ಯಾರ್ಥಿಗಳನ್ನು ಕರೆತರಲು ಇದು ಸಹಕಾರಿಯಾಯಿತು.

ಭಾರತೀಯ ವಿದ್ಯಾರ್ಥಿಗಳಿದ್ದ ವಿಶೇಷ ವಿಮಾನವು ಶುಕ್ರವಾರ ದೆಹಲಿಗೆ ಬಂದಿಳಿಯಿತು. ಇನ್ನೂ ಎರಡು ವಿಮಾನ ಶನಿವಾರ ಬರುವ ನಿರೀಕ್ಷೆಯಿದೆ.

ಇರಾನ್ ರಾಯಭಾರ ಕಚೇರಿಯ ಉಪ ಮುಖ್ಯಸ್ಥ ಮೊಹಮ್ಮದ್ ಜಾವೇದ್ ಹೊಸೈನಿ ಅವರು, ಅಗತ್ಯವಿದ್ದರೆ ಹೆಚ್ಚಿನ ವಿದ್ಯಾರ್ಥಿಗಳನ್ನು ಕರೆದೊಯ್ಯಲು ಬರುವ ದಿನಗಳಲ್ಲಿ ಇನ್ನಷ್ಟು ವಿಮಾನಗಳ ಸಂಚಾರ ಏರ್ಪಡಿಸಬಹುದು ಎಂದರು.

ಇಸ್ರೇಲ್ ದಾಳಿ ಹಿಂದೆಯೇ ಭಾರತೀಯ ವಿದ್ಯಾರ್ಥಿಗಳು ರಾಜಧಾನಿ ಟೆಹರಾನ್‌ನಿಂದ ಮಶದ್ ನಗರಕ್ಕೆ ತೆರಳಿದ್ದರು. ಇರಾನ್‌ನ ‘ಮಹನ್’ ಸಂಸ್ಥೆ ವಿಮಾನಗಳ ಸಂಚಾರ ಏರ್ಪಡಿಸಿತ್ತು.

ಸಂಘರ್ಷ ಪೀಡಿತ ದೇಶಗಳಿಂದ ತನ್ನ ಪ್ರಜೆಗಳನ್ನು ಸುರಕ್ಷಿತವಾಗಿ ಕರೆತರಲು ಭಾರತ ಸರ್ಕಾರ ‘ಆಪರೇಷನ್ ಸಿಂಧು’ ಯೋಜನೆ ಆರಂಭಿಸಿದೆ. ವಿದ್ಯಾರ್ಥಿಗಳ ನಿರ್ಗಮನಕ್ಕೆ ಇರಾನ್‌ನಲ್ಲಿನ ಭಾರತೀಯ ರಾಯಭಾರಿ ಕಚೇರಿ ನೆರವಾಗಿದೆ.

ಭಾರತೀಯ ಪ್ರಜೆಗಳ ರಕ್ಷಣೆ ಮತ್ತು ಅವರ ಸುರಕ್ಷಿತ ಸಂಚಾರಕ್ಕೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಲಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಕ್ಷಿಪಣಿ ದಾಳಿಯಿಂದಾಗಿ ಇರಾನ್‌ನ ತನ್ನ ವಾಯುಗಡಿ ಮುಚ್ಚಿದ್ದರೂ ಭಾರತೀಯ ಪ್ರಜೆಗಳ ಸಂಚಾರಕ್ಕಾಗಿ ಮುಕ್ತಗೊಳಿಸಿದೆವು ಎಂದು ಹೊಸೈನಿ ಅವರು ಪ್ರತಿಕ್ರಿಯಿಸಿದರು.

ಗುರುವಾರ 110 ವಿದ್ಯಾರ್ಥಿಗಳನ್ನು ಕರೆತರಲಾಗಿತ್ತು. ಇರಾನ್‌ನಲ್ಲಿ ಸುಮಾರು 10 ಸಾವಿರ ಭಾರತೀಯರು ಇದ್ದಾರೆ. ದೇಶ ಬಿಟ್ಟು ಹೋಗಲು ಬಯಸುವ ವರಿಗೆ ತೆರಳಲು ಅನುವು ಮಾಡಿಕೊಡಲಾಗುತ್ತಿದೆ ಎಂದು ಹೊಸೈನಿ ತಿಳಿಸಿದರು.

ಭಾರತೀಯ ಪ್ರಜೆಗಳು ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಜೊತೆಗೆ ಸಂಪರ್ಕದಲ್ಲಿರಬೇಕು. ಜನರಿಗೆ ನೆರವಾಗಲು ದಿನದ 24 ಗಂಟೆ ಕಾರ್ಯನಿರ್ವಹಿಸುವ ಸಹಾಯವಾಣಿ ತೆರೆಯಲಾಗಿದೆ ಎಂದು ವಿದೇಶಾಂಗ ಸಚಿವಾಲಯವು ತಿಳಿಸಿದೆ.

ಕಂಪನಿ ಒಡೆತನ: ಮಾರನ್ ಸಹೋದರರ ಭಿನ್ನಮತ ಸ್ಫೋಟ

ಪ್ರಜಾವಾಣಿ ವಾರ್ತೆ

ಚೆನ್ನೈ: ದೇಶದ ಅತಿದೊಡ್ಡ ಟಿಲಿವಿಷನ್ ಜಾಲಗಳಲ್ಲಿ ಒಂದಾಗಿರುವ ಸನ್ ಟಿವಿಯ ಮಾಲೀಕತ್ವಕ್ಕೆ ಸಂಬಂಧಿಸಿ ಮಾರನ್ ಸಹೋದರರ ನಡುವಿನ ಭಿನ್ನಮತ ಸ್ಫೋಟಗೊಂಡಿದೆ.

ಕಂಪನಿಯ ಷೇರುಗಳ ಹಂಚಿಕೆ ವಿಚಾರಕ್ಕೆ ಸಂಬಂಧಿಸಿ, ಡಿಎಂಕೆ ಸಂಸದರೂ ಆಗಿರುವ ದಯಾನಿಧಿ ಮಾರನ್, ತಮ್ಮ ಅಣ್ಣ ಹಾಗೂ ಕಂಪನಿಯ ಮುಖ್ಯಸ್ಥ ಕಲಾನಿಧಿ ಮಾರನ್, ಅವರ ಪತ್ನಿ ಕಾವೇರಿ ಅವರಿಗೆ ನೋಟಿಸ್ ಕಳುಹಿಸಿದ್ದಾರೆ.

ಅಲ್ಲದೆ, ಸನ್ ಟಿವಿ ಕಂಪನಿಯ ಕಾರ್ಯದರ್ಶಿ ರವಿ ರಾಮಮೂರ್ತಿ, ಲೆಕ್ಕಪರಿಶೋಧಕ ಶಿವಸುಬ್ರಮಣಿಯನ್ ಸೇರಿ ಇತರ ಆರು ಜನರಿಗೆ ಜೂನ್ 10ರಂದು ನೋಟಿಸ್ ಕಳುಹಿಸಿದ್ದಾರೆ.

ಬೆದರಿಕೆ: ಅಣ್ಣ ಕಲಾನಿಧಿ ಮಾರನ್ ಅವರು ಹಣ ಅಕ್ರಮ ವರ್ಗಾವಣೆ ದಂಧೆ ನಡೆಸುತ್ತಿ ದ್ದಾರೆ ಎಂಬ ಗಂಭೀರ ಆರೋಪ ಮಾಡಿರುವ ದಯಾನಿಧಿ, ಸನ್ ಗ್ರೂಪ್ ನಡೆಸುವ ವ್ಯವಹಾರಗಳಿಗೆ ಸಂಬಂಧಿಸಿದ ಎಲ್ಲಾ ಪರವಾನಗಿಗಳನ್ನು ತಕ್ಷಣವೇ ರದ್ದು ಮಾಡುವಂತೆ ಮಾಹಿತಿ ಮತ್ತು ಪ್ರಸಾರ ಸಚಿವಾಲಯ,ಆರ್‌ಎನ್‌ಐ, ಡಿಜಿಸಿಎಗೆ ಕೋರಲಾಗುವುದು ಎಂದು ಬೆದರಿಕೆ ಹಾಕಿದ್ದಾರೆ.

ಆರೋಪ ತಳ್ಳಿಹಾಕಿದ ಸನ್ ಟಿವಿ

ಕಂಪನಿಯ ಮುಖ್ಯಸ್ಥ ಕಲಾನಿಧಿ ಮಾರನ್ ವಿರುದ್ಧ ಅವರ ತಮ್ಮ ದಯಾನಿಧಿ ಮಾಡಿರುವ ಆರೋಪಗಳನ್ನು ಸನ್ ಟಿವಿ ಗ್ರೂಪ್ ತಳ್ಳಿಹಾಕಿದೆ.

‘ದಯಾನಿಧಿ ಅವರು ನೀಡಿರುವ ಈ ನೋಟಿಸ್ 22 ವರ್ಷಗಳ ಹಿಂದಿನದು. ಆಗ, ಸಂಸ್ಥೆಯು ‘ಪ್ರೈವೇಟ್ ಲಿಮಿಟೆಡ್ ಕಂಪನಿ’ಯಾಗಿ ಕಾರ್ಯನಿರ್ವಹಿಸುತ್ತಿತ್ತು’ ಎಂದು ರಾಷ್ಟ್ರೀಯ ಷೇರು ಪೇಟೆಗೆ ಬರೆದಿರುವ ಪತ್ರದಲ್ಲಿ ಸನ್ ಟಿವಿ ಹೇಳಿದೆ.

ಆರೋಪಗಳೇನು?:
- ಪ್ರತಿ ಷೇರಿನ ಬೆಲೆ ₹10ರಂತೆ, ಕಂಪನಿಯ 12 ಲಕ್ಷ ಷೇರುಗಳನ್ನು ಅನುಮೋದನೆ ಇಲ್ಲದೆ ಕಲಾನಿಧಿ ತಮಗೇ ಹಂಚಿಕೆ ಮಾಡಿಕೊಂಡಿದ್ದಾರೆ
- 2003ರ ಸೆಪ್ಟೆಂಬರ್ ನಂತರ ಕಲಾನಿಧಿ ಹಾಗೂ ಅವರ ಪತ್ನಿ ಕಾವೇರಿ ‘ಮೊದಲ ಕಾನೂನುಬಾಹಿರ ಚಟುವಟಿಕೆ’ ಆರಂಭಿಸಿದರು

ಇಳುವರಿ ಹೆಚ್ಚಳವೇ ಬೆಲೆ ಕಡಿಮೆಯಾಗಲು ಕಾರಣ
ಕೆ.ಜಿ ತೊಗರಿ ಬೇಳೆ ₹95

ಪ್ರಜಾವಾಣಿ ವಾರ್ತೆ

ಕಲಬುರಗಿ: ತೊಗರಿ ಕಣಜ ಕಲಬುರಗಿ ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ಹೆಚ್ಚಿನ ಇಳುವರಿ ಬಂದಿರುವುದರ ಜೊತೆಗೆ ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿಯೂ ಉತ್ಪಾದನೆ ಹೆಚ್ಚಿದ ಪರಿಣಾಮ ತೊಗರಿ ಬೇಳೆಯ ಬೆಲೆಯಲ್ಲಿ ಭಾರಿ ಇಳಿಕೆಯಾಗಿದೆ. ಮೂರ್ನಾಲ್ಕು ತಿಂಗಳ ಹಿಂದೆ ಪ್ರತಿ ಕೆ.ಜಿಗೆ ₹120 ಇದ್ದ ತೊಗರಿ ಬೇಳೆ ದರ ಈಗ ₹95ಕ್ಕೆ ಇಳಿಕೆ ಕಂಡಿದೆ.

ಇದರಿಂದಾಗಿ ಕೈಗೆಟಕುವ ದರದಲ್ಲಿ ಗ್ರಾಹಕರು ತೊಗರಿ ಬೇಳೆ ಖರೀದಿಸಲು ಸಾಧ್ಯವಾಗುತ್ತಿದೆ. ಆದರೆ, ಕಳೆದ ವರ್ಷ ಕ್ವಿಂಟಲ್‌ಗೆ ₹12 ಸಾವಿರಕ್ಕೆ ಏರಿಕೆ ಕಂಡಿದ್ದ ತೊಗರಿ ದರ ಈ ಬಾರಿ ₹6,500ರಿಂದ ₹7 ಸಾವಿರ ಆಸುಪಾಸಿನಲ್ಲಿರುವುದರಿಂದ ರೈತರಿಗೆ ನಷ್ಟವಾಗುತ್ತಿದೆ.

ಕಳೆದ ವರ್ಷ ನೆಟೆ ರೋಗ ಬಂದಿದ್ದರಿಂದ ತೊಗರಿ ಉತ್ಪಾದನೆ ಕುಸಿದಿತ್ತು. ಈ ಬಾರಿ ಉತ್ತಮ ಇಳುವರಿ ಬಂದಿದ್ದರಿಂದ ದಾಲ್ ಮಿಲ್‌ನವರು ಪ್ರತಿ ಕ್ವಿಂಟಲ್‌ಗೆ ₹6,300ರಂತೆ ತೊಗರಿ ಖರೀದಿ ಮಾಡಿದ್ದಾರೆ. ಹೀಗಾಗಿ, ತೊಗರಿ ಬೇಳೆ ದರವೂ ಇಳಿಕೆಯಾಗಿದೆ.

ಕೇಂದ್ರ ಸರ್ಕಾರವು ಬರ್ಮಾ, ಘಾನಾ, ದಕ್ಷಿಣ ಆಫ್ರಿಕಾ ದೇಶಗಳಿಂದ ಈ ಬಾರಿ ತೊಗರಿಯನ್ನು ಆಮದು ಮಾಡಿಕೊಂಡಿದ್ದರಿಂದ ತೊಗರಿ ಸಂಗ್ರಹ ಯಥೇಚ್ಛವಾಗಿದೆ. ದಾಲ್ ಮಿಲ್‌ಗಳು ಹೆಚ್ಚಿನ ಪ್ರಮಾಣದಲ್ಲಿ ತೊಗರಿ ಬೇಳೆಯನ್ನು ಉತ್ಪಾದನೆ ಮಾಡಿವೆ ಎನ್ನುತ್ತಾರೆ ವ್ಯಾಪಾರಿಗಳು.

‘ಈ ಬಾರಿ ಕಲಬುರಗಿ, ವಿಜಯಪುರ ಜಿಲ್ಲೆ ಹಾಗೂ ಪಕ್ಕದ ಆಂಧ್ರಪ್ರದೇಶ, ತೆಲಂಗಾಣದಲ್ಲೂ ವ್ಯಾಪಕವಾಗಿ ತೊಗರಿ ಬೆಳೆದಿದ್ದಾರೆ. ಇಳುವರಿ ಉತ್ತಮವಾಗಿ ಬಂದಿದೆಯಾದರೂ ತೊಗರಿ ಗುಣಮಟ್ಟ ಕಡಿಮೆ ಇದೆ. ಹೀಗಾಗಿ, ಕ್ವಿಂಟಲ್‌ಗೆ ಸರಾಸರಿ ₹6,300ರಂತೆ ತೊಗರಿ ಖರೀದಿ ಮಾಡಿದ್ದೇವೆ. ₹9,200ರಿಂದ ₹10 ಸಾವಿರದವರೆಗೆ ಪ್ರತಿ ಕ್ವಿಂಟಲ್ ತೊಗರಿ ಬೇಳೆಯನ್ನು ಮಾರಾಟ ಮಾಡುತ್ತಿದ್ದೇವೆ’ ಎಂದು ಗುಲಬರ್ಗಾ ದಾಲ್ ಮಿಲ್ ಅಸೋಸಿಯೇಷನ್ ಅಧ್ಯಕ್ಷ ಚಂದ್ರಶೇಖರ ಕೋಬಾಳ ಮಾಹಿತಿ ನೀಡಿದರು.

‘ಮೂರ್ನಾಲ್ಕು ತಿಂಗಳ ಹಿಂದೆ ಪ್ರತಿ ಕೆ.ಜಿಗೆ ₹120 ಇದ್ದ ತೊಗರಿ ಬೇಳೆ ದರವು ಈಗ ₹95ರಿಂದ ₹100ರಂತೆ ಮಾರಾಟವಾಗುತ್ತಿದೆ. ಒಂದು ತಿಂಗಳ ಬಳಿಕ ಮತ್ತೆ ಕೊಂಚ ದರ ಏರಿಕೆಯಾಗಬಹುದು’ ಎನ್ನುತ್ತಾರೆ ಕಲಬುರಗಿಯ ಗಂಜ್ ಪ್ರದೇಶದ ಕಿರಾಣಿ ವ್ಯಾಪಾರಿ ರವಿಶಂಕರ ಜಮಾದಾರಖಾನಿ.

2024ರ ಜುಲೈನಲ್ಲಿ ಪ್ರತಿ ಕೆ.ಜಿ ತೊಗರಿ ಬೇಳೆ ದರವು ₹180ಕ್ಕೆ ತಲುಪಿತ್ತು.



ಕೋಚಿಂಗ್ ಕೇಂದ್ರಗಳ ಪರಿಶೀಲನೆ: ಸಮಿತಿ ರಚನೆ

ನವದೆಹಲಿ (ಪಿಟಿಐ): ಕೋಚಿಂಗ್ ಕೇಂದ್ರಗಳ ಬಗೆಗಿನ ದೂರುಗಳು, ಅಲ್ಲಿನ ಮೂಲಭೂತ ಸಮಸ್ಯೆಗಳು, ‘ಡಮ್ಮಿ ಸ್ಕೂಲ್’ (ನೆಪಮಾತ್ರ ಶಾಲೆ)ಗಳ ಉದಯ, ಪ್ರವೇಶ ಪರೀಕ್ಷೆಗಳ ನ್ಯಾಯೋಚಿತತೆ ಮತ್ತು ಪರಿಣಾಮದ ಕುರಿತು ಪರಿಶೀಲಿಸಲು ಕೇಂದ್ರ ಶಿಕ್ಷಣ ಸಚಿವಾಲಯವು ಒಂಬತ್ತು ಸದಸ್ಯರ ಸಮಿತಿ ರಚಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ವಿನೀತ್ ಜೋಶಿ ನೇತೃತ್ವದಲ್ಲಿ ಸಮಿತಿ ಕಾರ್ಯ ನಿರ್ವಹಿಸಲಿದೆ. ಸಿಬಿಎಸ್ಇ ಅಧ್ಯಕ್ಷರು, ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣ ಇಲಾಖೆಯ ಜಂಟಿ ಕಾರ್ಯದರ್ಶಿಗಳು, ಐಐಟಿ ಮದ್ರಾಸ್, ಎನ್ಐಟಿ ತಿರುಚ್ಚಿ, ಐಐಟಿ ಕಾನ್ಪುರ, ಎನ್‌ಸಿಇಆರ್‌ಟಿ ಪ್ರತಿನಿಧಿಗಳು ಹಾಗೂ ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ ಮತ್ತು ಖಾಸಗಿ ಶಾಲೆಯ ತಲಾ ಒಬ್ಬರು ಪ್ರಾಂಶುಪಾಲರು ಸಮಿತಿಯ ಸದಸ್ಯರಾಗಿರುತ್ತಾರೆ.

ಯೋಗ: ಮನುಕುಲದ ಬದುಕಿನ ದಾರಿ

● ನವೀನ ಗಂಗೋತ್ರಿ

ಬದುಕನ್ನು ಹೇಗೆ ಬದುಕಬೇಕು ಎನ್ನುವ ಕುರಿತಾಗಿ ಮನುಕುಲದ ಬೇರೆ ಬೇರೆ ನಾಗರಿಕತೆಗಳು ತಮ್ಮದೇ ಆದ ಚಿಂತನೆಗಳನ್ನು ಬೆಳೆಸಿಕೊಂಡವು. ಆದರೆ ಭೌತಿಕ ಮತ್ತು ಸಾಂಸ್ಕೃತಿಕ ದಾಳಿಗಳಿಂದಾಗಿ ಬಹುತೇಕ ಮಾನವ ಸಮುದಾಯಗಳು ತಮ್ಮ ಪ್ರಾಚೀನ ಚಿಂತನೆಗಳನ್ನು ಮರೆಯುವಂತಾಯಿತು. ಭಾರತದ ಭಾಗ್ಯವೆಂದರೆ, ನಮ್ಮ ಮೇಲೆ ನಡೆದ ಎಲ್ಲ ಬಗೆಯ ದಾಳಿಗಳ ಹೊರತಾಗಿಯೂ ಈ ಮಣ್ಣಿನ ಮಹಿಮೆಯೋ ಎಂಬಂತೆ ಪ್ರಾಚೀನ ಕಾಲದ ಚಿಂತನೆಗಳು ಉಳಿದುಕೊಂಡು ಬಂದಿವೆ ಎಂಬುದು. ಅವುಗಳಲ್ಲಿ ಕೆಲವಂತೂ ನಾವು ಬದುಕಿರುವ ಈ ಕಾಲದಲ್ಲಿ ಇನ್ನಷ್ಟು ಹೊಳಪನ್ನು ಪಡೆದುಕೊಂಡು ಪ್ರವರ್ಧಮಾನಕ್ಕೆ ಬರುತ್ತಿವೆ. ಅದರಲ್ಲಿ ಯೋಗಶಾಸ್ತ್ರವೂ ಸೇರಿದೆ.

ಭಾರತದ ನಾನಾ ಪರಂಪರೆಗಳಲ್ಲಿ ಪ್ರಚುರವಾಗಿದ್ದ ಚಿಂತನೆಗಳನ್ನೆಲ್ಲ ಒಟ್ಟಂದದಲ್ಲಿ ಸೇರಿಸಿ ಯೋಗಸೂತ್ರಗಳ ರೂಪದಲ್ಲಿ ಕೊಡಮಾಡಿದವರು ಪತಂಜಲಿ ಮಹರ್ಷಿಗಳು. ಸಾಮಾನ್ಯ ಶಕಪೂರ್ವದ ಮೊದಲನೆಯ ಶತಮಾನವು ಇವರ ಕಾಲವಾಗಿದ್ದಿರಬಹುದೆಂದು ಇತಿಹಾಸಕಾರರು ಗುರುತಿಸುತ್ತಾರೆ. ಅಲ್ಲಿಂದಾಚೆಗೆ ಯೋಗವು ನಮ್ಮ ಆರು ಆಸ್ತಿಕ ದರ್ಶನಗಳ ಸಾಲಿನಲ್ಲಿ ಒಂದಾಗಿ ಗುರುತಾಗುತ್ತದೆ. ಪತಂಜಲಿ ಮಹರ್ಷಿಗಳು ಪ್ರಸ್ತಾವಿಸಿದ ನೂರತೊಂಬತ್ತಾರು ಸೂತ್ರಗಳಿರುವ ಈ ಯೋಗಶಾಸ್ತ್ರದಲ್ಲಿ ಮುಖ್ಯವಾಗಿ ಎಂಟು ಅಂಗಗಳು ಇರುವುದರಿಂದ ಅದು ‘ಅಷ್ಟಾಂಗಯೋಗ’ ಎನ್ನಿಸಿಕೊಳ್ಳುತ್ತದೆ. ಎಲ್ಲ ದರ್ಶನಗಳಂತೆ ಯೋಗದರ್ಶನದ ಉದ್ದೇಶವೂ ಮೋಕ್ಷವೇ. ಇಲ್ಲಿ ಮೋಕ್ಷಕ್ಕೆ ಸಂವಾದಿಯಾಗಿ ಬರುವಂಥದು ಚಿತ್ತವೃತ್ತಿ ನಿರೋಧದ ಮೂಲಕ ಗಳಿಸಲಾಗುವ ‘ಸಮಾಧಿ’ ಎಂಬ ಸ್ಥಿತಿ. ನಮಗೆ ಇಂದು ಯೋಗ ಎಂದಾಕ್ಷಣ ಮನಸ್ಸಿಗೆ ಬರುವ ಆಸನ, ಪ್ರಾಣಾಯಾಮಗಳೆಲ್ಲ ಸಮಾಧಿಯೆಂಬ ಗುರಿಯ ಸಾಧನೆಗೆ ಒತ್ತಾಸೆಯಾಗಿ ಬರುವಂಥ ಉಪಾಂಗಗಳು.

ನಾವು ಬದುಕಿರುವ ಈ ಕಾಲದಲ್ಲಿ ಮೋಕ್ಷ, ಸಮಾಧಿ, ಆತ್ಯಂತಿಕ ದುಃಖನಿವೃತ್ತಿ, ನಿರ್ವಾಣ ಎಂಬ ಕಾರಣಗಳಿಗೆ ಅಲ್ಲದೆ ಒಳ್ಳೆಯ ಬದುಕಿನ ಮಾದರಿಗಾಗಿ ನಾವು ಯೋಗವೇ ಮೊದಲಾದ ದರ್ಶನಗಳನ್ನು ಎದುರುನೋಡುತ್ತೇವೆ. ಅಂದರೆ ನಮಗೆ ಯೋಗವು ಇವತ್ತಿಗೆ ಒದಗಿಬರುತ್ತಿರುವುದು ಉತ್ತಮ ಗುಣಮಟ್ಟದ ಬದುಕಿನ ಹಾದಿಯ ಕೈದೀವಿಗೆಯಾಗಿ. ಇರುವಷ್ಟು ಬದುಕಿನ ಶಕ್ತಿಯನ್ನು ಕೆಲವೇ ಕಾಲದಲ್ಲಿ ವ್ಯಯಿಸಿ ಉಳಿದ ಬದುಕನ್ನು ನಿಸ್ಸಾರವಾಗಿ ಬದುಕುವುದಕ್ಕಿಂತ, ಪ್ರಕೃತಿಯು ಕೊಡಮಾಡಿರುವ ಶಕ್ತಿಯನ್ನು ನಿಯಮಿತವಾಗಿ ಬಳಸುತ್ತ, ಬೆಳೆಸುತ್ತ ಒಂದು ಸಹಜ, ಶುದ್ಧ, ಶಾಂತ ಬದುಕನ್ನು ಸಾಧ್ಯಮಾಡಿಕೊಳ್ಳುವುದು ಹೇಗೆ ಎನ್ನುವುದಕ್ಕೆ ಯೋಗದಲ್ಲಿ ಉತ್ತರವಿದೆ. ಯೋಗ ಎನ್ನುವುದು ಬರಿಯ ಆಸನ ಪ್ರಾಣಾಯಾಮ ಧ್ಯಾನವಷ್ಟೇ ಅಲ್ಲ; ಅದೊಂದು ದರ್ಶನ; ಎಂದರೆ ಕಾಣ್ಕೆ. ಅದೊಂದು ಬದುಕಿನ ಮಾರ್ಗ. ಸರಳವಾಗಿ ಹೇಳಬೇಕೆಂದರೆ ಬೇಕಾಬಿಟ್ಟಿ ಬದುಕಿ ಮತ್ತೆ ಬೆಳಿಗ್ಗೆ ಎದ್ದು ಯೋಗಾಸನ ಪ್ರಾಣಾಯಾಮದ ಮೂಲಕ ಎಲ್ಲವನ್ನೂ ಸರಿಮಾಡಿಕೊಳ್ಳುತ್ತೇನೆ ಎಂಬುದು ಯೋಗದ ದೃಷ್ಟಿ ಅಲ್ಲ. ಹಾಗಾಗಿ ಜಿಮ್, ವರ್ಕೌಟ್, ಫಿಟ್ನೆಸ್ ಪ್ರಾಕ್ಟೀಸ್ ಇತ್ಯಾದಿಗಳನ್ನು ನೋಡುವಂತೆ ಯೋಗವನ್ನು ನೋಡಲಾಗದು.

ಅನೂಚಾನವಾಗಿ, ಸಣ್ಣ ಪ್ರಮಾಣದಲ್ಲಿಯೇ ಆದರೂ ನಿಯಮಿತವಾಗಿ ರೂಢಿಸಿಕೊಂಡು ಬಂದಿರುವ ಆಸನ–ಪ್ರಾಣಾಯಾಮಗಳು ತಪಸ್ಸಿನಂತೆಯೇ ಸರಿ. ಅವಕ್ಕೆ ಬದುಕಿಗೊಂದು ಶ್ರುತಿಹಿಡಿದು ಲಯ ತಪ್ಪದಂತೆ ಮುನ್ನಡೆಸುವ ಶಕ್ತಿ ಇದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ನಿಯಮಿತತೆ ಮತ್ತು ಸಂಯಮ ಇವೆರಡು ಯೋಗಜೀವನದ ಆದ್ಯ ತತ್ತ್ವಗಳು.

ಯೋಗವೆಂದರೆ ಆಸನ–ಪ್ರಾಣಾಯಾಮಗಳಷ್ಟೇ ಅಲ್ಲದೆ, ಅಥವಾ ಎಂಟು ಅಂಗಗಳಿರುವ ಯೋಗಶಾಸ್ತ್ರವಷ್ಟೇ ಅಲ್ಲದೆ ಅದು ಭಾರತವು ಸಾಕ್ಷಾತ್ಕರಿಸಿಕೊಂಡಿರುವ ಒಂದು ಜೀವನದೃಷ್ಟಿಯಾಗಿದೆ. ಯೋಗವೆನ್ನುವ ಪದವನ್ನು ನಾನಾ ಶಾಸ್ತ್ರಗಳು ಬಳಸಿಕೊಂಡಿವೆ. ಹೆಚ್ಚೇಕೆ, ಭಗವಾನ್ ಶ್ರೀಕೃಷ್ಣನ ಗೀತೋಪದೇಶವೆಲ್ಲವೂ ಯೋಗಮಯವೇ. ಗೀತೆಯೇ ಹೇಳುವಂತೆ ನಾವು ಕೈಗೆತ್ತಿಕೊಂಡ ಕಾರ್ಯವನ್ನು ಅತ್ಯಂತ ಕುಶಲವಾಗಿ ನಿರ್ವಹಿಸುವುದು ಯೋಗದ ಒಂದು ನಿರ್ವಚನ. ಭಗವಾನ್ ಶ್ರೀಕೃಷ್ಣನು ಸ್ವಯಂ ಯೋಗೀಶ್ವರನೂ ಹೌದು.

ಜೂನ್ 21ರಂದು ಪ್ರತಿವರ್ಷ ಹಮ್ಮಿಕೊಳ್ಳಲಾಗುವ ಅಂತಾರಾಷ್ಟ್ರೀಯ ಯೋಗದಿನದಂದು ಯೋಗದ ಕುರಿತು ಆಸನಕ್ಕಿಂತ ಹೊರತಾದ ಅನುಸಂಧಾನ ನಮಗೆಲ್ಲ ಸಾಧ್ಯವಾದರೆ ಅದು ಯೋಗದಿನಾಚರಣೆಯ ಸಾರ್ಥಕತೆಯೇ ಹೌದು.



ಅಂತರರಾಷ್ಟ್ರೀಯ ಯೋಗ ದಿನ ಇಂದು



ಯಾರ ಮುಡಿಗೆ ಸಿನಿ ಸಮ್ಮಾನದ ಕಿರೀಟ?

ಅತ್ಯುತ್ತಮ ನಟಿ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಮೂರನೇ ಆವೃತ್ತಿಯ ಸಮಾರಂಭ ಜೂನ್ 27ರಂದು ನಡೆಯಲಿದೆ. 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದೀಗ ‘ಅತ್ಯುತ್ತಮ ನಟಿ’ ವಿಭಾಗದಲ್ಲಿ ನಾಮನಿರ್ದೇಶನಗೊಂಡವರನ್ನು ಪರಿಚಯಿಸುವ ಸಮಯ. ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ. https://www.prajavani.net/cinesamman/season3




ಶರಣಮ್ಮ ಚೆಟ್ಟಿ

‘ಶಿವಮ್ಮ ಯರೇಹಂಚಿನಾಳ’ ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ನಟ ರಿಷಬ್ ಶೆಟ್ಟಿ ನಿರ್ಮಾಣದ, ಜೈಶಂಕರ್ ಆರ್ಯರ್ ನಿರ್ದೇಶನದ ಚಿತ್ರವಿದು. ಮೂಲತಃ ಕೊಪ್ಪಳದ ಯರೇಹಂಚಿನಾಳ ಗ್ರಾಮದವರಾದ ಶರಣಮ್ಮ ಹೊಲ-ಮನೆ ಕೆಲಸ ಮಾಡಿಕೊಂಡು ಇರುವವರು. ನಟನೆಯ ಯಾವ ಅನುಭವವೂ ಇಲ್ಲದ ಇವರಿಗೆ ತರಬೇತಿ ನೀಡಿ ಸಿನಿಮಾಗೆ ಸಜ್ಜುಗೊಳಿಸಿದವರು ಅದೇ ಊರಿನ ಜೈಶಂಕರ್. ಸೊಗಸಾಗಿ ಮಾತನಾಡುವ ಕಲೆ ಹೊಂದಿರುವ ಶರಣಮ್ಮ ಅವರಲ್ಲಿ ನಾಯಕತ್ವದ ಗುಣವಿದೆ. ಊರಿನಲ್ಲಿ ‘ಶಿವಮ್ಮ’ನ ಪಾತ್ರಕ್ಕೆ ಯಾರನ್ನೇ ಕೇಳಿದರೂ ಜನ ಶರಣಮ್ಮ ಅವರತ್ತ ಬೊಟ್ಟು ಮಾಡುತ್ತಿದ್ದರು. ಹೀಗೆ ಶರಣಮ್ಮ ಅವರಲ್ಲಿ ಜೈಶಂಕರ್ ‘ಶಿವಮ್ಮ’ನನ್ನು ಕಂಡರು.



ಅಂಕಿತಾ ಅಮರ್

‘ಇಬ್ಬನಿ ತಬ್ಬಿದ ಇಳೆಯಲಿ’ ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಮೈಸೂರು ಮೂಲದ ಇವರು ಕಿರುತೆರೆ ಮೂಲಕ ಬೆಳ್ಳಿತೆರೆಗೆ ಹೆಜ್ಜೆ ಇಟ್ಟವರು. ‘ತುಂಟ’ ಸಿನಿಮಾದಲ್ಲಿ ಬಾಲನಟಿಯಾಗಿ, ‘ಪುಟ್ಟಗೌರಿ ಮದುವೆ’ ಧಾರಾವಾಹಿಯ ಮೂಲಕ ಕಿರುತೆರೆಗೆ ಬಂದವರು. ‘ನಮ್ಮನೆ ಯುವರಾಣಿ’ ಇವರ ಬಣ್ಣದ ಬದುಕಿಗೆ ತಿರುವು ನೀಡಿದ ಧಾರಾವಾಹಿ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ನಡೆಸಿ-ಕೊಡುತ್ತಿದ್ದ ‘ಎದೆ ತುಂಬಿ ಹಾಡುವೆನು’ ರಿಯಾಲಿಟಿ ಶೋ ನಿರೂಪಕಿಯಾಗಿಯೂ ಇವರು ಕಾರ್ಯನಿರ್ವಹಿಸಿದ್ದಾರೆ. ‘ಇಬ್ಬನಿ ತಬ್ಬಿದ ಇಳೆಯಲಿ’ ಸಿನಿಮಾ ಮೂಲಕ ಕಮರ್ಷಿಯಲ್ ಸಿನಿಪಯಣ ಆರಂಭಿಸಿದ ಇವರು ಚೊಚ್ಚಲ ಚಿತ್ರದಲ್ಲೇ ತಮ್ಮ ನಟನೆಯಿಂದ ಪ್ರೇಕ್ಷಕರ ಮೆಚ್ಚುಗೆ ಪಡೆದವರು. ಇವರ ಸಿನಿಬ್ಯಾಂಕ್‌ನಲ್ಲಿ ‘ಜಸ್ಟ್ ಮ್ಯಾರೀಡ್’, ‘ಸತ್ಯ ಸನ್ ಆಫ್ ಹರಿಶ್ಚಂದ್ರ’ ಹಾಗೂ ‘ಭಾರ್ಗವ’ ಸಿನಿಮಾವಿದೆ.



ಸ್ವತಿಷ್ಠ ಕೃಷ್ಣನ್

‘ಒಂದು ಸರಳ ಪ್ರೇಮಕಥೆ’ ಸಿನಿಮಾದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನ-ಗೊಂಡಿದ್ದಾರೆ. ಚೆನ್ನೈನಲ್ಲಿ ಹುಟ್ಟಿ ಬೆಳೆದ ಇವರು ಪತ್ರಕರ್ತೆಯಾಗಿ ಕೆಲಸ ಮಾಡಿದ ಅನುಭವವಿರುವವರು. ಇವರ ಪೋಷಕರು ಕರ್ನಾಟಕ ಮೂಲದವರು. ತಮಿಳಿನಲ್ಲಿ ನಾಲ್ಕೈದು ಸಿನಿಮಾಗಳನ್ನು ಮಾಡಿದ್ದ ಇವರಿಗೆ ಸಿನಿಪಯಣದಲ್ಲಿ ದೊಡ್ಡ ತಿರುವು ನೀಡಿದ್ದು ಕಮಲ್ ಹಾಸನ್ ನಟನೆಯ ಹಿಟ್ ಸಿನಿಮಾ ‘ವಿಕ್ರಮ್’. ಸಿಂಪಲ್ ಸುನಿ ನಿರ್ದೇಶನದ ‘ಒಂದು ಸರಳ ಪ್ರೇಮ ಕಥೆ’ ಇವರ ಚೊಚ್ಚಲ ಕನ್ನಡ ಸಿನಿಮಾ. ಈ ಸಿನಿಮಾದಲ್ಲಿ ಗಾಯಕಿಯ ಪಾತ್ರದಲ್ಲಿ ಕಾಣಿಸಿಕೊಂಡ ಸ್ವತಿಷ್ಠ ತಮ್ಮ ನಟನೆಯಿಂದ ಗಮನಸೆಳೆದಿದ್ದರು. ಮ್ಯೂಸಿಕಲ್ ಲವ್‌ಸ್ಟೋರಿ ಸಬ್ಜೆಕ್ಟ್ ಒಳಗೊಂಡ ಈ ಚಿತ್ರ ಪ್ರೇಕ್ಷಕರ ಮೆಚ್ಚುಗೆ ಪಡೆದಿತ್ತು.




ರೋಶಿನಿ ಪ್ರಕಾಶ್

‘ಮರ್ಫಿ’ ಚಿತ್ರದಲ್ಲಿನ ನಟನೆಗಾಗಿ ಇವರು ನಾಮ-ನಿರ್ದೇಶನಗೊಂಡಿದ್ದಾರೆ. ಮೈಸೂರಿನ ಇವರು ಎಂಜಿನಿಯರಿಂಗ್ ಪದವೀಧರೆ. 2016ರಲ್ಲಿ ತೆರೆಕಂಡ ‘ಸಪ್ತಗಿರಿ ಎಕ್ಸ್‌ಪ್ರೆಸ್’ ಸಿನಿಮಾದ ಮೂಲಕ ಚಂದನವನಕ್ಕೆ ಕಾಲಿಟ್ಟರು. ಇವರ ಎರಡನೇ ಸಿನಿಮಾ ನೀನಾಸಂ ಸತೀಶ್ ನಾಯಕರಾಗಿ ನಟಿಸಿದ್ದ ‘ಟೈಗರ್ ಗಲ್ಲಿ’. ರೋಶಿನಿ ಅವರ ಸಿನಿಪಯಣಕ್ಕೆ ತಿರುವು ನೀಡಿದ್ದು ಹೇಮಂತ್ ಎಂ.ರಾವ್ ನಿರ್ದೇಶನದ ‘ಕವಲುದಾರಿ’. ಟೈಂ ಟ್ರಾವೆಲಿಂಗ್ ಪ್ರೇಮಕಥೆಯ ‘ಮರ್ಫಿ’ಯಲ್ಲಿ ಜನನಿ ಎಂಬ ಪಾತ್ರದಲ್ಲಿ ಇವರು ನಟಿಸಿದ್ದರು. ಕನ್ನಡದಲ್ಲಷ್ಟೇ ಅಲ್ಲದೆ ತಮಿಳು ಹಾಗೂ ತೆಲುಗು ಚಿತ್ರರಂಗದಲ್ಲೂ ಇವರು ಸಕ್ರಿಯರಾಗಿದ್ದಾರೆ




ಮಮತಾ ರಾಹುತ್

‘ತಾರಿಣಿ’ ಚಿತ್ರಕ್ಕಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಇವರು ಏಳು ತಿಂಗಳ ಗರ್ಭಿಣಿಯಾಗಿರುವಾಗ ನಟಿಸಿರುವ ಸಿನಿಮಾವಿದು. ಭ್ರೂಣ ಹತ್ಯೆ ಕುರಿತು ಸಂದೇಶ ಸಾರುವ ಪಾತ್ರ ನಿಭಾಯಿಸಿದ್ದಾರೆ. 2005ರಲ್ಲಿ ಮಕ್ಕಳ ಸಿನಿಮಾ ಮೂಲಕ ಚಿತ್ರೋದ್ಯ-ಮಕ್ಕೆ ಬಂದ ಇವರು ಹಾಸ್ಯನಟಿಯಾಗಿ ಗುರುತಿಸಿಕೊಂಡರು. ‘ಗಂಗೆ ಬಾರೆ ತುಂಗೆ ಬಾರೆ’ ಸೇರಿದಂತೆ ಸಾಕಷ್ಟು ಸಿನಿಮಾಗಳಲ್ಲಿ ಕನ್ನಡದ ಪ್ರಮುಖ ಹಾಸ್ಯ ನಟರ ಜತೆ ನಟಿಸಿದ್ದಾರೆ. ‘ಕಾಲಿಂಗ್ ಬೆಲ್’ ಎಂಬ ತೆಲುಗು ಸಿನಿಮಾ ಮೂಲಕ ನಾಯಕಿಯಾದರು. ‘ಗೂಳಿಹಟ್ಟಿ’, ‘ಅಪ್ಪರೆ’ ಮೊದಲಾದ ಕನ್ನಡ ಸಿನಿಮಾಗಳಲ್ಲಿಯೂ ನಾಯಕಿಯಾಗಿ ಕಾಣಿಸಿಕೊಂಡರು. ಸದ್ಯ ಇವರ ‘ಮುರುಗ ಸನ್ ಆಫ್ ಕಾನೂನು’ ಚಿತ್ರ ಬಿಡುಗಡೆಗೆ ಸಿದ್ಧವಿದೆ.



ನಿಶಾ ರವಿಕೃಷ್ಣನ್

‘ಅಂಶು’ ಚಿತ್ರದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂಡಿದ್ದಾರೆ. ಖಾಸಗಿ ವಾಹಿನಿಯಲ್ಲಿ ನಿರೂಪಕಿಯಾಗಿ ಮನರಂಜನೆ ಕ್ಷೇತ್ರಕ್ಕೆ ಕಾಲಿಟ್ಟ ಇವರು ಗುರುತಿಸಿಕೊಂಡಿದ್ದು ಕಿರುತೆರೆಯಿಂದ. 2018ರಲ್ಲಿ ‘ಸರ್ವಮಂಗಳ ಮಾಂಗಲ್ಯ’ ಧಾರಾವಾಹಿಯಲ್ಲಿ ಕಾಣಿಸಿಕೊಂಡರು. ಬಳಿಕ ‘ಗಟ್ಟಿಮೇಳ’ ಧಾರಾವಾಹಿ ಇವರಿಗೆ ಜನಪ್ರಿಯತೆ ತಂದುಕೊಟ್ಟಿತು. ಸದ್ಯ ‘ಅಣ್ಣಯ್ಯ’ ಧಾರಾವಾಹಿಯಲ್ಲಿ ನಟಿಸುತ್ತಿದ್ದಾರೆ. ‘ಅಂದೊಂದಿತ್ತು ಕಾಲ’ ಇವರ ನಟನೆಯ ಮೊದಲ ಚಿತ್ರ. ಇದು ಇನ್ನಷ್ಟೇ ಬಿಡುಗಡೆಯಾಗಬೇಕಿದೆ.



ಮಹಾಲಕ್ಷ್ಮಿ ಟಿ.ಆರ್.

‘ಕುಬುಸ’ ಚಿತ್ರದಲ್ಲಿನ ನಟನೆಗಾಗಿ ಇವರು ನಾಮನಿರ್ದೇಶನಗೊಂ-ಡಿದ್ದಾರೆ. ಚಿಕ್ಕ ವಯಸ್ಸಿನಿಂದಲೂ ಭರತನಾಟ್ಯ ಕಲಾವಿದೆಯಾಗಿರುವ ಇವರು ಪಾಶ್ಚಾತ್ಯ ಶೈಲಿಯ ನೃತ್ಯಗಾರ್ತಿ ಕೂಡ. ಭರತನಾಟ್ಯದಲ್ಲಿ ಸ್ನಾತಕೋತ್ತರ ಪದವಿಯನ್ನೂ ಪೂರೈಸಿದ್ದಾರೆ. ಯಕ್ಷಗಾನ, ಮೋಹಿನಿಯಾಟ್ಟಂ ಮುಂತಾದ ನೃತ್ಯ ಪ್ರಕಾರಗಳನ್ನು ಕಲಿತಿದ್ದಾರೆ. 2010 ರಿಂದ ರಂಗಭೂಮಿಯಲ್ಲಿ ಸಕ್ರಿಯ. ‘ರಾಗ ಭೈರವಿ’ ಚಿತ್ರದಿಂದ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟ ಇವರು ಈಗಾಗಲೇ ಸಾಕಷ್ಟು ಸಿನಿಮಾಗಳಲ್ಲಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ತೆಲುಗು, ತಮಿಳು ಚಿತ್ರಗಳಲ್ಲಿಯೂ ನಟಿಸಿದ್ದಾರೆ.

ಚಿಟಿಕೆ ಸುದ್ದಿ

ಉತ್ತಪ್ಪ ಹ್ಯಾಟ್ರಿಕ್ ಕೊಂಕಣ್‌ಗೆ ಗೆಲುವು

ಬೆಂಗಳೂರು: ಉತ್ತಪ್ಪ ಎಸ್.ಕೆ. ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಕೊಂಕಣ್ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ 5–0ಯಿಂದ ಜೆಸ್ಪೋರ್ಟ್ಸ್ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಉತ್ತಪ್ಪ (2ನೇ, 40ನೇ ಮತ್ತು 56ನೇ) ಮೂರು ಗೋಲು ಗಳಿಸಿದರು. ಗೋವಿಂದರಾಜ್ ಎಸ್. (16ನೇ) ಮತ್ತು ಅನೂಪ್ ಆ್ಯಂಟನಿ (23ನೇ) ತಲಾ ಒಂದು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಮಿಸಾಕಾ ಯುನೈಟೆಡ್ ಎಫ್‌ಸಿ ತಂಡವು 14–0ಯಿಂದ ಬಿಎಚ್‌ಇಎಲ್ ಎಫ್‌ಸಿ ತಂಡವನ್ನು ಸೋಲಿಸಿತು.

ಇನ್ನೊಂದು ಪಂದ್ಯದಲ್ಲಿ ಅಗರಂ ಎಫ್‌ಸಿ ತಂಡದ ವಿರುದ್ಧ ಜಾಯಿ ಬ್ರೋಸ್ ಎಫ್‌ಸಿ ತಂಡವು ವಾಕ್‌ಓವರ್ ಪಡೆಯಿತು.

ರಾಮನ್ ತಂಡಕ್ಕೆ ಗೆಲುವು

ಬೆಂಗಳೂರು: ರಾಮನ್ ಸ್ಪೋರ್ಟ್ಸ್ ಅಕಾಡೆಮಿಯು ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್‌ನ ಪಂದ್ಯದಲ್ಲಿ 3–0 ಗೋಲುಗಳಿಂದ ಕ್ರಿಸ್ಟಲ್ ಎಫ್‌ಸಿ ತಂಡವನ್ನು ಸೋಲಿಸಿತು.

ಆಸ್ಟಿನ್ ಟೌನ್‌ನ ನಂದನ್ ಮೈದಾನದಲ್ಲಿ ಶುಕ್ರವಾರ ನಡೆದ ಇತರ ಪಂದ್ಯಗಳಲ್ಲಿ ಬಾಲಹರ್ಕ ತಂಡವು 6–0ಯಿಂದ ಟೆಕ್ನಿಕೊ ಎಫ್‌ಎಫ್ ತಂಡವನ್ನು ಮಣಿಸಿತು. ರೊನಾಲ್ಡೊ ಎಫ್‌ಸಿ ಬೆಂಗಳೂರು ತಂಡವು 1–0ಯಿಂದ ಯಲಹಂಕ ಕ್ಯಾಪ್ ಬಾಯ್ಸ್ ತಂಡವನ್ನು ಸೋಲಿಸಿತು. ಗೋಪಾಲ್ ಎಫ್‌ಸಿ ತಂಡವು ಗೋಲುರಹಿತವಾಗಿ ಗಾರ್ಡನ್ ಸಿಡಿ ಎಫ್‌ಸಿ ತಂಡದೊಂದಿಗೆ ಡ್ರಾ ಸಾಧಿಸಿತು.

ಹಾಕಿ: ಬ್ಲ್ಯೂ ಸ್ಟಾರ್ ಕ್ಲಬ್ ಜಯಭೇರಿ

ಬೆಂಗಳೂರು: ಬ್ಲ್ಯೂಸ್ಟಾರ್ ಹಾಕಿ ಕ್ಲಬ್ ಬಿ ತಂಡವು ಇಲ್ಲಿ ನಡೆಯುತ್ತಿರುವ 94ನೇ ತಿರುವಾಂಕೂರ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಕೆಎಸ್‌ಎಚ್‌ಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶುಕ್ರವಾರ ಬ್ಲ್ಯೂಸ್ಟಾರ್ ತಂಡವು 5–2ರಿಂದ ನವೀನ್ ಹಾಕಿ ಕ್ಲಬ್ ವಿರುದ್ಧ ಜಯಿಸಿತು. ವಿಜೇತ ತಂಡದ ಶ್ರೇಯಸ್ (11ನಿ, 39ನಿ) , ಗಾಡ್ವಿನ್ (44ನಿ, 50ನಿ) ಹಾಗೂ ಮಲ್ಲಿಕಾರ್ಜುನ್ (47ನಿ) ಗೋಲು ಗಳಿಸಿದರು. ನವೀನ್ ಹಾಕಿ ಕ್ಲಬ್ ತಂಡದ ದೀಪಕ್ (9ನಿ ಮತ್ತು 15ನಿ) ಎರಡು ಗೋಲು ಹೊಡೆದರು.

ಭಾರತಕ್ಕೆ ಸಕಾರಾತ್ಮಕ ಫಲಿತಾಂಶ ನಿರೀಕ್ಷೆ

ಪ್ರೊ ಲೀಗ್ ಹಾಕಿ: ಸತತ ಸೋಲುಗಳಿಂದ ಪುರುಷ, ಮಹಿಳಾ ತಂಡಗಳು ಹೈರಾಣು

ಆ್ಯಂಟ್‌ವರ್ಪ್ (ಬೆಲ್ಜಿಯಂ), (ಪಿಟಿಐ): ವಿಶ್ವಕಪ್‌ಗೆ ನೇರ ಟಿಕೆಟ್ ಪಡೆಯುವ ಭಾರತ ತಂಡದ ಕನಸು ನುಚ್ಚುನೂರಾಗಿದೆ. ಎಫ್‌ಐಎಚ್ ಪ್ರೊ ಲೀಗ್ ಹಾಕಿಯ ಯುರೋಪಿನ ಲೆಗ್‌ನಲ್ಲಿ ಸತತ ಆರು ಸೋಲುಗಳನ್ನು ಕಂಡು ಹೈರಾಣಾಗಿರುವ ಭಾರತ ಪುರುಷರ ತಂಡ ಇದೀಗ ಲೆಗ್‌ನಲ್ಲಿ ಉಳಿದ ಎರಡು ಪಂದ್ಯಗಳನ್ನು ಗೆದ್ದು ಸಕಾರಾತ್ಮಕ ರೀತಿಯಲ್ಲಿ ಅಭಿಯಾನ ಅಂತ್ಯಗೊಳಿಸುವ ವಿಶ್ವಾಸದಲ್ಲಿದೆ.

ಭಾರತ ಶನಿವಾರ ಮತ್ತು ಭಾನುವಾರ ನಡೆಯುವ ಪಂದ್ಯಗಳಲ್ಲಿ ವಿಶ್ವದ ಮೂರನೇ ಕ್ರಮಾಂಕದ ಬೆಲ್ಜಿಯಂ ತಂಡವನ್ನು ಎದುರಿಸಲಿದೆ.

ತವರಿನಲ್ಲಿ ಈ ವರ್ಷದ ಆರಂಭದಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಕಾರಣ ಭಾರತ ಪುರುಷರ ತಂಡ ಉತ್ತಮ ನಿರೀಕ್ಷೆಯೊಡನೆ ಯುರೋಪಿಯನ್ ಲೆಗ್ ಪ್ರವಾಸ ಆರಂಭಿಸಿತ್ತು. ಆದರೆ ಈವರೆಗೆ ಪ್ರವಾಸ ದುಃಸ್ವಪ್ನವಾಗಿ ಕಾಡಿದೆ.

ಮೂರನೇ ಸ್ಥಾನದಲ್ಲಿದ್ದ ಭಾರತ ಈ ಲೆಗ್‌ನ ಸತತ ಸೋಲುಗಳಿಂದ ಎಂಟನೇ ಸ್ಥಾನಕ್ಕೆ, ಅಂದರೆ ಕೊನೆಯಿಂದ ಎರಡನೇ ಸ್ಥಾನಕ್ಕೆ ಕುಸಿದಿದೆ.

ಪ್ರೊ ಲೀಗ್‌ನ ವಿಜೇತ ತಂಡ ನೇರವಾಗಿ ವಿಶ್ವಕಪ್‌ಗೆ ಅರ್ಹತೆ ಪಡೆಯುತ್ತದೆ. ಈ ವರ್ಷ ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ಜಂಟಿ ಆತಿಥ್ಯದಲ್ಲಿ ವಿಶ್ವಕಪ್ ನಡೆಯಲಿದೆ.

ಭಾರತ ತಂಡವು ನೆದರ್ಲೆಂಡ್ಸ್‌ಗೆ (1–2, 2–3), ಅರ್ಜೆಂಟೀನಾಕ್ಕೆ (2–3, 1–2) ಮತ್ತು ಆಸ್ಟ್ರೇಲಿಯಾಕ್ಕೆ (2–3, 2–3) ಸೋತಿದೆ.

ಇದರ ಅರ್ಥ ಭಾರತ ತಂಡ ಕಳಪೆಯಾಗಿದೆ ಆಡಿದೆ ಎಂದೇನೂ ಅಲ್ಲ; ಆದರೆ ಕೊನೆಗಳಿಗೆಯಲ್ಲಿ ಎದುರಾಳಿಗಳಿಗೆ ಗೋಲು ಬಿಟ್ಟುಕೊಟ್ಟಿದ್ದು ತುಟ್ಟಿಯಾಗಿದೆ. ಕೊನೆಗಳಿಗೆಯಲ್ಲಿ ಭಾರತದ ರಕ್ಷಣೆಯ ವಿಭಾಗ ಒತ್ತಡಕ್ಕೆ ಒಳಗಾಗಿದೆ.

ಹರ್ಮನ್‌ಪ್ರೀತ್ ಉತ್ತಮ ಪ್ರದರ್ಶನ ನೀಡಿದರೂ, ಅಮಿತ್ ರೋಹಿದಾಸ್ ಮತ್ತು ಸುಮಿತ್ ಒತ್ತಡಕ್ಕೆ ಒಳಗಾಗಿದ್ದು ಎದ್ದುಕಂಡಿದೆ. ಅವರಿಂದ ಗೋಲ್‌ಕೀಪ-ರ್‌ಗಳಾದ ಕೃಷನ್ ಬಹಾದೂರ್ ಪಾಠಕ್ ಮತ್ತು ಸೂರಜ್ ಕರ್ಕೇರಾ ಅವರಿಗೆ ಬೆಂಬಲ ಸಿಗಬೇಕಾಗಿದೆ. ಮುನ್ಪಡೆ ಕೂಡ ದೊರೆತ ಅವಕಾಶಗಳನ್ನು ಸದುಪಯೋ-ಗಪಡಿಸಿಕೊಳ್ಳಬೇಕಾಗಿದೆ. ಪೆನಾಲ್ಟಿ ಕಾರ್ನರ್ ಪರಿವರ್ತನೆ ದರ ಅಷ್ಟೇನೂ ಉತ್ತಮವಾಗಿಲ್ಲ.

ಮುಖ್ಯಾಂಶಗಳು

- ಸತತ ಆರು ಪಂದ್ಯ ಸೋತ ಭಾರತದ ಪುರುಷರ ತಂಡ
- ವಿಶ್ವಕಪ್‌ಗೆ ನೇರ ಟಿಕೆಟ್ ಪಡೆಯುವ ಭಾರತ ತಂಡದ ಕನಸು ಭಗ್ನ
- ಹ್ಯಾಟ್ರಿಕ್ ಪರಾಭವ ಕಂಡ ಸಲೀಮಾ ಟೆಟೆ ಬಳಗ



ಹರ್ಮನ್‌ಪ್ರೀತ್ ಸಿಂಗ್

ಮಹಿಳಾ ತಂಡಕ್ಕೂ ಹಿನ್ನಡೆ

ಭಾರತ ಮಹಿಳಾ ತಂಡವೂ ಯುರೋಪ್ ಲೆಗ್‌ನಲ್ಲಿ ಸತತ ನಾಲ್ಕು ಸೋಲುಗಳನ್ನು ಕಂಡು ಬಸವಳಿದಿದೆ. ಆಸ್ಟ್ರೇಲಿಯಾ ಎದುರು 2–3, 1–2 ಮತ್ತು ಅರ್ಜೆಂಟೀನಾ ಎದುರು 1–4, 0–2 ರಿಂದ ಸೋಲನುಭವಿಸಿದೆ.

ಆದರೆ ಮಹಿಳಾ ತಂಡ ಸೋತರೂ ಆಕ್ರಮಣಕಾರಿಯಾಗಿ ಆಡಿದೆ. ಪೆನಾಲ್ಟಿ ಕಾರ್ನರ್ ಪರಿವರ್ತಿಸುವಲ್ಲಿ ಈ ತಂಡವೂ ಹಿಂದೆಬಿದ್ದಿದೆ.

ಮಹಿಳಾ ತಂಡವೂ ಶನಿವಾರ ಮತ್ತು ಭಾನುವಾರ ಬೆಲ್ಜಿಯಂ ತಂಡವನ್ನು ಎದುರಿಸಲಿದ್ದು, ಈ ಲೆಗ್‌ನಲ್ಲಿ ಮೊದಲ ಜಯದ ತವಕದಲ್ಲಿದೆ.



ಸಲೀಮಾ ಟೆಟೆ

9 ತಂಡಗಳ ಲೀಗ್‌ನಲ್ಲಿ ಈಗ ಭಾರತ ವನಿತೆಯರು ಏಳನೇ ಸ್ಥಾನದಲ್ಲಿದ್ದಾರೆ. ಬರ್ಲಿನ್‌ನಲ್ಲಿ ಚೀನಾ ವಿರುದ್ಧ ಇದೇ 28 ಮತ್ತು 29ರಂದು ಆಡುವ ಮೂಲಕ ಈ ಲೆಗ್ ಕೊನೆಗೊಳಿಸಲಿದ್ದಾರೆ.

ಕೇಂದ್ರ ಕ್ರೀಡಾ ಸಚಿವಾಲಯ ನಿರ್ಧಾರ

ಹಾಕಿ ಆಟಗಾರರಿಗೆ ತಿಂಗಳ ಭತ್ಯೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಶಿಬಿರದಲ್ಲಿರುವ ಹಾಕಿ ಆಟಗಾರರು ಮತ್ತು ಆಟಗಾರ್ತಿಯರಿಗೆ ತಿಂಗಳ ಭತ್ಯೆಯಾಗಿ ₹25,000 ನೀಡಲು ಕ್ರೀಡಾ ಸಚಿವಾಲಯವು ನಿರ್ಧರಿಸಿದೆ.

ಈ ರೀತಿಯ ಭತ್ಯೆಯನ್ನು ನೀಡುವಂತೆ ಹಾಕಿ ಇಂಡಿಯಾ ಕೆಲವು ತಿಂಗಳಿಂದ ಮನವಿ ಮಾಡುತ್ತ ಬಂದಿತ್ತು.

ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಸ್ಕೀಮ್‌ನ (ಟಾಪ್ಸ್) ಡೆವಲಪ್‌ಮೆಂಟಲ್ ಗ್ರೂಪ್‌ನಲ್ಲಿರುವ 80 ಮಂದಿ (40 ಪುರುಷ ಮತ್ತು 40 ಮಹಿಳೆಯರು) ಈ ಭತ್ಯೆಯ ಲಾಭ ಪಡೆಯಲಿದ್ದಾರೆ. ಗುರುವಾರ ಇಲ್ಲಿ ನಡೆದ ಮಿಷನ್ ಒಲಿಂಪಿಕ್ ಸೆಲ್‌ನ ಮಾಸಿಕ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಇದರಿಂದ ಸರ್ಕಾರಕ್ಕೆ ಪ್ರತಿ ತಿಂಗಳು ₹20 ಲಕ್ಷ ವೆಚ್ಚವಾಗಲಿದೆ. ‘ಭತ್ಯೆ ನೀಡುವಂತೆ ಹಾಕಿ ಇಂಡಿಯಾ ಕೆಲ ಸಮಯದಿಂದ ಕೋರಿಕೆ ಸಲ್ಲಿಸಿದ್ದು, ನಾವು ಈ ಮನವಿಗೆ ಸಮ್ಮತಿಸಿದ್ದೇವೆ. ಆಟಗಾರರು ಸಾಕಷ್ಟು ಉತ್ತಮ ಪ್ರದರ್ಶನ ನೀಡಿದ್ದಾರೆ ಮತ್ತು ಯೋಗ್ಯತೆ ಮೇಲೆ ಈ ಭತ್ಯೆ ನೀಡಲಾಗುತ್ತಿದೆ’ ಎಂದು ಕ್ರೀಡಾ ಸಚಿವ ಮನ್ಸುಖ್ ಮಾಡವೀಯ ವರದಿಗಾರರ ಜೊತೆ ಅನೌಪಚಾರಿಕ ಸಂವಾದದಲ್ಲಿ ತಿಳಿಸಿದರು.

ಭತ್ಯೆಗೆ ಅರ್ಹರಾದ ಆಟಗಾರರ ಪಟ್ಟಿಯನ್ನು ಹಾಕಿ ಇಂಡಿಯಾ ಪ್ರತಿ ತಿಂಗಳು ನೀಡಬೇಕಾಗುತ್ತದೆ. ಆಟಗಾರರ ಫಾರ್ಮ್ ಮತ್ತು ಫಿಟ್ನೆಸ್ ಅನ್ನು ಗಣನೆಯಲ್ಲಿಟ್ಟುಕೊಂಡು ಪಟ್ಟಿಯನ್ನು ಸಿದ್ಧ ಪಡಿಸಲಾಗುತ್ತದೆ ಎಂದು ಕ್ರೀಡಾ ಸಚಿವಾಲಯದ ಮೂಲವೊಂದು ತಿಳಿಸಿದೆ.

ಹಾಕಿ ಆಟಗಾರರು ಪ್ರಸ್ತುತ ತಾವು ಉದ್ಯೋಗದಲ್ಲಿರುವ ಇಲಾಖೆ ಮತ್ತು ಸಂಸ್ಥೆಗಳಿಂದ ವೇತನ ಪಡೆಯುತ್ತಿದ್ದಾರೆ. ಹಾಕಿ ಆಟಗಾರರನ್ನು ಗುತ್ತಿಗೆ ವ್ಯವಸ್ಥೆಯಡಿ ತರುವ ಪ್ರಸ್ತಾವ ಕೆಲವು ವರ್ಷಗಳಿಂದ ಚರ್ಚೆಯ ಹಂತದಲ್ಲಿದೆ.

ಆಟಗಾರರ ಆದಾಯದ ಇನ್ನೊಂದು ಮೂಲ– ಒಲಿಂಪಿಕ್ಸ್, ಏಷ್ಯನ್ ಗೇಮ್ಸ್ ಮೊದಲಾದ ದೊಡ್ಡ ಮಟ್ಟದ ಕ್ರೀಡೆಗಳಲ್ಲಿ ನೀಡುವ ಬಹುಮಾನ ಮೊತ್ತದ ಮೂಲಕ ಸಿಗುವ ಹಣ.

ಪುರುಷರ ಹಾಕಿ ತಂಡ ಸತತ ಎರಡು ಒಲಿಂಪಿಕ್ಸ್‌ಗಳಲ್ಲಿ ಕಂಚಿನ ಪದಕ ಗೆದ್ದುಕೊಂಡಿದೆ. ಮಹಿಳಾ ತಂಡ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿತ್ತು.

ಪ್ರತಿಭಾಶೋಧಕ್ಕೆ ಡಿಜಿಟಲ್ ಸ್ಪರ್ಶ

ಪ್ರತಿಭಾಶೋಧ ವ್ಯವಸ್ಥೆ ಬಲಪಡಿಸಲು ಸಚಿವಾಲಯವು ನಿರ್ಧರಿಸಿದ್ದು, ಡಿಜಿಟಲ್ ಸ್ಪರ್ಶ ನೀಡಲು ಮುಂದಾಗಿದೆ. ಭಾರತ ಕ್ರೀಡಾ ಪ್ರಾಧಿಕಾರದ ಮೌಲ್ಯಮಾಪನಕ್ಕೆ ನೆರವಾಗುವ ಉದ್ದೇಶದಿಂದ ಉದಯೋನ್ಮುಖ ಕ್ರೀಡಾಪಟುಗಳು ತಮ್ಮ ಸಾಧನೆಯನ್ನು ಅಪ್ಲೋಡ್ ಮಾಡಬೇಕಾಗುತ್ತದೆ.

‘ಕ್ರೀಡಾಪಟು ಉತ್ತಮ ಎಂದು ಕಂಡುಬಂದಲ್ಲಿ ಅವರನ್ನು ಖೇಲೊ ಇಂಡಿಯಾ ಪ್ರಾದೇಶಿಕ ಕೇಂದ್ರಗಳಿಗೆ ಕರೆಸಿ ಅವರ ಸಾಮರ್ಥ್ಯ ವಿಶ್ಲೇಷಣೆ ಮಾಡಲಾಗುವುದು. ಇದು ಪ್ರತಿಭಾಶೋಧದ ವ್ಯಾಪ್ತಿ ವಿಸ್ತರಿಸಲಿದೆ. ಪ್ರಸ್ತುತ ಪ್ರತಿಭಾಶೋಧ ವ್ಯವಸ್ಥೆಯು ವಯೋವರ್ಗ ಆಧಾರಕ್ಕೆ ಸೀಮಿತಗೊಂಡಿದೆ’ ಎಂದು ಮಾಂಡವೀಯ ತಿಳಿಸಿದರು.

ಆರ್ಚರಿ ಏಷ್ಯಾ ಕಪ್ ಲೆಗ್2: ಭಾರತಕ್ಕೆ ಒಟ್ಟು 9 ಪದಕ

ಸಿಂಗಪುರ (ಪಿಟಿಐ): ಭಾರತದ ಜೂನಿಯರ್ ತಂಡದ ಆರ್ಚರಿ ಪಟುಗಳು ಶುಕ್ರವಾರ ಇಲ್ಲಿ ಮುಕ್ತಾಯಗೊಂಡ ಏಷ್ಯಾ ಕಪ್ ಲೆಗ್2 ಸ್ಪರ್ಧೆಗಳಲ್ಲಿ ಎರಡು ಚಿನ್ನ, ಆರು ಬೆಳ್ಳಿ ಮತ್ತು ಒಂದು ಕಂಚು ಸೇರಿ 9 ಪದಕಗಳನ್ನು ಗೆದ್ದುಕೊಂಡರು.

ಮೇಲ್ನೋಟಕ್ಕೆ ಪದಕಗಳ ಸಂಖ್ಯೆ ಉತ್ತಮ ಎಂದು ಕಾಣಬಹುದಾದರೂ, ಭಾರತದ ಸ್ಪರ್ಧಿಗಳು ನಿರ್ಣಾಯಕ ಘಟ್ಟದಲ್ಲಿ ಎಡವದೇ ಇದ್ದರೆ ಪದಕಗಳ ಸಂಖ್ಯೆ ಹೆಚ್ಚುತ್ತಿತ್ತು. ರಿಕರ್ವ್ ಮತ್ತು ಕಾಂಪೌಂಡ್ ವಿಭಾಗದ 10 ಫೈನಲ್‌ಗಳ ಪೈಕಿ ಏಳರಲ್ಲಿ ಭಾರತದ ಸ್ಪರ್ಧಿಗಳು ಆಡುವ ಅರ್ಹತೆ ಪಡೆದಿದ್ದರು. ಆದರೆ ಎರಡರಲ್ಲಿ ಮಾತ್ರ ಚಿನ್ನ ಗೆಲ್ಲುವಲ್ಲಿ ಯಶಸ್ಸು ಕಂಡರು. ಉಳಿದ ಫೈನಲ್‌ಗಳಲ್ಲಿ ನಿರಾಶೆಗೆ ಒಳಗಾದರು. ಎಲ್ಲರೂ ಒತ್ತಡಕ್ಕೆ ಒಳಗಾದವರಂತೆ, ಹೋರಾಟ ತೋರದೇ ಸೋತ ರೀತಿ ಬೇಸರ ಉಂಟು ಮಾಡುವಂತೆ ಇತ್ತು. ತಂಡ ವಿಭಾಗದಲ್ಲಿ ಎರಡು ಬೆಳ್ಳಿ ಬಿಟ್ಟರೆ, ಉಳಿದಂತೆ ರಿಕರ್ವ್ ಆರ್ಚರಿ ಸ್ಪರ್ಧೆಗಳು ಬರಿಗೈಯಷ್ಟೇ.

ಕಾಂಪೌಂಡ್ ಮಹಿಳಾ ವಿಭಾಗದಲ್ಲಿ ತೇಜಲ್ ಸಾಳ್ವೆ ಮತ್ತು ಷಣ್ಮುಖಿ ನಾಗ ಸಾಯಿ ಬುದ್ದೆ ಫೈನಲ್ ತಲುಪಿದ್ದರಿಂದ ಭಾರತಕ್ಕೆ ಸ್ವರ್ಣ ಖಚಿತವಾಗಿತ್ತು. ತೇಜಲ್ ಚಿನ್ನ ಗೆದ್ದರು.

ಸುಳ್ಳು ಸುದ್ದಿಗೆ 7 ವರ್ಷ ಜೈಲು

ಒಂದನೇ ಪುಟದಿಂದ...

ಸಾರ್ವಜನಿಕ ಭದ್ರತೆ, ಸಾಮರಸ್ಯಕ್ಕೆ ಧಕ್ಕೆ ತರುವ, ಮುಕ್ತ ಮತ್ತು ಸ್ವತಂತ್ರ ರೀತಿಯಲ್ಲಿ ಚುನಾವಣೆ ನಡೆಸುವುದಕ್ಕೆ ಅಡ್ಡಿಪಡಿಸುವಂತಹ ಪೋಸ್ಟ್ ಮಾಡಿ ದವರಿಗೂ ಶಿಕ್ಷೆ ವಿಧಿಸಬಹುದಾಗಿದೆ ಎಂದು ಮಸೂದೆಯಲ್ಲಿ ವಿವರಿಸಲಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ನಿಯಂತ್ರಣ ಪ್ರಾಧಿಕಾರ ಸ್ಥಾಪಿಸಲು, ಕನ್ನಡ ಮತ್ತು ಸಂಸ್ಕೃತಿ ಸಚಿವರ ನೇತೃತ್ವದಲ್ಲಿ ಆರು ಸದಸ್ಯರ ಸಮಿತಿ ರಚಿಸಲು, ಸುಳ್ಳು ಸುದ್ದಿಗಳ ಪ್ರಕರಣ ವಿಚಾರಣೆಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಮಸೂದೆ ಅವಕಾಶ ಮಾಡಿಕೊಡಲಿದೆ.

ಯಾವುದಕ್ಕೆ ಅನ್ವಯ...

- ಒಬ್ಬರ ಹೇಳಿಕೆ ತಿರುಚುವುದು, ತಪ್ಪಾಗಿ ಅರ್ಥೈಸುವುದು
- ಒಬ್ಬರು ಹೇಳದೇ ಇರುವ ವಿಷಯ/ಮಾತನ್ನು ಅವರದ್ದು ಎಂದು ಪೋಸ್ಟ್ ಮಾಡುವುದು
- ದಾಖಲೆಗಳಲ್ಲಿ ಇಲ್ಲದ, ಅಧಿಕೃತ ಮೂಲಗಳಿಗೆ ವ್ಯತಿರಿಕ್ತವಾದ ಮಾಹಿತಿ ಮತ್ತು ದತ್ತಾಂಶಗಳನ್ನು ಹಂಚಿಕೊಳ್ಳುವುದು
- ಒಬ್ಬರ ಆಡಿಯೊ ಮತ್ತು ವಿಡಿಯೊ ತಿರುಚುವುದು

‘ವಸತಿ’ಗೆ ಬಿತ್ತು ಲಂಚದ ಕಿಚ್ಚು

ರೇಟ್ ಫಿಕ್ಸ್ ಸರ್ಕಾರ: ಎಚ್‌ಡಿಕೆ

ಒಂದನೇ ಪುಟದಿಂದ...

‘ಅವರ ಆಡಿಯೊದಲ್ಲಿ ಇರುವ ವಿಚಾರಗಳ ಬಗ್ಗೆ ನನಗೇನೂ ಆಶ್ಚರ್ಯವಿಲ್ಲ. ಇಲಾಖೆಯಿಂದ ಸೈಟ್, ಮನೆ ಪಡೆದುಕೊಳ್ಳಬೇಕು ಎಂದರೆ ಹಣ ನೀಡಬೇಕಾದಂತಹ ಸ್ಥಿತಿ ನಿರ್ಮಿಸಿದ್ದಾರೆ. ಎಲ್ಲ ಇಲಾಖೆಗಳಲ್ಲಿಯೂ ಇದೇ ಸ್ಥಿತಿ ಇದೆ. ಈಗ ಚೆನ್ನಾಗಿ ಹಣ ಲೂಟಿ ಹೊಡೆದರೆ ಮುಂದೆ ಚುನಾವಣೆಗೆ ಬಳಸಿ-ಕೊಳ್ಳಬಹುದು ಎಂಬುದು ಇವರ ಉದ್ದೇಶ’ ಎಂದರು.

‘ಕೃಷ್ಣ ಬೈರೇಗೌಡ ಮಾತನಾಡಿರುವ ವಿಡಿಯೊ ಸಹ ನೋಡಿದ್ದೇನೆ. ತಮ್ಮ ಇಲಾಖೆಗಳಲ್ಲಿ ಏನೆಲ್ಲಾ ನಡೆಯುತ್ತಿದೆ ಎಂಬುದು ಆಯಾ ಇಲಾಖೆಯ ಸಚಿವರಿಗೆ ಗೊತ್ತಿದೆ’ ಎಂದು ಕುಮಾರಸ್ವಾಮಿ ವ್ಯಂಗ್ಯವಾಗಿ ಹೇಳಿದರು.

ನ್ಯಾಯಾಂಗ ತನಿಖೆ ಆಗಲಿ: ಅಶೋಕ

ಒಂದನೇ ಪುಟದಿಂದ...

‘ಭ್ರಷ್ಟಾಚಾರದಲ್ಲಿ ಕರ್ನಾಟಕ ‘ನಂಬರ್ 1’ ಆಗಿದೆ ಎಂದು ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಅವರೇ ಈ ಹಿಂದೆ ಹೇಳಿದ್ದರು. ಇದೀಗ ಆ ಹೇಳಿಕೆಗೆ ಪುಷ್ಟಿ ನೀಡುವಂತೆ ಬಿ.ಆರ್.ಪಾಟೀಲ ಅವರು ವಸತಿ ಸಚಿವರ ಮೇಲೆ ಗಂಭೀರ ಆರೋಪ ಮಾಡಿದ್ದಾರೆ. ಎಲ್ಲ ಮಾಹಿತಿಗಳೂ ಬಹಿರಂಗವಾಗಬೇಕು’ ಎಂದಿದ್ದಾರೆ.

ನಾಳೆಯಿಂದ 78ನೇ ಸೀನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್

ರಾಜ್ಯ ತಂಡದಲ್ಲಿ ಶ್ರೀಹರಿ, ಧಿನಿಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಲಿಂಪಿಯನ್‌ಗಳಾದ ಶ್ರೀಹರಿ ನಟರಾಜ್ ಮತ್ತು ಧಿನಿಧಿ ದೇಸಿಂಗು ಸೇರಿದಂತೆ 33 ಮಂದಿಯ ರಾಜ್ಯ ತಂಡವನ್ನು ಇದೇ 22ರಿಂದ 26ರವರೆಗೆ ನಡೆಯಲಿರುವ 78ನೇ ಸೀನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ಗೆ ಕರ್ನಾಟಕ ಈಜು ಸಂಸ್ಥೆ ಪ್ರಕಟಿಸಿದೆ.

ಭಾರತ ಈಜು ಫೆಡರೇಷನ್‌ನ ಆಶ್ರಯದಲ್ಲಿ ಒಡಿಶಾದ ಕಳಿಂಗಾ ಕ್ರೀಡಾಂಗಣದ ಅಕ್ವಟಿಕ್ ಕಾಂಪ್ಲೆಕ್ಸ್‌ನಲ್ಲಿ ಐದು ದಿನ ಕೂಟ ನಡೆಯಲಿದೆ. ಈ ಚಾಂಪಿಯನ್‌ಷಿಪ್ ಮೂರನೇ ಏಷ್ಯನ್ ಯೂತ್ ಗೇಮ್ಸ್ ಮತ್ತು ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್‌ಗೆ ಆಯ್ಕೆ ಟ್ರಯಲ್ಸ್ ಆಗಿರುತ್ತದೆ.

ಮಹಿಳೆಯರ ಮತ್ತು ಪುರುಷರ ವೈಯಕ್ತಿಕ ವಿಭಾಗಗಳಲ್ಲಿ ಫ್ರೀಸ್ಟೈಲ್, ಬ್ಯಾಕ್‌ಸ್ಟ್ರೋಕ್, ಬ್ರೆಸ್ಟ್‌ಸ್ಟ್ರೋಕ್, ಮೆಡ್ಲೆ ಸ್ಪರ್ಧೆಗಳು ಇರಲಿದೆ. ತಂಡ ವಿಭಾಗಗಳಲ್ಲಿ ಫ್ರೀಸ್ಟೈಲ್ ರಿಲೆ, ಮೆಡ್ಲೆ ರಿಲೆ ಹಾಗೂ ಮಿಶ್ರ ರಿಲೆ ಸ್ಪರ್ಧೆಗಳು ಇವೆ.

77ನೇ ಸೀನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್ ಕಳೆದ ವರ್ಷ ಮಂಗಳೂರಿನಲ್ಲಿ ನಡೆದಿದ್ದು, 17 ಚಿನ್ನ ಸೇರಿದಂತೆ ಒಟ್ಟು 33 ಪದಕಗಳೊಂದಿಗೆ ಕರ್ನಾಟಕ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಅನೀಶ್ ಎಸ್. ಗೌಡ ಮತ್ತು ಹಾಶಿಕಾ ರಾಮಚಂದ್ರ ಅವರು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ವೈಯಕ್ತಿಕ ಚಾಂಪಿಯನ್ ಆಗಿದ್ದರು.



ಶ್ರೀಹರಿ ನಟರಾಜ್



ಧಿನಿಧಿ ದೇಸಿಂಗು

ರಾಜ್ಯ ತಂಡ: ಪುರುಷರು: ಆಕಾಶ್ ಮಣಿ, ಅನೀಶ್ ಎಸ್. ಗೌಡ, ದರ್ಶನ್ ಎಸ್., ದಕ್ಷಣ್ ಎಸ್., ಮಣಿಕಂಠ ಎಲ್., ಪೃಥ್ವಿ ಎಂ, ಪೃಥ್ವಿಕ್ ಡಿ.ಎಸ್., ಶಿವ ಶ್ರೀಧರ್, ಶಿವಾಂಕ್ ವಿಶ್ವನಾಥ್, ಶೋನ್ ಗಂಗೂಲಿ, ಸೂರ್ಯ ಜೋಯಪ್ಪ, ತನೀಶ್ ಜಾರ್ಜ್ ಮ್ಯಾಥ್ಯೂ, ಉತ್ಕರ್ಷ್ ಎಸ್.ಪಾಟೀಲ, ಶ್ರೀಹರಿ ನಟರಾಜ್, ವಿಧಿತ್ ಎಸ್.ಶಂಕರ್, ಚಿಂತನ್ ಎಸ್. ಶೆಟ್ಟಿ. **ಮಹಿಳೆಯರು:** ಅದಿತಿ ಎನ್. ಮುಲ್ಯೆ, ಅಶ್ಮಿತಾ ಚಂದ್ರ, ಲಕ್ಷ್ಯಾ ಎಸ್., ಮೀನಾಕ್ಷಿ ಮೆನನ್, ನೈಶಾ, ಶಿರಿನ್, ವಿಹಿತಾ ನಯನಾ, ಧಿನಿಧಿ ದೇಸಿಂಗು, ಮಾನವಿ ವರ್ಮಾ, ನಿನಾ ವೆಂಕಟೇಶ್, ಋತುಜಾ ಎಸ್, ಶಾಲಿನಿ ಎಸ್. ದೀಕ್ಷಿತ್, ಸುಹಾನಿಸಿ ಘೋಷ್, ಜೇಡಿದಾ ಎ., ತ್ರಿಶಾ ಸಿಂಧು ಎಸ್., ತಾನ್ಯಾ ಎಸ್., ಲತೀಶಾ ಮಂದಣ್ಣ. **ನೆರವು ಸಿಬ್ಬಂದಿ:** ಜಾನ್ ಕ್ರಿಸ್ಟೋಫರ್ (ಮ್ಯಾನೇಜರ್), ರಾಜೀವ್ ಆರ್.ಎಸ್., ನಟರಾಜ್ ವಿ., ಬಿನೇಶ್, ಜಯರಾಜನ್ ಎ.ಸಿ. (ಎಲ್ಲರೂ ಕೋಚ್‌ಗಳು).

ಜೈಸ್ವಾಲ್, ಶುಭಮನ್ ಗಿಲ್ ಶತಕ

ಲೀಡ್ಸ್ ಟೆಸ್ಟ್: ಮಿಂಚಿದ ಯುವ ಪೀಳಿಗೆಯ ತಾರೆಯರು ● ಬೃಹತ್ ಮೊತ್ತದತ್ತ ಭಾರತದ ಹೆಜ್ಜೆ ● ಪಂತ್ ಅರ್ಧಶತಕ ● 'ಆಯ್ದ ಆಟಗಾರರ' ಕ್ಲಬ್ ಸೇರಿದ ಗಿಲ್



● ಸಿಡ್ನಿ ಕಿರಣ್

ಲೀಡ್ಸ್ (ಪಿಟಿಐ): ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ (101, 159ಎ) ಮತ್ತು ನಾಯಕ ಶುಭಮನ್ ಗಿಲ್ (ಔಟಾಗದೇ 127) ಅವರು ಸೊಗಸಾದ ಶತಕಗಳನ್ನು ಬಾರಿಸುವ ಮೂಲಕ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಟೆಸ್ಟ್ ನಿವೃತ್ತಿಯಿಂದ ಉಂಟಾದ ನಿರ್ವಾತವನ್ನು ತುಂಬುವ ಭರವಸೆ ಮೂಡಿಸಿದರು. ಇಂಗ್ಲೆಂಡ್ ವಿರುದ್ಧ ಮೊದಲ ಟೆಸ್ಟ್‌ನ ಮೊದಲ ದಿನವಾದ ಶುಕ್ರವಾರ ಭಾರತ 3 ವಿಕೆಟ್‌ಗೆ 359 ರನ್ ಗಳಿಸಿ ಪ್ರಾಬಲ್ಯ ಮೆರೆಯಿತು.

ಬ್ಯಾಟ್ ಮಾಡಲು ಕಳಿಸಲ್ಪಟ್ಟ ಭಾರತ ಕೆ.ಎಲ್. ರಾಹುಲ್ (42) ಮತ್ತು ಚೊಚ್ಚಲ ಟೆಸ್ಟ್ ಆಡಿದ ಸಾಯಿ ಸುದರ್ಶನ್ ಅವರನ್ನು ಅಲ್ಪಅಂತರದಲ್ಲಿ ಕಳೆದುಕೊಂಡಿತ್ತು. ಆದರೆ ಗಿಲ್ ಮತ್ತು ಜೈಸ್ವಾಲ್ ಮೂರನೇ ವಿಕೆಟ್‌ಗೆ 129 ರನ್ ಸೇರಿಸಿ ತಂಡವನ್ನು ಸುಸ್ಥಿತಿಗೆ ತಲುಪಿಸಿದರು. ದಿನದ ಕೊನೆಗೆ ನಾಯಕನ ಜೊತೆಗೆ ಉಪನಾಯಕ ರಿಷಭ್ ಪಂತ್ ಅಜೇಯ 65 ರನ್ ಗಳಿಸಿ ಆಟ ಕಾದಿರಿಸಿದರು.

ಗಿಲ್ ಅವರು ನಾಯಕನಾಗಿ ಮೊದಲ ಪಂದ್ಯದಲ್ಲೇ ಶತಕ ಬಾರಿಸಿದ ಭಾರತದ 'ಆಯ್ದ ಆಟಗಾರರ' ಕ್ಲಬ್‌ಗೆ ಸೇರಿದರು. ಈ ಹಿಂದೆ ವಿಜಯ್ ಹಜಾರೆ (164*), ಸುನಿಲ್ ಗಾವಸ್ಕರ್ (116), ದಿಲೀಪ್ ವೆಂಗಸರ್ಕರ್ (102)ಮತ್ತು ವಿರಾಟ್ ಕೊಹ್ಲಿ (141) ಅವರೂ ನಾಯಕರಾಗಿ ಮೊದಲ ಟೆಸ್ಟ್‌ನಲ್ಲೇ ಶತಕ ಬಾರಿಸಿದ್ದರು.

ಗಿಲ್ ಮತ್ತು ಪಂತ್ ಮುರಿಯದ ನಾಲ್ಕನೇ ವಿಕೆಟ್‌ಗೆ 138 ರನ್ ಸೇರಿಸಿದ್ದಾರೆ. ಆಕ್ರಮಣಕಾರಿಯಾಗಿ ಪಂತ್‌ಗೆ ಇದು 16ನೇ ಅರ್ಧ ಶತಕವಾಗಿದ್ದು, ಟೆಸ್ಟ್ ಮಾದರಿಯಲ್ಲಿ 3000 ರನ್‌ಗಳ ಮೈಲಿಗಲ್ಲು ದಾಟಿದರು.

ಚಹ ವಿರಾಮಕ್ಕೆ ಕೆಲವೇ ಕ್ಷಣ ಮೊದಲು ಜೈಸ್ವಾಲ್ ಶತಕ ಬಾರಿಸಿದರೆ, ಕೊನೆಯ ಅವಧಿಯಲ್ಲಿ ಗಿಲ್ ಮೂರಂಕಿ ಮೊತ್ತ ತಲುಪಿ ಭಾರತದ ಕ್ರಿಕೆಟ್‌ನ ತಾರೆಗಳಾಗುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯಿಟ್ಟರು.

ಜೇಮ್ಸ್ ಆ್ಯಂಡರ್ಸನ್ ಮತ್ತು ಸ್ಟುವರ್ಟ್ ಬ್ರಾಡ್ ಅವರ ನಿವೃತ್ತಿ ಇಂಗ್ಲೆಂಡ್ ತಂಡದ ವೇಗದ ದಾಳಿಯ ಮೇಲೆ ಪರಿಣಾಮ ಬೀರಿದಂತೆ ಕಂಡಿತು. ಒಂದೆಡೆ ಬೌಲಿಂಗ್ ಮೊನಚು ಕಳೆದುಕೊಂಡರೆ, ಇನ್ನೊಂದು ಕಡೆ ಪಿಚ್‌ನಲ್ಲೂ ಬೌಲರ್‌ಗಳಿಗೆ ಅಂಥ ನೆರವು ಸಿಗಲಿಲ್ಲ.

ಸ್ವದೇಶದಲ್ಲಿ ಇಂಗ್ಲೆಂಡ್ ವಿರುದ್ಧ ಟೆಸ್ಟ್ ಸರಣಿಯ ಐದು ಪಂದ್ಯಗಳಿಂದ 712 ರನ್ ಪೇರಿಸಿದ್ದ ಯಶಸ್ವಿ, ಹೆಡಿಂಗ್ಲೆಯಲ್ಲಿಯೂ ಶತಕದ ಆರಂಭ ಮಾಡಿದರು. 159 ಎಸೆತಗಳಲ್ಲಿ 101 ರನ್ ಗಳಿಸಿದರು. ತಂಡ ಚಹಾ ವಿರಾಮಕ್ಕೆ 2 ವಿಕೆಟ್‌ಗಳಿಗೆ 215 ರನ್‌ಗಳಿಸಿತ್ತು.

ಈ ಹಾದಿಯಲ್ಲಿ ಯಶಸ್ವಿ ಅವರು ಎರಡು ಮಹತ್ವದ ಜೊತೆಯಾಟಗಳಲ್ಲಿ ರನ್ ಗಳಿಸಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ಯಶಸ್ವಿಗೆ ಅನುಭವಿ ಕೆ.ಎಲ್. ರಾಹುಲ್ (42; 78ಎಸೆತ) ಅವರೊಂದಿಗೆ 91 ರನ್ ಸೇರಿಸಿದರು. ಅರ್ಧಶತಕದತ್ತ ಸಾಗಿದ್ದ ರಾಹುಲ್ ಬ್ರೈಡನ್ ಕೇರ್ಸ್ ಬೌಲಿಂಗ್‌ನಲ್ಲಿ ಜೋ ರೂಟ್‌ಗೆ ಕ್ಯಾಚಿತ್ತರು.


ಪದಾರ್ಪಣೆ ಪಂದ್ಯ ಆಡಿದ ಸಾಯಿ ಸುದರ್ಶನ್ ಕೇವಲ ನಾಲ್ಕು ಎಸೆತ ಎದುರಿಸಿದರು. ಆದರೆ ಅವರಿಗೆ ಖಾತೆ ತೆರೆಯಲು ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ಬಿಡಲಿಲ್ಲ. ಜೇಮಿ ಸ್ಮಿತ್ ಪಡೆದ ಚೆಂದದ ಕ್ಯಾಚ್‌ಗೆ ಸಾಯಿ ನಿರ್ಗಮಿಸಿದರು.

ನಾಲ್ಕನೇ ಕ್ರಮಾಂಕದಲ್ಲಿ ಬಂದ ಗಿಲ್ ಅವರು ಯಶಸ್ವಿ ಜೊತೆ ಸೇರಿಕೊಂಡು ಇನಿಂಗ್ಸ್‌ಗೆ ಬಲ ತುಂಬಿದರು. ಈ ಮೊದಲು ವಿರಾಟ್ ಕೊಹ್ಲಿ ಆಡುತ್ತಿದ್ದ ಕ್ರಮಾಂಕ ಇದು. ಅವರ ಸ್ಥಾನವನ್ನು ತುಂಬುವ ಭರವಸೆಯನ್ನು ಗಿಲ್ ಮೂಡಿಸಿದರು.

ಅದರಲ್ಲೂ ಯಶಸ್ವಿ ಅವರ ಬ್ಯಾಟಿಂಗ್ ಸೊಬಗು ಕಣ್ಮನ ಸೆಳೆಯಿತು. ಇಂಗ್ಲೆಂಡ್ ನೆಲದ ಸ್ವಿಂಗ್ ಮತ್ತು ಸೀಮ್ ಅರೆದು ಕುಡಿದ ಅನುಭವಿಗಳಂತೆ ಬ್ಯಾಟ್ ಬೀಸಿದ ಯುವ ಎಡಗೈ ಬ್ಯಾಟರ್ ಟೆಸ್ಟ್ ಕ್ರಿಕೆಟ್‌ನಲ್ಲಿ 5ನೇ ಶತಕ ಹೊಡೆದರು. 23 ವರ್ಷ ವಯಸ್ಸಿನ ಯಶಸ್ವಿ ಎದುರಾಳಿ ಬೌಲರ್‌ಗಳಿಗೆ ಯಾವುದೇ ಅವಕಾಶ ನೀಡಲಿಲ್ಲ. ಒಳ್ಳೆಯ ಎಸೆತಗಳಿಗೆ ಗೌರವ ಸಲ್ಲಿಸಿದ ಅವರು, ರನ್ ಗಳಿಸುವ ಅವಕಾಶವಿದ್ದ ಎಸೆತಗಳನ್ನು ವ್ಯರ್ಥ ಮಾಡಲಿಲ್ಲ.

ಸ್ಟೋಕ್ಸ್ ಪ್ರತಿಯೊಂದು ಹಂತದಲ್ಲಿಯೂ ಬದಲಾವಣೆ ಮಾಡಿದ ಫೀಲ್ಡಿಂಗ್ ನಿಯೋಜನೆಗಳನ್ನು ಯಶಸ್ವಿ ವಿಫಲಗೊಳಿಸಿದರು. ಗಿಲ್ ಕ್ರೀಸ್‌ಗೆ ಬಂದವರೇ ವೇಗದ ಆಟಕ್ಕೆ ಒತ್ತು ನೀಡಿದರು. ಬೌಂಡರಿಗಳನ್ನು ಸಿಡಿಸಿದರು. ಇದರಿಂದಾಗಿ ರನ್‌ಗಳು ಹರಿದುಬಂದವು. ಪಂಜಾಬಿ ಹುಡುಗ ಗಿಲ್ ತಮ್ಮ ನಾಯಕತ್ವದ ಮೊದಲ ಇನಿಂಗ್ಸ್‌ಗೆ ಭರ್ಜರಿ ಆರಂಭ ನೀಡಿದರು.

ಕಪ್ಪುಪಟ್ಟಿ: ಈಚೆಗೆ ಅಹಮದಾಬಾದಿನಲ್ಲಿ ಸಂಭವಿಸಿದ ವಿಮಾನ ದುರಂತದಲ್ಲಿ ಮೃತರಾದವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಭಾರತ ಮತ್ತು ಇಂಗ್ಲೆಂಡ್ ತಂಡದ ಆಟಗಾರರು ತಮ್ಮ ತೋಳುಗಳಿಗೆ ಕಪ್ಪು ಪಟ್ಟಿ ಧರಿಸಿ ಆಡಿದರು. ವಿಮಾನ ದುರಂತದಲ್ಲಿ 241 ಮಂದಿ ದುರ್ಮರಣ ಹೊಂದಿದ್ದರು. ಅದರಲ್ಲಿ ಇಂಗ್ಲೆಂಡ್ ಪ್ರಜೆಗಳೂ ಸೇರಿದ್ದರು.



—ಎಎಫ್‌ಪಿ ಚಿತ್ರ

ಟೆಸ್ಟ್ ಪ್ರವಾಸ: ಮೊದಲ ದಿನ ಭಾರತದ 300+ ರನ್

ರನ್	ಎದುರಾಳಿ	ತಾಣ	ವರ್ಷ
3ಕ್ಕೆ 399	ಶ್ರೀಲಂಕಾ	ಗಾಲೆ	2017
7ಕ್ಕೆ372	ದಕ್ಷಿಣ ಆಫ್ರಿಕಾ	ಬ್ಲೋಮ್‌ಫಾಂಟೈನ್	2001
3ಕ್ಕೆ359	ಇಂಗ್ಲೆಂಡ್	ಲೀಡ್ಸ್	2025
2ಕ್ಕೆ 356	ಪಾಕಿಸ್ತಾನ	ಮುಲ್ತಾನ್	2004
4ಕ್ಕೆ 302	ವೆಸ್ಟ್‌ಇಂಡೀಸ್	ನಾರ್ತ್‌ಸೌಂಡ್	2016




ಆ್ಯಂಡರ್ಸನ್–ತೆಂಡೂಲ್ಕರ್ ಟ್ರೋಫಿ

ಸ್ಕೋರ್ ಕಾರ್ಡ್

ಭಾರತ: 1ನೇ ಇನಿಂಗ್ಸ್: 3ಕ್ಕೆ 359 (85 ಓವರ್)

ಜೈಸ್ವಾಲ್ ಬಿ ಸ್ಟೋಕ್ಸ್ 101 (159ಎ, 4x16, 6x1)
ರಾಹುಲ್ ಸಿ ರೂಟ್ ಬಿ ಕಾರ್ಸ್ 42 (78ಎ, 4x8)
ಸುದರ್ಶನ್ ಸಿ ಸ್ಮಿತ್ ಬಿ ಸ್ಟೋಕ್ಸ್ 0 (4ಎ)
ಗಿಲ್ ಬ್ಯಾಟಿಂಗ್ 127 (175ಎ, 4x16, 6x1)
ಪಂತ್ ಬ್ಯಾಟಿಂಗ್ 65 (102ಎ, 4x6, 6x2)
ಇತರೆ: 24 (ಲೆಗ್‌ಬೈ 1, ಲೆಗ್‌ಬೈ 10 ನೋಬಾಲ್ 7, ವೈಡ್ 1 ಪೆನಾಲ್ಟಿ 5)
ವಿಕೆಟ್ ಪತನ: 1–91 (ಕೆ.ಎಲ್. ರಾಹುಲ್, 24.5), 2–92 (ಸಾಯಿ ಸುದರ್ಶನ್, 25.4), 3–221 (ಯಶಸ್ವಿ ಜೈಸ್ವಾಲ್, 52.3)
ಬೌಲಿಂಗ್: ಕ್ರಿಸ್ ವೋಕ್ಸ್ 19–2–89–0; ಬ್ರೈಡನ್ ಕಾರ್ಸ್ 16–5–70–1; ಜೋಶ್ ಟಂಗ್ 16–0–75–0; ಬೆನ್ ಸ್ಟೋಕ್ಸ್ 13–1–43–2; ಶೋಯೆಬ್ ಬಶೀರ್ 21–4–66–0



ವಿಶ್ವ ಯೋಗ ದಿನವನ್ನು ಆಚರಿಸಲಾಗುತ್ತಿದೆ!

ನಾಟಿಂಗ್‌ಹ್ಯಾಮ್‌ಶೈರ್‌ನ ಎರಡು ಪಂದ್ಯಗಳಿಗೆ ಇಶಾನ್ ಕಿಶನ್



ನಾಟಿಂಗ್‌ಹ್ಯಾಮ್ (ಇಂಗ್ಲೆಂಡ್), (ಪಿಟಿಐ): ಭಾರತದ ವಿಕೆಟ್ ಕೀಪರ್–ಬ್ಯಾಟರ್ ಇಶಾನ್ ಕಿಶನ್ ಅವರು ನಾಟಿಂಗ್‌ಹ್ಯಾಮ್‌ಶೈರ್ ಪರ ಎರಡು ಕೌಂಟಿ ಪಂದ್ಯಗಳನ್ನು ಆಡಲು ಅಲ್ಪಾವಧಿ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ ಎಂದು ಕ್ಲಬ್ ಶುಕ್ರವಾರ ತಿಳಿಸಿದೆ.

ಇದಕ್ಕೆ ಅಂತರರಾಷ್ಟ್ರೀಯ ಅನುಮತಿ ದೊರೆಯಬೇಕಿದೆ. 26 ವರ್ಷ ವಯಸ್ಸಿನ ಕಿಶನ್ ಅವರು ಕೈಲ್ ವೆರಿಯನ್ ಸ್ಥಾನದಲ್ಲಿ ಆಡಲಿದ್ದಾರೆ. ದಕ್ಷಿಣ ಆಫ್ರಿಕಾದ ವೆರಿಯನ್ ಜಿಂಬಾಬ್ವೆ ವಿರುದ್ಧ ಎರಡು ಟೆಸ್ಟ್‌ಗಳ ಸರಣಿಯಲ್ಲಿ ಆಡಲಿದ್ದಾರೆ. ಇಶಾನ್ ಅವರು ಯಾರ್ಕ್‌ಶೈರ್ ಮತ್ತು ಸಾಮರ್ಸೆಟ್ ವಿರುದ್ಧದ ಪಂದ್ಯಗಳನ್ನು ಆಡಲು ಲಭ್ಯರಿರಲಿದ್ದಾರೆ.

ಸ್ಕ್ವಾಷ್: ಸೆಂಥಿಲ್‌ಗೆ ಕಂಚಿನ ಪದಕ

ಕುಚಿಂಗ್ (ಮಲೇಷ್ಯಾ), (ಪಿಟಿಐ): ಭಾರತದ ವೆಲವನ್ ಸೆಂಥಿಲ್‌ಕುಮಾರ್ ಅವರು ಇಲ್ಲಿ ಶುಕ್ರವಾರ ನಡೆದ ಏಷ್ಯನ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದರು.

ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಸೆಂಥಿಲ್‌ಕುಮಾರ್ 1-3 (9-11, 11-13, 11-5, 6-11) ರಿಂದ ಹಾಂಗ್‌ಕಾಂಗ್‌ನ ಅಲೆಕ್ಸ್ ಲಾ ತ್ಜ್ ಕ್ವಾನ್ ವಿರುದ್ಧ ಸೋತರು. ಸೆಮಿಫೈನಲ್‌ನಲ್ಲಿ ಸೋತವರಿಗೂ ಕಂಚಿನ ಪದಕ ನೀಡಲಾಗುತ್ತದೆ.



ಇಂಗ್ಲೆಂಡ್ ಕಣದಲ್ಲಿ ಕರ್ನಾಟಕದ ತ್ರಿಮೂರ್ತಿಗಳು

ಪ್ರಜಾವಾಣಿ ವಾರ್ತೆ

ಲೀಡ್ಸ್: ಹೆಡಿಂಗ್ಲೆ ಕ್ರೀಡಾಂಗಣದಲ್ಲಿ ಶುಕ್ರವಾರ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಕಣಕ್ಕಿಳಿಯುವ ಭಾರತ ತಂಡದ 11 ಆಟಗಾರರನ್ನು ಪ್ರಕಟಿಸಿದಾಗ ಕರ್ನಾಟಕದ ಅಭಿಮಾನಿಗಳಿಗೆ ಖುಷಿ 'ಮುಮ್ಮಡಿ'ಯಾಯಿತು. ಏಕೆಂದರೆ ಸುಮಾರು ಎರಡು ದಶಕಗಳ ನಂತರ ಭಾರತ ತಂಡದಲ್ಲಿ ಕರ್ನಾಟಕದ ಮೂವರು ಆಟಗಾರರು ಜೊತೆಯಾಗಿ ಕಣಕ್ಕಿಳಿಯುವುದು ಖಚಿತವಾಗಿತ್ತು.

ಈ ಪಂದ್ಯದಲ್ಲಿ ಕರ್ನಾಟಕದ ಕೆ.ಎಲ್. ರಾಹುಲ್ ಮತ್ತು ವೇಗಿ ಪ್ರಸಿದ್ಧ ಕೃಷ್ಣ ಅವರು ಕಣಕ್ಕಿಳಿಯುವುದು ಬಹು ನಿರೀಕ್ಷಿತವಾಗಿತ್ತು. ಆದರೆ ಏಳು ವರ್ಷಗಳ ನಂತರ ಟೆಸ್ಟ್ ತಂಡಕ್ಕೆ ಮರಳಿರುವ ಕರುಣ್ ಅವರಿಗೂ ಸ್ಥಾನ ಲಭಿಸಿದ್ದು ಕರ್ನಾಟಕದ ಪಾಲಿಗೆ ಸಂತಸ ತಂದಿದೆ.

1990 –2000 ದಶಕದಲ್ಲಿ ಕರ್ನಾಟಕದ ಮೂವರು ಅಥವಾ ಅದಕ್ಕಿಂತ ಹೆಚ್ಚು ಆಟಗಾರರು ಸ್ಥಾನ ಪಡೆದಿದ್ದರು. ಆ ಕಾಲಘಟ್ಟದಲ್ಲಿ ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ವೆಂಕಟೇಶ್ ಪ್ರಸಾದ್, ಸುನೀಲ್ ಜೋಶಿ, ದೊಡ್ಡಗಣೇಶ್, ವಿಜಯ್ ಭಾರದ್ವಾಜ್ ಹಾಗೂ ಡೇವಿಡ್ ಜಾನ್ಸನ್ ಅವರು ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದಿದ್ದರು. ಆಗ ಹಲವು ಪಂದ್ಯಗಳಲ್ಲಿ ಆಡುವ ಹನ್ನೊಂದರ ಬಳಗದಲ್ಲಿ ಕರ್ನಾಟಕದ ಮೂರು ಅಥವಾ ನಾಲ್ವರು ಕಣದಲ್ಲಿರುವುದು ಸಾಮಾನ್ಯವಾಗಿತ್ತು.

2002ರಲ್ಲಿ ಕೋಲ್ಕತ್ತದಲ್ಲಿ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್‌ನಲ್ಲಿ ಕರ್ನಾಟಕದ ಮೂವರು ಆಟಗಾರರಾದ ದ್ರಾವಿಡ್, ಶ್ರೀನಾಥ್ ಮತ್ತು ಕುಂಬ್ಳೆ ಅವರು ಆಡಿದ್ದರು. ಅದರ ನಂತರ ಈಗ ಮತ್ತೆ ಭಾರತ ಟೆಸ್ಟ್ ತಂಡದಲ್ಲಿ ಮೂವರು ಕನ್ನಡಿಗರು ಕಣದಲ್ಲಿದ್ದಾರೆ.

ತಾಂತ್ರಿಕವಾಗಿ ಕರುಣ್ ಅವರು ಪ್ರಸ್ತುತ ವಿದರ್ಭ ತಂಡದ ಆಟಗಾರ. ಅವರು ಕಳೆದ ದೇಶಿ ಋತುವಿನಲ್ಲಿ ವಿದರ್ಭ ಪರವಾಗಿ ರನ್‌ಗಳ ಬೆಟ್ಟವನ್ನೇ ಪೇರಿಸಿದ್ದರು. ಇಂಗ್ಲಿಷ್ ಕೌಂಟಿ ಕ್ರಿಕೆಟ್‌ನಲ್ಲಿಯೂ ಮಿಂಚಿದ್ದರು.

'ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಎಷ್ಟು ಅದ್ಭುತವಾದ ವ್ಯವಸ್ಥೆ ಹೊಂದಿದೆ ಎನ್ನುವುದಕ್ಕೆ ಇದು ಸಾಕ್ಷಿ. ರಾಜ್ಯದ ಕ್ರಿಕೆಟ್ ಮತ್ತು ಅದರ ಮೂಲಸೌಲಭ್ಯಗಳು ಉನ್ನತಮಟ್ಟದಲ್ಲಿವೆ. ಆದ್ದರಿಂದ ಮೂವರು ಉತ್ತಮ ಆಟಗಾರರು ಇವತ್ತು ಭಾರತ ತಂಡದಲ್ಲಿದ್ದಾರೆ. ದೇವದತ್ತ ಪಡಿಕ್ಕಲ್ ಕೂಡ ಹೆಚ್ಚುಕಮ್ಮಿ ಇದೇ ಸಾಲಿನಲ್ಲಿದ್ದಾರೆ. ಕರ್ನಾಟಕದ ಮಟ್ಟಿಗೆ ಇದು ಬಹಳ ದೊಡ್ಡ ಸಿಹಿಸುದ್ದಿ' ಎಂದು ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ 'ಪ್ರಜಾವಾಣಿ'ಗೆ ತಿಳಿಸಿದರು.

ಕರ್ನಾಟಕ ತಂಡದ ಮಾಜಿ ನಾಯಕ ಆರ್. ವಿನಯಕುಮಾರ್ ಈ ಸಂಗತಿಯ ಕುರಿತು ಸಂಭ್ರಮ ವ್ಯಕ್ತಪಡಿಸಿದರು. ವಿನಯ್ ನಾಯಕತ್ವದಲ್ಲಿಯೇ ರಾಹುಲ್, ಕರುಣ್ ಮತ್ತು ಪ್ರಸಿದ್ಧ ಅವರು ಕರ್ನಾಟಕ ತಂಡಕ್ಕೆ ಪದಾರ್ಪಣೆ ಮಾಡಿದ್ದರು.

'ನಾನು ಇಂತಹದೊಂದು ತಂಡ ಸಂಯೋಜನೆಯನ್ನು ನಿರೀಕ್ಷಿಸಿದ್ದೆ. ಬಹಳ ಸಂತೋಷವಾಗಿದೆ. ರಾಹುಲ್ ಕಠಿಣ ಪರಿಶ್ರಮಿ. ನೆಟ್ಸ್‌ನಲ್ಲಿ ಹಲವು ಗಂಟೆಗಳವರೆಗೆ ಬ್ಯಾಟಿಂಗ್ ಅಭ್ಯಾಸ ಮಾಡಿ ತಮ್ಮನ್ನು ಹುರಿಗೊಳಿಸಿಕೊಂಡಿದ್ದಾರೆ. ಇನ್ನು ಕರುಣ್ ಛಲದ ಆಟ ಅದ್ಭುತ. ಭಾರತ ತಂಡಕ್ಕೆ ಅವಕಾಶ ಸಿಕ್ಕಾಗ ತ್ರಿಶತಕ ಹೊಡೆದಿದ್ದರು.ಆದರೆ ನಂತರ ಕೆಟ್ಟ ಸಮಯ ಎದುರಿಸಿದರು. ಆದರೂ ಎದೆಗುಂದಲಿಲ್ಲ. ಸತತ ಛಲ, ಪರಿಶ್ರಮದಿಂದ ಏಳು ವರ್ಷಗಳ ನಂತರ ಟೆಸ್ಟ್ ತಂಡಕ್ಕೆ ಮರಳಿದ್ದಾರೆ. ಭಾರತ ಟೆಸ್ಟ್ ತಂಡಕ್ಕೆ ಮರಳುವುದು ಅಷ್ಟು ಸುಲಭದ ಮಾತಲ್ಲ' ಎಂದು ವಿನಯ್ ಹೇಳಿದರು.



ಕೆ.ಎಲ್. ರಾಹುಲ್



ಪ್ರಸಿದ್ಧ ಕೃಷ್ಣ



ಕರುಣ್ ನಾಯರ್

ಉದ್ದೀಪನ ಮದ್ದು ಸೇವನೆ ಹೆಚ್ಚಳ

ನವದೆಹಲಿ (ಪಿಟಿಐ): ಭಾರತದ ಕ್ರೀಡೆಗಳಲ್ಲಿ ಉದ್ದೀಪನ ಮದ್ದು ಸೇವನೆಯ ಪಿಡುಗಿನ ತೀವ್ರತೆಯು ಈಗ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ವಿಶ್ವದಲ್ಲಿಯೇ ಅತಿ ಹೆಚ್ಚು ಸ್ಯಾಂಪಲ್‌ಗಳು ಪರೀಕ್ಷೆಗೊಳಪಟ್ಟ ದೇಶಗಳಲ್ಲಿ ಭಾರತ ಅಗ್ರಸ್ಥಾನದಲ್ಲಿದೆ.

2023ರ ವಾಡಾದ (ವಿಶ್ವ ಉದ್ದೀಪನ ಮದ್ದು ತಡೆ ಘಟಕ) ವರದಿಯ ಪ್ರಕಾರ; 5 ಸಾವಿರ ಅಥವಾ ಅದಕ್ಕಿಂತಲೂ ಹೆಚ್ಚಿನ ಸ್ಯಾಂಪಲ್‌ಗಳನ್ನು ಪರೀಕ್ಷೆಗೊಳಪಡಿಸಿದ ದೇಶಗಳಲ್ಲಿ ಭಾರತದ ಪಾಲು ಹೆಚ್ಚಿದೆ. ಡೋಪಿಂಗ್ ಮೇಲೆ ನಿಯಂತ್ರಣ ಹೇರಲು ಕಟ್ಟುನಿಟ್ಟಿನ ಕ್ರಮಕೈಗೊಳ್ಳುವುದಾಗಿ ದೇಶದ ಕ್ರೀಡಾ ಸಚಿವಾಲಯವು ಹೇಳಿತ್ತು. ಉದ್ದೀಪನ ಮದ್ದು ಸೇವನೆ ತಡೆ ಕಾಯಿದೆಯನ್ನು ಪರಿಷ್ಕರಣೆಗೊಳಿಸಿತ್ತು. ಆದರೂ ಪ್ರಕರಣಗಳ ಸಂಖ್ಯೆ ಇಳಿಮುಖ ಕಾಣುತ್ತಿಲ್ಲ.

2023ರಲ್ಲಿ ಭಾರತವು ಶೇ 3.8ರಷ್ಟು ನಿಷೇಧಿತ ಮದ್ದುಗಳ ಬಳಕೆ ಮಾಡುತ್ತಿದೆ. 5606 ಸ್ಯಾಂಪಲ್‌ಗಳಲ್ಲಿ 214 ಅಡವರ್ಸ್ ಅನಾಲಿಟಿಕಲ್ ಫೈಂಡಿಂಗ್ಸ್ (ಎಎಎಫ್) ದಾಖಲಾಗಿವೆ. ಈ ಮಾದರಿಗಳ ಪೈಕಿ 2748 ಸ್ಯಾಂಪಲ್ ಪರೀಕ್ಷೆಗಳನ್ನು ಸ್ಪರ್ಧೆಗಳು ನಡೆಯುವ ಸಂದರ್ಭದಲ್ಲಿ ನಡೆಸಲಾಗಿತ್ತು. ಅದರಲ್ಲಿ ನಿಷೇಧಿತ ಮದ್ದುಗಳ ಅಂಶಗಳು ಪತ್ತೆಯಾಗಿದ್ದು ಚೀನಾದ ಸ್ಯಾಂಪಲ್‌ಗಳಿಗಿಂತಲೂ ಹೆಚ್ಚು. ಚೀನಾ (28,197 ಸ್ಯಾಂಪಲ್‌ಗಳಲ್ಲಿ ಶೇ 0.2 ಎಎಎಫ್), ಅಮೆರಿಕ (6798ರಲ್ಲಿ ಶೇ 1 ಎಎಎಫ್), ಫ್ರಾನ್ಸ್ (11,368 ರಲ್ಲಿ ಶೇ 0.4), ಜರ್ಮನಿ (15,153 ರಲ್ಲಿ ಶೇ 0.4) ಮತ್ತು ರಷ್ಯಾ (10,395 ರಲ್ಲಿ ಶೇ 1 ಎಎಎಫ್) ಯಲ್ಲಿದೆ.

ಭಾರತದಲ್ಲಿ 2022ರಲ್ಲಿ 3865 ಸ್ಯಾಂಪಲ್‌ಗಳಲ್ಲಿ ಶೇ 3.2 ಮಾತ್ರ ಪಾಸಿಟಿವ್ ಆಗಿದ್ದವು. ಈ ದತ್ತಾಂಶಕ್ಕೆ ಹೋಲಿಸಿದರೆ 2023ರಲ್ಲಿ ಪ್ರಕರಣಗಳು ಹೆಚ್ಚಿವೆ.

ಬೆಂಗಳೂರು ರೇಸ್

ರಾಂಕ್ವೆಲಿನೊ ಗೆಲ್ಲುವ ನಿರೀಕ್ಷೆ

ಚೀಫ್ ಜಸ್ಟೀಸ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರಾಂಕ್ವೆಲಿನೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಯುವರ್ ಅನ್‌ಫಾರ್ಗೆಟಬಲ್ 10, ಅನಬೆಲ್ಲೆ 6, ಅಡರ್ನ್‌ಮೆಂಟ್ 5
2ನೇ ರೇಸ್: ಮಲ್ಟಿಸ್ಪೈಡೆಡ್ 1, ಎಸ್ಟೆಫಿನಾ 6, ಚಿರಾಗ್ 8
3ನೇ ರೇಸ್: ಎಫ್ಫಿಕೆಸಿ 2, ಮೈಟಿ ಹೀರೊ 3, ಇಲಿಯಾ 8
4ನೇ ರೇಸ್: ನೆಪ್ಚೂನ್ 10, ಫ್ಲೇಮಿಂಗ್ ಸ್ವೋರ್ಡ್ 4, ಮಹ್ಲರ್ 5
5ನೇ ರೇಸ್: ಪರ್ಫೆಕ್ಟ್ ಲೆಜೆಂಡ್ 1, ಚಾಲೆಂಜ್ ಅಕ್ಸೆಪ್ಟಡ್ 10, ಐಸ್ ಆಫ್ ಫೈರ್ 11
6ನೇ ರೇಸ್: ರಾಂಕ್ವೆಲಿನೊ 2, ಕ್ಯಾಸ್ಟೀಲ್ 3, ಸೂಪರ್‌ನ್ಯಾಚುರಲ್ 5
7ನೇ ರೇಸ್: ಡಾಂಕಸ್ಟರ್ ಬೆಲ್ಲೆ 7, ನೈಟ್ ರೈಡರ್ 2, ಡಿವೈನ್ ಪ್ರೊಟೆಕ್ಟರ್ 12
8ನೇ ರೇಸ್: ಸಿಲಿಕಾನ್ ಸ್ಟಾರ್ 7, ಪರ್ಫೆಕ್ಟ್ ಆಟಿಡ್ಯೂಡ್ 2, ಡೇರಿಯನ್ 1

ಉತ್ತಮ ಬೆಟ್: ಮಲ್ಟಿಸ್ಪೈಡೆಡ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8



ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER

ಕ್ಲಾಸಿಫೈಡ್ಸ್

REAL ESTATE SELLING

Sites

Anjanapura

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call:9964627255

ANJANAPURA 10TH Block 30×40 East. Anjanapura 2nd Block 40×60 East. BDA Site For Sale. Contact: 9845298419

BDA, RESIDENTIAL & Commercial Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road 30x40, 40x60, 50x80. 9916592400

Banashankari

"AVAILABLE WANTED BDA_Sites Banashankari 6TH Stg,Anjanapura Vishweshwaraiah Lyt_50x80 40x60_30x40 20x30,Value Properties Call Raju:9901315949, 9731814437

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

AVAILABLE BSK 6th Stage 50x80 100ft Road NF, 50x80 60ft Road EF 7th Block Contact: 9845062822/ 8660751654

BDA, RESIDENTIAL, Commercial, Banashankari 2nd, 3rd, 5th & 6th stage Uttrahalli, Rajarajeshwarinagara Katriguppe, Girinagara, 30x40, 40x60, 50x80. 9916592400

SITE SALE BDA Banashankari 5th Stage Near NPS SCHOOL 30x40 North 40ft Road: 9448531837/ 9241082155

Basavanagudi

BASAVANAGUDI N.R.COLONY, Sale_15000 Sft Residential Prime Land, West Facing at Kalyani Garden. 9972535002/ 9880244300

Chandra Layout

SITE FOR SALE 1125sft, W/F 40feet road,BCCLayout Near Water Tank, Chandra Layout. Direct Owner: 9880311959.

Rajarajeshwari Nagar

EAST FACING, Corner Plot, 2735 SFT, Ideal Homes- RR Nagar Phase-1. Brokers excuse. Contact 9845578838

Jayanagar

JAYANAGAR EXCELLENT LOCATION 80x120 Residential Property For Sale Near Metro Station Genuine Buyers. RAO: 9341906338/ 9742211233

Kempegowda Layout

KEMPEGOWDA LAYOUT 50x80,Site #4233,West-facing 3rd Block"L"sector 300feet-road,40x60 Site #547,East-facing 1st Block"K"sector 40feet-road. Contact Owner:8095002424

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Mysore Road

NADAPRABHU KEMPEGOWDA Layout, Residential 30x40 Commercial 40x60, 50x80, 80Feet Road, 100Feet Road, 300Feet Road, Ready For Registration & Construction. 9916592400

Nagarabhavi

NAGARABAVI D_GROUP LAYOUT 30x40_Sale, BBMP (E_Swatthu) A Khatha, South Face, Near Agasthya School. Call: 9663226688.

Tumkur Road

BDA BBMP Site for Sale HMT Layout – Nagasandra 40×60 NF 40ft Roads opp: proposed BDA complex owner: 9449081178

Uttarahalli

FOR SALE: West Facing 30x40 BDA SITE at BHCS Layout, Uttarahalli. Contact: 9845569053

Vishweshwariah Layout

"BDA SITE for-sale in Vishveshwaraiah Layout and_Nada_Prabhu Kempagowda Layout Contact: "Sai_Adhar_Properties" - 7795531787"

30*40 SITE for sale EF with 30 ft road Rs 12500/- Vishweshwaraiah Layout opposite to park facing. Contact:- 9916826976.

SMV LAYOUT 5th_Block, 30x40 Sale, North_Face, Behind Venkateshwara Temple, Near_KLE Law College, BDA Allottee. 9663226688.

"40X60 WEST_FACEING Residential Site`for`sale Vishveshwaraiah Layout 1st Block 40`feet wide Road near 100`Feet Road, 15`Minutes drive`to`Metro. 9880031654"

"VISVESHWARAIAH LAYOUT 30x40 SF 1st Block, & 50x80 SF 6th Block with 7500`Sqft Building. 9845500019/ 7019314962"

BDA-SITE FOR-SALE 30x40 East Facing at Sir.M Vishveshwaraiya Layout 1st & 3rd Block Good Location Call:7676900174 6363496142

Flat

Chandra Layout

PENTHOUSE 3 Bedroom Flat for Sale , 1600sft Super Built-up, 50Mtr from Attiguppe Metro Station, Chandra layout, Vijaynagar. 1.5Cr Negotiable- 9844060483

Malleshwaram

MALLESWARAM SALE 2340sft southwest corner property with 6300sft modern building. Clear titles. 10crores. Brokers excuse. Contact 6363161073

Uttarahalli

4BHK NEW Flats Sale, Ready to move, Cauvery, Carparking, Lift, Vaasthu, Maruthi Layout. Rs.1.10.Cr. Call: 6360501159, 9945224058.

Agricultural Land

Mysore Road

"SALE 1ACRE 12 Kms From Ramnagar Towards Kankapura Near SRS Hills ₹70 Lakhs/ Acre. 9845178335"

Commercial Building

Koramangala

KORAMANGALA 50X80 Site Commercial Multi Purpose 80 Feet Main Road Hotel/ traning institute eventure. 9113040843

Commercial Land

Mysore

2.22 ACRE land for Sale at Gundlupet 2 acres 22 Guntas Commercial converted (Hotel purpose) land for Sale at Agathagowdanahalli off. Mysore Ooty National Highway. Contact; Mysore Estates Vishwanath Gowda 9590911111

Out-Station

PETROL BUNK_SALE with Land 3_Acres, Bangalore to Chennai Highway near Sulagiri. Call: 9443225303, 8660719986.

Industrial & Factory

Out-Station

FOR SALE
Factory for sale
Plot Area 20322 m2
Builtup Area 4156 m2
Panjim Ponda National Highway,
Kundaim Ind Estate
Kundaim Ponda-Goa.
7020793947
7972608348

Mysore Road

SALE 1ACRES-14-GUNTAS INDUSTRIAL CONVERSION LAND AT BIDADI, BANGALORE MYSORE ROAD 7019708767 9844125465

Commerical

J P Nagar

J.P.NAGAR RING ROAD, near Metro Station: ILLYASNAGAR COMMERCIAL CORNER PLOT 2424sft BBMP A Katha Sale 16,500/-. 9900202047/ 9980565516

M G Road And Around

SALE INDEPENDENT Commercial Property Vittal Mallya Road, Built 9000 sqft. Only Genuine Buyers. amlathans@gmail.com

Vishweshwariah Layout

BDA COMMERCIAL 40X60 Sale KLE Law College Circle South SMV 5th-Block 80ft Road: 9945694783/ 9980433004

Villas/Bunglows

M G Road And Around

SALE 11000 sqft. with Two Roads, Near Garuda Mall, Brigade Road Cross with a Built in 5 Bedroom Luxurious Bunglow. Only Genuine Buyers. amlathans@gmail.com

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

1100SQFT PRIME Commercial Space for Rent in Chamrajpet. Same`building as SBI, Sundaram Finance, HP.Gas.High footfall. Ideal`for CAs,Lawyers, Financial Services. Immediate Occupancy.Call: 9900207023/ 9611116464.

JAYANAGAR 4TH BLOCK AVAILABLE FOR RENT OFFICE SPACE 1100SQFT, 2ND FLOOR, PRIME CIRCLE RS. 45000/ PER MONTH, VICTORY PROPERTIES. 7411692219/ 8618576685.

Flats

FULLY FURNISHED 3 BHK Flat with Servant Rm at CARDINAL ONE, Yeshvanthpur.Private Lobby with access controlled elevators, Metro Adjacent, Prime loc. Rent: 1.5 lakh, Contact: 9845025305

REAL ESTATE BUYING

Agricultural Land Converted

Devanahalli

REQUIRED/WANTED AGRICULTURE green zone or converted 4 to 50 acres outright purchase and joint venture for MNC Company and NRI investors in and around Doddaballapura Devanahalli Chikkaballpur Sarjapura Road Hoskote- Chintamani-Malur surroundings, minimum road width 40 feet plus. Payment flexible. Elite Group 9916592400/ 9986682400elitegroupsrealtors@gmail.com

Resedential/ Commercial

Mysore

0% BROKERAGE for Buying and Selling any properties in Mysore city. Contact: Mysore Estates Vishwanath Gowda 9590911111

General

General

FOR ALL REAL ESTATE REQUIREMENTS; RENTAL/ BUYING/ SELLING/LEASE OF ALL KINDS OF RESIDENTIAL/ COMMERCIAL/ INDUSTRIAL/ AGRICULTURAL PROPERTIES, PROPERTY MANAGEMENT, PROPERTY MONITORING, FARMLAND PROPERTIES, HOUSING LOANS, WANTED BDA SITES FOR RESALE CONTACT: VICTORY PROPERTIES 7411692219, 8618576685. info@victoryproperties.in, www.victoryproperties.in

Sites

Jayanagar

WANTED 30X40,40X60 & above, Sites_or House for Purchase in Jayanagar, Basavangudi, BSK 1st & 2nd_Stage. for Doctors & NRI immediate settlement. Verna Developers Barton_Center MG_Road 9353128035/ 9916310226 brokers excuse

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್





REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Villas/Bunglows

Jayanagar

BUY / Sale / Rent- Prestige Falcon City, Total Environment Mantri Serenity Sobha Indraprastha Purvankara Prestige West Woods Brigade Tata Promont Embassy and many more and several protects Plotted, Apartment and Villa projects in Koramangala, Jayanagar, Basavangudi, RMV Layout, Vijayanagar, Rajajinagar. 9591932400.

BUSINESS

Business

FOR ALL OUTDOOR ADVERTISEMENT, AUTO BACK, BUS-BACK, VAN BRANDING, CYCLE BRANDING, HOARDINGS, NO PARKING BOARDS, POLE BOARD ADS, STANDEES, FOR EDUCATION INSTITUTIONS CORPORATE COMPANIES JEWELRY COMPANIES HOTELS SUPERMARKETS SPA'S/ SALONS/ BANKS/ HOSPITALS/ HAIR SPA'S CONTACT VENUSCAST TECHNOLOGIES PVT LTD. balaji@venuscast.com, www.venuscast.com. 8722123445/ 9538123445/ 9482303339

Business to Business

Finance

FOR ALL KINDS OFLOANS, HOUSING/LAP/ BUSINESS/PERSONAL/ GOLD/PROJECTS/ USED &NEW CARS LOANSCONTACT VICTORYINDIA. 9482303339,8618576685

Business Offers

Finance

MSME LOANS Available for any start up company,any existing Companies avail this opportunity contact-7204995189

LOAN AVAILABLE @5% Yearly Interest Business Project Property Mortgage Agriculture Takeover Personal HomeLoan 8787091647 Agents Welcome

JOB OPPORTUNITIES

Wanted

COMPUTER OPERATOR for Pharma billing. Tavarekere-Magadi road or surrounding area preferred. Call 9148006935/9964343227/ 9611969322.

General

DELHI RAJASTHAN Transport Co. Ltd Requires Business Associates and Marketing Executives. Bommasandra, Jigani, Malur, Hoskote, Bidadi, Aarohalli, Tumkur, Dabaspet, Doddaballapura and Hosur. Ph: 9945715571/ 9535989076. Email: Bangalore@drtcindia.com.

WANTED SALESMEN, Stockists, for Bangalore City Two Years Experience, HELLO BABY BABY PRODUCTS CONTACT: 9443369429, 9487410204

Teachers / Professors



PERSONAL

Change of Name

WE KUMAR N and Shilpa Kadadi both are Major & both are residing at No .22, Astalakshmi Layout, 2nd Main, J.P Nagar, Bengaluru, Karnataka State 560078, declare that, in our son's birth Certifacate his name has been wrongly mentioned as Sudhish Raju K & birth date as 12.07.2018 instead of Sudhish Elavarthi & birth date as 03.07.2018 vide affidavit dated 17.05.2024 Before Notary K.C Chowde Gowda Bangalore.

PROPERTY CORNER





WEEKEND CORNER

ಕ್ಲಾಸಿಫೈಡ್ಸ್





ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

INCHARA MANAGED VILLA PLOTS

NISCHITHA PROPERTIES Pvt.Ltd.
More Than Real Estate

PRESENTS

RAJATHADRI GREEN CITY

PRM/KA/RERA/1251/310/PR/150225/007509

INCHARA FARMS
Managed Villa Plots





ನಗರಕ್ಕೆ ಹತ್ತಿರ, ಪ್ರಕೃತಿಯ ಒಡನಾಟದಲ್ಲಿ

ದಕ್ಷಿಣ ಬೆಂಗಳೂರಿನ ಪ್ರಧಾನ ಪ್ಲಾಟ್‌ಗಳು

ವಿಲ್ಲಾ ಪ್ಲಾಟ್‌ಗಳು

ನೆಲಮಂಗಲ

1 Km from Highway,
Close to proposed IRR (300ft) Ring Road

ಬೆಂಗಳೂರಿನ ಹತ್ತಿರದ,
ಸುಸಜ್ಜಿತ ವಿಲ್ಲಾ ಪ್ಲಾಟ್ಸ್

EARN Monthly Income
along with
PURCHASING PROPERTY.

Surrounding
BMRDA PLOTS
Market Price
~~₹3000-4000~~
per sqft

Our Price
₹1199 per sqft

Plot size: **5000+** sqft

ಪ್ರೀಮಿಯಂ ಪ್ಲಾಟ್

ಮೈಸೂರು ರಸ್ತೆ

- **1.5 Km** from Mysore Expressway
- **3 Kms** to Wonderla & Close to Industrial Areas
- **10 Mins** to Kengeri Metro
- Close to Leading Schools & Tech Parks

PRICE STARTS FROM
₹ 48 LAKHS onwards

ಬ್ಯಾಂಕುಗಳಿಂದ ಸಾಲ ಸೌಲಭ್ಯವಿದೆ

30X40, 30X50, 40X60 & Odd Sites

LUXURIOUS AMENITIES
- Majestic Entrance
- Convenient Infrastructure
- Eco-Friendly Features
- Secure Living
- Well-Designed Infrastructure

HIGHLIGHTS
- Near To Nelamangala Town
- Huge Price Appreciation Potential
- 100% Clear Legal Titles
- Club House With 20+ Amenities

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9164 00 9004
nischitaproperties.com


- 9 Acres, 147 Plots
- Security, Water, Power, Drainage
- Top Schools & Tech Parks
- 100% Clear Legal Title

WE ARE LOOKING FOR LANDS FOR JOINT VENTURE OR OUTRIGHT PURCHASE. IF YOU'RE A LANDOWNER, CONTACT US.


Pre-Owned
VILLA FOR SALE
in **Premium Retirement Community**



Ready-to-Move in | **Furnished Villa – Senior-Friendly Design**







Community Highlights:
- Just 14 km from ISHA Foundation
- Only 7 km to Nandi Medical College
- Located in a Fully Functional Retirement Community
- 360° Scenic Views
- Nestled amidst hills & water bodies
- Truly the Lap of Nature

Ramp Access, Spacious Veranda | Living & Dining Areas | Modular Kitchen | 3-Side Open Balcony, Covered Car Parking

2 BHK Independent Villa | Plot Area: **2,400 sq. ft.** Built-up Area: **1,079 sq. ft.** | South Facing, Fully Furnished | Anti-Skid Tiles, Grab Bars, Senior-Friendly Amenities | Master Bedroom with Attached Toilet & Walk-in Wardrobe

99641 00379
Nallapanahalli (Peresandra) **CHICKABALLAPURA**

Comfort HEIGHTS

★ ಪ್ರೀಮಿಯಂ ★
ಡ್ಯೂಪ್ಲೆಕ್ಸ್ ಫ್ಲಾಟ್‌ಗಳು
ಮಾರಾಟಕ್ಕೆ ಲಭ್ಯ
ಕೆಲವೇ ಫ್ಲಾಟ್‌ಗಳು ಉಳಿದಿವೆ

2 BHK-XL SIZE!
1980 sqft + 800 sqft
Private Terrace

3 BHK-XXL SIZE !
2610 sqft + 900 sqft
Private Terrace



EX/PRM/KA/RERA/1251/310/PR/200908/001730

ಕನಕಪುರ ರಸ್ತೆ

AMENITIES
- Health Club
- Multipurpose hall
- Round the clock security
- Rainwater harvesting
- Children's play area with equipment
- Basket ball court
- Jogging & walking track
- Beautifull and scaped areas
- Well equipped fitness center
- Swimming pool with toddler's pool

PROXIMITY
- Close to Metro Station
- ISKCON Theme Park
- Forum Mall
- Sri Kumarans School
- Satya Sai Hospital
- Art of Living
- NICE Road
- NPS school / Vidyashilpa Academy
- Manipal Hospital

Promoted & Developed by:
Comfort Builders & Developers
More than just comfort

Site : Doddakalasandra, Kanakapura Main Road, Near ISKCON Theme Park, Bengaluru - 560 062.
Office: #2, North Park Road, Kumara Park East, Bengaluru - 560 001.
www.comfortbuilders.in

ICICI Bank, AXIS BANK, HDFC BANK, State Bank of India, Bank of Baroda, LIC HFL

Call for site visit : **99000 73744, 99005 78737**